ಐಮಂಗಲ ಹೋಬಳಿ ಪರಿಸರ : ಸಾಂಸ್ಕೃತಿಕ ಅಧ್ಯಯನ

(ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸುತ್ತಿರುವ ಪ್ರೌಢ ಪ್ರಬಂಧ)

ಸಂಶೋಧನೆ
ಕಾಂತರಾಜ್ .ಹೆಚ್.
ನೊಂದಣಿ ಸಂಖ್ಯೆ : KUAH/೦೦೫೧೭

ಮಾರ್ಗದರ್ಶನ
ಡಾ. ಎಸ್.ವೈ. ಸೋಮಶೇಖರ್
ಸಹಾಯಕ ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩.೨೭೬

೨೦೧೩

1031

1031

ಐಮಂಗಲ ಹೋಬಳಿ ಪರಿಸರ : ಸಾಂಸ್ಕೃತಿಕ ಅಧ್ಯಯನ

(ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರೌಢ ಪ್ರಬಂಧ)

ಸಂಶೋಧನೆ
ಕಾಂತರಾಜ್ .ಹೆಚ್.

ಮಾರ್ಗದರ್ಶನ
ಡಾ. ಎಸ್.ವೈ. ಸೋಮಶೇಖರ್
ಸಹಾಯಕ ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೧೩

ಮಾರ್ಗದರ್ಶಕರ ದೃಢೀಕರಣ ಪತ್ರ

ಕಾಂತರಾಜ್ .ಹೆಚ್. ಅವರು **"ಐಮಂಗಳ ಹೋಬಳಿ ಪರಿಸರ : ಸಾಂಸ್ಕೃತಿಕ ಅಧ್ಯಯನ"** ಎಂಬ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಈ ಪ್ರೌಢ ಪ್ರಬಂಧವನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಪ್ರೌಢ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗೆ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

27/2/2002

(ಡಾ. ಎಸ್.ವೈ. ಸೋಮಶೇಖರ್)
ಸಹಾಯಕ ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ದಿನಾಂಕ :
ಸ್ಥಳ : ವಿದ್ಯಾರಣ್ಯ

ಸಂಶೋಧನೆ ಪ್ರಮಾಣ ಪತ್ರ

"ಐಮಂಗಳ ಹೋಬಳಿ ಪರಿಸರ : ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯ ಈ ಪ್ರೌಢ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ **ಡಾ. ಎಸ್.ವೈ. ಸೋಮಶೇಖರ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರೌಢ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Kantharaj. H.
(ಕಾಂತರಾಜ್ .ಹೆಚ್.)
ಸಂಶೋಧನೆ
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದಿನಾಂಕ : 31-07-13
ಸ್ಥಳ : **ವಿದ್ಯಾರಣ್ಯ**

ಪರಿವಿಡಿ


ಕರ್ನಾಟಕ ನಕ್ಷೆ



ಚಿತ್ರದುರ್ಗ ನಕ್ಷೆ


Molakalmuru
Challekere
Chitradurga
Holalkere
Hiriyur
Hosadurga

ಹಿರಿಯೂರು ನಕ್ಷೆ


HIRIYUR GP MAP WITH VILLAGES
N
W
E
S
CHITRADURGA TALUK
CHALLAKERE TALUK
HOLALKERE TALUK
HOSADURGA TALUK
ANDRA PRADESH STATE
TUMAKUR DISTRICT
MAP INDEX
GP BOUNDARY
TALUK BOUNDARY
0
5
10
kilometers
Prepared by

ಅಧ್ಯಾಯ : ಒಂದು

ಪ್ರಸ್ತಾವನೆ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ಸ್ವರೂಪ

೧.೪. ಅಧ್ಯಯನದ ಸಮೀಕ್ಷೆ

೧.೫. ಅಧ್ಯಯನದ ವಿಧಾನ

ಅಧ್ಯಾಯ : ಒಂದು

ಪ್ರಸ್ತಾವನೆ

ಪ್ರಸ್ತಾವನೆ

ಚರಿತ್ರೆಯೆಂದರೆ ಗತಿಸಿಹೋದ ಘಟನೆಗಳನ್ನು ದೊರೆತ ದಾಖಲೆಗಳಿಂದ ಅವಲೋಕಿಸುವುದರ ಮೂಲಕ ಪುನರ‍್ರಚಿಸುವುದಾಗಿದೆ. ಚರಿತ್ರೆಯ ಅಧ್ಯಯನದಿಂದ ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ, ಕಲೆ, ವಾಸ್ತುಶಿಲ್ಪ ಹಾಗೂ ಇತರೆ ಸಾಂಸ್ಕೃತಿಕ ಅಂಶಗಳನ್ನು ತಿಳಿಯಲು ಸಾಧ್ಯ. ಇವುಗಳ ರಚನೆಗೆ ದಾಖಲೆ, ಸ್ಮಾರಕ ಮೊದಲಾದ ಆಕರಗಳು ಬಹುಮುಖ್ಯ. ದಶಕಗಳಿಂದೀಚೆಗೆ ಚರಿತ್ರೆಯ ಅಧ್ಯಯನದ ಅಥವಾ ಸಂಶೋಧನೆಯ ಶಿಸ್ತು ಬದಲಾಗಿದೆ. ಸ್ಥಳೀಯ ಚರಿತ್ರೆಯ ಬಗ್ಗೆ ಸೂಕ್ಷ್ಮ ಅಧ್ಯಯನದ ಮೂಲಕ ಸಮಗ್ರ ಅಧ್ಯಯನ ಮಾಡುವಲ್ಲಿ ಹೆಚ್ಚಿನ ಆಸಕ್ತಿ ತೋರಲಾಗುತ್ತಿದೆ. “ಸ್ಥಳೀಯ ಇತಿಹಾಸವು ಚರಿತ್ರೆ ಅಧ್ಯಯನದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಇತಿಹಾಸ ಬೆಳವಣಿಗೆಯ ಪರಿಣಾಮವಾಗಿ ಇತಿಹಾಸಕಾರರಿಂದ ಕಡೆಗಣಿಸಲ್ಪಟ್ಟಿದ್ದ ಸ್ಥಳೀಯ ಇತಿಹಾಸಕ್ಕೆ ಹೆಚ್ಚಿನ ಮಹತ್ವ ದೊರಕಿದೆ.

ಭವ್ಯ ಪರಂಪರೆ ಹೊಂದಿರುವ ಕನ್ನಡನಾಡನ್ನು ಆಳಿದ ಅರಸುಮನೆತನಗಳ ಇತಿಹಾಸದ ಬಗ್ಗೆ ಈಗಾಗಲೇ ಹೆಚ್ಚು ಸಂಶೋಧನೆಗಳು ನಡೆದಿವೆ. ಇವು ಕೇವಲ ಐತಿಹಾಸಿಕತೆಯನ್ನು ಬಿಂಬಿಸುವಂತಹ ಇತಿಹಾಸ ಮಾತ್ರ ಕಟ್ಟಿಕೊಡುತ್ತವೆ. ಆದರೆ ಸ್ಥಳೀಯ ಹಾಗೂ ಗ್ರಾಮಗಳ ಇತಿಹಾಸ ಅಧ್ಯಯನ ನಡೆದಿಲ್ಲವೆಂದು ಹೇಳಬಹುದು. ಈ ನಿಟ್ಟಿನಲ್ಲಿ ಐಮಂಗಲ ಹೋಬಳಿ ಪರಿಸರವನ್ನು ಗಮನದಲ್ಲಿಟ್ಟುಕೊಂಡು ಅಲ್ಲಿನ ಪುರಾತತ್ವ ಅವಶೇಷ, ದೇವಾಲಯ, ಶಾಸನಗಳನ್ನು ಆಧರಿಸಿ ಅಧ್ಯಯನ ಮಾಡಲಾಗಿದ್ದು, ಸಾಂಸ್ಕೃತಿಕ ಚರಿತ್ರೆಯನ್ನು ತಿಳಿಸುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಸಾಂಸ್ಕೃತಿಕ ಇತಿಹಾಸವನ್ನು ರಚಿಸುವಾಗ ಅಲ್ಲಿನ ಸಾಮ್ರಾಜ್ಯಗಳ ನಿರ್ಮಾಣ ಅವುಗಳ ವ್ಯವಸ್ಥೆ, ಧಾರ್ಮಿಕ ದೃಷ್ಟಿ, ಸಾಹಿತ್ಯಿಕ ಸೃಷ್ಠಿ, ಶಿಲ್ಪ, ಸಂಗೀತ ಇತರ ಎಲ್ಲಾ ರಂಗಗಳಲ್ಲಿಯೂ ಉಂಟಾದ ಬದಲಾವಣೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಹಿಂದೆ ನಡೆದ ವಾಸ್ತವಿಕ ಘಟನೆಗಳ

ಸ್ಪಷ್ಟ ನಿರೂಪಣೆ ಇತಿಹಾಸವಾದರೆ ಅಲ್ಲಿನ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಜನಜೀವನ ಕ್ರಮದ ಎಲ್ಲಾ ರಂಗಗಳಲ್ಲಿ ಆದ ಪ್ರಗತಿ ಮತ್ತು ವಿಫಲತೆಯನ್ನು ಯಥವತ್ತಾಗಿ ನಿರೂಪಿಸುವುದು ಸಾಂಸ್ಕೃತಿಕ ಇತಿಹಾಸ ರಚನೆಯ ಪ್ರಮುಖ ಗುರಿ. ಪುರಾತತ್ವೀಯ ಕುರುಹುಗಳನ್ನು ಆಧರಿಸಿ ಒಂದು ಸೀಮಿತ ಪ್ರದೇಶವನ್ನು ಆಯ್ದುಕೊಂಡು ಅಧ್ಯಯನ ಮಾಡಿದಲ್ಲಿ ಒಂದು ಪ್ರದೇಶದ ಇತಿಹಾಸಕ್ಕೆ ಹೆಚ್ಚು ಮಹತ್ವವನ್ನು ನೀಡಿದಂತಾಗುತ್ತದೆ. ಆಗ ಅದೊಂದು ವಸ್ತುನಿಷ್ಠ ಅಧ್ಯಯನವಾಗುತ್ತದೆ. ಈ ಹಿನ್ನೆಲೆಯಲ್ಲಿ ಹಿರಿಯೂರು ತಾಲೂಕಿನ ಐಮಂಗಲ ಹೋಬಳಿ ಪರಿಸರವನ್ನು ಸೀಮಿತವಾಗಿರಿಸಿಕೊಂಡು “ಐಮಂಗಲ ಹೋಬಳಿ ಪರಿಸರ : ಸಾಂಸ್ಕೃತಿಕ ಅಧ್ಯಯನ” ಎಂಬ ಶೀರ್ಷಿಕೆಯಡಿಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ.

೧.೧. ಅಧ್ಯಯನದ ಉದ್ದೇಶ

ಯಾವುದೇ ಒಂದು ಅಧ್ಯಯನ ವಿಧಾನದಲ್ಲಿ ಉದ್ದೇಶವು ಪ್ರಮುಖ ಪಾತ್ರವಹಿಸುತ್ತದೆ. ಪ್ರಸ್ತುತ ಶೀರ್ಷಿಕೆಯು “ಐಮಂಗಲ ಹೋಬಳಿ ಪರಿಸರ : ಸಾಂಸ್ಕೃತಿಕ ಅಧ್ಯಯನ”ವಾಗಿದೆ. ಇತಿಹಾಸ ಪುಟಗಳಲ್ಲಿ ಅಜ್ಞಾತವಾಗಿರುವ ಐಮಂಗಲ ಹೋಬಳಿ ಪರಿಸರದ ಸಾಂಸ್ಕೃತಿಕ ಇತಿಹಾಸವನ್ನು ಪ್ರಸ್ತುತ ಪ್ರೌಢ ಪ್ರಬಂಧದ ಮೂಲಕ ಬೆಳಕಿಗೆ ತರುವುದು ಅಧ್ಯಯನದ ಮುಖ್ಯ ಉದ್ದೇಶ. ಈ ಹಿನ್ನೆಲೆಯಲ್ಲಿ ಐಮಂಗಲ ಪರಿಸರವನ್ನು ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಜೊತೆಗೆ ಕ್ಷೇತ್ರಕಾರ್ಯದ ಮೂಲಕ ಆ ಪ್ರದೇಶದ ಅವಶೇಷಗಳನ್ನು ಗುರುತಿಸಿ ಅವುಗಳನ್ನು ದಾಖಲಿಸುವುದು ಮತ್ತು ಈ ಪ್ರದೇಶದಲ್ಲಿ ನಿರ್ಮಾಣವಾದ ಹಾಗೂ ಅಲ್ಲಿನ ಎಲ್ಲಾ ಬಗೆಯ ಸ್ಮಾರಕಗಳನ್ನು ಅಧ್ಯಯನಕ್ಕೆ ಒಳಪಡಿಸುವಂತಹ ಮುಖ್ಯ ಉದ್ದೇಶ ಪ್ರಸ್ತುತ ಅಧ್ಯಯನವಾಗಿದ್ದು, ಈ ಪರಿಸರದಲ್ಲಿರುವ ಮಾಹಿತಿಗಳನ್ನು ಪುನರ್‌ಪರಿಶೀಲಿಸಿ ಹೊಸ ಮಾಹಿತಿಗಳನ್ನು ಸೇರ್ಪಡೆ ಮಾಡುವುದರ ಮೂಲಕ ಇದುವರೆಗೆ ಬೆಳಕಿಗೆ ಬಾರದ ಶಾಸನಗಳ ಪರಿಚಯ ಹಾಗೂ ವಿಶ್ಲೇಷಣೆ ಮಾಡುವ ಕಾರ್ಯ ಮುಖ್ಯವಾಗಿದೆ. ಆ ಪರಿಸರದ ವಿಭಿನ್ನ ಸಂಪ್ರದಾಯ, ಆಚರಣೆ ಮತ್ತು ನಂಬಿಕೆಗಳು ಸೂಕ್ಷ್ಮ ಚಿತ್ರಣವನ್ನು ಇಲ್ಲಿ ನೀಡುವುದರ ಮೂಲಕ ಈ ಪ್ರದೇಶದ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಚಟುವಟಿಕೆಗಳ ಸಮಗ್ರ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಒಟ್ಟಾರೆ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಐಮಂಗಲ ಹೋಬಳಿ ಪರಿಸರದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಕೊಡುಗೆಗಳನ್ನು ತಿಳಿಸುವುದು ಪ್ರಸ್ತುತ ಸಂಶೋಧನೆಯ ಉದ್ದೇಶವಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಯಾವುದೇ ಒಂದು ವಿಷಯದ ಬಗ್ಗೆ ಪರಿಪೂರ್ಣ ವಿಷಯ ನಿಷ್ಕರ್ಷೆಯಾಗಬೇಕಾದರೆ ಅದಕ್ಕೆ ಅದರದೇ ಅಧ್ಯಯನದ ವ್ಯಾಪ್ತಿ ಹೊಂದುವುದು ಅತ್ಯವಶ್ಯಕ. ಒಂದು ನಿರ್ದಿಷ್ಟ ಹಾಗೂ

ಉದ್ದೇಶಪೂರಿತ ಸಂಶೋಧನೆ ಯಶಸ್ವಿಯಾಗಲು ಇದು ತುಂಬಾ ಸಹಕಾರಿ. ಪ್ರಸ್ತುತ ಐಮಂಗಲ ಹೋಬಳಿ ಪರಿಸರದಲ್ಲಿ ೯೪ ಹಳ್ಳಿಗಳಿದ್ದು, ಅವುಗಳಲ್ಲಿ ಪ್ರಮುಖ ಚಾರಿತ್ರಿಕ ಗ್ರಾಮಗಳ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. ಈ ಪರಿಸರವು ಪ್ರಾಗಿತಿಹಾಸ ಕಾಲದಿಂದಲೂ ಮಾನವನ ವಸತಿ ತಾಣವಾಗಿದ್ದು, ಇತಿಹಾಸ ಕಾಲದ ಆರಂಭದಿಂದ ವಿಜಯನಗರೋತ್ತರ ಕಾಲದವರೆಗಿನ ಅನೇಕ ಸ್ಮಾರಕಾವಶೇಷಗಳು, ಸಾಂಸ್ಕೃತಿಕ ಸಂಗತಿಗಳು ಇಲ್ಲಿ ದೊರೆಯುತ್ತಿವೆ. ಅವುಗಳ ಮೂಲಕ ಐಮಂಗಲ ಪರಿಸರದ ಸಮಗ್ರ ಚರಿತ್ರೆಯನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ.

೧.೩. ಅಧ್ಯಯನದ ಸ್ವರೂಪ

ಪ್ರಸ್ತುತ "ಐಮಂಗಲ ಹೋಬಳಿ ಪರಿಸರ : ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಾಯಗಳನ್ನಾಗಿ ವಿಭಾಗಿಸಿ ಕೊಳ್ಳಲಾಗಿದೆ. ಈ ಆರು ಅಧ್ಯಾಯಗಳು ಒಳಗೊಂಡ ವಿಷಯ ಮತ್ತು ತಾತ್ವಿಕ ಸ್ವರೂಪ ಈ ಕೆಳಕಂಡಂತಿದೆ.

ಮೊದಲನೆಯ ಅಧ್ಯಾಯದಲ್ಲಿ ಪ್ರಸ್ತಾವನೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ, ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ ಹಾಗೂ ಅಧ್ಯಯನದ ವಿಧಾನಗಳನ್ನು ಸ್ಪಷ್ಟಪಡಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಐಮಂಗಲ ಪರಿಸರದ ಭೌಗೋಳಿಕ ಮತ್ತು ಐತಿಹಾಸಿಕ ವಿವರಣೆಯಲ್ಲಿ ಭೌಗೋಳಿಕ ಅಂಶಗಳಾದ ಭೂವಿಸ್ತರಣೆ, ಹವಾಗುಣ, ಜನಸಂಖ್ಯೆ, ಮಣ್ಣು, ಜಲಸಂಪತ್ತು ಮುಂತಾದ ವಿಷಯಗಳ ಪರಿಶೀಲನೆ ನಡೆಸಲಾಗುವುದು. ಜೊತೆಗೆ ಐತಿಹಾಸಿಕವಾಗಿ ಪ್ರಾಗಿತಿಹಾಸಕಾಲದ ನೆಲೆಗಳು ಮತ್ತು ಈ ಪರಿಸರವನ್ನು ಆಳಿದ ಪ್ರಮುಖ ಅರಸುಮನೆತನಗಳ ಆಡಳಿತ ವ್ಯವಸ್ಥೆಯನ್ನು ಅಲ್ಲಿನ ಶಾಸನ, ಸ್ಮಾರಕ ಹಾಗೂ ಸಾಹಿತ್ಯ ಆಕರಗಳ ಹಿನ್ನೆಲೆಯಲ್ಲಿ ಇಲ್ಲಿನ ರಾಜಕೀಯ ಇತಿಹಾಸವನ್ನು ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಐಮಂಗಲ ಪರಿಸರದ ಸ್ಥಳನಾಮ ಮತ್ತು ಸ್ಥಳಪುರಾಣ ವಿವರಣೆಯಲ್ಲಿ ಸ್ಥಳನಾಮಗಳು ಪ್ರಾಚೀನಕಾಲದಲ್ಲಿ ಗ್ರಾಮಗಳ ಪದನಿಷ್ಪತ್ತಿಯಾದ ಸಸ್ಯವಾಚಕ, ಪ್ರಾಣಿವಾಚಕ, ಜಲವಾಚಕ, ಜನಾಂಗೀಯ ವಾಚಕ ಮುಂತಾದ ವಿಷಯಗಳನ್ನು ಶಾಸನಗಳ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸಲಾಗುವುದು. ಜೊತೆಗೆ ಸ್ಥಳಪುರಾಣದಲ್ಲಿ ಈ ಹಿಂದೆ ನಡೆದ ಘಟನೆಗಳು, ದೇವರ ಅವತಾರ ಕಥೆಗಳು, ಅರಸರ ಜೀವನ, ವಂಶಾವಳಿ, ಸಂತರ ಜೀವನ ವೃತ್ತಾಂತಗಳನ್ನು ಐತಿಹ್ಯಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಐಮಂಗಲ ಪರಿಸರದ ಸ್ಮಾರಕಗಳಾದ ದೇವಾಲಯ, ಮೂರ್ತಿಶಿಲ್ಪ, ಕೋಟೆ-ಕೊತ್ತಲು, ವೀರ-ಮಾಸ್ತಿಗಲ್ಲುಗಳು, ಕೆರೆ-ಬಾವಿಗಳ ನಿರ್ಮಾಣ ಮಾಡಿದ ಹಿನ್ನೆಲೆ ಅವುಗಳ ಕಲೆ ಮತ್ತು ವಾಸ್ತುಶಿಲ್ಪ ಹಾಗೂ ಅವುಗಳ ಮಹತ್ವವನ್ನು ಕುರಿತು ವಿವರಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಐಮಂಗಲ ಪರಿಸರದ ಐತಿಹ್ಯಗಳು, ಜನಸಮುದಾಯಗಳು ರೂಢಿಸಿಕೊಂಡು ಬಂದಿರುವ ನಂಬಿಕೆ ಮತ್ತು ಆಚರಣೆಗಳು, ಜಾತ್ರೆ-ಉತ್ಸವಗಳನ್ನು ಕುರಿತಂತೆ ವಿವರಿಸಲಾಗಿದೆ.

ಆರನೆಯ ಅಧ್ಯಾಯವು ಸಮಾರೋಪವಾಗಿದ್ದು, ಇದು ಇಡೀ ಅಧ್ಯಾಯದಲ್ಲಿ ಕಂಡುಕೊಂಡ ಒಟ್ಟಾರೆಯ ಸಂಶೋಧನೆಯ ಫಲಿತಾಂಶವನ್ನು ಒಳಗೊಂಡಿದೆ. ಅದರೊಂದಿಗೆ ಇಡೀ ಅಧ್ಯಾಯಗಳ ಸಂಕ್ಷಿಪ್ತ ರೂಪವನ್ನು ಇಲ್ಲಿ ಕಾಣಬಹುದು.

ಅನುಬಂಧದಲ್ಲಿ ಕೋಷ್ಟಕಗಳು, ಸಂಕ್ಷಿಪ್ತ ರೂಪಗಳು, ಗ್ರಂಥಸೂಚಿ, ತಲವಿನ್ಯಾಸ, ದೇವಾಲಯಗಳಿಗೆ ಸಂಬಂಧಿಸಿದ ಛಾಯಾಚಿತ್ರಗಳು ಮತ್ತು ಅಗತ್ಯ ನಕ್ಷೆಗಳನ್ನು ಅಳವಡಿಸಲಾಗಿದ್ದು, ಸಮಗ್ರ ಪರಿಸರದ ಒಟ್ಟಾರೆ ಚಿತ್ರಣವನ್ನು ನೀಡುವ ಪ್ರಯತ್ನವಿದು.

೧.೪. ಅಧ್ಯಯನಗಳ ಸಮೀಕ್ಷೆ

ಯಾವುದೇ ಒಂದು ಅಧ್ಯಯನವನ್ನು ಕೈಗೊಂಡಾಗ ಆ ಅಧ್ಯಯನಕ್ಕೆ ಸಂಬಂಧಿಸಿದಂತೆ ಇದುವರೆಗೂ ನಡೆದ ಕೆಲಸ ಕಾರ್ಯಗಳನ್ನು ಸಮೀಕ್ಷಿಸಿ ವರದಿ ಮಾಡುವುದು ಪ್ರಸ್ತುತ ಅಧ್ಯಯನಕಾರನ ಕರ್ತವ್ಯವಾಗಿರುತ್ತದೆ. ಅವರು ಕೈಗೊಂಡ ಅಧ್ಯಯನಗಳ ಹೊರತಾಗಿ ನಾವು ಯಾವ ಹೊಸ ಅಂಶವನ್ನು ಅಧ್ಯಯನದಲ್ಲಿ ಹೇಳುತ್ತೇವೆ ಅಥವಾ ವಿಶ್ಲೇಷಿಸುತ್ತೇವೆ ಎನ್ನುವುದು ಬಹಳ ಮುಖ್ಯವಾಗಿರುತ್ತದೆ. ಆದ್ದರಿಂದ ಒಂದು ವಿಷಯವನ್ನು ಕುರಿತು ಅಧ್ಯಯನವನ್ನು ಕೈಗೊಂಡಾಗ ಇದುವರೆಗೂ ಅದನ್ನು ಕುರಿತು ನಡೆದ ಅಧ್ಯಯನಗಳ ಬಗ್ಗೆ ವರದಿ ಮಾಡುವುದು ಸಮಂಜಸ. "ಐಮಂಗಲ ಹೋಬಳಿ ಪರಿಸರ : ಸಾಂಸ್ಕೃತಿಕ ಅಧ್ಯಯನ"ಕ್ಕೆ ಸಂಬಂಧಿಸಿದಂತೆ ಇದುವರೆಗೆ ಕೆಲವು ಅಧ್ಯಯನಗಳು ನಡೆದಿದ್ದು ಅವು ಪತ್ರಿಕೆ, ಸ್ಮರಣ ಸಂಚಿಕೆ, ಸಂಪಾದಿತ ಕೃತಿ, ಸ್ವತಂತ್ರ ಕೃತ್ತಿ, ಸಂಶೋಧನಾ ಲೇಖನಗಳು, ಐತಿಹಾಸಿಕ ಲೇಖನಗಳಾಗಿವೆ. ಅವುಗಳಲ್ಲಿ ಪ್ರಮುಖವಾಗಿ ಲಕ್ಷ್ಮಣ್ ತೆಲಗಾವಿ ಅವರ *"ಹರತಿಸಿರಿ"* ಎಂಬ ಸಂಪಾದಿತ ಕೃತಿಯಲ್ಲಿ ಹರ್ತಿಕೋಟೆಯ ಸ್ಮಾರಕಗಳು ಹಾಗೂ ಹರತಿ ಪಾಳೆಗಾರರ ಮೂಲವಂಶಾವಳಿ ಕುರಿತ ಮಾಹಿತಿಯಿದೆ. ಆರ್. ಗೋಪಾಲ್ ಅವರ *"ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ"* ಎಂಬ ಸಂಪಾದಿತ ಕೃತಿಯಲ್ಲಿ ಚಿತ್ರದುರ್ಗದ ಹರತಿ ಪಾಳೆಗಾರರು ಹಾಗೂ ಐಮಂಗಲದಲ್ಲಿ ಆಳ್ವಿಕೆ ನಡೆಸಿದ ನೊಳಂಬ ಪಲ್ಲವರು ಮತ್ತು ಐಮಂಗಲ ಕೋಟೆ ಕುರಿತು ಮಾಹಿತಿ ನೀಡಿದ್ದಾರೆ. ಗಿರಿಜಾ .ಟಿ. *"ಚಿತ್ರದುರ್ಗ ಜಿಲ್ಲಾದರ್ಶಿನಿ"* ಎಂಬ ಕೃತಿಯಲ್ಲಿ ಹಿರಿಯೂರು ತಾಲೂಕಿನ ಗ್ರಾಮಗಳು ಕುರಿತು ಮಾಹಿತಿ ನೀಡಿದ್ದಾರೆ. ಬಿ.ಎಲ್. ರೈಸ್ ಸಂಪಾದಿತ *"ಎಪಿಗ್ರಾಫಿಯಾ ಕರ್ನಾಟಿಕ ಸಂ. ೧೧"*ರಲ್ಲಿ ಹಿರಿಯೂರು ತಾಲೂಕಿನ ಶಾಸನಗಳು ಕುರಿತು ಮಾಹಿತಿ ದೊರಕುತ್ತದೆ. ಭರಂಪುರ ಕಣುಮಪ್ಪ ಅವರ *"ಬೇಚಿರಾಕ್ ಗ್ರಾಮ ಕುಂಬಾರಗಟ್ಟೆ ಸಂಸ್ಕೃತಿ"* ಎಂಬ ಕೃತಿಯಲ್ಲಿ ಐಮಂಗಲ ಹೋಬಳಿಯ ಸ್ಮಾರಕಗಳು ಕುರಿತು ಮಾಹಿತಿ ನೀಡಿದ್ದಾರೆ. ಎಸ್.ಜಿ. ರಾಮದಾಸರೆಡ್ಡಿ

ಅವರ "ಕ್ಷೇತ್ರಕಾರ್ಯ"(ಇತಿಹಾಸ ಮತ್ತು ಪುರಾತತ್ತ್ವ ಶೋಧ ಕಾರ್ಯ) ಎಂಬ ಕೃತಿಯಲ್ಲಿ ಐಮಂಗಲ ಪರಿಸರದ ಪ್ರಾಗಿತಿಹಾಸ ಕುರಿತು ಮಾಹಿತಿ ನೀಡಿದ್ದಾರೆ.

ಆದರೂ ಐಮಂಗಲ ಹೋಬಳಿ ಪರಿಸರದ ಪ್ರಾಚೀನ ಸ್ಮಾರಕಗಳನ್ನು ಕುರಿತಾದ ಒಂದು ವ್ಯವಸ್ಥಿತವಾದ ಸಾಂಸ್ಕೃತಿಕ ಅಧ್ಯಯನ ಇದುವರೆಗೂ ನಡೆದಿಲ್ಲವೆಂದೇ ಹೇಳಬಹುದು. ಆದುದರಿಂದ ಅಂತಹ ಒಂದು ಪ್ರಯತ್ನವನ್ನು ಪ್ರಸ್ತುತ ಅಧ್ಯಾಯದಲ್ಲಿ ಮಾಡಲಾಗಿದೆ.

೧.೫. ಅಧ್ಯಯನದ ವಿಧಾನ

ಇದುವರೆಗೆ ನಡೆದಿರುವ ಅಧ್ಯಯನವನ್ನು ಗಮನದಲ್ಲಿಟ್ಟುಕೊಂಡು ಐಮಂಗಲ ಹೋಬಳಿ ಪರಿಸರದಲ್ಲಿ ಗ್ರಾಮವಾರು ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು. ಈ ಮೂಲಕ ಪುರಾತತ್ತ್ವ ಸಂಸ್ಕೃತಿಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಕ್ರೋಢೀಕರಿಸಲಾಯಿತು. ಮುಖ್ಯವಾಗಿ ಪ್ರಾಗಿತಿಹಾಸ ಕಾಲದ ಅವಶೇಷ. ಶಾಸನ, ದೇವಾಲಯ, ಮೂರ್ತಿಶಿಲ್ಪ ಮುಂತಾದ ಆಕರಗಳ ದಾಖಲೀಕರಣ ಮತ್ತು ಛಾಯಾಚಿತ್ರ, ನಕ್ಷೆಗಳನ್ನು ಮಾಡಿಕೊಳ್ಳಲಾಗಿದೆ. ಅದರೊಂದಿಗೆ ಜಾನಪದ ವೈಶಿಷ್ಟ್ಯತೆಯ ಸಂಗತಿ, ಸ್ಥಳೀಯ ಚರಿತ್ರೆ ಮುಂತಾದ ಮಾಹಿತಿಗಳನ್ನು ಸಂಗ್ರಹಿಸಲಾಯಿತು. ಧಾರ್ಮಿಕ, ಸಾಮಾಜಿಕ ಜನಜೀವನದ ಬಗ್ಗೆಯೂ ಮಾಹಿತಿ ಸಂಗ್ರಹಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಸಂಗ್ರಹಿತ ಆಕರಗಳನ್ನು ಬಳಸಿಕೊಂಡು ವಿಷಯಾನುಸಾರ ಸಂಯೋಜಿಸಿ, ವಿಮರ್ಶಿಸಿ, ಚರ್ಚಿಸಿ, ಅಂತರ್‌ಶಿಸ್ತೀಯ ಅಧ್ಯಯನದ ಮೂಲಕ ಐಮಂಗಲ ಹೋಬಳಿ ಪರಿಸರದ ಪೂರ್ಣ ಚರಿತ್ರೆಯನ್ನು ಚರ್ಚಿಸಲು ಪ್ರಯತ್ನಿಸಲಾಗಿದೆ.

❑❑❑

ಅಧ್ಯಾಯ : ಎರಡು

ಭೌಗೋಳಿಕತೆ ಮತ್ತು ಇತಿಹಾಸ

೨.೧. ಭೌಗೋಳಿಕತೆ

೨.೨. ಪ್ರಾಗಿತಿಹಾಸ

೨.೩. ಇತಿಹಾಸ

ಅಧ್ಯಾಯ : ಎರಡು

ಭೌಗೋಳಿಕತೆ ಮತ್ತು ಇತಿಹಾಸ

ಮನುಷ್ಯ ಸೃಷ್ಟಿಯ ಅತ್ಯಂತ ಬುದ್ಧಿವಂತ ಪ್ರಾಣಿ. ಜೊತೆಗೆ ಪೃಥ್ವಿಗೆ ಸಂಬಂಧಿಸಿದ ಎಲ್ಲಾ ಸಂಗತಿಗಳ ಜ್ಞಾನ ಪಡೆಯಲು ಮತ್ತು ಅವುಗಳ ರಹಸ್ಯ ತಿಳಿದುಕೊಳ್ಳಲು ಸದಾಕಾಲ ಪ್ರಯತ್ನಿಸಿರುತ್ತಾನೆ. ಪರಿಸರವು ಆತನ ಚಟುವಟಿಕೆಗಳನ್ನಷ್ಟೇ ಅಲ್ಲದೆ, ಸ್ವಭಾವ ಮತ್ತು ರೂಢಿಗಳ ಮೇಲೆಯೂ ಪ್ರಭಾವ ಬೀರುತ್ತದೆ. ಭೂಗೋಳಶಾಸ್ತ್ರವು ಭೂಮಿಯ ಮೇಲೆ ಹರಡಿರುವ ನಿಸರ್ಗ ನಿರ್ಮಿತವಾದ ಬೆಟ್ಟ-ಗುಡ್ಡ, ಗವಿ, ಖನಿಜ, ನದಿ, ಹಳ್ಳ, ಕಾಡು, ಫಲವತ್ತಾದ ಮಣ್ಣು, ಪ್ರಾಣಿ ಮತ್ತು ಮನುಷ್ಯ ಸಂಕುಲ ಮೊದಲಾದ ವಸ್ತುಗಳನ್ನು ವಿವರಿಸುತ್ತದೆ. ಹಾಗಾಗಿಯೇ ಜರ್ಮನ್ ತತ್ವಜ್ಞಾನಿ ಮತ್ತು ಖಗೋಳಶಾಸ್ತ್ರಜ್ಞ ಇಮ್ಯಾನುಯಲ್ ಕಾಂಟ್ ಭೂಗೋಳಶಾಸ್ತ್ರವನ್ನು "ಪೃಥ್ವಿಯ ಮೇಲೆ ಸಂಭವಿಸುವ ಘಟನೆಗಳ ವರದಿ" ಎಂದು ಹೇಳಿದ್ದಾನೆ.[೧] ಯಾವುದೇ ಒಂದು ಪ್ರದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಬೌದ್ಧಿಕ ಹಾಗೂ ಸಾಂಸ್ಕೃತಿಕ ಪರಂಪರೆಯ ಹಿನ್ನಡೆ, ಮುನ್ನಡೆಗೆ ಭೌಗೋಳಿಕ ಪರಿಸರವೇ ಪ್ರಧಾನವಾಗಿದೆ. ಭೌಗೋಳಿಕ ಪರಿಸರದ ಅಧ್ಯಯನ ಆ ಭಾಗದ ವಾಸ್ತವ ಸ್ಥಿತಿಯನ್ನು ತಿಳಿಯುವ ಪ್ರಮುಖ ಆಕರವಾಗಿರುತ್ತದೆ.

೨.೧. ಭೌಗೋಳಿಕ ಹಿನ್ನೆಲೆ

ಐಮಂಗಲ ಹೋಬಳಿಯು, ಜಿಲ್ಲಾ ಕೇಂದ್ರ ಚಿತ್ರದುರ್ಗದಿಂದ ಉತ್ತರಕ್ಕೆ ೨೦ ಕಿ.ಮೀ. ಹಾಗೂ ರಾಜಧಾನಿ ಬೆಂಗಳೂರಿನಿಂದ ಸುಮಾರು ೧೮೦ ಕಿ.ಮೀ. ದೂರದಲ್ಲಿದೆ. ಭೌಗೋಳಿಕವಾಗಿ ಈ ಪರಿಸರ ಬಯಲು ಪ್ರದೇಶವಾಗಿದ್ದು ಹಿರಿಯೂರು ತಾಲೂಕಿನ ದೊಡ್ಡ ಹೋಬಳಿಯಾಗಿದೆ. ಪ್ರಸ್ತುತ ಈ ಹೋಬಳಿಯ ಭೌಗೋಳಿಕ ವಿಸ್ತೀರ್ಣ ೧೦,೨೦೨,೭೧೯ ಎಕರೆ.[೨] ಈ ಹೋಬಳಿಯ ಪೂರ್ವಕ್ಕೆ ಶಿರಾ, ಪಶ್ಚಿಮಕ್ಕೆ ಹೊಸದುರ್ಗ, ದಕ್ಷಿಣಕ್ಕೆ ಹಿರಿಯೂರು, ಉತ್ತರಕ್ಕೆ ಚಿತ್ರದುರ್ಗ ತಾಲೂಕುಗಳಿಂದ ಸುತ್ತುವರಿದಿದೆ. ಹಿರಿಯೂರು ತಾಲೂಕಿನಲ್ಲಿ ಐಮಂಗಲ, ಧರ್ಮಪುರ, ಜವನಗೊಂಡನಹಳ್ಳಿ, ಹಿರಿಯೂರು(ಕಸಬಾ) ಹೋಬಳಿಗಳಿವೆ. ಐಮಂಗಲ ಹೋಬಳಿಯು ೯೪ ಹಳ್ಳಿಗಳನ್ನು ಹೊಂದಿದ್ದು, ಒಟ್ಟು ಭೂವಿಸ್ತೀರ್ಣದಲ್ಲಿ ೧೦,೬೯೬ ಎಕರೆ ಖುಷ್ಕಿ ಭೂಮಿ, ೧೦,೭೬೨ ಎಕರೆ ತರಿಭೂಮಿ ಹಾಗೂ ೯,೩೬೩ ಎಕರೆ ಗೋಮಾಳವನ್ನು ಹೊಂದಿದೆ.[೩]

ವಾಯುಗುಣ ಮತ್ತು ಮಳೆ

ಈ ಪರಿಸರದ ವಾಯುಗುಣವು ಉಷ್ಣವಲಯದ ಮಾನ್ಸೂನ್ ಮಾದರಿಯದು. ಡಿಸೆಂಬರ್‌ನಿಂದ ಫೆಬ್ರವರಿ ತಿಂಗಳವರೆಗೆ ಚಳಿಗಾಲವಾಗಿದ್ದು, ಈ ಅವಧಿಯಲ್ಲಿ ಗರಿಷ್ಠ ಸರಾಸರಿ ಉಷ್ಣಾಂಶ ೩೦.೯೦ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಈ ಋತುಮಾನದಲ್ಲಿ ಪರಿಸರವು ಭಾರತದ ಆಗ್ನೇಯ ಭಾಗದಲ್ಲಿ ಆವರ್ತ ಮಾರುತಗಳಿಂದ ಉಂಟಾಗುವ ಚದುರಿದ ಮಳೆಯನ್ನು ಪಡೆಯುತ್ತದೆ. ಡಿಸೆಂಬರ್, ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಗಾಳಿಯ ತೇವಾಂಶದ ಮಟ್ಟ ಶೇ. ೬೮ರಷ್ಟು ಈ ಅವಧಿಯ ಋತುಮಾನವನ್ನು ಚಳಿಗಾಲ ಎಂದು ಕರೆಯುತ್ತಾರೆ. ಮಾರ್ಚ್‌ನಿಂದ ಮೇ ತಿಂಗಳವರೆಗೆ ಬಿಸಿ ಹವಾಗುಣವಿರುತ್ತದೆ. ಒಮ್ಮೊಮ್ಮೆ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಗುಡುಗಿನಿಂದ ಕೂಡಿದ ಮಳೆ ಬಿದ್ದರೂ ಈ ಕಾಲಾವಧಿಯನ್ನು ಬೇಸಿಗೆ ಕಾಲ ಎಂದು ಕರೆಯಲಾಗುವುದು. ಜೂನ್‌ನಿಂದ ಸೆಪ್ಟೆಂಬರ್ ತಿಂಗಳವರೆಗೆ ಇಲ್ಲಿ ಮಳೆಗಾಲವಿರುತ್ತದೆ. ಈ ಪರಿಸರದ ಸರಾಸರಿ ಮಳೆಯ ಪ್ರಮಾಣ ೪೦೮.೬ ಮಿ.ಮೀ.[೪] ವರ್ಷದ ಒಟ್ಟಾರೆ ಮಳೆಯಲ್ಲಿ ಸುಮಾರು ಶೇ. ೧೫ರಷ್ಟು ಮಳೆಯನ್ನು ಪಡೆದುಕೊಳ್ಳುತ್ತಿದೆ. ಈ ಋತುಮಾನವನ್ನು ಮಳೆಗಾಲ ಎಂದು ಕರೆಯಲಾಗಿದೆ. ಇಲ್ಲಿನ ವಿವಿಧ ಬಗೆಯ ಆಹಾರ ಬೆಳೆಗಳಲ್ಲಿ ಭತ್ತ, ರಾಗಿ, ಜೋಳ, ಸಜ್ಜೆ, ನವಣೆ, ತೊಗರಿ, ಕಡಲೆ, ಹಲಸಂದಿ, ಹುಚ್ಚೆಳ್ಳು, ಕಡಲೆಕಾಯಿ, ಔಡಲ, ತಂಬಾಕು, ಇತರೆ ಎಣ್ಣೆಬೀಜಗಳು ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಮುಂಗಾರು ಮತ್ತು ಹಿಂಗಾರು ಬೆಳೆಗಳ ಜೊತೆಗೆ ವಾರ್ಷಿಕ ವಾಣಿಜ್ಯ ಬೆಳೆಗಳಾದ ತೆಂಗು, ಅಡಿಕೆ, ಮಾವು ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಕೆಲವೊಂದು ಪ್ರದೇಶದಲ್ಲಿ ಕ್ಯಾರೆಟ್, ಮೂಲಂಗಿ ಬೀಟ್‌ರೂಟ್, ಆಲೂಗಡ್ಡೆ, ಗೆಡ್ಡೆಕೋಸು, ಈರುಳ್ಳಿ, ಮುಂತಾದ ತರಕಾರಿ ಹಾಗೂ ಕಾಕಡ, ಕನಕಾಂಬರ, ಸೇವಂತಿಗೆ ಮುಂತಾದ ಹೂವುಗಳ ತೋಟಗಾರಿಕೆಯ ಕೆಲಸದಲ್ಲಿ ಇಲ್ಲಿನ ಜನಸಮುದಾಯವು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಜೂನ್, ಜುಲೈ ತಿಂಗಳಿನಲ್ಲಿ ಮಳೆ ಬಿದ್ದರೂ ಹವಾಗುಣ ಬಿಸಿಯಾಗಿರುತ್ತದೆ. ಈ ಅವಧಿ ಮಳೆಗಾಲ ಪ್ರಾರಂಭದ ದಿನಗಳಾದ್ದರಿಂದ ಇಲ್ಲಿನ ಅರಣ್ಯ ಹಾಗೂ ಸಸ್ಯರಾಶಿಗಳು ನಿಧಾನವಾಗಿ ಹಸಿರನ್ನು ಪಡೆಯಲು ಸಜ್ಜಾಗಿರುತ್ತವೆ. ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಿನಲ್ಲಿ ಈ ಪರಿಸರದ ಬಹುತೇಕ ಭೂಭಾಗವು ಹಸಿರು ರಾಶಿಯನ್ನುಟ್ಟು ಕಂಗೊಳಿಸುತ್ತದೆ. ಜೊತೆಗೆ ಭೂಮಿಯ ಅಂತರ್ಜಲದ ಮಟ್ಟ ನಿಧಾನವಾಗಿ ಹೆಚ್ಚುತ್ತಾ ಹೋಗುತ್ತದೆ. ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಮಾರುತುಗಳು ಈಶಾನ್ಯ ದಿಕ್ಕಿನಿಂದ ಬೀಸುವುದರಿಂದ ಹಾಗೂ ಅನಿರೀಕ್ಷಿತವಾಗಿ ಬಂಗಾಳಕೊಲ್ಲಿಯಲ್ಲಿ ಉಂಟಾಗುವ ಆವರ್ತ ಮಾರುತಗಳಿಂದ ಒಮ್ಮೊಮ್ಮೆ ಮಳೆ ಬೀಳುತ್ತದೆ.

ಸಸ್ಯಸಂಪತ್ತು ಮತ್ತು ಅರಣ್ಯ

ಚಿತ್ರದುರ್ಗ ಜಿಲ್ಲೆಯು ಶಾಶ್ವತ ಬರಪೀಡಿತ ಪ್ರದೇಶವೆಂದು ಸರ್ಕಾರದಿಂದಲೇ ಗುರುತಿಸಲ್ಪಟ್ಟ ಪ್ರದೇಶವಾಗಿದೆ. ಹಾಗಾಗಿ ಐಮಂಗಲ ಪರಿಸರವು ಅತ್ಯಂತ ಕಡಿಮೆ ಮಳೆ ಬೀಳುವ ಪ್ರದೇಶವೆಂದೇ ಹೇಳಬಹುದು. ಇಲ್ಲಿ ಅರಣ್ಯಸಂಪತ್ತು ಕಡಿಮೆಯೇ ಇದ್ದು "ಬಯಲು ಸೀಮೆ" ಎಂದು ಗುರುತಿಸಲಾಗುತ್ತದೆ. ಪ್ರಸ್ತುತ ಪರಿಸರದ ಸಸ್ಯಸಂಪತ್ತುಗಳಲ್ಲಿ ಮತ್ತು ಗಟ್ಟಿಮುಟ್ಟಾದ ಅರಣ್ಯ

ಉತ್ಪನ್ನಗಳು ಮತ್ತು ನದಿ ನೀರಿನಂತಹ ಸಂಪನ್ಮೂಲಗಳು ಇರುವುದು ಬಹುಮಟ್ಟಿಗೆ ಕಡಿಮೆಯೇ ಎನ್ನಬಹುದು. ಏಕೆಂದರೆ ಇದೊಂದು ಸಾಧಾರಣವಾಗಿ ಒಣಭೂಮಿ ಪ್ರದೇಶವಾಗಿದೆ.[೫] ಹಳ್ಳಿಗಾಡಿನ ಮಾನವನಿರ್ಮಿತ ವಸತಿಪ್ರದೇಶಗಳಿಂದ ಕೂಡಿದ ಭೂಪ್ರದೇಶವಾಗಿದೆ. ಸಸ್ಯಸಂಪತ್ತಿನಲ್ಲಿ ಹೆಚ್ಚು ಮಾನವನಿರ್ಮಿತ ವಸತಿಪ್ರದೇಶಗಳಿಂದ ಕೂಡಿದ ಭೂಪ್ರದೇಶವಾಗಿದೆ.

ಈ ಪರಿಸರದಲ್ಲಿ ವಾರ್ಷಿಕವಾಗಿ ತೀರಾ ಕಡಿಮೆ ಮಳೆ ಬೀಳುವುದರಿಂದ ಇಲ್ಲಿನ ಮರಗಿಡಗಳೂ ಬಹುಮಟ್ಟಿಗೆ ಉರುವಲು ಸೌದೆಗೆ ಬಳಸುವ ಮರಗಳಿಂದ ಕೂಡಿದೆ. ಆಲ, ಬೇವು, ಹುಣಸೆ, ಹಲಸು, ಹೊಂಗೆ, ಎಲೆ ಉದುರುವ ವೃಕ್ಷಗಳು, ಸೀಮೆಜಾಲಿ ಪೊದೆಗಳು, ಮುಳ್ಳುಗಿಡಗಳು, ಕುರುಚಲು ಕಾಡು, ಕಳ್ಳಿ, ಚಿಗರು, ಪಾಪಸ್‌ಕಳ್ಳಿ, ಜಡೆಕಳ್ಳಿ ಇತ್ಯಾದಿಗಳು ಕಂಡುಬರುತ್ತವೆ. ತೋಳ, ಕಾಡುನಾಯಿ, ಕರಡಿ, ಕತ್ತೆ ಕಿರುಬ, ಮುಂಗಸಿ, ನರಿ, ಮೊಲ ಮುಂತಾದ ಕಾಡುಪ್ರಾಣಿಗಳನ್ನು ಕಾಣಬಹುದು. ಇನ್ನು ಕೆಲವು ಪ್ರದೇಶದಲ್ಲಿ ನವಿಲು, ಗೂಬೆ, ಹದ್ದು, ಕಾಗೆ, ಗಿಳಿ, ಮರಕುಟಿಕ, ಗುಬ್ಬಚ್ಚಿ, ಕಾಗೆ, ಗೀಜಿಗ, ಪಾರಿವಾಳ, ಕೋಗಿಲೆ ಮುಂತಾದ ಪಕ್ಷಿಗಳು ಕಂಡುಬರುತ್ತವೆ. ನಾಗರಹಾವು, ಚೇಳು, ಮಂಡರಗಪ್ಪೆ, ಜೇಡ ಮುಂತಾದ ವಿಷಜಂತುಗಳು ಕಂಡುಬರುತ್ತವೆ. ನಾಯಿ, ಮೇಕೆ, ಕುರಿ, ಹಸು, ಎತ್ತು, ಎಮ್ಮೆ ಮುಂತಾದವು ಈ ಭಾಗದ ರೈತಾಪಿವರ್ಗದ ಸಾಕುಪ್ರಾಣಿಗಳಾಗಿವೆ.

ಜಲಸಂಪತ್ತು

ಈ ಪ್ರದೇಶ ಬಯಲು ಸೀಮೆಯಾದ್ದರಿಂದ ಇಲ್ಲಿನ ಪ್ರಮುಖ ಜಲಸಂಪನ್ಮೂಲಗಳಾದ, ಕೆರೆಗಳು, ಬಾವಿಗಳು, ಕೊಳವೆ ಬಾವಿಗಳು, ಪ್ರಾಚೀನಕಾಲದಿಂದ ನೀರಿನ ಆಸರೆಯಾಗಿ ಪ್ರಮುಖ ಪಾತ್ರ ವಹಿಸಿರುವಂತೆ ಕಾಣುತ್ತದೆ. ಪೂರ್ವ ಭಾಗದಲ್ಲಿ ವೇದಾವತಿ ನದಿಯು ದಕ್ಷಿಣೋತ್ತರವಾಗಿ ಹರಿದು ಈಶಾನ್ಯದಲ್ಲಿ ಘಟವರ್ತಿಯೆಂಬಲ್ಲಿ ಬಳ್ಳಾರಿ ಜಿಲ್ಲೆಯನ್ನು ಸೇರುತ್ತದೆ.

ಐಮಂಗಲ, ಹರ್ತಿಕೋಟೆ ಮತ್ತು ತವಂದಿ ಕೆರೆಗಳು ಅತ್ಯಂತ ದೊಡ್ಡವು. ಈ ಹಿಂದೆ ಪ್ರಾಚೀನ ಕಾಲದಲ್ಲಿ ಅತಿ ಹೆಚ್ಚು ನೀರು ಶೇಖರಣೆಯಾಗಿ ಹಲವು ಗ್ರಾಮಗಳ ವ್ಯವಸಾಯಕ್ಕೆ ನೀರಿನ ಸೌಲಭ್ಯ ಒದಗಿಸಿವೆ.[೬] ಈ ಪ್ರದೇಶದಲ್ಲಿ ಹರ್ತಿಕೋಟೆ ಕೆರೆ, ಭರಮಪುರ ಕೆರೆ, ಕಂದಿಕೆರೆ ಕೆರೆ, ಚಿಕ್ಕಸಿದ್ಧವನಹಳ್ಳಿ ಕೆರೆ, ಹೇಮದಳ ಮುಂತಾದ ಕೆರೆಗಳು ಸಹ ವ್ಯವಸಾಯಕ್ಕೆ ನೀರನ್ನು ಒದಗಿಸುವ ಪ್ರಮುಖ ಮೂಲಗಳಾಗಿದ್ದವೆಂದು ಹೇಳಬಹುದು.

ಖನಿಜಸಂಪತ್ತು

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಇಂಗಳದಾಳು, ಚಿತ್ರಹಳ್ಳಿ, ಭೀಮಸಮುದ್ರ ಇತ್ಯಾದಿ ಪ್ರದೇಶದಲ್ಲಿ ಹೇರಳವಾದ ಖನಿಜಸಂಪತ್ತು ಕಂಡುಬರುತ್ತದೆ. ಆದರೆ ಐಮಂಗಲ ಹೋಬಳಿ ಪರಿಸರದಲ್ಲಿ ಮಹತ್ತರವಾದ ಲಾಭ ತರಬಹುದಾದ ಖನಿಜಸಂಪತ್ತು ಕಾಣಸಿಗುವುದಿಲ್ಲ. ಈ ಪ್ರದೇಶದಲ್ಲಿ ವಿವಿಧ ವರ್ಣದ ಸುಣ್ಣದ ನಿಕ್ಷೇಪಗಳು, ಕಪ್ಪುಕಲ್ಲು ಕೆಲವು ಕಡೆ ಕಪ್ಪು ಜಿಗಟು ಮಣ್ಣು, ಕೆಂಪುಮಿಶ್ರಿತ ಮಣ್ಣು ದೊರೆಯುತ್ತವೆ.

ಜನಸಂಖ್ಯೆ

ಈ ಪರಿಸರದ ಒಟ್ಟು ಭೌಗೋಳಿಕ ವಿಸ್ತೀರ್ಣ ೧೦,೨೦೨.೭೧೯ ಎಕರೆಗಳಾಗಿದ್ದು ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ. ೧೫.೫ರಷ್ಟನ್ನು ಹೊಂದಿದೆ. ೨೦೧೧ರ ಜನಗಣತಿ ಪ್ರಕಾರ ಐಮಂಗಲ ಹೋಬಳಿಯ ಒಟ್ಟು ಜನಸಂಖ್ಯೆ ಸುಮಾರು ೫೯.೪೩. ಇದರಲ್ಲಿ ಪುರುಷರ ಸಂಖ್ಯೆ ೨೮,೯೨೧ರಷ್ಟಿದ್ದರೆ, ಮಹಿಳೆಯರ ಸಂಖ್ಯೆ ೨೮,೪೪೯ರಷ್ಟಿದೆ. ಜಿಲ್ಲೆಯ ಜನಸಂಖ್ಯೆಯಲ್ಲಿ ಜನಸಂಖ್ಯಾ ಬೆಳವಣಿಗೆಯ ದರ ಶೇ. ೩೩ರಷ್ಟಿದೆ. ೨೦೧೧ ಜನಗಣತಿಯಂತೆ ಜನಸಾಂದ್ರತೆ ೧೧೨ ಜನರಿದ್ದು ಜಿಲ್ಲೆಯ ಹೋಬಳಿವಾರು ಜನಸಾಂದ್ರತೆಯಲ್ಲಿ ಪ್ರಥಮ ಶ್ರೇಣಿಯಲ್ಲಿದೆ.[೨] ಈ ಪ್ರದೇಶದ ಜನರ ಸಾಕ್ಷರತೆಯ ಬಗ್ಗೆ ತಿಳಿಸುವುದಾದರೆ ಒಟ್ಟು ಶೇ. ೫೦ರಷ್ಟು ಸಾಕ್ಷರತೆಯ ಪ್ರಮಾಣ ಹೊಂದಿದ್ದಾರೆ. ಮಹಿಳಾ ಸಾಕ್ಷರತೆ ಪ್ರಮಾಣ ಶೇ. ೨೩ರಷ್ಟು ಮತ್ತು ಪುರುಷರ ಸಾಕ್ಷರತೆ ಪ್ರಮಾಣ ಶೇ. ೨೭ರಷ್ಟಿದೆ.

ಇತಿಹಾಸ

ಐಮಂಗಲ ಪರಿಸರಕ್ಕೆ ಶ್ರೀಮಂತ ಇತಿಹಾಸವಿದೆ. ಶಿಲಾಯುಗದ ಜನರಿಂದ ಪ್ರಾರಂಭವಾದ ಈ ಪರಿಸರದಲ್ಲಿ ಮನುಷ್ಯ ನಾಗರಿಕತೆಯ ವಿವಿಧ ಹಂತಗಳನ್ನು ಹೇಗೆ ಕಂಡುಕೊಂಡನೆಂಬುದನ್ನು ಅವನು ಉದ್ದೇಶಪೂರ್ವಕವಾಗಿ ನಿರ್ಮಿಸಿದ ಪ್ರಾಚ್ಯಾವಶೇಷಗಳು (ಉಪಕರಣಗಳು, ಸ್ಮಾರಕಗಳು, ಮಡಿಕೆ, ಕುಡಿಕೆಗಳು, ಶಾಸನಗಳು) ಅವರ ಬದುಕಿಗೆ ಕೈಗನ್ನಡಿಯಾಗಿವೆ. ಈ ಅವಶೇಷಗಳ ಮೂಲಕ ಇಲ್ಲಿನ ಭವ್ಯ ಐತಿಹಾಸಿಕ ಪರಂಪರೆಯನ್ನು ಪ್ರಾಗಿತಿಹಾಸಕಾಲ ಮತ್ತು ಇತಿಹಾಸ ಕಾಲವೆಂದು ಪ್ರತ್ಯೇಕವಾಗಿ ನೋಡಬಹುದು.

೨.೨. ಪ್ರಾಗಿತಿಹಾಸ

ಮನುಷ್ಯ ಬರವಣಿಗೆಯನ್ನು ಕಂಡುಕೊಳ್ಳುವ ಮೊದಲು ಅವನ ಜೀವನದ ರೀತಿನೀತಿಗಳು ಅಷ್ಟೇನು ಸುಧಾರಿಸದೇ ಇದ್ದ ಕಾಲಾವಧಿಯನ್ನು ಪ್ರಾಗ್ಯೈತಿಹಾಸಿಕ ಕಾಲವೆಂದು ಕರೆಯಲಾಗುತ್ತದೆ. ಸೃಷ್ಟಿಯಲ್ಲಿ ಮಾನವನಿಗೆ ಒಂದು ವಿಶಿಷ್ಟ ಸ್ಥಾನವಿದೆ. ಮೂಲತಃ ಮಾನವ ಪ್ರಕೃತಿಯನ್ನು ಅವಲಂಬಿಸಿಕೊಂಡು ಜೀವಿಸಲೇಬೇಕಾದ ಪರಿಸ್ಥಿತಿ ಅವನಿಗಿತ್ತು. ಇಂದಿಗೆ ಸುಮಾರು ನಾಲ್ಕು ಮಿಲಿಯನ್ ವರ್ಷಗಳ ಹಿಂದೆ ಮನುಷ್ಯ ಜೀವಿಸಿದ್ದ ಎನ್ನುವುದಕ್ಕೆ ಸಾಕ್ಷ್ಯಾಧಾರಗಳಿವೆ.[೮] ಅಂದಿನಿಂದಲೂ ಮನುಷ್ಯ ಶಿಲೆಯೊಡನೆ ನಿಕಟ ಸಂಬಂಧ ಹೊಂದಿದ್ದಾನೆ. ಪ್ರಕೃತಿ ಮಾನವನಿಗೆ ಮೊದಲು ನೀಡಿದ ಕೊಡುಗೆಗಳಲ್ಲಿ ಶಿಲೆಯೂ ಒಂದಾಗಿದೆ. ಆರಂಭದಲ್ಲಿ ಅಲೆಮಾರಿಯಾಗಿದ್ದ ಮಾನವನಿಗೆ ಗೆಡ್ಡೆಗೆಣಸುಗಳನ್ನು ಅಗೆದು, ತೆಗೆಯಲು, ಗಿಡಗಳನ್ನು ಕಡಿಯಲು, ಬೇಟೆಯಾಡಲು, ಬೇಟೆಯಾಡಿದ ಪ್ರಾಣಿ ಮಾಂಸವನ್ನು ತುಂಡು ಮಾಡಲು, ಆಯುಧಗಳನ್ನು ತಯಾರಿಸಲು ಶಿಲೆ ಮಾನವನಿಗೆ ನೆರವಾಗಿದೆ.[೯] ಒಟ್ಟಿನಲ್ಲಿ ಅಂದು ಮಾನವನ ಜೀವನದ ಒಂದು ಭಾಗವಾಗಿ ಶಿಲೆ ಬಳಕೆಯಾಗುತಿತ್ತು. ಈ ಕಾಲಾವಧಿಯನ್ನು ಶಿಲಾಯುಗ(ಸ್ಟೋನೇಜ್) ಎಂದು ಕರೆಯುತ್ತಾರೆ. ಅತ್ಯಂತ ದೀರ್ಘವಾದ ಈ ಯುಗವನ್ನು ಕ್ರಮವಾಗಿ ೧. ಹಳೆ ಶಿಲಾಯುಗ, ೨. ಸೂಕ್ಷ್ಮ ಶಿಲಾಯುಗ, ೩. ನವಶಿಲಾಯುಗ, ೪. ಬೃಹತ್ ಶಿಲಾಯುಗ ಎಂದು ನಾಲ್ಕು ಹಂತಗಳಾಗಿ ವಿಭಾಗಿಸಲಾಗಿದೆ.[೧೦]

೧. ಹಳೆ ಶಿಲಾಯುಗ

ಹಳೆ ಶಿಲಾಯುಗದ ಇತಿಹಾಸದ ಬಗ್ಗೆ ಕರ್ನಾಟಕದಲ್ಲಿ ವಿಸ್ತೃತವಾದ ಅಧ್ಯಯನಗಳು ನಡೆದಿವೆ. ಕೃಷ್ಣ, ಕಾವೇರಿ, ತುಂಗಭದ್ರಾ ಮತ್ತು ಅವುಗಳ ಉಪನದಿಗಳ ಪ್ರದೇಶದಲ್ಲಿ ಹಳೆ ಶಿಲಾಯುಗದ ಮಾನವನ ಬದುಕು ರೂಪಗೊಂಡಿತ್ತು. ಸುಮಾರು ೭ ಲಕ್ಷದಿಂದ ೧.೨೫ ಲಕ್ಷ ವರ್ಷಗಳಷ್ಟು ಹಳೆಯದೆಂದು ಗುರುತಿಸಲಾದ ಆದಿ ಹಳೆಶಿಲಾಯುಗದ ಅವಶೇಷಗಳು[೧೧] ಅನೇಕ ಸ್ಥಳಗಳಲ್ಲಿ ಕಂಡುಬಂದಿವೆ. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ತಾಳ್ಯ, ಹೊಸದುರ್ಗ ತಾಲೂಕಿನ ಜಾನಕಲ್ಲು ಈ ಹಂತಕ್ಕೆ ಸೇರಿದ ಪ್ರಮುಖ ಸ್ಥಳಗಳು[೧೨] ಎಂದು ರಾಬರ್ಟ್ ಬ್ರೂಸ್‌ಫೂಟ್ ಅವರು ಪತ್ತೆಹಚ್ಚಿದ್ದಾರೆ.

ಐಮಂಗಲ ಪರಿಸರದಲ್ಲಿ ಹಳೆ ಶಿಲಾಯುಗಕ್ಕೆ ಸಂಬಂಧಿಸಿದಂತೆ ಮರಡಿಹಳ್ಳಿ ಗ್ರಾಮದಲ್ಲಿರುವ ಪಿಲ್ಲೋಲಾವಾ[೧೩](ಶಿಲಾದಿಂಬು) ಶಿಲೆಗೆ ಹೆಸರಾದ ಬೆಟ್ಟವಿದೆ. ಅದೇ "ಮರಡಿಹಳ್ಳಿ ಬೆಟ್ಟ" (ಮರಡಿಹಳ್ಳಿಗುಡ್ಡ). ಭಾರತ ಮತ್ತು ಜಪಾನಿನ ಭೂಗರ್ಭಶಾಸ್ತ್ರಜ್ಞರ ಪ್ರಕಾರ ಸುಮಾರು ೨೭೦ ಕೋಟಿ ವರ್ಷಗಳ ಹಿಂದಿನದೆಂದು, ಇಲ್ಲಿ ಕಾಣಸಿಗುವ ದಿಂಬಿನಾಕಾರ ಶಿಲಾ ಪ್ರವಾಹ ಪ್ರಾಕೃತಿಕ ವಿಸ್ಮಯಗಳಲ್ಲಿ ಒಂದಾಗಿದೆಯೆಂದು, ಹಿಂದೊಮ್ಮೆ ಈ ಭೂಭಾಗ ಸಮುದ್ರದ ಭಾಗವಾಗಿತ್ತೆಂದು ಅಭಿಪ್ರಾಯಪಟ್ಟಿದ್ದಾರೆ.[೧೪] ಈ ಭೂಪ್ರದೇಶವು ವೇದಾವತಿ ನದಿಗೆ ಹರಿದುಹೋಗುವ ಹಳ್ಳದ ದಂಡೆಯ ಮೇಲಿದ್ದು ಇಲ್ಲಿ ಸಿಗುವ ಸಿಸ್ಟ್, ಕ್ವಾರ್ಟ್ಜೈಟ್, ಸುಣ್ಣಕಲ್ಲು, ಕಬ್ಬಿಣಯುಕ್ತ ಶಿಲಾಪದರಗಳು, ಡೋಲೋರೈಟ್, ನುಗ್ಗು ಶಿಲೆಗಳು ಇದ್ದು ಸ್ಥಳೀಯವಾಗಿ ಸಿಗುವ ಕಲ್ಲನ್ನೇ ಬಳಸಿಕೊಂಡು ಶಿಲಾಯುಗದ ಮಾನವನು ಈ ಭೂಪ್ರದೇಶದಲ್ಲಿ ವ್ಯವಸ್ಥಿತವಾದ ಜೀವನ ಸಾಗಿಸಿರುವುದು ಕಂಡುಬರುತ್ತದೆ.

೨. ಸೂಕ್ಷ್ಮ ಶಿಲಾಯುಗ

ಹಳೆಯ ಶಿಲಾಯುಗ ಮತ್ತು ನೂತನ ಶಿಲಾಯುಗದ ನಡುವಿನ ಸಾಂಸ್ಕೃತಿಕ ಹಂತವನ್ನು ಮಧ್ಯ ಶಿಲಾಯುಗವೆಂದು ಕರೆಯಲಾಗಿದೆ. ಕರ್ನಾಟಕದಲ್ಲಿ ಸೂಕ್ಷ್ಮಶಿಲಾಯುಗದ ನಿವೇಶನಗಳು ೧೯೬೭ರ ವೇಳೆಗೆ ಬೆಳಕಿಗೆ ಬಂದಿವೆ. ಬ್ರಹ್ಮಗಿರಿ ಉತ್ಖನನ(ವೀಲ್ಹರ್: ೧೯೪೮)ದಲ್ಲಿ ಈ ಹಂತದ ಉಪಕರಣಗಳು ಗಮನಾರ್ಹ ಪ್ರಮಾಣದಲ್ಲಿ ದೊರಕಿದ್ದರೂ, ಅವುಗಳನ್ನು ನಿರ್ದಿಷ್ಟ ಹಾಗೂ ಪ್ರತ್ಯೇಕ ಸ್ತರದಲ್ಲಿದ್ದುದನ್ನು ಗುರುತಿಸಿ, ನೂತನ ಶಿಲಾಯುಗಕ್ಕೆ ಸೇರಿದವೆಂದು ಭಾವಿಸಲಾಗಿತ್ತು. ಕರ್ನಾಟಕದ ಅನೇಕ ಕಡೆಗಳಲ್ಲಿ ಈ ಹಂತದ ಉಪಕರಣಗಳು ಮತ್ತು ಗವಿವರ್ಣ ಚಿತ್ರಗಳು ಕಂಡುಬಂದಿವೆ.

ಐಮಂಗಲ ಪರಿಸರದಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದಂತೆ ಸಂಗನಕಲ್ಲು ಆಯುಧಗಳನ್ನು ಹೋಲುವಂತಹ ಉಪಕರಣಗಳಾದ ಚಕ್ಕೆಗಳು, ಉದ್ದನೆಯ ಚಕ್ಕೆಗಳು, ಮೊನೆ, ಅರ್ಧಚಂದ್ರಾಕೃತ, ಕೊರೆಯುಳಿ ಆಯುಧ, ಹರಿತವಲ್ಲದ ಬ್ಲೇಡುಗಳು ಮುಂತಾದ ಆಯುಧೋಪಕರಣಗಳನ್ನು, ಜಾಸ್ಪರ್, ಅಗೇಟ್, ಫ್ಲಿಂಟ್, ಕ್ರಿಸ್ಟಲ್, ಚಾಲ್ಸಿಡೋನಿ ಶಿಲೆಯಿಂದ ಮಾಡಿದ ಆಯುಧಗಳು ಕಂದಿಕೆರೆ ಹಾಗೂ ಎಂ.ಡಿ. ಕೋಟೆಯಲ್ಲಿ ದೊರೆತಿವೆ.[೧೫]

೩. ನೂತನ ಶಿಲಾಯುಗ

ಕೃಷಿ ಆಧಾರಿತ ಬದುಕನ್ನು ರೂಪಿಸಿಕೊಂಡು ಹಾಗೂ ಪ್ರಾಣಿಗಳನ್ನು ಪಳಗಿಸಿಕೊಂಡು ಒಂದೆಡೆ ನೆಲೆಯಾಗಿ ನಿಂತ ಗ್ರಾಮೀಣ ಬದುಕನ್ನು ಕಟ್ಟಿಕೊಂಡ ಈ ಹಂತದ ಬೆಳವಣಿಗೆಯನ್ನು ಗೋರ್ಡನ್ ಚೈಲ್ಡ್ 'ನೂತನ ಶಿಲಾಯುಗದ ಕ್ರಾಂತಿ' ಎಂದು ಕರೆದ. ಇಂದಿನ ಗ್ರಾಮೀಣ ಬದುಕಿಗೆ ಇದೇ ಮೂಲ ಕಾರಣ ಹಾಗೂ ಪ್ರೇರಣೆಯಾಗಿದೆ ಎನ್ನಬಹುದು. ಈ ಹಂತದ ಉಪಕರಣಗಳನ್ನು ಕೊಡಲಿ, ಬಾಚಿ, ಉಳಿ, ಸುತ್ತಿಗೆ, ಕೊಡಲಿ, ಕೆತ್ತುಳಿ, ಅರೆಯುವ ಕಲ್ಲು, ಉಂಗುರಕಲ್ಲು, ಕವಣೆಕಲ್ಲು ಮೊದಲಾದ ಉಪಕರಣಗಳನ್ನು ಸಿದ್ಧಗೊಳಿಸಲಾಗಿತ್ತೆಂದು ತಿಳಿಯುತ್ತದೆ. ಮಣ್ಣಿನ ಮಡಕೆಗಳು ಆರಂಭ ಹಂತದಲ್ಲಿ ಕೈಯಲ್ಲಿ ರೂಪಿಸಲಾಗುತ್ತಿತ್ತು. ನಂತರದಲ್ಲಿ ತಿರುಗಿಸಲ್ಪಡುವ ತಿಗರಿ(ಚಕ್ರ)ಗಳಲ್ಲಿ ತಯಾರಿಸಲಾಗುತಿತ್ತು. ಹೆಚ್ಚು ತೆಳ್ಳನೆಯ ಮೃತ್‌ಪಾತ್ರೆಯಲ್ಲಿ ಕಂಡುಬರುತ್ತವೆ. ಈ ಸಂಸ್ಕೃತಿಗೆ ಸಂಬಂಧಿಸಿದಂತೆ ಬ್ರಹ್ಮಗಿರಿ, ಮಸ್ಕಿ, ಪಿಕ್ಲಿಹಾಳ್, ತೆಕ್ಕಲಕೋಟೆ, ಕಪ್ಪಗಲ್, ಹಳ್ಳೂರು, ಟಿ. ನರಸೀಪುರ, ಕೊಡೇಕಲ್, ಹೆಮ್ಮಿಗೆ, ಬನವಳ್ಳಿ ಮುಂತಾದ ನೆಲೆಗಳಲ್ಲಿ ಕಂಡುಬಂದಿವೆ.

ಐಮಂಗಲ ಪರಿಸರದಲ್ಲಿ ನವಶಿಲಾಯುಗಕ್ಕೆ ಸಂಬಂಧಿಸಿದಂತೆ ಮಾನವನು ಬಳಸಿ ಬಿಟ್ಟುಹೋದ ಅರೆಯುವ ಕಲ್ಲುಗಳು, ಕುಟ್ಟುವ ಕಲ್ಲುಗಳು, ಕಲ್ಲಿನ ಕೊಡಲಿ, ಗೃಹಬಳಕೆಗೆ ಬಳಸುವ ವಿವಿಧ ನಮೂನೆಯ ಕಲ್ಲಿನಾಯುಧಗಳು, ಕಲ್ಲಿನ ಬಿಲ್ಲೆ, ನಯವಾದ, ಒರಟಾದ ಬೂದುಬಣ್ಣದ ಮಡಕೆ ಚೂರುಗಳು, ಕೆಂಪು ಬಣ್ಣ ಲೇಪಿತ ಮಡಕೆ ಚೂರುಗಳು ಐಮಂಗಳ, ಮರಡಿಹಳ್ಳಿ, ಬಸಪ್ಪನ ಮಾಳಿಗೆ, ಎಂ.ಡಿ. ಕೋಟೆ ಮುಂತಾದ ಸ್ಥಳಗಳಲ್ಲಿ ದೊರೆತಿವೆ.[೧೬] ಈ ನೆಲೆಯಲ್ಲಿ ದೊರಕಿರುವ ಅವಶೇಷಗಳು ಬ್ರಹ್ಮಗಿರಿ ಮತ್ತು ಚಂದ್ರವಳ್ಳಿನಲ್ಲಿ ಸಿಕ್ಕಿರುವ ಅವಶೇಷಗಳನ್ನು ಹೋಲುತ್ತವೆ.

೪. ಬೃಹತ್‌ಶಿಲಾಯುಗ

ಸತ್ತವರಿಗಾಗಿ ದೊಡ್ಡ ದೊಡ್ಡ ಕಲ್ಲುಗಳನ್ನು ನಿಲ್ಲಿಸಿ ಗೋರಿಗಳ ನಿರ್ಮಾಣ ಕಾರ್ಯ ನಡೆದಿದ್ದರಿಂದ ಅದನ್ನು ಬೃಹತ್‌ಶಿಲಾಯುಗವೆಂದು ಕರೆಯಲಾಗಿದೆ. ವಿಶಿಷ್ಟ ಬಗೆಯ ಸಂಪ್ರದಾಯದಿಂದ ಕೂಡಿದ ಈ ಹಂತದಲ್ಲಿ ಮಾನವನು ಮುಖ್ಯವಾಗಿ ಕಬ್ಬಿಣದ ಬಳಕೆಯನ್ನು ರೂಢಿಸಿಕೊಂಡಿದ್ದು ಹಾಗೂ ತನ್ನದೇ ಆದ ರೀತಿಯಲ್ಲಿ ಮಡಿಕೆ ಮಾದರಿಗಳನ್ನು ರೂಪಿಸಿ ಕೊಂಡಿದ್ದನು(ಈ ಸಂಸ್ಕೃತಿಯ ಹಂತದಲ್ಲಿ ಒಂದು ವಾಸ್ತವ್ಯ ನೆಲೆಯಾದರೆ ಮತ್ತೊಂದು ಗೋರಿ ನೆಲೆಯಾಗಿದೆ). ಶವಸಂಸ್ಕಾರಕ್ಕಾಗಿ ವಿವಿಧ ಸ್ಥಳಗಳಲ್ಲಿ ಕಂಡುಬಂದಿರುವ ನೂರಾರು ಕಲ್ಗೋರಿಗಳು ಈ ಸಂಸ್ಕೃತಿಯ ವೈಶಿಷ್ಟ್ಯವನ್ನು ಹೆಚ್ಚಿಸಿವೆ.

ಐಮಂಗಲ ಪರಿಸರದಲ್ಲಿ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದಂತೆ ಮರಡಿಹಳ್ಳಿಯಲ್ಲಿ ವಸತಿನೆಲೆ ಮತ್ತು ಸಮಾಧಿ ನೆಲೆ ಪತ್ತೆಯಾಗಿವೆ. ನೆಲೆಯ ಭೂಭಾಗದಲ್ಲಿ ಕೆಂಪು. ಕಪ್ಪು ಬಣ್ಣದ ಮಡಕೆ ಚೂರುಗಳು, ದಪ್ಪ ಮಡಿಕೆ ಚೂರುಗಳು ಹಾಗೂ ವಿವಿಧ ನಮೂನೆ ಗೃಹಬಳಕೆಯ ಮಡಿಕೆ ಭಾಗಗಳು ದೊರಕಿವೆ. ಇದೇ ಗ್ರಾಮದ ರಾಮಕೃಷ್ಣರೆಡ್ಡಿ ಅವರ

ಜಮೀನಿನಲ್ಲಿ ಐದು "ಕಲ್ಲು ವೃತ್ತ ಸಮಾಧಿ"ಗಳು ಸುಸ್ಥಿತಿಯಲ್ಲಿರುವವು. ಅದೇ ರೀತಿ ಪಾಲವ್ವನಹಳ್ಳಿ ಗುಡ್ಡದಲ್ಲಿ ಬೃಹತ್ ಗಾತ್ರದ ದೊಡ್ಡದೊಡ್ಡ ಗ್ರಾನೈಟ್ ಗುಂಡುಗಳನ್ನು ಬಳಸಿ ಕಲ್ಲು ವೃತ್ತ ಸಮಾಧಿಗಳನ್ನು ನಿರ್ಮಿಸಿದ್ದಾರೆ. ಈ ಕಲ್ಲು ವೃತ್ತ ಸಮಾಧಿಗಳನ್ನು ಸ್ಥಳೀಯರು ಪಾಂಡವರ ಗುಜ್ಜ, ಕಲ್ಲುಗುಜ್ಜ ಎಂದು ಕರೆಯುತ್ತಾರೆ.[೧೭] ಇಲ್ಲಿಯ ಸಮಾಧಿಗಳು ಚಂಗಲ್‌ಪೇಟೆ, ಬ್ರಹ್ಮಗಿರಿ ನೆಲೆಗಳ ಸಮಾಧಿಗಳಿಗೆ ಹೋಲಿಕೆಯಿದೆ.

ಒಟ್ಟಾರೆಯಾಗಿ ಐಮಂಗಲ ಪರಿಸರದಲ್ಲಿ ಪೂರ್ವ ಇತಿಹಾಸದ ಹಳೆ ಶಿಲಾಯುಗ ಸೂಕ್ಷ್ಮ ಶಿಲಾಯುಗ, ನೂತನ ಶಿಲಾಯುಗ ಹಾಗೂ ಬೃಹತ್‌ಶಿಲಾಯುಗ ಕಾಲಘಟ್ಟದಲ್ಲಿ ಜನಜೀವನ ಇದ್ದುದನ್ನು ಗುರುತಿಸಲಾಗಿದೆ. ಆದರೆ ಈ ಪ್ರದೇಶದಲ್ಲಿ ಯಾವುದೇ ಒಂದು ಉತ್ಖನನ ಇದುವರೆಗೆ ನಡೆದಿಲ್ಲ. ಇಲ್ಲಿನ ಪ್ರಾಗೈತಿಹಾಸಿಕ ಮಾನವನ ಸಮೃದ್ಧತೆಯ ಬಗೆಗೆ ತಿಳಿಯಲು ಅತ್ಯಗತ್ಯವಾಗಿ ಉತ್ಖನನ ಕಾರ್ಯ ನಡೆಯಬೇಕಾಗಿದೆ.

೨.೩. ಇತಿಹಾಸ

ಮಾನವನ ವಿಕಸನ ಹಂತದಲ್ಲಿ ಅಕ್ಷರಗಳ ಆವಿಷ್ಕಾರ ಬಹುಮುಖ್ಯವಾದ ಅಂಶವಾಗಿದೆ. ಅಕ್ಷರಗಳ ಆವಿಷ್ಕಾರದ ನಂತರದ ಹಂತವನ್ನು ಅಂದರೆ ಬರವಣಿಗೆಯು ಗೊತ್ತಾದ ಅವಧಿಯನ್ನು ಇತಿಹಾಸ ಕಾಲ ಎಂದು ಕರೆಯಬಹುದು. ಈ ಪ್ರದೇಶದಲ್ಲಿ ಶಾಸನಗಳು ದೊರೆಯುವ ಕಾಲದಿಂದ ಅಂದರೆ ಮೌರ್ಯರಿಂದ ಹಿಡಿದು ಚಿತ್ರದುರ್ಗ ಪಾಳೇಗಾರರ ಕಾಲದವರೆಗೂ ಆಳ್ವಿಕೆ ನಡೆಸಿದ ವಿವಿಧ ರಾಜವಂಶಗಳ ಪರಿಚಯವನ್ನು ಇಲ್ಲಿ ತಿಳಿಯಬಹುದು. ವಿವಿಧ ಕಾಲಘಟ್ಟಗಳಲ್ಲಿ ಕರ್ನಾಟಕವನ್ನಾಳಿದ ಪ್ರಮುಖ ರಾಜಮನೆತನಗಳ ಸಾಮ್ರಾಜ್ಯದೊಳಗೆ ಈ ಭಾಗವು ಸೇರಿತ್ತು. ಕೆಲವು ಆಡಳಿತ ವಿಭಾಗಗಳಿಂದಲೂ ಈ ವಿಷಯ ದೃಢಪಡುತ್ತದೆ. ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ಈ ಪರಿಸರದಲ್ಲಿ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ನೊಳಂಬರು, ಹೊಯ್ಸಳರು, ವಿಜಯನಗರದವರು ಮತ್ತು ಪಾಳೇಗಾರರು ಆಳ್ವಿಕೆಯನ್ನು ನಡೆಸಿದ್ದಕ್ಕೆ ಆಧಾರಗಳು ಸಿಗುತ್ತವೆ.[೧೮] ಇವರಲ್ಲಿ ಪ್ರಮುಖವಾಗಿ ನೊಳಂಬರು, ಪಾಳೇಗಾರರು ಪ್ರಮುಖರಾಗಿದ್ದಾರೆ.

ಐಮಂಗಲ ಹೋಬಳಿಯ ಶಾಸನಗಳನ್ನು ಪರಿಶೀಲಿಸಿದಾಗ ಅವು ಹೆಚ್ಚಾಗಿ ರಾಷ್ಟ್ರಕೂಟ ಅರಸರ, ನೊಳಂಬ ಅರಸರ ನಂತರ ಪಾಳೇಗಾರರ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿವೆ.[೧೯] ಇದಕ್ಕಿಂತಲೂ ಪೂರ್ವದಲ್ಲಿ ಐಮಂಗಲ ಪರಿಸರದ ಆಳ್ವಿಕೆಯ ಬಗ್ಗೆ ಯಾವುದೇ ಖಚಿತ ಮಾಹಿತಿಯಿಲ್ಲ.

ಮೌರ್ಯರ ಆಳ್ವಿಕೆ

ಉತ್ತರ ಭಾರತದಲ್ಲಿ ಪ್ರಪ್ರಥಮವಾಗಿ ಐತಿಹಾಸಿಕ ಸಾಮ್ರಾಜ್ಯಕ್ಕೆ ಅಡಿಗಲ್ಲು ಹಾಕಿದ ಮೌರ್ಯರು ತಮ್ಮ ಸಾಮ್ರಾಜ್ಯವನ್ನು ಕುಂತಲ ದೇಶದವರೆಗೂ ವಿಸ್ತರಿಸಿದ್ದರೆಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಈ ಕುಂತಲ ಸೀಮೆಯು ಭೀಮಾ ಮತ್ತು ವೇದಾವತಿ ನದಿಗಳ ಮಧ್ಯದಲ್ಲಿದ್ದು, ಪಶ್ಚಿಮಘಟ್ಟಗಳನ್ನು ಸರಹದ್ದನ್ನಾಗಿ ಹೊಂದಿದ್ದಿತು.[೨೦] ಇದರಲ್ಲಿ ಚಿತ್ರದುರ್ಗ ಜಿಲ್ಲೆಯ ಪ್ರದೇಶವು

ಐಮಂಗಲ ಹೋಬಳಿ ಪರಿಸರದ ಪ್ರಾಗಿತಿಹಾಸ ಕಾಲದ ನೆಲೆಗಳು

ಕ್ರ.ಸಂ. ಸಂಖ್ಯೆ	ಗ್ರಾಮ	ಹಳೆ ಶಿಲಾಯುಗ	ಸೂಕ್ಷ್ಮ ಶಿಲಾಯುಗ	ನೂತನ ಶಿಲಾಯುಗ	ಬೃಹತ್ ನೆಲೆ	ಶಿಲಾಯುಗ ಗೋರಿ	ಇತಿಹಾಸ ಆರಂಭ
೧.	ಎಂ.ಡಿ. ಕೋಟೆ			√	√		
೨.	ಬಸಪ್ಪನ ಮಾಳಿಗೆ			√	√		
೩.	ಕಂದಿಕೆರೆ			√	√		
೪.	ಹರ್ತಿಕೋಟೆ			√		√	√
೫.	ಮರಡಿಹಳ್ಳಿ			√	√	√	
೬.	ಐಮಂಗಲ			√			
೭.	ಪಾಲವ್ವನಹಳ್ಳಿ				√	√	√

ಕೇಳುತ್ತೇಂಬುದಕ್ಕೆ ನಮಗೆ ಮೊಳಕಾಲ್ಮೂರು ತಾಲೂಕಿನಲ್ಲಿ ದೊರೆತ ಅಶೋಕನ ಶಾಸನಗಳು ಆಧಾರಗಳಾಗಿವೆ. ಕುಂತಲ ದೇಶವನ್ನು ಆಳಿದವರಲ್ಲಿ ನಂದರು ಮೊದಲಿಗರೆಂಬ ಅಭಿಪ್ರಾಯವಿದೆ.[೨೧] ಚಿತ್ರದುರ್ಗ ಅದರ ಸುತ್ತಲೂ ಇದ್ದ ಪ್ರದೇಶಗಳೂ ಕ್ರಿ.ಪೂ. ಆರನೆಯ ಶತಮಾನದಿಂದಲೂ ಔತ್ತರೇಯರ ಆಳ್ವಿಕೆಗೆ ಒಳಪಟ್ಟಿದ್ದವೆಂದು ಹೇಳಬಹುದು. ನಂದರ ಉತ್ತರಾಧಿಕಾರಿಗಳಾದ ಮೌರ್ಯರು ಅನುಕ್ರಮವಾಗಿ ಈ ಭಾಗದ ಒಡೆಯರಾದರು.[೨೨]

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ದೊರೆತಿರುವ ಅಶೋಕನ ಶಾಸನಗಳು ಮೌರ್ಯರ ಆಳ್ವಿಕೆಯನ್ನು ಅಧಿಕೃತವಾಗಿ ಸ್ಪಷ್ಟಪಡಿಸುವ ಆಧಾರಗಳಾಗಿವೆ. ಅಶೋಕನ ಎರಡು ಮತ್ತು ಹದಿಮೂರನೆಯ ಶಾಸನಗಳು ದಕ್ಷಿಣ ರಾಜ್ಯಗಳ ಹೆಸರುಗಳನ್ನು ತಿಳಿಸುತ್ತವೆ. ಅವು ಬ್ರಹ್ಮಗಿರಿಯ ಸಿದ್ದಾಪುರ, ಜಟಂಗಿ ರಾಮೇಶ್ವರದಲ್ಲಿ ಮೌರ್ಯ ಸಾಮ್ರಾಜ್ಯದ ಗಡಿಗಳನ್ನು ಸೂಚಿಸುವ ಗುರುತುಗಳಾಗಿವೆ ಎನ್ನುವುದು ಚರಿತ್ರೆಕಾರರ ಅಭಿಪ್ರಾಯ. ಇತ್ತೀಚೆಗೆ ನಡೆದ ಸಂಶೋಧನೆಗಳಿಂದ ಮೌರ್ಯ ಸಾಮ್ರಾಜ್ಯವು ಮೊಳಕಾಲ್ಮೂರು ತಾಲ್ಲೂಕಿನ ಕೆಲವು ಭಾಗಗಳಲ್ಲದೆ ಜಿಲ್ಲೆಯ ಪೂರ್ಣಭಾಗವನ್ನು ಒಳಗೊಂಡಿದ್ದಾಗಿ ತಿಳಿದುಕೊಳ್ಳಬಹುದು. ಇದರಿಂದ ಪ್ರಸ್ತುತ ಅಧ್ಯಯನ ಪ್ರದೇಶವಾದ ಹಿರಿಯೂರು ತಾಲೂಕಿನ ಐಮಂಗಲವು ಸಹ ಮೌರ್ಯ ಸಾಮ್ರಾಜ್ಯದಲ್ಲಿತ್ತು[೨೩] ಎಂದು ಹೇಳಬಹುದು. ಬ್ರಹ್ಮಗಿರಿಯ ಸಮೀಪದಲ್ಲಿ ಇಟ್ಟಿಗೆಯ ಕಟ್ಟಡ, ಚೈತ್ಯಾಲಯ ಮತ್ತು ಮೌರ್ಯರ ಕಾಲದ ಅನೇಕ ಅವಶೇಷಗಳು ದೊರೆತಿವೆ. ಇಸಿಲ ನಗರವು ಇಲ್ಲೇ ಇದ್ದ ನಗರವೆಂಬುದಕ್ಕೆ ಪ್ರಮುಖ ಆಧಾರಗಳು. ಈ ಪ್ರದೇಶದಲ್ಲಿ ದೊರೆತ ಅವಶೇಷಗಳು ಅಶೋಕನ ಕಾಲಕ್ಕೆ ಸೇರಿದ್ದವು ಎನ್ನುವುದು ಎಂ.ಹೆಚ್. ಕೃಷ್ಣ, ಮಾರ್ಟಿಮರ್ ವೀಲ್ಹರ್ ಮೊದಲಾದ ಪ್ರಾಕ್ತನಶಾಸ್ತ್ರಜ್ಞರ ಅಭಿಪ್ರಾಯ. ಹಾಗೆಯೇ ಚಿತ್ರದುರ್ಗ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶವು ಸಹ ಮೌರ್ಯ ಸಾಮ್ರಾಜ್ಯದ ಭಾಗವಾಗಿದ್ದು ಅವರ ದಕ್ಷ ಆಡಳಿತ ಪದ್ಧತಿ ಮೌರ್ಯರ ಸಾಂಸ್ಕೃತಿಕ ಪರಂಪರೆಯ ವ್ಯಾಪ್ತಿಗೆ ಒಳಪಟ್ಟಿತ್ತು.

ಶಾತವಾಹನರ ಆಳ್ವಿಕೆ

ಕರ್ನಾಟಕದ ಚಾರಿತ್ರಿಕ ಯುಗದಲ್ಲಿ ಮೊಟ್ಟಮೊದಲಿಗೆ ಅಸ್ತಿತ್ವಕ್ಕೆ ಬಂದ ರಾಜ್ಯ ಮತ್ತು ಸಾಮ್ರಾಜ್ಯಗಳಲ್ಲಿ ಶಾತವಾಹನ ಸಾಮ್ರಾಜ್ಯ ಪ್ರಮುಖವಾದುದು. ಶಾತವಾಹನರು ಮೊದಲಿಗೆ ಮೌರ್ಯರ ಸಾಮಂತರಾಗಿದ್ದು ಅವರ ನಂತರ ದಕ್ಷಿಣ ಭಾರತದಲ್ಲಿ ಸ್ವತಂತ್ರರಾದರು. ಅವರ ಸಾಮ್ರಾಜ್ಯಗಳಲ್ಲಿ ಕರ್ನಾಟಕವು ಮೊದಲ ಭಾಗವಾಗಿದ್ದು ಅವರು ದಖನ್ನಿನಲ್ಲಿ ಮಾತ್ರವಲ್ಲದೆ ಉತ್ತರ ಭಾರತದ ಹಲವು ಪ್ರದೇಶಗಳ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿ ಉತ್ತರ ಭಾರತ ಮತ್ತು ದಕ್ಷಿಣ ಭಾರತವನ್ನು ಒಂದುಗೂಡಿಸಲು ಪ್ರಯತ್ನಿಸಿದರು. ಶಾತವಾಹನರು ಕ್ರಿ.ಪೂ. ೨೩೫ರಿಂದ ಕ್ರಿ.ಶ. ೨೧೫ರವರೆಗೆ ಸುಮಾರು ೪೫೦ ವರ್ಷಗಳ ಕಾಲ ಆಳ್ವಿಕೆ ನಡೆಸಿದ್ದರೆಂದು ಹೇಳಲಾಗುತ್ತಿದೆ. ಅವರ ಸಾಮ್ರಾಜ್ಯ ಉತ್ತರದಲ್ಲಿ ಸಾಂಚಿಯಿಂದ ಹಿಡಿದು ದಕ್ಷಿಣದಲ್ಲಿ ಕೊಂಕಣದವರೆಗೆ ಮತ್ತು ಪೂರ್ವ ಪಶ್ಚಿಮಗಳ ಸಮುದ್ರದವರೆಗೂ ವಿಸ್ತರಿಸಿತ್ತು ಎನ್ನಲಾಗಿದೆ. ಶಾತವಾಹನ ಸಂತತಿಯಲ್ಲಿ ಗೌತಮಿಪುತ್ರ ಶಾತಕರ್ಣಿ, ವಸಿಷ್ಠಪುತ್ರ, ಯಜ್ಞಶ್ರೀ ಶಾತಕರ್ಣಿ ಮುಂತಾದವರು ಪ್ರಖ್ಯಾತ ದೊರೆಗಳು ಸಾಮ್ರಾಜ್ಯದ ಪ್ರಗತಿ ಮತ್ತು ವಿಖ್ಯಾತಿಗೆ ಕಾರಣರಾದವರು.

ಇವರ ಆಳ್ವಿಕೆಯ ಕಾಲದಲ್ಲಿ ಪಾಶ್ಚಿಮಾತ್ಯ ರಾಜ್ಯಗಳೊಂದಿಗೆ ವ್ಯಾಪಾರ ಮತ್ತು ವಾಣಿಜ್ಯಗಳು ಅಭಿವೃದ್ಧಿ ಪಡೆದು ದೇಶವು ಸಂಪದ್ಭರಿತವಾಗಿತ್ತು.

ಕರ್ನಾಟಕದ ಪ್ರಮುಖ ರಾಜವಂಶದವರಾದ ಶಾತವಾಹನರು ತಮ್ಮನ್ನು ಕುಂತಲ ಸ್ವಾಮಿಗಳೆಂದು ಕರೆದುಕೊಂಡಿದ್ದುಂಟು. ಈ ರಾಜವಂಶದ ೩೦ ಮಂದಿ ದೊರೆಗಳ ಬಗಗೆ ದೊರೆತಿರುವ ಶಾಸನಗಳು ೩೦ಕ್ಕಿಂತಲೂ ಹೆಚ್ಚಿರಬಹುದು.[೨೪] ಚಿತ್ರದುರ್ಗ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ದೊರೆತ ಉತ್ತಮ ಜಾತಿಯ ಜಾಸ್ಪರ್, ಕಾರ್ನೆಲಿಯನ್, ಆಗೇಟ್ ಮುಂತಾದ ಶಿಲೆಗಳು, ಮಣಿಗಳು, ದಂತ, ಶಂಖ, ಸುಟ್ಟಮಣ್ಣಿನ ಗಾಜಿನ ನಾನಾ ಬಗೆಯ ಮಣಿಗಳು ಶಾತವಾಹನರ ಸಾಮಾಜಿಕ ಸಂಸ್ಕೃತಿಗೆ ಹಿಡಿದ ಕನ್ನಡಿಯಂತಿವೆ. ಆ ಕಾಲದಲ್ಲಿ ವ್ಯಾಪಾರ ವಾಣಿಜ್ಯಗಳಲ್ಲಿ ನಾಣ್ಯ ಚಲಾವಣೆಯಲ್ಲಿತ್ತೆನ್ನುವುದು ಸ್ಪಷ್ಟವಾಗಿದೆ. ಚಂದ್ರವಳ್ಳಿ ಉತ್ಖನನದಲ್ಲಿ ಎಂ.ಹೆಚ್. ಕೃಷ್ಣ ಅವರಿಗೆ ಮೂವತ್ತಕ್ಕೂ ಹೆಚ್ಚು ನಾಣ್ಯಗಳು ದೊರೆತಿವೆ.[೨೫] ಬೆಳ್ಳಿ, ಸೀಸ, ತಾಮ್ರ, ತವರ ಮತ್ತು ಮಿಶ್ರಿತ ಲೋಹ ಮುಂತಾದವುಗಳಲ್ಲಿ ಟಂಕಿಸಿದ ನಾಣ್ಯಗಳು ಈ ಭಾಗದಲ್ಲಿ ಆಳ್ವಿಕೆ ಮಾಡಿದ ಶಾತವಾಹನರ ಆರ್ಥಿಕ ಸ್ಥಿತಿಗತಿಯನ್ನು ಸೂಚಿಸುತ್ತವೆ.

ಒಟ್ಟಿನಲ್ಲಿ ಹೇಳುವುದಾದರೆ ಚಿತ್ರದುರ್ಗ ಜಿಲ್ಲೆಯ ಹಾಗೂ ಪ್ರಸ್ತುತ ಅಧ್ಯಯನ ಪ್ರದೇಶದ ಸುತ್ತಮುತ್ತಲಿನ ಶಾತವಾಹನರ ಆಳ್ವಿಕೆ ಇದ್ದಿತ್ತೆಂದು ಹೇಳಬಹುದು. ಕ್ರಿ.ಶ. ಸುಮಾರು ೨೦೦ರ ತರುವಾಯ ಶಾತವಾಹನರ ಸಾಂಸ್ಕೃತಿಕ ಅವಶೇಷಗಳು ದೊರೆತಿರುವುದರಿಂದ ಬಹುಶಃ ಚಂದ್ರವಳ್ಳಿ ಅವರ ರಾಜಧಾನಿಗಳಲ್ಲಿ ಒಂದಾಗಿತ್ತೆಂದು ಹೇಳಬಹುದು.[೨೬] ಹಾಗೆಯೇ ಪ್ರಸ್ತುತ ಅಧ್ಯಯನ ಪ್ರದೇಶವಾದ ಐಮಂಗಲ ಪರಿಸರದಲ್ಲಿ ಶಾತವಾಹನರ ಶಾಸನಗಳು ಅಥವಾ ಯಾವುದೇ ತರಹದ ಕುರುಹುಗಳು ಸಿಗದೇ ಇದ್ದರೂ ಚಿತ್ರದುರ್ಗ ಸುತ್ತಮುತ್ತಲಿನಲ್ಲಿ ಇವರ ಕುರುಹುಗಳು ದೊರೆತಿರುವುದರಿಂದ ಪ್ರಾಯಶಃ ಈ ಪ್ರದೇಶವೂ ಇವರ ಆಳ್ವಿಕೆಗೆ ಒಳಪಟ್ಟಿರಬಹುದೆಂದು ಹೇಳಬಹುದು.

ಕದಂಬರ ಆಳ್ವಿಕೆ

ಶಾತವಾಹನ ಹಾಗೂ ಚುಟು ಅರಸರ ನಂತರ ಈ ಪರಿಸರ ಕದಂಬರ ಆಳ್ವಿಕೆಗೆ ಒಳಪಟ್ಟಿದ್ದನ್ನು ಕಾಣುತ್ತೇವೆ. ಶಾತವಾಹನರ ಪತನದ ನಂತರ ಅವರ ಸಾಮ್ರಾಜ್ಯವು ಅನೇಕ ಚಿಕ್ಕಪುಟ್ಟ ಆಡಳಿತ ವಿಭಾಗಗಳಲ್ಲಿ ಹರಿದುಹೋಯಿತು. ವಾಯುವ್ಯದಲ್ಲಿ ಅಭೀರರು ಮತ್ತು ತ್ರೈಕೂಟರು, ಪೂರ್ವದಲ್ಲಿ ರಾಷ್ಟ್ರಕೂಟರು, ಚುಟುಗಳು ಹಾಗೂ ನಾಗರಸರು, ದಕ್ಷಿಣದಲ್ಲಿ ಕದಂಬರು ಮತ್ತು ಪಲ್ಲವರು ಏಳಿಗೆಗೆ ಬಂದರು. ಹೀಗೆ ಶಾತವಾಹನರ ನಂತರ ಪ್ರಸ್ತುತ ಅಧ್ಯಯನ ಪ್ರದೇಶವು ಸಹ ಕದಂಬರ ಆಳ್ವಿಕೆಗೆ ಒಳಪಟ್ಟಿದ್ದನ್ನು ನೋಡಬಹುದು. ವೈಜಯಂತಿಪುರ ಅಥವಾ ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಕದಂಬರು ಉತ್ತರ ಕನ್ನಡ, ಧಾರವಾಡ, ಹಾವೇರಿ, ಬೆಳಗಾವಿ, ದಾವಣಗೆರೆ ಹಾಗೂ ಚಿತ್ರದುರ್ಗದ ಸುತ್ತಮುತ್ತಲಿನ ಭೂಪ್ರದೇಶವನ್ನು ತಮ್ಮ ನಿಯಂತ್ರಣದಲ್ಲಿರಿಸಿಕೊಂಡಿದ್ದರು. ಐಮಂಗಲ ಪರಿಸರದಲ್ಲಿ ಕದಂಬರಿಗೆ ಸಂಬಂಧಿಸಿದಂತಹ ಶಾಸನಗಳು ದೊರೆಯದೇ ಇದ್ದರೂ ಅವರ ಕಾಲದ ಪ್ರಮುಖ

ಸಂಗತಿಗಳನ್ನು ತಿಳಿಸುವ ಕುರುಹುಗಳು ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತಿರುವ ಕೆಲವೇ ಶಾಸನಗಳಿಂದ ತಿಳಿಯಬಹುದಾಗಿದೆ.

ಕದಂಬರ ರಾಜ್ಯ ಸ್ಥಾಪಕನಾದ ಮಯೂರಶರ್ಮನ ಏಕೈಕ ಶಿಲಾಶಾಸನ ಚಿತ್ರದುರ್ಗದ ಚಂದ್ರವಳ್ಳಿಯಲ್ಲಿ ದೊರೆತಿದೆ. ಈ ಶಾಸನವನ್ನು ಕುರಿತು ಅಧ್ಯಯನ ನಡೆಸಿದ ಎಂ.ಹೆಚ್. ಕೃಷ್ಣ ಅವರು ಶಾಸನದ ಭಾಷೆ ಪ್ರಾಕೃತ ಎಂದು. ಇದರ ಕಾಲಮಾನ ಕ್ರಿ.ಶ. ೨೫೮ ಎಂದು ನಿರ್ಧರಿಸಿದ್ದಾರೆ. ಮೂರು ಸಾಲುಗಳಲ್ಲಿರುವ ಈ ಶಾಸನವು ಈ ಪ್ರದೇಶದಲ್ಲಿ ಒಂದು ಕೆರೆಯನ್ನು ನಿರ್ಮಿಸಿದ್ದು ಹಾಗೂ ಅನೇಕ ದಿಗ್ವಿಜಯಗಳನ್ನು ತಿಳಿಸುತ್ತದೆ. ತ್ರೈಕೂಟ, ಅಭೀರ, ಪಲ್ಲವ, ಪಾರಿಯಾತ್ರಿಕ, ಶಕಸ್ಥಾನ ಸೈಯಂದಕ ಪುಟಾಣ ಹಾಗೂ ಮೋಕರರೀಣ ಹೀಗೆ ಪಶ್ಚಿಮ ಭಾರತದ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದನೆಂದು ಎಂ.ಹೆಚ್. ಕೃಷ್ಣ ಅವರು ಅಭಿಪ್ರಾಯಪಟ್ಟಿದ್ದಾರೆ. ನಂತರ ಈ ಶಾಸನದ ಕಾಲ, ಭಾಷೆ ಮತ್ತು ಇದರ ವಸ್ತುವಿಷಯವನ್ನು ಕುರಿತಂತೆ ಅನೇಕ ವಿದ್ವಾಂಸರು ಅಧ್ಯಯನ ನಡೆಸಿ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ರೀತಿಯಾಗಿ ಪ್ರಸ್ತುತ ಶಾಸನದ ಮರುಪರಿಶೀಲನೆಯಿಂದ ಬಿ. ರಾಜಶೇಖರಪ್ಪ ನವರು ಅಧ್ಯಯನ ನಡೆಸಿ ಮಯೂರಶರ್ಮನು ಈ ಕಾಲಕ್ಕೆ ಮಯೂರವರ್ಮನಾಗಿರಲಿಲ್ಲವೆಂದು ಶಾಸನದ ಭಾಷೆ, ಪ್ರೌಢ ಸಂಸ್ಕೃತ ಹಾಗೂ ಶಾಸನದ ಮೂಲ ಉದ್ದೇಶ ಇಲ್ಲಿನ ಕೆರೆಯನ್ನು ಮತ್ತಷ್ಟು ಬಲಪಡಿಸಿದುದು ಎಂದು ಅಭಿಪ್ರಾಯಪಟ್ಟಿದ್ದಾರೆ.[೨] ಮಯೂರಶರ್ಮನು ಆಗಲೇ ಇದ್ದ ಕೆರೆಯೊಂದನ್ನು ದುರಸ್ತಿಪಡಿಸಿ ಬಲಪಡಿಸಿದ್ದನ್ನು ಹಾಗೂ ಇಲ್ಲಿ ಕಾಡಿನ ವಾಸದ ನೆಲೆಯೊಂದನ್ನು ಮಾಡಿಕೊಂಡಿದ್ದುದಾಗಿ ತಿಳಿಸಿದ್ದಾರೆ.

ಈ ಪ್ರದೇಶದ ಸುತ್ತಮುತ್ತಲಿನ ಮೂಲ ಕದಂಬರಿಗೆ ಸಂಬಂಧಿಸಿದ ವಿವರಗಳನ್ನು ತಿಳಿಸುವ ಶಾಸನಗಳು ವಿರಳವಾದರೂ ಅವರ ಶಾಖೆಗಳನ್ನು ಕುರಿತಂತೆ ವಿವರ ನೀಡುವ ಮತ್ತಷ್ಟು ಶಾಸನಗಳು ಕಂಡುಬಂದಿವೆ.

ಬಾದಾಮಿ ಚಾಲುಕ್ಯರ ಆಳ್ವಿಕೆ

ಈ ಪ್ರದೇಶದಲ್ಲಿ ನೇರವಾಗಿ ಬಾದಾಮಿ ಚಾಲುಕ್ಯರಿಗೆ ಸಂಬಂಧಿಸಿದ ಶಾಸನಗಳು ದೊರೆಯದೇ ಹೋದರೂ ಪರೋಕ್ಷವಾಗಿ ಅವರ ರಾಜಕೀಯ ಪ್ರಭಾವ ಈ ಪ್ರದೇಶದ ಮೇಲಿದ್ದಿತು. ಇದರಿಂದಾಗಿ ಈ ಪ್ರದೇಶವು ಕದಂಬ ಚಾಲುಕ್ಯರ ಸಾಂಸ್ಕೃತಿಕ ಪ್ರದೇಶವಾಗಿತ್ತು ಎಂದು ಹೇಳಬಹುದು. ಕ್ರಿ.ಶ. ೬ನೇ ಶತಮಾನದ ಆದಿಭಾಗದಿಂದ ಕ್ರಿ.ಶ. ೭೫೭ರವರೆಗೆ ಆಳ್ವಿಕೆ ನಡೆಸಿದ ಇವರು ಕರ್ನಾಟಕ ಇತಿಹಾಸಕ್ಕೆ ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಮಹತ್ತರವಾದ ಕಾಣಿಕೆಗಳನ್ನು ನೀಡಿದ್ದಾರೆ. ಇದೇ ಸಂದರ್ಭದಲ್ಲಿ ದಕ್ಷಿಣದಲ್ಲಿ ಏಳಿಗೆಗೆ ಬಂದ ಕಂಚಿಯ ಪಲ್ಲವರಿಗೂ, ಮಧುರೆಯ ಪಾಂಡ್ಯರಿಗೂ ಬಾದಾಮಿ ಚಾಲುಕ್ಯರಿಗೂ ಆಗಾಗ ಘರ್ಷಣೆಗಳೂ ಸಂಭವಿಸಿದ್ದು, ಪಲ್ಲವರಿಗೂ ಮತ್ತು ಬಾದಾಮಿ ಚಾಲುಕ್ಯರಿಗೂ ಗಡಿಭಾಗದಲ್ಲಿದ್ದ ಈ ಪ್ರದೇಶವು ಅವರೀರ್ವರ ಕಾಳಗದ ಭೂಪ್ರದೇಶವಾಗಿತ್ತು. ಕಾಲಘಟ್ಟದ ರಾಜಕೀಯ ಪರಿಸ್ಥಿತಿಯಲ್ಲಿ ಹಿರಿಯೂರು ತಾಲೂಕು ಧರ್ಮಪುರ ಪರಿಸರದಲ್ಲಿ ಹೆಂಜೇರುವಿನ ನೊಳಂಬರು,

ಉಚ್ಚಂಗಿಯ ಪಾಂಡ್ಯರು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಈ ಕಾಲದ ಕೆಲವು ಶಾಸನಗಳಲ್ಲಿ ಕದಂಬಾಳಿಗೆ, ನೊಣಂಬಾಳಿಗೆ ಎಂದೂ ಈ ಪ್ರದೇಶವನ್ನು ಹೆಸರಿಸಲಾಗಿದೆ.[೨೮]

ಇಮ್ಮಡಿ ಪುಲಿಕೇಶಿಯ ಕಾಲಕ್ಕೆ ಈ ಭಾಗವು ಆತನ ನೇರ ಆಳ್ವಿಕೆಗೆ ಒಳಪಟ್ಟಿತ್ತು ಎನ್ನುವುದರ ಬಗ್ಗೆ ದಾವಣಗೆರೆ ತಾಲೂಕಿನ ನಲ್ಲುಂದ ಗ್ರಾಮದಲ್ಲಿ ದೊರೆತಿರುವ ತಾಮ್ರದ ಶಾಸನವೊಂದು ಬೆಳಕನ್ನು ಚೆಲ್ಲುತ್ತದೆ. ಅಭಿನವಾದಿತ್ಯನ ಶಾಸನವೆಂದೇ ಪ್ರಸಿದ್ಧವಾದ ಈ ಶಾಸನದಲ್ಲಿ ನಲ್ಲುಂದ ಗ್ರಾಮವನ್ನು ನಲ್ಲಿಕುಡಿ ಎಂದು ಹೆಸರಿಸಲಾಗಿದೆ. ಉಚ್ಚಂಗಿ ಪರಿಸರದಲ್ಲಿರುವ ಈ ಶಾಸನವು ದಾನಶಾಸನವಾಗಿದ್ದು ಇಲ್ಲಿನ ಕುಪ್ಪಶರ್ಮನೆಂಬ ಬ್ರಾಹ್ಮಣನಿಗೆ ದಾನ ನೀಡಿದ ವಿವರಗಳನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಅಭಿನವಾದಿತ್ಯನು ತನ್ನನ್ನು ಸತ್ಯಾಶ್ರಯ ಮತ್ತು ಪರಮೇಶ್ವರ ಎಂಬುದಾಗಿ ಪೃಥ್ವಿವಲ್ಲಭ. ಮಹಾರಾಜಾಧಿರಾಜ ಎಂದೂ ಕರೆದುಕೊಂಡಿದ್ದಾನೆ. ಇದರಿಂದಾಗಿ ಈತನು ಪುಲಿಕೇಶಿಯ ನಂತರ ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದಂತೆ ತೋರುತ್ತದೆ.

ರಾಷ್ಟ್ರಕೂಟರ ಆಳ್ವಿಕೆ

ಬಾದಾಮಿ ಚಾಲುಕ್ಯರ ನಂತರ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ರಾಷ್ಟ್ರಕೂಟರು ಬಲಿಷ್ಠ ರಾಜಮನೆತನದವರಾಗಿದ್ದಾರೆ. ಸುಮಾರು ೨ ಶತಮಾನಗಳ ಕಾಲ ವಿಶಾಲ ಸಾಮ್ರಾಜ್ಯವನ್ನಾಳಿದ ರಾಷ್ಟ್ರಕೂಟರು ಕರ್ನಾಟಕದ ಇತಿಹಾಸದಲ್ಲಿ ಪ್ರಸಿದ್ಧರಾಗಿದ್ದಾರೆ. ಇವರ ಸಾಮ್ರಾಜ್ಯ ಉತ್ತರದಲ್ಲಿ ನರ್ಮದಾ ನದಿಯಿಂದ ದಕ್ಷಿಣದಲ್ಲಿ ಕಾವೇರಿಯವರೆಗೂ, ಪಶ್ಚಿಮದಲ್ಲಿ ಅರಬ್ಬೀಸಮುದ್ರ ಮತ್ತು ಮಾಳವದಿಂದ ಪೂರ್ವದಲ್ಲಿ ಆಂಧ್ರಪ್ರದೇಶ, ವಾರಂಗಲ್ ಮತ್ತು ಕಡಪ ಜಿಲ್ಲೆಗಳವರೆಗೂ ವಿಸ್ತರಿಸಿಕೊಂಡಿತ್ತು. ಇಂತಹ ವಿಶಾಲ ಸಾಮ್ರಾಜ್ಯವನ್ನು ಸ್ಥಾಪಿಸಿ ಕನ್ನಡ ಸಂಸ್ಕೃತಿ, ನಾಡುನುಡಿಗಳಿಗೆ ರಾಷ್ಟ್ರಕೂಟರು ನೀಡಿದ ಕೊಡುಗೆ ಅಮೋಘವಾದುದು. ಇವರು ಸಹ ಚಾಲುಕ್ಯರಂತೆ ಉತ್ತಮ ಹಾಗೂ ದಕ್ಷ ಆಡಳಿತಗಾರರಾಗಿದ್ದು ಚೋಳ, ಗಂಗ ಹಾಗೂ ನೊಳಂಬರೊಂದಿಗೆ ವೈವಾಹಿಕ ಸಂಬಂಧಗಳನ್ನು ಹೊಂದಿದ್ದು, ಕರ್ನಾಟಕ ಸಂಸ್ಕೃತಿಗೆ ಪ್ರಮುಖ ಕೊಡುಗೆಗಳನ್ನು ನೀಡಿದ್ದಾರೆ. ಪ್ರಸ್ತುತ ಪ್ರದೇಶದಲ್ಲಿ ಶಾಸನಗಳು ದೊರೆಯದಿದ್ದರೂ ಸುತ್ತಮುತ್ತಲಿನ ಪ್ರದೇಶದಲ್ಲಿ ಇವರ ಅನೇಕ ಶಾಸನಗಳು, ವೀರಗಲ್ಲುಗಳು ಹಾಗೂ ಇನ್ನಿತರ ಅವಶೇಷಗಳು ದೊರೆಯುತ್ತಿವೆ. ಎಪಿಗ್ರಫಿಯ ಕರ್ನಾಟಕ ಸಂಪುಟ ಹನ್ನೊಂದರಲ್ಲಿ ಇವರ ಕಾಲದ ಅನೇಕ ಶಾಸನಗಳು ಪ್ರಕಟಗೊಂಡಿವೆ. ಇವುಗಳಲ್ಲಿ ಎರಡನೇ ಗೋವಿಂದ, ಎರಡನೇ ಕೃಷ್ಣ, ಎರಡನೇ ಅಮೋಘವರ್ಷ, ಮೂರನೇ ಕೃಷ್ಣ ಹಾಗೂ ಮೂರನೇ ಕರ್ಕನ ಶಾಸನಗಳು ಪ್ರಮುಖವು. ಈ ಪ್ರದೇಶದಲ್ಲಿ ದೊರೆತಿರುವ ಶಾಸನಗಳಲ್ಲಿ ಮೊದಲನೆಯದು ಎರಡನೇ ಗೋವಿಂದನಿಗೆ ಸಂಬಂಧಿಸಿದ್ದು, ಈತನನ್ನು ಜಗತ್ತುಂಗ, ಪ್ರಭೂತವರ್ಷ, ಪ್ರತಾಪಲೋಕ ಮತ್ತು ಶ್ರೀವಲ್ಲಭ ಎಂಬುದಾಗಿ ಹೊಗಳಲಾಗಿದೆ.

ಚಿತ್ರದುರ್ಗ ತಾಲೂಕು ಇಸಾಮುದ್ರ ಗ್ರಾಮದಲ್ಲಿ ದೊರೆತಿರುವ ಶಾಸನವು ಕ್ರಿ.ಶ. ೯೩೦ರಲ್ಲಿ ರಚನೆಗೊಂಡಿದ್ದು ರಾಷ್ಟ್ರಕೂಟರ ವಂಶಾವಳಿಯನ್ನು ನೀಡುತ್ತದೆ.[೨೯] ಇಸಾಮುದ್ರದಲ್ಲಿರುವ ಮತ್ತೆರಡು ಶಾಸನಗಳು ರಾಷ್ಟ್ರಕೂಟ ಅರಸ ಎರಡನೇ ಅಮೋಘವರ್ಷನಿಗೆ ಸೇರಿದ್ದಾಗಿವೆ. ಈ ಪ್ರದೇಶದಲ್ಲಿ

ಕನ್ನಯ್ಯ ಎಂಬ ಅರಸನು ಆಳ್ವಿಕೆ ನಡೆಸುತ್ತಿದ್ದನು ಎನ್ನುವ ವಿಷಯ ಪ್ರಸ್ತಾಪವಾಗುತ್ತದೆ. ಹಾಗೆಯೇ ಈ ಪ್ರದೇಶದಲ್ಲಿ ಅಣ್ಣಿಗ ಅಥವಾ ಅಣ್ಣಯ್ಯನು ಆಳುತ್ತಿದ್ದನು. ಈತನಿಗೆ ಬೀರನೊಳಂಬ ಎನ್ನುವ ಬಿರುದಿದ್ದಿತು. ರಾಷ್ಟ್ರಕೂಟ ಮೂರನೇ ಕೃಷ್ಣನ ಅನೇಕ ಶಾಸನಗಳು ಈ ಪ್ರದೇಶಕ್ಕೆ ಹೊಂದಿಕೊಂಡಂತೆ ದೊರೆಯುತ್ತವೆ. ಹೀಗೆ ರಾಷ್ಟ್ರಕೂಟ ಅರಸರಿಗೆ ಸಂಬಂಧಿಸಿದ ಅನೇಕ ಶಾಸನಗಳು ಐಮಂಗಲ ಪರಿಸರದಲ್ಲಿ ದೊರೆಯದೇ ಇದ್ದರೂ ಇದರ ಸುತ್ತಮುತ್ತಲಿನ ಪ್ರದೇಶದಲ್ಲಿ ರಾಷ್ಟ್ರಕೂಟರಿಗೆ ಸಂಬಂಧಿಸಿದ ಶಾಸನಗಳು ದೊರೆತಿವೆ. ಆದರೆ ಈ ಪ್ರದೇಶದಲ್ಲಿ ರಾಷ್ಟ್ರಕೂಟರಿಗೆ ಸಂಬಂಧಿಸಿದ ಕೋಡಿಮಲ್ಲೇಶ್ವರ ದೇವಾಲಯ ದೇವಿಮರಡಿಗೆರೆಯಲ್ಲಿ ದೊರೆತಿದೆ. ಇದು ರಾಷ್ಟ್ರಕೂಟರ ಕಾಲಕ್ಕೆ ಸಂಬಂಧಿಸಿದ ದೇವಾಲಯ ಎಂದು ಕಲೆ ಮತ್ತು ವಾಸ್ತುಶಿಲ್ಪದಿಂದ ಊಹಿಸಬಹುದು.

ಕಲ್ಯಾಣ ಚಾಲುಕ್ಯರ ಆಳ್ವಿಕೆ

ಕಲ್ಯಾಣದ ಚಾಲುಕ್ಯರು ಸು.ಕ್ರಿ.ಶ. ೧೦ನೇ ಶತಮಾನದಿಂದ ೧೨ನೇ ಶತಮಾನದವರೆಗೆ ದಕ್ಷಿಣ ಭಾರತದ ಇತಿಹಾಸದಲ್ಲಿ ವಿಶೇಷವಾಗಿ ಕರ್ನಾಟಕದ ಇತಿಹಾಸದಲ್ಲಿ ಮಹತ್ತರವಾದ ಪಾತ್ರ ವಹಿಸಿದ್ದಾರೆ. ಕರ್ನಾಟಕದುದ್ದಕ್ಕೂ ಆಳ್ವಿಕೆ ನಡೆಸಿ ಹಲವಾರು ದೇವಾಲಯಗಳನ್ನು ನಿರ್ಮಿಸಿದ್ದಾರೆ. ಅಲ್ಲದೆ ದಾನದತ್ತಿಗಳನ್ನು. ಯುದ್ಧದ ಸನ್ನಿವೇಶಗಳನ್ನು ವಿವರಿಸುವಂತಹ ಅನೇಕ ಶಾಸನಗಳನ್ನು ರಚಿಸಿದ್ದಾರೆ. ದಾವಣಗೆರೆ ಜಿಲ್ಲೆಯ ಬಾಗಳಿ ಕಲ್ಲೇಶ್ವರ ದೇವಾಲಯ, ನೀಲಗುಂದ ಭೀಮೇಶ್ವರ, ನಂದಿ ತಾವರೆಯ ಅಮೃತಮಾಣಿಕೇಶ್ವರ ದೇವಾಲಯ ಇತ್ಯಾದಿ ದೇವಾಲಯಗಳು ಇವರ ಕಾಲಾವಧಿಯಲ್ಲಿ ನಿರ್ಮಾಣವಾಗಿರುವುದನ್ನು ನೋಡುತ್ತೇವೆ.

ಕಲ್ಯಾಣದ ಚಾಲುಕ್ಯರಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಪಡೆದ ಅರಸುರಗಳೆಂದರೆ ಎರಡನೇ ಜಯಸಿಂಹ, ಸೋಮೇಶ್ವರ, ವಿಕ್ರಮಾದಿತ್ಯ, ಇತ್ಯಾದಿ ಅರಸರು ಕಲ್ಯಾಣದ ಚಾಲುಕ್ಯರಿಗೆ ಸಂಬಂಧಿಸಿದ ಶಾಸನಗಳು ಮತ್ತು ವೀರಗಲ್ಲುಗಳು ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ವಿರಳವಾಗಿದ್ದರೂ ಇವರಿಗೆ ಸಂಬಂಧಿಸಿದ ಕೆಲವೇ ಶಾಸನಗಳು, ವೀರಗಲ್ಲುಗಳಿಂದ ಪ್ರಸ್ತುತ ಅಧ್ಯಯನದ ಪ್ರದೇಶದಲ್ಲಿ ಇವರ ಆಳ್ವಿಕೆಯ ನಂಟು ಇದ್ದುದು ಸ್ಪಷ್ಟವಾಗುತ್ತದೆ.

ಕಲ್ಯಾಣ ಚಾಲುಕ್ಯರ ಶಾಸನಗಳು, ವೀರಗಲ್ಲುಗಳು ಪ್ರಸ್ತುತ ಪ್ರದೇಶದಲ್ಲಿ ನೇರವಾಗಿ ದೊರೆಯದಿದ್ದರೂ ಅವರ ಸಾಮಂತರಾಗಿ ನೊಳಂಬ ಪಲ್ಲವರು ಮತ್ತು ಪಾಂಡ್ಯರು ಈ ಭಾಗದಲ್ಲಿ ಆಳ್ವಿಕೆ ನಡೆಸಿದ್ದಾರೆ ಎನ್ನುವ ವಿವರಗಳು ದೊರೆಯುತ್ತವೆ.[೨೦] ಪ್ರಸ್ತುತ ಭಾಗದಲ್ಲಿ ದೊರೆತಿರುವ ಪ್ರಾರಂಭದ ದೇವಾಲಯಗಳು ಈ ಕಾಲಮಾನದಲ್ಲೇ ರಚನೆಗೊಂಡಿರುವುದರಿಂದ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಈ ಅರಸರು ಹೆಚ್ಚು ಪ್ರಾಮುಖ್ಯತೆ ನೀಡಿರುವುದು ತಿಳಿದುಬರುತ್ತದೆ.

ನೊಳಂಬರ ಆಳ್ವಿಕೆ

ಕರ್ನಾಟಕದಲ್ಲಿ ಕ್ರಿ.ಶ. ೮ನೇ ಶತಮಾನದಿಂದ ೧೧ನೇ ಶತಮಾನದವರೆಗೆ ಆಡಳಿತ ನಡೆಸಿದ ನೊಳಂಬರು ದಕ್ಷಿಣ ಭಾರತದ ಇತಿಹಾಸದಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದರು.

ಇವರ ರಾಜಧಾನಿ ಪ್ರಸ್ತುತ ಅಧ್ಯಯನ ಪರಿಸರದ ಗಡಿಪ್ರದೇಶವಾದ ಈಗಿನ ಆಂಧ್ರಪ್ರದೇಶದ ಮಡಕಶಿರಾ ತಾಲೂಕಿನ ಹೆಂಜೇರು ಅಥವಾ ಹೇಮಾವತಿಯಾಗಿತ್ತು. ಅನಂತರ ಕ್ರಿ.ಶ. ೧೧ನೇ ಶತಮಾನದಲ್ಲಿ ಇವರು ತಮ್ಮ ರಾಜಧಾನಿಯನ್ನು ತುಂಗಭದ್ರಾ ತೀರದಲ್ಲಿರುವ ಕಂಪಲಿಗೆ ವರ್ಗಾಯಿಸಿಕೊಂಡರು. ಪ್ರಾರಂಭದಲ್ಲಿ ನೊಳಂಬಾಳಿಗೆ ಸಾಸಿರವೆಂಬ ಸಣ್ಣ ಪ್ರಾಂತ್ಯದ ಮೇಲೆ ಆಡಳಿತ ನಡೆಸಿದ್ದರು. ಈ ಪ್ರಾಂತ್ಯವು ಈಗಿನ ಚಿತ್ರದುರ್ಗ ಜಿಲ್ಲೆ ಮತ್ತು ಅದರ ಸುತ್ತಮುತ್ತಲಿನ ಪ್ರದೇಶವನ್ನೊಳಗೊಂಡಿತ್ತು. ಕಾಲಕ್ರಮೇಣ ಅಂದರೆ ಕ್ರಿ.ಶ. ೯-೧೦ನೇ ಶತಮಾನದಲ್ಲಿ ಇವರ ಪ್ರಾಬಲ್ಯವು ವೃದ್ಧಿಸಿ ಇವರ ರಾಜ್ಯವೂ ವಿಸ್ತಾರಗೊಂಡು ನೊಳಂಬವಾಡಿ ೩೨,೦೦೦ ಎಂದು ವಿಸ್ತಾರವಾದ ಪ್ರಾಂತ್ಯವಾಯಿತು. ಈ ಪ್ರಾಂತ್ಯವು ಕರ್ನಾಟಕದ ಚಿತ್ರದುರ್ಗ, ತುಮಕೂರು, ಕೋಲಾರ ಮತ್ತು ಅದಕ್ಕೆ ಸೇರಿದಂತಿರುವ ಸುತ್ತಮುತ್ತಲಿನ ಪ್ರದೇಶಗಳು ವ್ಯಾಪಿಸಿತು.[೩೧]

ತಲಕಾಡಿನ ಗಂಗರ ಕೈಕೆಳಗೆ ಆಡಳಿತವನ್ನು ಪ್ರಾರಂಭಿಸಿದ ನೊಳಂಬರು ಕಾಲಕ್ರಮೇಣ ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರ ಮಾಂಡಲಿಕರಾಗಿ ಆಳ್ವಿಕೆ ನಡೆಸಿದರು. ಚೋಳರು, ಬಾಣರು, ವೈಡುಂಬರನ್ನು ಸದೆಬಡಿದರು. ಗಂಗರು, ಚೋಳರು, ಪಲ್ಲವರು ಮತ್ತು ವೆಂಗಿಯ ಚಾಲುಕ್ಯರ ವಿರುದ್ಧ ಅನೇಕ ಯುದ್ಧಗಳನ್ನು ಮಾಡಿ ವೀರರು ಎನಿಸಿಕೊಂಡರು. ಬನವಾಸಿ ಕದಂಬರು ಹಾಗೂ ಕಲ್ಯಾಣಿ ಚಾಲುಕ್ಯರ ವಂಶದೊಂದಿಗೆ ವಿವಾಹ ಸಂಬಂಧ ಸಹ ಚಿತ್ರಿಸಿದರು. ಇಷ್ಟೆಲ್ಲಾ ಕಾರ್ಯ ಚಟುವಟಿಕೆಗಳನ್ನು ನಡೆಸಿ ಭವ್ಯ ಇತಿಹಾಸದ ಭದ್ರಬುನಾದಿಯನ್ನು ಹಾಕಿದವರಲ್ಲೊಬ್ಬರಾಗಿದ್ದಾರೆ.

ನೊಳಂಬರು ರಾಜಕೀಯ ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿದಂತೆ ಹಾಗೆಯೇ ಕರ್ನಾಟಕದ ಭವ್ಯ ಸಾಂಸ್ಕೃತಿಕ ಪರಂಪರೆಯನ್ನು ಬೆಳಗಿಸಿದರು. ಇವರ ಕಾಲದಲ್ಲಿ ವಾಸ್ತುಶಿಲ್ಪ ಕಲೆಯಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದ್ದರು. ಇವರ ರಾಜಧಾನಿಯಾದ ಹೇಮಾವತಿಯಲ್ಲಿ ಅನೇಕ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಇವರ ಅವಶೇಷಗಳು ಈ ಪ್ರದೇಶದಲ್ಲಿ ಇಂದಿಗೂ ಅಳಿವಿನ ಅಂಚಿನಲ್ಲಿರುವುದನ್ನು ಕಾಣಬಹುದು. ಐಮಂಗಲ ಪರಿಸರ ದಲ್ಲಿಯೂ ಇವರ ಕಾಲದಲ್ಲಿ ನಿರ್ಮಿಸಿದ ದೇವಾಲಯಗಳನ್ನು ಕಾಣಬಹುದು.

ನೊಳಂಬ ಪದವು ಅವರ ವಂಶದ ಹೆಸರಾಗಿತ್ತೆಂದು ಖಚಿತವಾಗಿ ಹೇಳಬಹುದು. ಚಾಮರಾಜನಗರದ ಒಂದು ಶಾಸನದಲ್ಲಿ ರಾಜಕುಮಾರಿಯೊಬ್ಬಳು ತಾನು ನೊಳಂಬ ಮತ್ತು ಪಲ್ಲವ ಕುಲದವಳೆಂದು ಹೇಳಲ್ಪಟ್ಟಿದ್ದಾಳೆ.[೩೨] ಹಾಗೆಯೇ ಗಂಗಮಾರಸಿಂಹನು "ನೊಳಂಬ ಕುಲಾಂತಕ" ಎಂದು ಆತನು ನೊಳಂಬರೆಲ್ಲರನ್ನು ಕೊಂದನೆಂದು ಶಾಸನಗಳಲ್ಲಿ ವರ್ಣಿತನಾಗಿದ್ದಾನೆ. ನೊಳಂಬ ವಂಶವು ಹೇಮಾವತಿಯ ಸ್ತಂಭಶಾಸನದಲ್ಲಿ ಉಕ್ತವಾಗಿರುವ ಹಾಗೆ ನೊಳಂಬರ ಮೊದಲನೇ ರಾಜನಾದ ಮಂಗಳನು ಈಶ್ವರ ವಂಶಜನಾದ ಹಾಗೂ ಕಂಚಿಪತಿಯಾದ ತ್ರಿನಯಪಲ್ಲವನ ಕುಲದಲ್ಲಿ ಹುಟ್ಟಿದವನೆಂದು ಹೇಳುತ್ತದೆ.[೩೩] ನೊಳಂಬರ ಬಿರುದುಗಳಿಂದ ಪಲ್ಲವಮಲ್ಲ, ಪಲ್ಲವಭಯ, ಪಲ್ಲವಕುಲತಿಲಕ, ಪಲ್ಲವರಾಜ ಇತ್ಯಾದಿಗಳು ಮೂಲ ಪಲ್ಲವ ವಂಶದಿಂದ ಬಂದವರೆಂಬುದನ್ನು ತಿಳಿಯುತ್ತದೆ.

ಹೇಮಾವತಿಯ ಸ್ತಂಭಶಾಸನದಿಂದ ನೊಳಂಬರ ವಂಶಾವಳಿಯ ಮೊದಲ ಭಾಗವನ್ನು ಈ ರೀತಿ ತಿಳಿಯಬಹುದು. ಈಶ್ವರ ವಂಶನಾದ ತ್ರಿಣಯನನ ವಂಶದಲ್ಲಿ ಮಂಗಳನೊಳಂಬಾಧಿ ರಾಜನು ಹುಟ್ಟಿದನು. ಈತನ ಮಗ ಸಿಂಹಪೋತ, ಇವನ ಮಗ ಚಾರುಪೊನ್ನೆರ ಈತನು ಮಕ್ಕಳು ಅಣ್ಣಿಗನೊಳಂಬ ಮತ್ತು ಇರಿವನೊಳಂಬ ದಿಲೀಪ, ಕೊನೆಯ ಅರಸ ದಿಲೀಪನು ಈ ಶಾಸನವನ್ನು ಕ್ರಿ.ಶ. ೯೪೨ರಲ್ಲಿ ಸ್ಥಾಪಿಸಿದನು.[೩೪] ಚಿತ್ತೂರು ಜಿಲ್ಲೆಯ ನೆಲಪಲ್ಲಿಯ ಶಾಸನದಿಂದ ಇರಿವನೊಳಂಬನ ನಂತರ ಅವನ ಮಗ ನನ್ನಿನೊಳಂಬ ಘಟೆಯಂಕಕಾರ ಪಲ್ಲವಾದಿತ್ಯನು ಆಳಿದವರೆಂದು ತಿಳಿಯುತ್ತದೆ. ಕೊನೆಯ ಅರಸನಾದಿ ಇರಿವನೊಳಂಬ ಘಟೆಯಂಕಕಾರ ಕಾಲಕ್ಕೆ ನೊಳಂಬರು ತಮ್ಮ ನಿಷ್ಠೆಯನ್ನು ಸಂಪೂರ್ಣವಾಗಿ ಕಲ್ಯಾಣಚಾಲುಕ್ಯರಿಗೆ ಮುಡುಪಾಗಿಸಿಟ್ಟಿದ್ದರು. ಆದುದರಿಂದಾಗಿ ಇವರ ಹೆಸರುಗಳು ಅವರ ಸಮಕಾಲೀನ ಚಾಲುಕ್ಯ ರಾಜನ ಹೆಸರನ್ನೊಳಗೊಂಡಿರುತ್ತದೆ. ಬಳ್ಳಾರಿ ಜಿಲ್ಲೆಯ ಮೋರಿಗೇರಿ ಶಾಸನದಿಂದ ಇರಿವನೊಳಂಬ ಘಟೆಯಂಕಕಾರನ ನಂತರ ಆಳಿದ ನೊಳಂಬ ದೊರೆಗಳ ಬಗ್ಗೆ ತಿಳಿಯಬಹುದು. ಇರಿವನೊಳಂಬ ಘಟೆಯಂಕಾರನ ಮಗ ಜಗದೇಕಮಲ್ಲ ಇರ್ಮಡಿನೊಳಂಬ ಅವನ ತಮ್ಮ ತ್ರೈಲೋಕ್ಯಮಲ್ಲನೊಳಂಬ ಪಲ್ಲವ ಪೆರ್ಮಾನಡಿ ಕಡೆಯ ರಾಜನ ಕೊನೆಯ ಕಾಲ ಕ್ರಿ.ಶ. ೧೦೫೬. ಜಯಸಿಂಘದೇವನೆಂಬ ರಾಜನು ಚಾಲುಕ್ಯರ ಕೈಕೆಳಗೆ ಆಳ್ವಿಕೆ ಮಾಡಿದನು. ಶಾಸನದಲ್ಲಿ ಈತನು ಸೋಮೇಶ್ವರನ ಪುತ್ರನೂ ಹಾಗೂ ೬ನೇ ವಿಕ್ರಮಾದಿತ್ಯನ ತಮ್ಮನೆಂದು ಹೇಳಲ್ಪಟ್ಟಿದೆ. ಈತನಿಗೂ ಮತ್ತು ಮೂಲ ನೊಳಂಬ ವಂಶಕ್ಕೂ ಯಾವ ರೀತಿ ಸಂಬಂಧವಿದ್ದಿತೆಂಬುದನ್ನು ಹೇಳಲು ಅಸಾಧ್ಯ. ಆದುದರಿಂದ ಕ್ರಿ.ಶ. ೧೦೫೫ರಲ್ಲಿ ತ್ರೈಲೋಕ್ಯಮಲ್ಲನೊಂದಿಗೆ ಮೂಲ ನೊಳಂಬ ಸಂತತಿ ಮುಕ್ತಾಯವಾಯಿತು ಎಂದು ಹೇಳಬಹುದು.

ನೊಳಂಬ ಕಾಲದ ನಂತರದ ಶಾಸನಗಳಲ್ಲಿ ಅನೇಕ ನೊಳಂಬರ ಹೆಸರುಗಳುಳ್ಳ ಅಧಿಕಾರಿಗಳ ಕಲ್ಯಾಣ ಚಾಲುಕ್ಯರ, ಹೊಯ್ಸಳರ, ಚೋಳ, ವಿಜಯನಗರ ಅರಸರ ಕೈಕೆಳಗೆ ಯುದ್ಧಗಳಲ್ಲಿ ಸೇವೆ ಸಲ್ಲಿಸುತ್ತಿರುವುದನ್ನು ಕಾಣುತ್ತೇವೆ. ಇವರ ಮೂಲಗಳನ್ನು ಹುಡುಕಿ ಅವರಿಗೂ ಮೂಲ ನೊಳಂಬ ರಾಜವಂಶಕ್ಕೆ ಇದ್ದ ಸಂಬಂಧವನ್ನು ಹೇಳಲಿಕ್ಕೆ ಆಗುವುದಿಲ್ಲ. ಇವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ನೊಳಂಬರ ರಾಜವಂಶಕ್ಕೆ ಸಂಬಂಧವನ್ನು ಹೊಂದಿದ್ದು ನೊಳಂಬರ ಪತನ ನಂತರ ಚದುರಿ ಹೋಗಿ ಇತರ ರಾಜರ ಆಶ್ರಯದಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿದ್ದರು ಎಂದು ಹೇಳಬಹುದು. ಮೇಲೆ ತಿಳಿಸಲಾದ ನೊಳಂಬರ ರಾಜರ ಹೆಸರುಗಳಲ್ಲದೆ ಅವರ ವಂಶದ ಇತರ ರಾಜಕುಮಾರರ ಹೆಸರುಗಳನ್ನು ಶಾಸನಗಳಲ್ಲಿ ಕಾಣುತ್ತೇವೆ. ಅವರೆಂದರೆ ಮಯ್ದು ನೊಳಂಬ, ಅಂಕನಾನ, ಇರುಳಚೋರ, ಅಯ್ಯಪ್ಪದೇವಗನ್ನರ ಇತ್ಯಾದಿ ನೊಳಂಬರ ಪೂರ್ವ ಇತಿಹಾಸದ ಬಗ್ಗೆ ಹೆಚ್ಚಿನ ಮಾಹಿತಿಗಳು ನಮಗೆ ದೊರೆತಿಲ್ಲ.

ಚಿತ್ರದುರ್ಗ ಜಿಲ್ಲೆಯಲ್ಲಿ ಹಿರಿಯೂರು, ಚಳ್ಳಕೆರೆ ತಾಲೂಕುಗಳಲ್ಲಿ. ಕ್ರಿ.ಶ. ೮೧೫ ನೊಳಂಬರು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದಾರೆ. ಚಿಕ್ಕಮಧುರೆಯ ಶಾಸನವು ಸಿಂಹ ಪೋತನ ಮಗ ಪಲ್ಲವಾದಿ ರಾಜ ಮತ್ತು ಅವನ ಮಗ ಪಲ್ಲವ ಮಲ್ಲ ರಾಷ್ಟ್ರಕೂಟರ ಸಾಮಂತರಾಗಿ ಆಡಳಿತ ನಡೆಸುತ್ತಿದ್ದದ್ದು ತಿಳಿಸುತ್ತದೆ.

ಪ್ರಸ್ತುತ ಅಧ್ಯಯನದ ಪ್ರದೇಶದ ಸುತ್ತಮುತ್ತಲಿನಲ್ಲಿ ನೊಳಂಬರಿಗೆ ಸಂಬಂಧಿಸಿದ ಶಾಸನಗಳು, ದೇವಾಲಯಗಳು, ವೀರಗಲ್ಲುಗಳು ದೊರೆತಿದ್ದು ಇವರು ಈ ಪ್ರದೇಶದಲ್ಲಿ ತಮ್ಮ ರಾಜಕೀಯ ಪ್ರಾಬಲ್ಯ ಮೆರೆದರು ಎಂದು ಹೇಳಬಹುದು. ಅಂದರೆ ಕ್ರಿ.ಶ. ೯೯೫ರ ನೊಳಂಬರ ಆಳ್ವಿಕೆ ಕುರಿತ ಶಾಸನವು ಇದನ್ನು ಐಯ್ಯಾ ಮಂಗಳಾ ಎಂದು ಕರೆದಿರುವುದು ಇಲ್ಲಿನ ಪರಿಸರದ ಆಳ್ವಿಕೆಗೆ ಪುಷ್ಟಿ ನೀಡುತ್ತದೆ.[೩೫] ಚಿತ್ರದುರ್ಗ ಜಿಲ್ಲೆಯಲ್ಲಿ ಹಲವು ಶತಮಾನಗಳವರೆಗೆ ವೈಭವದಿಂದ ಆಳಿದ ನೊಳಂಬರು ಕರ್ನಾಟಕದ ಸಾಮಂತ ರಾಜಮನೆಗಳಲ್ಲಿ ಮಹತ್ವದ ಸ್ಥಾನ ಪಡೆದಿದ್ದರು. ಇವರ ಆಳ್ವಿಕೆ ಪ್ರಸ್ತುತ ಪ್ರದೇಶಕ್ಕೆ ಸೀಮಿತವಾಗಿರದೇ ಸುತ್ತಮುತ್ತಲಿನ ಜಿಲ್ಲೆಗಳಿಗೂ ವಿಸ್ತರಿಸಿದ್ದಿತು ಎನ್ನುವ ಸಂಗತಿ ದೊರೆತಿರುವ ಶಾಸನಗಳ ಆಧಾರಗಳಿಂದ ತಿಳಿದುಕೊಳ್ಳಬಹುದಾಗಿದೆ. ನೊಳಂಬರು ಬಹುತೇಕ ಶಾಸನಗಳನ್ನು ಕನ್ನಡದಲ್ಲಿಯೇ ರಚಿಸಿ ಕನ್ನಡ ನಾಡು, ನುಡಿ, ಸಂಸ್ಕೃತಿ ಬೆಳವಣಿಗೆಗೆ ಶ್ರಮಿಸಿದ ನೊಳಂಬರ ಸ್ಥಾನ ಕರ್ನಾಟಕದ ಇತಿಹಾಸದಲ್ಲಿ ಅದ್ವಿತೀಯವಾಗಿದೆ.

ಈ ರೀತಿಯಾಗಿ ನೊಳಂಬರು ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದು ಯಥೇಚ್ಛವಾಗಿ ನೊಳಂಬರಿಗೆ ಸಂಬಂಧಿಸಿದಂತೆ ಶಾಸನಗಳು ಈ ಪ್ರದೇಶದಲ್ಲಿ ದೊರೆಯುತ್ತವೆ. ಇವರು ಉತ್ತಮವಾದ ಆಳ್ವಿಕೆ ನಡೆಸಿದ್ದರೆನ್ನುವುದು ಸಹ ಇಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ.[೩೬]

ಹೊಯ್ಸಳರ ಆಳ್ವಿಕೆ

ಕರ್ನಾಟಕದ ರಾಜಮನೆತನಗಳಲ್ಲಿ ಹೊಯ್ಸಳರ ಸ್ಥಾನ ಮಹತ್ತರವಾದುದು. ಸುಮಾರು ಕ್ರಿ.ಶ. ೧೨ನೇ ಶತಮಾನದ ಆದಿಭಾಗದಿಂದ ೧೪ನೇ ಶತಮಾನದ ಮಧ್ಯಭಾಗದವರೆಗೆ ಆಳ್ವಿಕೆ ನಡೆಸಿದ ಇವರು ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಸಾಹಿತ್ಯಕ, ಕಲೆ ಮತ್ತು ವಾಸ್ತುಶಿಲ್ಪಕ್ಕೆ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವುದರ ಮೂಲಕ ವಿಶಿಷ್ಟ ರೀತಿಯ ಕಾಣಿಕೆಗಳನ್ನು ಸಲ್ಲಿಸಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಹೊಯ್ಸಳರ ಆಳ್ವಿಕೆಯನ್ನು ತಿಳಿಯಲು ಸುಮಾರು ಐವತ್ತಕ್ಕೂ ಹೆಚ್ಚು ಶಾಸನಗಳು ದೊರೆತಿವೆ. ಅವುಗಳ ಆಧಾರದಿಂದ ಹೊಯ್ಸಳರು ತಮ್ಮ ಆಳ್ವಿಕೆಯ ಅವಧಿಯಲ್ಲಿ ಇಡೀ ಜಿಲ್ಲೆಯನ್ನು ಆಕ್ರಮಿಸಿಕೊಂಡಿದ್ದು ಸುತ್ತಮುತ್ತಲಿನ ಪ್ರದೇಶಗಳಲ್ಲಿಯೂ, ಆಳ್ವಿಕೆ ನಡೆಸಿರುವುದು ತಿಳಿದುಬರುತ್ತದೆ. ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡ ಕೆರೆ, ಕಾಲುವೆ, ದೇವಾಲಯ, ಅಗ್ರಹಾರ, ಇತ್ಯಾದಿಗಳನ್ನು ಕುರಿತಾಗಿ ಈ ಪ್ರದೇಶದಲ್ಲಿ ದೊರೆತಿರುವ ಶಾಸನಗಳು ವಿವರಣೆ ನೀಡುತ್ತವೆ.

ಹೊಯ್ಸಳ ಪ್ರಭು ಇಮ್ಮಡಿಬಲ್ಲಾಳನ ಶಾಸನವು ಈ ಜಿಲ್ಲೆಯಲ್ಲಿ ದೊರೆತ ಹೊಯ್ಸಳ ಮನೆತನದ ಪ್ರಥಮ ಶಾಸನವಾಗಿದೆ. ಇಮ್ಮಡಿಬಲ್ಲಾಳನ ಕಾಲದ ಈ ಪ್ರದೇಶದಲ್ಲಿ ಎರಡು ಶಾಸನಗಳು(ಹಿರಿಯೂರು-೭೦, ಹೊಳಲ್ಕೆರೆ-೨೮) ದೊರೆತಿವೆ. ಈ ಶಾಸನಗಳು ಅವನ ಕಾಲದ ರಾಜಕೀಯ, ಸಾಮಾಜಿಕ, ಮತ್ತಿತರ ಸಂಗತಿಗಳನ್ನು ಕುರಿತು ವಿವರಣೆ ನೀಡುತ್ತದೆ.[೩೭] ಪ್ರಸ್ತುತ ಪ್ರದೇಶದಲ್ಲಿ ಅಂದರೆ ಹಿರಿಯೂರು ತಾಲೂಕು ಐಮಂಗಲ ಹೋಬಳಿಯ ಯರಬಳ್ಳಿ ಗ್ರಾಮದಲ್ಲಿರುವ ಕ್ರಿ.ಶ. ೧೨೦೫ರ ಶಾಸನವು ಇಮ್ಮಡಿ ಬಲ್ಲಾಳನ ಮಗ ಬೇಚಿಯ ಡಣ್ಣಾಯಕನು ಕಾಡಕರೆ ಪರಮಗೌಡನ ಮಗ ನಾಗೇಯ ನಾಯಕನಿಗೆ ನೆತ್ತರು ಕೊಡುಗೆ ನೀಡಿದ್ದನ್ನು ತಿಳಿಸುತ್ತದೆ.[೩೮] ಹಾಗಾಗಿ ಈ ಪ್ರದೇಶವೂ ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಹೇಳಬಹುದು.

ಸೇವುಣರ ಆಳ್ವಿಕೆ

ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ಕದಂಬ, ಚಾಲುಕ್ಯ, ರಾಷ್ಟ್ರಕೂಟರ ಮನೆತನಗಳಂತೆ ದೇವಗಿರಿಯ ಸೇವುಣರು ಕೆಲವು ಕಾಲ ಇಲ್ಲಿ ಆಳ್ವಿಕೆ ನಡೆಸಿದ್ದಾರೆ ಎನ್ನುವುದು ತಿಳಿದುಬರುತ್ತದೆ. ಇವರಿಗೆ ಸಂಬಂಧಿಸಿದ ಶಾಸನಗಳು ದೊರೆಯದೇ ಇದ್ದರೂ ಚಿತ್ರದುರ್ಗ ಜಿಲ್ಲೆಯಾದ್ಯಂತ ದೊರೆತಂತಹ ಶಾಸನಗಳ ಆಧಾರದಿಂದ ಈ ಪ್ರದೇಶವೂ ಸೇವುಣರಿಗೆ ಸಂಬಂಧಿಸಿದ್ದಾಗಿದ್ದಿತೆಂದು ಹೇಳಬಹುದು. ಸೇವುಣರ ಆಳ್ವಿಕೆಯ ಅವಧಿಯಲ್ಲಿ ಇತರ ರಾಜಮನೆತನಗಳೊಂದಿಗೆ ಇಟ್ಟುಕೊಂಡಿದ್ದ ಸಂಬಂಧಗಳು ಮತ್ತು ಇತ್ಯಾದಿಗಳ ಬಗ್ಗೆ ಅವರ ಶಾಸನಗಳಿಂದ ತಿಳಿದುಕೊಳ್ಳಬಹುದಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಸೇವುಣರ ಆಳ್ವಿಕೆಯ ಬಗ್ಗೆ ಸುಮಾರು ೨೦ ಶಾಸನಗಳು ದೊರೆತಿವೆ. ಅವುಗಳಲ್ಲಿ ಅವರ ರಾಜಕೀಯ ಮತ್ತಿತರ ವಿವರಗಳ ಬಗ್ಗೆ ತಿಳಿಯಬಹುದಾಗಿದೆ. ಈ ಜಿಲ್ಲೆಯ ಕೆಲವು ಭಾಗಗಳು ಇವರ ಅಧೀನಕ್ಕೆ ಒಳಪಟ್ಟಿವೆ ಎಂದು ಈ ಶಾಸನಗಳ ಸಹಾಯದಿಂದ ಸ್ಪಷ್ಟಪಡಿಸಬಹುದು. ಕೆಲವು ಶಾಸನಗಳಲ್ಲಿ ಸೇವುಣರು ತಮ್ಮನ್ನು ಯಾದವರೆಂದು ಕರೆದುಕೊಂಡಿದ್ದಾರೆ. ಆದರೆ ಹೊಯ್ಸಳರ ಶಾಸನಗಳು ಅವರನ್ನು ಸೇವುಣರೆಂದೇ ಉಲ್ಲೇಖಿಸಿವೆ.[೬೫] ಸೇವುಣ ಸಿಂಘಣ(ಕ್ರಿ.ಶ. ೧೨೧೦-೧೨೪೭) ಈ ಮನೆತನದ ಪ್ರಸಿದ್ಧ ಹಾಗೂ ಸಮರ್ಥ ದೊರೆಗಳಲ್ಲಿ ಒಬ್ಬನಾಗಿದ್ದಾನೆ.

ಪ್ರಸ್ತುತ ಚಿತ್ರದುರ್ಗ ಜಿಲ್ಲೆಯಲ್ಲಿ ಈ ವಂಶಕ್ಕೆ ಸೇರಿದ ಹಲವಾರು ಶಾಸನಗಳು ದೊರೆತಿದ್ದು ಅವುಗಳೆಲ್ಲವೂ ಸಿಂಘಣ್ಣನ ಅನಂತರದ ಕಾಲದವುಗಳಾಗಿವೆ. ಕನ್ಹರ ಮಹಾದೇವ ಹಾಗೂ ರಾಮಚಂದ್ರ ಇವರ ಆಳ್ವಿಕೆಯ ಕಾಲಕ್ಕೆ ಸೇರಿದ ಶಾಸನಗಳು ಲಭ್ಯವಿರುವುದನ್ನು ಆಧಾರವಾಗಿಟ್ಟು ಕೊಂಡು ಪ್ರಸ್ತುತ ಪ್ರದೇಶದಲ್ಲಿಯೂ ಸೇವುಣರ ಆಳ್ವಿಕೆ ಇದ್ದಿತ್ತೆಂದು ಹೇಳಬಹುದು.

ವಿಜಯನಗರ ಅರಸರ ಆಳ್ವಿಕೆ

ಹೊಯ್ಸಳರ ಸಾಮ್ರಾಜ್ಯ ಪತನ ಹೊಂದಿದ ತರುವಾಯ ವಿಜಯನಗರ ಸಾಮ್ರಾಜ್ಯವು ಅಸ್ತಿತ್ವಕ್ಕೆ ಬಂದಿತು. ಇದನ್ನು ಮರೆತುಹೋದ ಹಾಗೂ ಮರೆಯಲಾಗದ ಸಾಮ್ರಾಜ್ಯವೆಂದು ಇತಿಹಾಸಕಾರರು ಬಣ್ಣಿಸಿದ್ದಾರೆ. ಹದಿನಾರನೇ ದಶಕದಲ್ಲಿ ಅಸ್ತಂಗತವಾದ ವಿಜಯಗರವು ಇಡೀ ಭಾರತದಲ್ಲಿ ಮಾತ್ರವಲ್ಲದೇ ಪ್ರಪಂಚದಲ್ಲಿಯೇ ಖ್ಯಾತಿ ಪಡೆದಿತ್ತು. ಕ್ರಿ.ಶ. ೧೩೩೬ರಿಂದ ೧೫೬೫ರವರೆಗೆ ಆಳ್ವಿಕೆ ನಡೆಸಿದ ವಿಜಯನಗರದ ಅರಸರು ಚಿತ್ರದುರ್ಗ ಜಿಲ್ಲೆಯನ್ನು ತಮ್ಮ ಸಾಮ್ರಾಜ್ಯದ ಭಾಗವನ್ನಾಗಿಸಿಕೊಂಡು ಆಳ್ವಿಕೆ ನಡೆಸಿದರು. ವಿಜಯನಗರದ ಅರಸರು ಅನೇಕ ವಿಭಾಗಗಳನ್ನು ಮಾಡಿಕೊಂಡು ಆಳ್ವಿಕೆ ನಡೆಸುತ್ತಿದ್ದರು. ಈ ವಿಭಾಗಗಳು ಮೊದಲನೆಯ ಬುಕ್ಕನ ಕಾಲದಿಂದಲೇ ಇದ್ದವು ಎಂಬುದಕ್ಕೆ ಹಲವು ಶಾಸನಗಳು ಆಧಾರಗಳಿವೆ. ವಿಜಯನಗರದ ಅರಸರು ಕ್ರಮಬದ್ಧವಾದ ಆಡಳಿತ ನಡೆಸಿರುವುದರ ಜೊತೆಗೆ ಕೃಷಿ ಅಭಿವೃದ್ಧಿಗೆ ದೇವಾಲಯಗಳ ಜೀರ್ಣೋದ್ಧಾರಕ್ಕೆ ದಾನದತ್ತಿಗಳನ್ನು ನೀಡಿದ ಬಗ್ಗೆ ಶಾಸನಗಳಿಂದ ತಿಳಿಯಬಹುದಾಗಿದೆ.

ಈ ರೀತಿಯಾಗಿ ವಿಜಯನಗರದ ಅರಸರು ಸಹ ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ನೇರ ಆಳ್ವಿಕೆ ನಡೆಸದಿದ್ದರೂ ಇವರ ಸಾಮಂತರಾಗಿ ಹರ್ತಿಕೋಟೆ ಪಾಳೇಗಾರರು ಆಳ್ವಿಕೆ ನಡೆಸಿದರು. ಹರ್ತಿಕೋಟೆ ಪಾಳೆಯಗಾರರು ಹೊರಡಿಸಿದ ಶಾಸನಗಳಲ್ಲಿ ಭಾಷೆಗೆ ತಪ್ಪುದರಾಯರ ಗಂಡ

ಎಂಬ ವಾಕ್ಯದಿಂದ ಇವರು ವಿಜಯನಗರದ ಅರಸ ಮತ್ತು ಸಂಗಮವಂಶದ ಮೊದಲನೇ ದೊರೆಯಾದ ಹರಿಹರನ ಬಿರುದಾಂಕಿತದಿಂದ ಹರತಿ ಪಾಳೇಗಾರರು ವಿಜಯನಗರ ಅರಸರ ಸಾಮಂತರಾಗಿದ್ದರು ಎಂದು ಹಿರಿಯೂರಿನ ಶಾಸನ[೪೦] ಸಂಖ್ಯೆ ೬ ಇದಕ್ಕೆ ಪುಷ್ಟಿ ನೀಡುತ್ತದೆ.

ಹರತಿ ಪಾಳೇಗಾರರ ಆಳ್ವಿಕೆ

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಹರ್ತಿಕೋಟೆ ಅಥವಾ ಹರತಿಯ ಪಾಳೇಗಾರರು ವಿಜಯನಗರ ಕಾಲದ ಹಾಗೂ ವಿಜಯನಗರೋತ್ತರ ಕಾಲದ ಕರ್ನಾಟಕದ ಇತಿಹಾಸದಲ್ಲಿ ರಾಜಕೀಯವಾಗಿಯೂ ಸಾಂಸ್ಕೃತಿಕವಾಗಿಯೂ ಪ್ರಮುಖ ಸ್ಥಾನವನ್ನು ಪಡೆದಿದ್ದಾರೆ. ವಿಜಯನಗರವು ರೂಪಿಸಿದ 'ಅಮರನಾಯಕ' ಅಥವಾ 'ಅಮರಮಾಗಣಿ' ಪದ್ಧತಿಯ ಚೌಕಟ್ಟಿನೊಳಗೆ ಬೆಳೆದುಬಂದ ಸ್ಥಳೀಯ ಆಡಳಿತವನ್ನು ಕೈಗೊಂಡ ಮನೆತನವಾಗಿದೆ. ಹರತಿನಾಯಕರ(ಪಾಳೇಗಾರರ) ಮನೆತನ. ಈ ಮನೆತನದ ಶಾಸನಗಳು ಶಕ ೧೨೩೫ (ಕ್ರಿ.ಶ. ೧೩೧೩)ರಿಂದ ಶಕ ೧೬೬೦(ಕ್ರಿ.ಶ. ೧೭೩೮)ರವರೆಗೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಹಿರಿಯೂರು, ಹೊಳಲ್ಕೆರೆಗಳಲ್ಲಿ ದೊರೆತಿದ್ದು ಈ ಮನೆತನದ ನಾಯಕರ ಬಗ್ಗೆ ರಾಜಕೀಯ, ಆಡಳಿತಾತ್ಮಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಾಧನೆಗಳಿಗೆ ಸಂಬಂಧಿಸಿದಂತೆ ಅಮೂಲ್ಯವಾದ ಮಾಹಿತಿಗಳನ್ನು ನೀಡುತ್ತವೆ.[೪೧]

ಹರತಿ ನಾಯಕರ ವಂಶದ ಮೂಲಪುರುಷನೆಸಿದ ತಿಪ್ಪರಾಜನು ವಾಸ್ತವವಾಗಿ ವಿಜಯಗರದ ಸಂಗಮವಂಶದ ಸ್ಥಾಪಕ ಸಹೋದರರಾದ ಹಕ್ಕಬುಕ್ಕರ ಸಮಕಾಲೀನನಾಗಿದ್ದು ಅವರ ಸೇನೆಯಲ್ಲಿ ದಳಪತಿಯಾಗಿದ್ದನು. ಹರಿಹರ(I)ನ ಆಳ್ವಿಕೆಯಲ್ಲಿ ಹೊಯ್ಸಳ ಸಾಮಂತಾಧಿಪತಿಗಳಲ್ಲಿ ಅತ್ಯಂತ ಬಲಿಷ್ಠನಾಗಿದ್ದ ನಿಡುಗಲ್ಲಿನ ದುರ್ಗಾಧಿಪತಿ ಚಿಕ್ಕಬೊಮ್ಮಯ್ಯ ನಾಯಕನನ್ನು ದ್ವಂದ್ವಯುದ್ಧದಲ್ಲಿ ಶಿರಚ್ಛೇದನ ಮಾಡಿದ್ದನ್ನು ಮೆಚ್ಚಿ ಹರಿಹರನು ತಿಪ್ಪರಾಜನಿಗೆ ಹೊಳಕಲ್ಲು ಬೊಂಮನಶಿರಶ್ಚೇದನಂ ಎಂಬ ಬಿರುದನ್ನು ನೀಡಿದನು.[೪೨] ಮುಂದೆ ಬುಕ್ಕ(I)ನ ಕಾಲದಲ್ಲಿ ಉಚ್ಚಂಗಿದುರ್ಗವನ್ನೂ, ಸೊಸೆವೂರನ್ನೂ ಗೆದ್ದು 'ಹೊಯ್ಸಳದಳ ವಿಭಾಡಂ' ಎಂಬ ಬಿರುದನ್ನು ಬುಕ್ಕರಾಯನಿಂದ ಪಡೆದನು. ಅಲ್ಲದೆ ವೇದಾವತಿ ತೀರಪ್ರದೇಶವನ್ನು ಉಂಬಳಿಯಾಗಿ ಪಡೆದು ಅಲ್ಲಿ ತನ್ನ ಪೂರ್ವಿಕರ ಹೆಸರಿನಲ್ಲಿ ಹರ್ತಿಕೋಟೆಯನ್ನು ನಿರ್ಮಿಸಿ ೧೩೪೦ ರಿಂದ ೧೩೫೫ರವರೆಗೆ ರಾಜ್ಯವಾಳಿದನು. ತಿಪ್ಪರಾಜನ ಮಗ ಕಾಮಯನಾಯಕ, ಕಿರಿಯ ಮಗ ಮಲ್ಲೆಯನಾಯಕನು ಪರಶುರಾಮಪುರದಲ್ಲಿ ನೆಲಸಿ ಅಲ್ಲಿನ ಗರುಡದೇವರನ್ನೂ, ಹನುಮಂತದೇವರನ್ನೂ ಪ್ರತಿಷ್ಠಾಪಿಸಿದ ನೆಂದು ಕ್ರಿ.ಶ. ೧೩೬೧ರ ಚಳ್ಳಕೆರೆ ೩೭ನೇ ಶಾಸನ ತಿಳಿಸುತ್ತದೆ. ಅಬ್ಬೆನಾಯಕನ ನಂತರ ಅವನು ಹಿರಿಯ ಮಗ ಪಾಲನಾಯಕನು ಹರತಿ(ಹರ್ತಿ), ಕೋಟೆಕೆರೆ ಕೋಟೆಗಳನ್ನಾಳಿದನು. ಅಬ್ಬೆನಾಯಕನ ಕಿರಿಯ ಮಕ್ಕಳಾದ ಕಾಮನಾಯಕ ಮತ್ತು ಬೊಂಮನಾಯಕರು ಐಮಂಗಲ ಮತ್ತು ಹರತಿ ಸಾರವಾಡದ ಸುತ್ತಲ ಪ್ರದೇಶದ ಆಡಳಿತವನ್ನು ನಡೆಸುತ್ತಿದ್ದರು. ಹರತಿ ನಾಯಕರ ಮನೆತನದ ಗುರುಗಳಾದ ಸರ್ವಾಡೇಶ್ವರರ ಹೆಸರಿನಲ್ಲಿ ತಾವು ಸ್ಥಾಪಿಸಿದ ರಾಜ್ಯಕ್ಕೆ ಕುಲದೇವತೆ ಹರತಿದೇವಿಯ ಹೆಸರನ್ನೂ ಸೇರಿಸಿ ಹರತಿ ಸಾರವಾಡವೆಂದು ಹೆಸರಿಟ್ಟರು.

ಪಾಲನಾಯಕನ ಮೊಮ್ಮಗ ಎರಂಬಾಪೆ ನಾಯಕನು ತನ್ನ ಹೆಸರಿನಲ್ಲಿ ಎರಬಾಪೆನಹಳ್ಳಿ ಅಥವಾ ಇಂದಿನ ಯರಬಳ್ಳಿಯನ್ನು ನಿರ್ಮಿಸಿದನು. ಚಿಕ್ಕತಿಪ್ಪನಾಯಕನ ಮಗ ಹರ್ತೆಪ್ಪನಾಯಕನು ಚಿತ್ರದುರ್ಗದ ಮದಕರಿನಾಯಕನ ಮಗಳನ್ನು ವಿವಾಹವಾಗಿ ಕಸ್ತೂರಿರಂಗಪ್ಪನಾಯಕನ ಕೋಟೆಯನ್ನು ಬಳುವಳಿಯಾಗಿ ಪಡೆದನು. ನಂತರ ಕ್ರಿ.ಶ. ೧೪೬೦ರಲ್ಲಿ ಈ ಕೋಟೆಯನ್ನು ನವೀಕರಿಸಿ ತನ್ನ ಹೆಸರಿನಲ್ಲಿ ಹರ್ತಿಕೋಟೆಯೆಂದು ಕರೆದನು.[೪೩] ಇಂದೂ ಆ ಹೆಸರೇ ಮುಂದುವರೆದಿದೆ.

ಅಬ್ಬೆನಾಯಕನ ಎರಡನೇ ಮಗ ಐಮಂಗಲವನ್ನಾಳುತ್ತಿದ್ದ ಕಾಮನಾಯಕನ ವಂಶಜರು ೧೩೮೨ರ ನಂತರ ಪುನಃ ಪ್ರಬಲರಾದರು. ರಂಗಪ್ಪನಾಯಕ ಇವನ ತಮ್ಮ ಚಿಕ್ಕರಂಗಪ್ಪನಾಯಕನು ಹರತಿ ಸ್ಥಳದಲ್ಲಿ ಆಳುತ್ತಿದ್ದು ತನ್ನ ಮನೆತನದ ಗುರುಗಳಾದ ಕಾಳಾಮುಖ ಪಂಥದ ಹೊಟ್ಟೆಯೀಶ್ವರಯ್ಯನವರ ಸಿಂಹಾಸನ ಮಠಕ್ಕೆ ಹೆಮಡಿಹಾಳು(ಹೇಮದಳ) ಎಂಬ ಗ್ರಾಮವನ್ನು ದಾನವಾಗಿ ನೀಡಿದನೆಂದು ಹಿರಿಯೂರಿನ ಶಾಸನ ಸಂಖ್ಯೆ ೬ ಉಲ್ಲೇಖಿಸುತ್ತದೆ.[೪೪]

ಹಿರಿಯೂರು ಬುಕ್ಕಾಪಟ್ಟಣಗಳಲ್ಲಿಯೂ ಹರತಿಯ ಪಾಳೇಗಾರರು ಆಳಿದರು. ಈ ಮನೆತನದ ಕೆಂಚಪ್ಪನಾಯಕ ಮತ್ತು ಇಮ್ಮಡಿ ಕೆಂಚಪ್ಪನಾಯಕರು ಚಿತ್ರದುರ್ಗದ ಇತಿಹಾಸದಲ್ಲಿ ಶಾಸನೋಕ್ತರಾಗಿದ್ದಾರೆ. ೧೬೮೯ರಲ್ಲಿ ಚಿತ್ರದುರ್ಗದ ಇಮ್ಮಡಿ ಮದಕರಿನಾಯಕನು ಹಿರಿಯೂರನ್ನು ಮುತ್ತಿ ವಶಪಡಿಸಿಕೊಂಡನೆಂದು ಹೇಳಲಾಗಿದೆ. ಹೀಗೆ ಹರತಿ ವಂಶದವರು ಮೊದಲು ವಿಜಯನಗರ ಕಾಲದಲ್ಲಿ ಸೇನಾಧಿಕಾರಿಗಳಾಗಿ, ಉಂಬಳಿದಾರರಾಗಿ, ಪಾಳೇಗಾರರಾಗಿ, ಮಹಾನಾಯಕಾಚಾರ್ಯ ರಾಗಿ ನಂತರ ವಿಜಯನಗರದ ಪತನವಾದ ಮೇಲೆ ಸ್ವತಂತ್ರವಾಗಿ ಪಾಳೇಪಟ್ಟುಗಳನ್ನು ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯ ಹರತಿ, ಕೋಟೆಕೆರೆ, ಬುಕ್ಕಾಪಟ್ಟಣ, ಪರಶುರಾಮಪುರ, ದೊಡ್ಡೇರಿ, ಐಮಂಗಲ, ತಳಕು, ಹೊಸಕೋಟೆ, ಮಡಕಶಿರ, ರತ್ನಿಗಿರಿ, ನಿಡುಗಲ್ಲು, ಮಿಡಿಗೇಸಿ ಮುಂತಾದೆಡೆ ಸ್ಥಾಪಿಸಿ ಕ್ರಿ.ಶ. ೧೩೪೦ರಿಂದ ಕ್ರಿ.ಶ. ೧೮೦೦ರವರೆಗೆ ಸುಮಾರು ೪೬೦ ವರ್ಷಗಳ ಕಾಲ ಯಶಸ್ವಿ ಆಳ್ವಿಕೆ ನಡೆಸಿದರು.[೪೫]

ಚಿತ್ರದುರ್ಗ ಪಾಳೆಯಗಾರರ ಆಳ್ವಿಕೆ

ಮಧ್ಯಯುಗೀನ ಭಾರತದ ಇತಿಹಾಸದಲ್ಲಿ ಅತ್ಯಂತ ಉನ್ನತವಾದ ಕಾಲಘಟ್ಟವೆಂದರೆ ವಿಜಯನಗರ ಸಾಮ್ರಾಜ್ಯದ ಕಾಲಾವಧಿ. ಕ್ರಿ.ಶ. ೧೪ನೇ ಶತಮಾನದ ಪೂರ್ವಾರ್ಧದಲ್ಲಿ ಏಳಿಗೆಗೆ ಬಂದ ವಿಜಯನಗರ ಅರಸರು ಬಹು ವಿಶಾಲವಾದ ಸಾಮ್ರಾಜ್ಯವನ್ನು ನಿರ್ಮಿಸಿ ಭಾರತದ ಆಚೆ ಕೀರ್ತಿ ಪತಾಕೆಯನ್ನು ಹಾರಿಸಿದರು. ಕ್ರಿ.ಶ. ೧೫೬೫ರಲ್ಲಿ ನಡೆದಂತಹ ರಕ್ಕಸತಂಗಡಿ ಯುದ್ಧದ ನಂತರ ಸಾಮ್ರಾಜ್ಯವು ನಾಶಗೊಂಡ ಸಂದರ್ಭದಲ್ಲಿ ಹಲವಾರು ಅಧೀನ ಪಾಳೇಗಾರರು ಸ್ವತಂತ್ರ ಹೊಂದಿದರು. ವಿಜಯನಗರ ಪತನದ ನಂತರ ಚಿತ್ರದುರ್ಗ ಪಾಳೆಗಾರರು ಸ್ವತಂತ್ರವಾಗಿ ಆಳ್ವಿಕೆ ಮಾಡಲು ಪ್ರಾರಂಭಿಸಿದರು.

ಚಿತ್ರದುರ್ಗ ಜಿಲ್ಲೆಯ ಸುತ್ತಮುತ್ತಲ ಪ್ರದೇಶಗಳನ್ನೊಳಗೊಂಡಂತೆ ಈ ಭಾಗದಲ್ಲಿ ಸುಮಾರು ಏಳು ಪಾಳೇಗಾರರ ಮನೆತನಗಳು ಆಳ್ವಿಕೆ ನಡೆಸಿವೆ. ಅಂದರೆ ಹರ್ತಿಕೋಟೆ, ಬೇಲೂರು, ಚಿತ್ರದುರ್ಗ, ಸಂತೆಬೆನ್ನೂರು, ನಾಯಕನಹಟ್ಟಿ, ಮತ್ತಿನಾಡು(ಮತ್ತೋಡು). ಅವರಲ್ಲಿ ಚಿತ್ರದುರ್ಗ

ಪಾಳೇಗಾರರು ಪ್ರಮುಖರೆನಿಸಿದ್ದಾರೆ. ಇವರುಗಳ ಬಗ್ಗೆ ಅನೇಕ ಶಿಲಾಶಾಸನ, ತಾಮ್ರಪಟ ಶಾಸನಗಳು ಇತ್ಯಾದಿ ಆಧಾರಗಳು ದೊರೆತಿವೆ. ಇವರುಗಳು ನಿರ್ಮಿಸಿದ ಮತ್ತು ಜೀರ್ಣೋದ್ಧಾರ ಗೊಳಿಸಿದ ದೇವಾಲಯಗಳು ಕೋಟೆಕೊತ್ತಲಗಳು, ಕೆರೆ ಕಾಲುವೆಗಳು ಹಾಗೂ ದತ್ತಿಬಿಟ್ಟ ವಿವರಗಳನ್ನು ತಿಳಿಯಬಹುದು. ಸುತ್ತಮುತ್ತಲಿನ ಪ್ರದೇಶದ ಐಮಂಗಲವು ಪಾಳೆಗಾರರ ಆಳ್ವಿಕೆಯ ಪ್ರಮುಖ ಕೇಂದ್ರವಾಗಿದ್ದಿರಬಹುದು. ಈ ಪ್ರದೇಶದಲ್ಲಿ ಇವರುಗಳು ಕಟ್ಟಿ ಜೀರ್ಣೋದ್ಧಾರಗೊಳಿಸಿದ ಐತಿಹಾಸಿಕ ಕುರುಹುಗಳನ್ನು ಇಂದಿಗೂ ಕಾಣಬಹುದು. ಚಿತ್ರದುರ್ಗದ ಪಾಳೇಗಾರರು ಮೂಲತಃ ಬೇಡ ಜನಾಂಗದವರಾಗಿದ್ದು ವಾಲ್ಮೀಕಿ ಗೋತ್ರದ ಕಾಮಗೇತಿ ವಂಶಸ್ಥರು. ಇವರು ಆಂಧ್ರಪ್ರದೇಶದ ತಿರುಪತಿ ಬಳಿಯ ಜಡೆಕಲ್ ದುರ್ಗದಿಂದ ವಲಸೆ ಬಂದರೆನ್ನುವುದು ಪ್ರತೀತಿ. ಚಿತ್ರದುರ್ಗವನ್ನು ತಮ್ಮ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡು ಸುಮಾರು ೨೧೦ ವರ್ಷಗಳಿಗೂ ಹೆಚ್ಚು ಕಾಲ ಆಳ್ವಿಕೆ ನಡೆಸಿದ್ದಾರೆ.[೪೭] ಚಿತ್ರದುರ್ಗ ಪಾಳೆಯಪಟ್ಟನ್ನು ಕಟ್ಟಿದ ಕೀರ್ತಿ ತಿಮ್ಮಣ್ಣ ನಾಯಕನಿಗೆ ಸಲ್ಲುತ್ತದೆ. ಈತನ ಆಡಳಿತದ ಕಾಲದಿಂದ ನಮಗೆ ಶಾಸನಗಳು ದೊರೆಯುತ್ತವೆ. ಕ್ರಿ.ಶ. ೧೫೬೮ರ ಹೊಳಲ್ಕೆರೆ ಶಾಸನವು ವೀರಪ್ರತಾಪ ಸದಾಶಿವರಾಯ ಮಹಾರಾಯನಿಗೆ ಸಂಬಂಧಿಸಿದ್ದಾಗಿದೆ. ಅಳಿಯ ರಾಮರಾಯನ ಆಳ್ವಿಕೆಯ ಕಾಲದಲ್ಲಿ ತಿರುಮಲರಾಯನು ಹೊಳಲ್ಕೆರೆ ಸೀಮೆಯನ್ನು ಕಾಮಗೇತಿ ಕಸ್ತೂರಿ ಮದಕರಿನಾಯಕನಿಗೆ ನೀಡಿದನು ಎಂಬ ವಿವರ ನೀಡುತ್ತದೆ. ಹೀಗೆ ವಿಜಯನಗರ ಅರಸರಿಂದ ಅಮರ ಮಾಗಣಿಯಾಗಿ ಪಡೆದ ಪಾಳೇಗಾರರು ನಂತರ ಹೊಳಲ್ಕೆರೆ ಸೀಮೆಯಿಂದ ಹಿರಿಯೂರ ಸೀಮೆಯ ಅಧಿಕಾರಿಯಾಗಿ, ಅಲ್ಲಿಂದ ಚಿತ್ರದುರ್ಗ ಸೀಮೆಯ ಅಧಿಕಾರಿಯಾಗಿ ನೇಮಕಗೊಂಡು ನಂತರ ಸ್ವತಂತ್ರವಾಗಿ ಆಳ್ವಿಕೆ ನಡೆಸಿದ್ದನ್ನು ನೋಡುತ್ತೇವೆ.

ಮತ್ತಿ ತಿಮ್ಮಣ್ಣ ನಾಯಕನು ಹೊಳಲ್ಕೆರೆ ಸೀಮೆಯಿಂದ ಹಿರಿಯೂರು ಸೀಮೆಯ ಅಧಿಕಾರಿಯಾಗಿ ನೇಮಿಸಲ್ಪಟ್ಟ ಆನಂತರ ಇವರಿಗೆ ಚಿತ್ರದುರ್ಗದ ಆಧಿಪತ್ಯ ದೊರೆಯಿತು. ಈತನು ಶೂರನೂ, ಸಾಹಸಿಯೂ ಆಗಿದ್ದನೆಂದು ಕೆಲವು ಘಟನೆಗಳು ಸಾಕ್ಷಿಯಾಗಿವೆ. ಚಿತ್ರದುರ್ಗವನ್ನು ಮುತ್ತಿದ ಸಾಳುವ ನರಸಿಂಹರಾಯನ ಪಾಳೆಯವನ್ನು ನುಗ್ಗಿ ಅಲ್ಲಿದ್ದ ಖಾಸಾ ಕುದುರೆಯನ್ನು ಬಿಚ್ಚಿ ತಂದಿದ್ದು, ಈ ಘಟನೆಯೊಂದಿಗೆ ಸಂಧಿ ಮಾಡಿಕೊಂಡು ಕಲ್ಬುರ್ಗಿ ಕೋಟೆಯನ್ನು ಗೆದ್ದಿದ್ದು ಇತ್ಯಾದಿ ಘಟನೆಗಳು ಸಾಕ್ಷಿ ಎನಿಸಿವೆ. ಕಲ್ಬುರ್ಗಿ ಕೋಟೆಯನ್ನು ನಿಂದಿಸಿದ್ದರಿಂದ ಈತನಿಗೆ "ಹಗಲು ಕಗ್ಗೊಲೆಯ ಮಾನ್ಯ" ಎಂಬ ಬಿರುದು ಬಂದಿತು. ತಿಮ್ಮಣ್ಣ ನಾಯಕ ಸಾಹಸಿಯಾಗಿದ್ದಂತೆ ಸ್ವಾಭಿಮಾನಿಯೂ ಸಹ ಆಗಿದ್ದನು. ಈತನನ್ನು ವಿಜಯನಗರದ ಅರಸರು ಬರಮಾಡಿಕೊಂಡು ಸೆರಮನೆಯಲ್ಲಿಟ್ಟರು. ತಿಮ್ಮಣ್ಣನಾಯಕ ಅಲ್ಲಿಯೇ ಮರಣ ಹೊಂದಿದನು. ಈತನ ಆಳ್ವಿಕೆಯ ಸಂದರ್ಭದಲ್ಲಿ ಚಿತ್ರದುರ್ಗ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೋಟೆಗಳನ್ನು ಬಲಪಡಿಸಿದ್ದನು. ಈತನ ತರುವಾಯ ಇನ್ನೂ ಹಲವಾರು ನಾಯಕರುಗಳು ಚಿತ್ರದುರ್ಗ ಪಾಳೆಯ ಆಡಳಿತ ನಡೆಸಿದರು ಎಂದು ಹೇಳಬಹುದು. ಅವರೆಂದರೆ ಓಬಣ್ಣನಾಯಕ, ಕಸ್ತೂರಿ ರಂಗಪ್ಪ ನಾಯಕ, ಭರಮಣ್ಣನಾಯಕ, ೨ನೇ ಕಸ್ತೂರಿ ರಂಗಪ್ಪ ನಾಯಕ, ಹಿರೇಮದಕರಿ ನಾಯಕ ಈತನು ಐಮಂಗಲ ಕೋಟೆಯನ್ನು ನಿರ್ಮಿಸಿ ಈ ಪ್ರದೇಶದ ಸುತ್ತಮುತ್ತಲಿನ

ಆಡಳಿತ ನಡೆಸಿದ ವಿವರ ತಿಳಿಯುತ್ತದೆ. ಈತನ ತರುವಾಯ ಬಿಚ್ಚುಗತ್ತಿ ಭರಮಣ್ಣನಾಯಕ. ಓಬಣ್ಣನಾಯಕ ಈತನು 'ಮದಕರಿನಾಯಕ' ಎಂಬ ಬಿರುದನ್ನು ಧರಿಸಿ ಕ್ರಿ.ಶ. ೧೬೭೨ರವರೆಗೆ ಆಳ್ವಿಕೆ ನಡೆಸಿದನು. ಈತನ ಆಡಳಿತಾವಧಿಯಲ್ಲಿ ಚಿತ್ರದುರ್ಗವು ಸ್ವತಂತ್ರ ರಾಜ್ಯವಾಯಿತು. ತದನತಂರ ಹೈದರನಿಗೆ ಮದಕರಿನಾಯಕನು ಸುಲಭವಾಗಿ ಸೆರೆಸಿಕ್ಕನು. ಹೀಗೆ ಮದಕರಿನಾಯಕನನ್ನು ಸೆರೆ ಹಿಡಿಯುವುದರ ಮೂಲಕ ಹೈದರಾಲಿಯು ಚಿತ್ರದುರ್ಗ ಸಂಸ್ಥಾನವನ್ನು ಮೈಸೂರು ಸಂಸ್ಥಾನದಲ್ಲಿ ವಿಲೀನಗೊಳಿಸಿಕೊಂಡನು.[೬]

ಪ್ರಸ್ತುತ ಐಮಂಗಲ ಪರಿಸರದ ಸುತ್ತಮುತ್ತಲಿನ ಪ್ರದೇಶಗಳಾದ ಹರ್ತಿಕೋಟೆ, ಐಮಂಗಲ, ಎಂ.ಡಿ. ಕೋಟೆ, ತವಂದಿ, ವದ್ದಿಕೆರೆ, ನೋಣಬಿಪಟ್ಟಣ, ಪಾಳೇಗಾರರ ಕೇಂದ್ರಗಳಾಗಿಯೂ ಆಡಳಿತ ಗ್ರಾಮಗಳಾಗಿಯೂ ನಿರ್ಮಿಸಿದ ಕೋಟೆಕೊತ್ತಲ, ವೀರಮಾಸ್ತಿಗಲ್ಲು, ದೇವಾಲಯಗಳು ಇಂದಿಗೂ ಕಂಡುಬರುತ್ತವೆ. ಐಮಂಗಲ ಇತಿಹಾಸವು ಮೌರ್ಯರ ಕಾಲದಿಂದ ಪ್ರಾರಂಭವಾಗಿ ಚಿತ್ರದುರ್ಗ ಪಾಳೆಗಾರರ ಆಳ್ವಿಕೆವರೆಗೂ, ನಿರಂತರವಾಗಿ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಚಟುವಟಿಕೆಗಳಿಂದ ಕೂಡಿ ಬೆಳೆದುಬಂದಿವೆ. ಪಾಳೇಗಾರರ ನಂತರವು ಈ ಪ್ರದೇಶ ಮೈಸೂರು ಸಂಸ್ಥಾನದಲ್ಲಿ ಮುಂದುವರೆದಿದ್ದು ತನ್ನದೇ ಆದ ಸಾಂಸ್ಕೃತಿಕ ಕುರುಹುಗಳನ್ನು ಉಳಿಸಿಕೊಂಡು ಬಂದಿದೆ. ಈ ಭಾಗದ ಇತಿಹಾಸವನ್ನು ವಾಸ್ತವವಾಗಿ ಅರಿಯುವುದಾದರೆ ಮೌರ್ಯರ ಪೂರ್ವ ಕಾಲದಿಂದಲೇ ಅಂದರೆ ಹಳೆ ಶಿಲಾಯುಗ ಕಾಲದಿಂದ ಹಿಡಿದು ಮಾನವನ ಜೀವನದ ವಿವಿಧ ಹಂತಗಳ ಮೆಟ್ಟಿಲುಗಳನ್ನು ಏರುತ್ತ ಬಂದಿದೆ. ಇದಕ್ಕೆ ಪೂರಕವಾದಂತಹ ಶಿಲೋಪಕರಣಗಳು, ಮಡಿಕೆ ಕುಡಿಕೆಗಳು, ಸಮಾಧಿ ಸ್ಥಳಗಳು ಕಂಡುಬರುತ್ತವೆ. ಮೌರ್ಯರ ನಂತರ ಶಾತವಾಹನರು, ಕದಂಬರು, ಗಂಗ, ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು ಹಾಗೂ ಪಾಳೇಗಾರರು ಸಹ ಪ್ರಸ್ತುತ ಪ್ರದೇಶವನ್ನು ಮತ್ತು ಸುತ್ತಮುತ್ತಲಿನ ಪ್ರದೇಶವನ್ನು ಎಲ್ಲಾ ದೃಷ್ಟಿಕೋನದಿಂದ ಬೆಳೆಸಿ ಆಳ್ವಿಕೆ ನಡೆಸಿದರು ಎಂದು ಹೇಳಬಹುದು. ಇದಕ್ಕೆ ಆಧಾರಗಳು ಆಯಾಕಾಲದ ಶಾಸನ, ದೇವಾಲಯ, ಶಿಲ್ಪ, ಸ್ಮಾರಕಶಿಲ್ಪ, ಕೋಟೆಕೊತ್ತಲ ಹಾಗೂ ಇತ್ಯಾದಿ ಅವಶೇಷಗಳು ಇಂದಿಗೂ ಉಳಿದುಕೊಂಡು ಬಂದಿವೆ.[೮] ಕೆಲವು ನಶಿಸಿ ಹೋಗಿ ಅಳಿವಿನ ಅಂಚಿನಲ್ಲಿವೆ.

ಅಡಿಟಿಪ್ಪಣಿಗಳು

೧. ನಂಜಣ್ಣನವರ ಎಸ್.ಎಸ್., ಸಜ್ಜನರ ಎಮ್.ಜಿ. ೨೦೦೨, **ಭೂಗೋಳಶಾಸ್ತ್ರ ಬೋಧನೆ,** ಪು. ೧.

೨. **ಸಣ್ಣ ನೀರಾವರಿ ಇಲಾಖೆ,** ೨೦೧೩, ಚಿತ್ರದುರ್ಗ.

೩. **ಕೃಷಿ ಇಲಾಖೆ,** ೨೦೧೩, ಹಿರಿಯೂರು.

೪. ಗಿರಿಜಾ ಟಿ., **ಚಿತ್ರದುರ್ಗ ಜಿಲ್ಲಾ ದರ್ಶಿನಿ,** ಪು. ೩೩೪.

೫. **ನಾಡಕಛೇರಿಯ ಅಂಕಿಅಂಶಗಳು,** ೨೦೧೩, ಐಮಂಗಲ.

೬. ತಿಪ್ಪಣ್ಣ ಮರಿಕುಂಟೆ ಜಿ., **ಹರ್ತಿಕೋಟೆಯ ಸ್ಮಾರಕಗಳು, ಹರತಿಸಿರಿ,** ಲಕ್ಷ್ಮಣ್‌ತೆಲಗಾವಿ(ಸಂ). ಪು. ೫೬೧.

೭. **ತಾಲೂಕು ಕಛೇರಿಯ ಅಂಕಿಅಂಶಗಳು**, ೨೦೧೩, ಹಿರಿಯೂರು.

೮. ಪಪ್ಪು ಆರ್.ಎಸ್., **ಪ್ರಾಚೀನತಮ ಮಾನವ ಸಂಸ್ಕೃತಿಗಳು, ವಿಕಸನದ ಹಂತಗಳು,** ಕರ್ನಾಟಕ ಚರಿತ್ರೆ ಸಂಪುಟ-೧, ೧೯೯೭, ಪು. ೯೫.

೯. ಅದೇ, ಪು. ೯೭.

೧೦. ಅದೇ, ಪು. ೯೮.

೧೧. ಗೋಪಾಲ್ ಆರ್., **ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,** ಪು. ೧೧.

೧೨. ಲಕ್ಷ್ಮಣ್ ತೆಲಗಾವಿ, **ಮೌರ್ಯ ಮತ್ತು ಶಾತವಾಹನಯುಗ,** ಪು. ೨೦೭.

೧೩. ರಾಮದಾಸರೆಡ್ಡಿ ಎಸ್.ಜಿ., **ಕ್ಷೇತ್ರಕಾರ್ಯ (ಇತಿಹಾಸ ಮತ್ತು ಪುರಾತತ್ವ ಶೋಧಕಾರ್ಯ),** ೨೦೧೧, ಪು. ೬೭.

೧೪. ಅದೇ. ಪು. ೬೭.

೧೫. ಅದೇ. ಪು. ೬೮.

೧೬. ಅದೇ. ಪು. ೬೯.

೧೭. ಅದೇ. ಪು. ೭೦.

೧೮. ಸುಂದರ ಅ., **ಕರ್ನಾಟಕ ಚರಿತ್ರೆ ಸಂಪುಟ-೧,** ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಪು. ೨೮೦.

೧೯. **ಎಪಿಗ್ರಪಿಯಾ ಕರ್ನಾಟಿಕ ಸಂಪುಟ-೧೧,** ಹಿರಿಯೂರು ತಾಲೂಕು, ಪು. ೨೮೮-೨೯೪.

೨೦. ಸುಂದರ ಅ., **ಕರ್ನಾಟಕ ಚರಿತ್ರೆ ಸಂಪುಟ-೧,** ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಪು. ೨೮೬.

೨೧. ಚಂದ್ರವಳ್ಳಿ, **ಪೂರ್ವೋಕ್ತ,** ಪು. ೨.

೨೨. Sri Sathyan B.N., **Chitradurga District Gazetteer,** 1967.

೨೩. **ಕರ್ನಾಟಕದ ಪರಂಪರೆ, ಭಾಗ-೧** (ಚಾರಿತ್ರಿಕ ಯುಗ) ಪು. ೧೧೭.

೨೪. Krishna M.H., **Excavation at Chandravalli and Bramhagiri,** Page 271.

೨೫. Ibid Page 277.

೨೬. Ibid Page 278.

೨೭. Ibid Page 280.

೨೮. **ಎಪಿಗ್ರಫಿಯಾ ಕರ್ನಾಟಿಕ ಸಂಪುಟ-೧೧,** ಸಂಖ್ಯೆ ೩೯, ಹಿರಿಯೂರು, ಪುಟ ೩೦೨.

೨೯. **ಎಪಿಗ್ರಫಿಯಾ ಕರ್ನಾಟಿಕ ಸಂಪುಟ-೧೧,** ಚಿತ್ರದುರ್ಗ, ಪು. ೧೦.

೩೦. **ಕರ್ನಾಟಕದ ಪರಂಪರೆ, ಭಾಗ-೧** (ಚಾರಿತ್ರಿಕ ಯುಗ) ಪುಟ - ೧೨೭.

೩೧. ಬಸವರಾಜು ಕೆ.ಆರ್., (ಸಂಪಾದನ ಗ್ರಂಥ) **ನೊಳಂಬ ಇತಿಹಾಸ ದರ್ಶನ,** ಪುಟ - ೧೮.

೩೨. ಅದೇ. ಪು. ೧೯.

೩೩. ಅದೇ, ಪು. ೧೯.

೩೪. ಅದೇ, ಪು. ೨೦.

೩೫. **ಎಪಿಗ್ರಫಿಯಾ ಕರ್ನಾಟಿಕ ಸಂಪುಟ-೧೧,** ಸಂಖ್ಯೆ-೧, ಹಿರಿಯೂರು, ಪು. ೨೮೮.

೩೬. ಶ್ರೀನಿವಾಸ ಎಂ.ವಿ., ಲಕ್ಷ್ಮಣ್ ತೆಲಗಾವಿ(ಸಂ), **ಚಂದ್ರವಳ್ಳಿ,** ಪು. ೩೫.

೩೭. **ಎಪಿಗ್ರಫಿಯಾ ಕರ್ನಾಟಿಕ ಸಂಪುಟ-೧೧,** ಚಿತ್ರದುರ್ಗ, ಪು. ೧೬.

೩೮. ಅದೇ. ಹಿರಿಯೂರು, ಪು. ೭೦.

೩೯. ಶ್ರೀನಿವಾಸ ಎಂ.ವಿ., ಲಕ್ಷ್ಮಣ್ ತೆಲಗಾವಿ(ಸಂ), **ಚಂದ್ರವಳ್ಳಿ,** ಪು. ೩೫.

೪೦. **ಎ.ಕ. ಸಂ. ೧೧,** ಹಿರಿಯೂರು-೬, ಪು. ೨೯೦.

೪೧. **ಎ.ಕ. ಸಂ. ೧೧,** ಹಿರಿಯೂರು-೬, ಪು. ೨೮೮-೨೯೪.

೪೨. ಚಿತ್ರಲಿಂಗಯ್ಯ ಎಂ.ವಿ., ಹರತಿ ಪಾಳೆಯಗಾರರ ಮೂಲ ವಂಶಾವಳಿ : ಒಂದು ವ್ಯಾಸಂಗ, **ಹರತಿಸಿರಿ,** ಲಕ್ಷ್ಮಣ್ ತೆಲಗಾವಿ(ಸಂ), ಪು. ೨೮೨.

೪೩. ಅದೇ. ಪು. ೩೦೦.

೪೪. **ಎ.ಕ. ಸಂ. ೧೧,** ಹಿರಿಯೂರು-೬, ಪು. ೨೯೦.

೪೫. ಚಿತ್ರಲಿಂಗಯ್ಯ ಎಂ.ವಿ., **ಹರತಿ ಪಾಳೆಯಗಾರರ ಮೂಲ ವಂಶಾವಳಿ: ಒಂದು ವ್ಯಾಸಂಗ, ಹರತಿಸಿರಿ,** ಲಕ್ಷ್ಮಣ್ ತೆಲಗಾವಿ(ಸಂ), ಪು. ೩೧೬.

೪೬. ಸುರೇಶ್ ಬಿ., **ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳ ದೇವಾಲಯಗಳು,** ಪು. ೩೧.

೪೭. **ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್.**

೪೮. ಗೋಪಾಲ್ ಆರ್., **ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,** ೨೦೦೫, ಪು. ೨೨೧.

□□□

ಅಧ್ಯಾಯ : ಮೂರು

ಸ್ಥಳನಾಮ ಮತ್ತು ಸ್ಥಳಪುರಾಣ

ಅಧ್ಯಾಯ : ಮೂರು

ಸ್ಥಳನಾಮ ಮತ್ತು ಸ್ಥಳಪುರಾಣ

೩.೧. ಸ್ಥಳನಾಮ ಅಧ್ಯಯನ

ಸ್ಥಳನಾಮಗಳು ಜೀವಂತ ಪಳಿಯುಳಿಕೆಗಳು; ಸ್ಥಳನಾಮಗಳು ಮೇಲ್ನೋಟಕ್ಕೆ ಸಾಮಾನ್ಯ ಗುರುತಿನ ಚಿಹ್ನೆಗಳಾಗಿ ಕಂಡರೂ ಭಾಷಾಶಾಸ್ತ್ರಜ್ಞರೋ, ಇತಿಹಾಸಕಾರರೋ, ಪುರಾತತ್ವಶಾಸ್ತ್ರಜ್ಞರೋ ಅವುಗಳನ್ನು ತನ್ನ ಶಾಸ್ತ್ರಕ್ಕನುಗುಣವಾಗಿ ಒರೆಹಚ್ಚಿ ನೋಡಿದಾಗ ಅವುಗಳಿಂದ ಅತ್ಯಂತ ಕುತೂಹಲಕಾರಿ ಅಂಶಗಳು ಹೊರಬರುತ್ತವೆ. ನಮ್ಮ ಹಿಂದಿನ ತಲೆಮಾರಿನವರ ಭಾಷೆ, ಜೀವನವಿಧಾನ, ದೃಷ್ಟಿವೈಶಾಲ್ಯ, ಭೌಗೋಳಿಕ ಹಾಗೂ ಚಾರಿತ್ರಿಕ ಅಂಶಗಳ ಮೇಲೆ ಸ್ಥಳನಾಮ ಅಧ್ಯಯನವು ಹೊಸಬೆಳಕನ್ನು ಚೆಲ್ಲುತ್ತದೆ. ಸ್ಥಳನಾಮಗಳಲ್ಲಿ ಪರಸ್ಪರ ಹೋಲಿಕೆ ಇಲ್ಲವೆ ಸಾಮ್ಯವು ಕಂಡುಬಂದರೆ ಅಂತಹ ಸ್ಥಳನಾಮಗಳು ಪ್ರಪಂಚದ ಯಾವ ಭಾಗದಲ್ಲೇ ಇರಲಿ ಅಲ್ಲಿ ಒಂದೇ ರೀತಿಯ ಅಥವಾ ಹೋಲಿಕೆಯುಳ್ಳ ನಾಗರಿಕತೆಯ ಕುರುಹುಗಳನ್ನು ಕಾಣಲು ಸಾಧ್ಯವಿದೆಯೆಂದು ಸ್ಥಳನಾಮಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ.[೧]

ಮಾನವರ ನಾಗರಿಕತೆಗಳಲ್ಲಿ ಭಾಷೆಗೆ ವಿಶಿಷ್ಟವಾದ ಸ್ಥಾನವಿದೆ. ಮಾನವ ನಿರ್ಮಿತ ಕೋಟೆ ಕೊತ್ತಲ, ದೇವಾಲಯ, ಕಲಾಶಿಲ್ಪ, ಅಮೂಲ್ಯ ಆಭರಣ, ದಾಖಲೆಗಳು ಪ್ರಕೃತಿಯ ವಿಕೋಪಕ್ಕೆ ತುತ್ತಾಗಿ ಹೇಳಹೆಸರಿಲ್ಲದೆ ಹೋಗಬಹುದು. ಆದರೆ ನಾವು ಆಡುವ ಭಾಷೆಗಳು ನಮ್ಮ ಜೊತೆಯಲ್ಲಿಯೇ ಜೀವಂತವಾಗಿ ಉಳಿದುಕೊಂಡು ಬರುತ್ತವೆ. ಹೆಚ್ಚೆಂದರೆ ಪರಿಸರಕ್ಕೆ ಹೊಂದಿಕೊಂಡು ಅದರಲ್ಲಿ ಅಲ್ಪಸ್ವಲ್ಪ ಬದಲಾವಣೆಗಳು ಉಂಟಾಗುವುದಲ್ಲದೆ ಆಮೂಲಾಗ್ರವಾಗಿ ನಶಿಸಿಹೋಗುವ ಸಾಧ್ಯತೆಗಳಂತೂ ತೀರಾ ಕಡಿಮೆ. ಇಂತಹ ಭಾಷೆಯನ್ನು ಜೀವಂತವಾಗಿ ನಾವು ಸ್ಥಳನಾಮಗಳಲ್ಲಿ ಕಾಣಲು ದೊರೆಯುತ್ತವೆ.[೨] ಅಲ್ಲದೇ ಶಿಲಾಶಾಸನ, ಲಿಖಿತ ದಾಖಲೆ ಹಾಗೂ ವಾಸ್ತುಶಿಲ್ಪಗಳಲ್ಲಿ ದೊರೆಯದಿರುವ ಹಲವಾರು ಕುತೂಹಲಕಾರಿ ಅಂಶಗಳು ಸ್ಥಳನಾಮಗಳಲ್ಲಿ ದೊರೆಯುತ್ತವೆ ಆದುದರಿಂದ ಸ್ಥಳನಾಮಗಳು ಇತಿಹಾಸಕಾರರಿಗೆ ಜೀವಂತವಾದ ಪಳಯುಳಿಕೆಗಳಾಗಿವೆಯೆಂದು ಹೇಳುವ ಸ್ಥಳನಾಮಶಾಸ್ತ್ರಜ್ಞರ ಹೇಳಿಕೆಯಲ್ಲಿ ಸತ್ಯಾಂಶವಿದೆ.

ಇತ್ತೀಚಿನ ದಿನಗಳಲ್ಲಿ ಸ್ಥಳನಾಮಗಳ ಅಧ್ಯಯನ ಪ್ರಾಮುಖ್ಯತೆ ಪಡೆದಿವೆ. ವೈಜ್ಞಾನಿಕ ಅಧ್ಯಯನಗಳಲ್ಲಿ ಸ್ಥಳನಾಮಗಳ ಅಧ್ಯಯನವೂ ಒಂದು. ಮಗು ಹುಟ್ಟಿದ ಮೇಲೆ ಇಡುವ

ಹೆಸರನ್ನು ಹಾಗೆಯೇ ಅಡ್ಡ ಹೆಸರನ್ನು ಕೊಡುವುದು ಸ್ವಾಭಾವಿಕವಾಗಿದೆ.[೩] ಅಂದರೆ ಹೆಸರಿಲ್ಲದೆ ಇರುವಂತಹ ಯಾವುದೇ ಗ್ರಾಮ, ಊರುಗಳಿಲ್ಲ. ಇರುವಂತಹ ಹೆಸರಿಗೆ ಅರ್ಥವಿಲ್ಲದೇ ಇಲ್ಲ. ಗ್ರಾಮನಾಮಗಳ ಅಧ್ಯಯನ ಮಾಡುವಂತಹ ಸಂದರ್ಭದಲ್ಲಿ ಅದರ ನಿಷ್ಪತ್ತಿ ನಿರ್ಣಯ ಪ್ರಮುಖ ಅಂಶವಾಗಿದೆ. ಇಂತಹ ಅಂಶಗಳನ್ನು ಸರಿಯಾಗಿ ಗುರುತಿಸದೇ ಮಾಡುವಂತಹ ಅಧ್ಯಯನಗಳೆಲ್ಲಾ ವ್ಯರ್ಥವೆಂದು ಹೇಳಬಹುದು. ಆದರೆ "ನಿಷ್ಪತ್ತಿ ನಿರ್ಣಯ" ಅಷ್ಟು ಸುಲಭವಾದುದಲ್ಲ.[೪] ಎಂ.ಎಂ. ಕಲಬುರ್ಗಿಯವರು ಗುರುತಿಸಿರುವಂತೆ ಗ್ರಾಮಗಳ ಹೆಸರಿನ ಬಗೆಗೆ ಮೂರು ನಿಷ್ಪತ್ತಿಗಳು ಕೇಳಿಬರುತ್ತವೆ.[೫]

೧. ಪಾಮರ ನಿಷ್ಪತ್ತಿ(ಜಾನಪದ ನಿಷ್ಪತ್ತಿ)

೨. ಪಂಡಿತ ನಿಷ್ಪತ್ತಿ

೩. ನಿಜ ನಿಷ್ಪತ್ತಿ

ಇವುಗಳಲ್ಲಿ ಮೊದಲಿನ ಎರಡು ಕಲ್ಪಕಥೆ, ಮೂರನೆಯದು ಸತ್ಯವಾಗಿರುತ್ತದೆ. ಯಾವುದೇ ಒಂದು ಗ್ರಾಮದ ಹಸರಿನ ಹಿಂದೆ ಒಂದು ಇಲ್ಲವೆ ಒಂದಕ್ಕಿಂತ ಹಲವಾರು ಕಥೆಗಳು ಕೇಳಿಬರುತ್ತವೆ. ನಿಜ ನಿಷ್ಪತ್ತಿ ಮಾತ್ರ ಒಂದೇ ಒಂದು ನಾಮ ಇರುತ್ತದೆ. ಕೆಲವೊಂದು ಸ್ಥಳೀಯ ಹೆಸರುಗಳು ಶಾಸನಗಳಲ್ಲಿ ಉಲ್ಲೇಖವಾಗಿದ್ದು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಇಂದಿಗೂ ಸಹ ಮುಂದುವರೆದಿರುವುದನ್ನು ಕಾಣಬಹುದು.[೬]

ಸ್ಥಳನಾಮ ಅಧ್ಯಯನವು ಈ ಪರಿಸರದಲ್ಲಿನ ಅಧ್ಯಯನಕ್ಕೆ ಪ್ರತಿಯೊಂದು ಗ್ರಾಮಗಳು ಯಾವ ಕಾಲದಲ್ಲಿ ಯಾವ ಹೆಸರುಗಳನ್ನು ಪಡೆದವು, ಏಕೆ ಪಡೆದವು. ಇಂದಿನ ಹೆಸರೇನು ಮುಂತಾದ ವಿಷಯಗಳನ್ನು ಕುರಿತು ಚರ್ಚಿಸುತ್ತದೆ. ಸ್ಥಳನಾಮ ಅಧ್ಯಯನವು ಯಾವ ಅಂಶಗಳನ್ನು ಆಧರಿಸಿ ನಿರ್ಧಾರವಾಗಿತ್ತು ಎಂಬುದನ್ನು ತಿಳಿಯುವುದಲ್ಲದೆ ಒಂದು ಜನಾಂಗ, ಸಂಸ್ಕೃತಿ, ಧರ್ಮ ಅಲ್ಲಿನ ಜೀವನಕ್ರಮ ಮುಂತಾದ ಅನೇಕ ವಿಚಾರಗಳ ಮೇಲೆ ಬೆಳಕು ನೀಡುತ್ತದೆ.[೭] ಐಮಂಗಲ ಪರಿಸರದ ಗ್ರಾಮಗಳನ್ನು ಕುರಿತು ಲಭ್ಯವಿರುವ ಸ್ಥಳನಾಮ ಚರಿತ್ರೆಯನ್ನು ತಿಳಿಯುವಂತಹ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ವಾರ್ಗಿಕಗಳು

ವ್ಯಕ್ತಿಯ ವಾಸಸ್ಥಳಗಳನ್ನು ಉಲ್ಲೇಖಿಸುವ ಸ್ಥಳನಾಮಗಳ ಅಂತ್ಯಪದಗಳನ್ನು ಹಲವಾರು ವರ್ಗಗಳಾಗಿ ವಿಂಗಡಿಸಬಹುದಾಗಿದೆ. ಪ್ರಮುಖವಾಗಿ ಕಂಡುಬರುವ ವಾರ್ಗಿಕಗಳು ಎಂದರೆ ಹಳ್ಳಿ, ಪುರ, ಊರು, ಕೆರೆ, ಗೂಡು, ಕೋಟೆ, ಗುಡ್ಡ ಈ ರೀತಿಯಾಗಿ ಹೆಸರಿಸಬಹುದು.

೧. **ಹಳ್ಳಿ :** ಕನ್ನಡದ 'ಹಳ್ಳಿ' ಎಂಬ ಪದವನ್ನು ಸಂಸ್ಕೃತದಲ್ಲಿ 'ಗ್ರಾಮ'ವೆಂದು, ತೆಲುಗಿನಲ್ಲಿ "ಪಲ್ಲಿ" ಎಂದು ಕರೆಯುತ್ತಾರೆ. ಕೆಲವೊಂದು ಹೆಸರುಗಳು ಹಳ್ಳಿ ಎಂಬುದರಿಂದಲೇ ಕೊನೆಯಾಗುತ್ತವೆ. ಅಳಿ ಅಥವಾ ಳಿ ಎಂದು ಮುಕ್ತಾಯವಾಗುವ ಗ್ರಾಮಗಳು ಹಳ್ಳಿಯನ್ನು ಸಂಬೋಧಿಸುತ್ತವೆ.

ಉದಾ:- ಯಲಕೂರಹಳ್ಳಿ, ಪಾಲವ್ವನಹಳ್ಳಿ, ಚಿಕ್ಕಸಿದ್ದವ್ವನಹಳ್ಳಿ, ರಾಮಜೋಗಿಹಳ್ಳಿ, ಮರಡಿಹಳ್ಳಿ, ಯರಬಳ್ಳಿ, ಗೊಲ್ಲಹಳ್ಳಿ, ಮಾರೇನಹಳ್ಳಿ, ಸೂರ್‌ಗೊಂಡನಹಳ್ಳಿ, ಗೌನಹಳ್ಳಿ, ಗುಡಿಹಳ್ಳಿ, ಗನ್ನಾಯಕನ ಹಳ್ಳಿ, ಇತ್ಯಾದಿ.

೨. **ಪುರ :** ಹಳ್ಳಿಯಂತೆ ಪುರವು ವಾಸಸ್ಥಾನವನ್ನು ತಿಳಿಸುತ್ತದೆ. ಊರು ವಾರ್ಗಿಕದಿಂದ ಮುಕ್ತಾಯವಾಗುವ ಕೆಲವು ಸ್ಥಳನಾಮಗಳನ್ನು ಕಾಣಬಹುದು.

ಉದಾ:- ಭರಮಪುರ, ಜೋಡಿಪುರ, ಇತ್ಯಾದಿ.

೩. **ಕೆರೆ :** ಮನುಷ್ಯನಿಗೆ ಅತ್ಯವಶ್ಯಕವಾಗಿರುವುದು ನೀರು. ನೀರಿನಾಸರೆ ಇಲ್ಲದ ಗ್ರಾಮಗಳ ಹುಟ್ಟನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ನೈಸರ್ಗಿಕವಾಗಿ ನೀರಿನ ಸೌಲಭ್ಯವಿಲ್ಲದಿರುವಾಗ ಮಾನವ ಪ್ರಯತ್ನದಿಂದ ನಿರ್ಮಾಣ ಮಾಡಿದಂತಹ ಕೆರೆಗಳು ವಾಸ ಯೋಗ್ಯವಾದ ತಾಣವನ್ನಾಗಿ ಮಾಡುತ್ತವೆ. ಆದುದರಿಂದಾಗಿ ಕೆರೆಗಳ ಸನ್ನಿಹದಲ್ಲೇ ಉಗಮವಾದ ಕೆಲವು ಗ್ರಾಮಗಳು ಜಲಸಂಬಂಧಿ ಹೆಸರಿನಿಂದಲೇ ಕೊನೆಯಾಗಿರುವುದನ್ನು ಕಾಣಬಹುದು.

ಉದಾ:- ಸೊಂಡೆಕೆರೆ, ವದ್ದೀಕೆರೆ, ಕಂದಿಕೆರೆ ಇತ್ಯಾದಿ.

೪. **ಕೋಟೆ :** ಕೋಟೆ ಎಂಬ ಸ್ಥಳನಾಮ ಸಂದರ್ಭದಲ್ಲಿ ಕೆಲವೊಂದು ಗ್ರಾಮಗಳು ಕೋಟೆ ಎಂಬ ಸ್ಥಳನಾಮದಿಂದ ಮುಕ್ತಾಯವಾಗುವಂತಹ ಹೆಸರುಗಳು ಕಂಡುಬಂದಿವೆ.

ಉದಾ:- ಹರ್ತಿಕೋಟೆ. ಎಂ.ಡಿ. ಕೋಟೆ

೫. **ರೊಪ್ಪ :** ಕೋಟೆಗಳಂತೆ ರೊಪ್ಪವು ವಾಸಸ್ಥಾನವನ್ನು ತಿಳಿಸುತ್ತವೆ. ರೊಪ್ಪ ಎಂಬ ಸ್ಥಳನಾಮದಿಂದ ಮುಕ್ತಾಯವಾಗುವಂತಹ ಹೆಸರುಗಳು ಕಂಡುಬಂದಿವೆ. ಕೋಟೆಯ ಸಮೀಪ ಬುರುಜಿನ ಬಳಿ ರೊಪ್ಪ(ತಂಗುವುದು, ಬೀಡು ಬೀಡುವುದು) ಹಾಕಿರುವುದರಿಂದ ಇಂತಹ ಸ್ಥಳನಾಮಗಳನ್ನು ಕಾಣಬಹುದು.

ಉದಾ:- ಕೆರೆಚಿಕ್ಕಯ್ಯನರೊಪ್ಪ, ಬುರುಜಿನರೊಪ್ಪ, ಇತ್ಯಾದಿ.

ಸ್ಥಳನಾಮದ ಅಂತಿಮ ಪದಗಳನ್ನು ವಾರ್ಗಿಕ ದೃಷ್ಟಿಯಿಂದ ಬಿಡಿಯಾಗಿ ಗಮನಿಸಿದಂತೆಯೇ ಕೆಲವೊಂದು ಪೂರ್ಣಸ್ಥಳನಾಮವನ್ನೇ ಇಡಿಯಾಗಿ ಪರಿಗಣಿಸಿ ಹಲವಾರು ವಿಧಗಳಾಗಿ ವಿಂಗಡಿಸಿ ಅಧ್ಯಯನ ಮಾಡಬಹುದು. ದೈವವಾಚಕ, ಜಲವಾಚಕ, ಶಿಲಾವಾಚಕ, ವ್ಯಕ್ತಿವಾಚಕ, ಜಾತಿ ಮತ್ತು ವೃತ್ತವಾಚಕ, ಹಳೆಯ ಹಾಗೂ ಹೊಸ ಸ್ಥಳನಾಮಗಳು ಪರಿಸರದಲ್ಲಿ ಕಂಡುಬರುತ್ತವೆ.

ಉದಾ:- ಸಾಲುಹುಣಸೆ, ಸಾಲುಬೊಮ್ಮನಹಳ್ಳಿ ಮದಕರಿನಾಯಕನಕೋಟೆ, ದಾಸಯ್ಯನ ಮಲ್ಲಿಗೆ, ಕುರುಬಹಟ್ಟಿ, ಗೌಡನಕಟ್ಟೆ, ಮೇಟಿಕುರ್ಕೆ, ಹೆಮದಲ, ಇತ್ಯಾದಿ

ಐಮಂಗಲ

ಐಯ + ಮಂಗಳ = ಐಯ್ಯಮಂಗಳ

ಅಯ್ಯಮಂಗಳ, ಐಮಂಗಲ

ಐಯ್ಯ = ಒಡೆಯ. ಗುರು. ತಂದೆ ಎಂದರ್ಥ.

ಮಂಗಳ = ಶುಭ ಕಾರ್ಯಗಳು, ಶುಭ ಕರ್ಮಗಳು ಎಂದರ್ಥ.

ಪ್ರಸ್ತುತ ಅಧ್ಯಯನ ಪ್ರದೇಶವಾದ ಐಮಂಗಲ ಐತಿಹಾಸಿಕತೆಯನ್ನು ಸಾರುವಂತಹ ಊರು ಇದಾಗಿದೆ. ವೀರಶೈವ ಧರ್ಮಕ್ಕೆ ಸೇರಿದ ಐಯ್ಯನ ಹೆಸರಿನಲ್ಲಿ ಕೋಟೆ ಕಟ್ಟಿದ್ದರಿಂದ ಐಯ್ಯಮಂಗಲ ಎಂದು ಹೆಸರು ಬಂದಿತೆಂದೂ, ಈ ಕೋಟೆಯನ್ನು ಚಿತ್ರದುರ್ಗದ ಅರಸು ಹಿರೇಮದಕರಿ ನಾಯಕನು ಕ್ರಿ.ಶ. ೧೭೨೧ರಲ್ಲಿ ಕಟ್ಟಿಸಿದನು.[೯] ವೀರಶೈವ ವಿರಕ್ತ ಮಠಕ್ಕಾಗಿ ಇದು ಪ್ರಸಿದ್ಧ. ಕ್ರಿ.ಶ. ೯೭೫ರ ಶಾಸನವೊಂದು[೧೦] ಇದನ್ನು 'ಐಯ್ಯಾಮಂಗಳಾ' ಎಂದು ಕರೆದಿದೆ. ಈ ಪ್ರದೇಶದಲ್ಲಿ ನೊಳಂಬರು, ಹರತಿ ಪಾಳೆಗಾರರು, ಚಿತ್ರದುರ್ಗ ಪಾಳೆಯಗಾರರು ಆಳ್ವಿಕೆ ನಡೆಸಿರುವುದು ಅವರ ಶಾಸನಗಳಿಂದ ತಿಳಿಯಬಹುದು.[೧೧] ಅಂದಿನ ಕೋಟೆ ಕೊತ್ತಲಗಳ ಅವಶೇಷಗಳನ್ನು ಇಂದಿಗೂ ಕಾಣಬಹುದು. ಇಂದು ಈ ಕೋಟೆ ಪೊಲೀಸ್ ಇಲಾಖೆಯ ತರಬೇತಿ ಶಾಲೆಯಾಗಿ ಮುಂದುವರೆದಿದೆ.

ಹರ್ತಿಕೋಟೆ

ಹರತಿ + ಕೋಟೆ = ಹರತಿಕೋಟೆ, ಹರ್ತಿಕೋಟೆ

ಹರತಿ = ತಿಪ್ಪರಾಜನ ಪೂರ್ವಜರ ಮೂಲದೇವತೆಯಾದ ಹರತಿಯ ನಾಮಾಂಕಿತದ ಮೇಲೆ ಹರತಿನಾಯಕರೆಂದು ಕರೆದರು.

ಕೋಟೆ = ದುರ್ಗ, ಕೋಟ, ಸೇನೆಯ ರಕ್ಷಣೆಗಾಗಿ ಕಟ್ಟಿದ ಪ್ರಕಾರ, ಬಲವಾದ ಗೋಡೆಯ ಆವರಣ.

ಈ ಗ್ರಾಮಕ್ಕೆ ಹರ್ತಿಕೋಟೆ ಎಂದು ಹೆಸರು ಬರಲು ಕಾರಣವೆಂದರೆ ಹರತಿಯ ತಿಪ್ಪರಾಜನು ಹೊಯ್ಸಳರ ಸಾಮಂತನಾಗಿದ್ದ ನಿಡುಗಲ್ಲಿನ ಬೊಮ್ಮೆಯನಾಯ್ಕನನ್ನು ಯುದ್ಧದಲ್ಲಿ ಕೊಂದು ಹಾಕಿ ಉಚ್ಚಂಗಿ ದುರ್ಗವನ್ನು ಗೆದ್ದು, ತೆಪ್ಪದ ನಾಗಣ್ಣನೊಡನೆ ವಿಜಯಯಾತ್ರೆ ಮಾಡಿ, ಹೊಯ್ಸಳರೊಡನೆ ಯುದ್ಧ ಮಾಡಿ, ವಿಜಯನಗರದ ಬುಕ್ಕರಾಯನಿಂದ ಬಿರುದು ಪಡೆದು, ಮಲ್ಲಿಕ್ ಬಹದ್ದೂರ್ ಎಂಬ ತುರುಕನ ಜಟ್ಟಿಯನ್ನು ಸೋಲಿಸಿ 'ಕಠಾರಿರಾಯ' ಎನ್ನುವ ಬಿರುದು ಪಡೆದು, ಬಹಮನಿ ವಿಜಯನಗರದ ಕದನಗಳಲ್ಲಿ ಮ್ಲೇಚ್ಛರನ್ನು ಸದೆಬಡಿದು 'ಮೆಸನ ತಲೆಗುಂಡು ಗಂಡಂ' ಎನ್ನುವ ಬಿರುದು ಪಡೆದ ತಿಪ್ಪರಾಜನ ಸಾಹಸ ಶೌರ್ಯಗಳಿಗೆ ಮೆಚ್ಚಿ ವಿಜಯನಗರದ ಬುಕ್ಕರಾಯನು ವೇದಾವತಿ ನದಿ ತೀರದ ಬಹಳಷ್ಟು ಭೂಮಿಯನ್ನು ಈತನಿಗೆ ಜಹಗೀರಾಗಿ ನೀಡಿದ. ತಿಪ್ಪರಾಜನು ತನ್ನ ಹಿರಿಯರ ಅಥವಾ ಪೂರ್ವಜರು ಬಿಜಾಪುರ ಪ್ರದೇಶದ ಹರತಿ(ಹೊರ್ತಿ-ಇಂಡಿ ತಾಲೂಕು). ಆದ್ದರಿಂದ ಅವರ ಹೆಸರಿನಲ್ಲಿ ಸ್ಥಾಪಿಸಿದ ಊರೇ ಹರ್ತಿಕೋಟೆ.[೧೨] ಇದನ್ನು ಹರತಿಕೋಟೆ, ಹರ್ತಿಕೋಟೆ, ಅರ್ತಿಕೋಟೆ ಎಂದು ಕರೆಯುತ್ತಾರೆ. ಹಿಂದಿನ ಹರ್ತಿಕೋಟೆ ಈಗಲೂ ಅದೇ ಹೆಸರು ಮುಂದುವರೆದಿದೆ.

ಕರಿ ಓಬನಹಳ್ಳಿ

ಕರಿ ಓಬನಹಳ್ಳಿ ಅಥವಾ ಕರಿ ಓಜೇನಹಳ್ಳಿ ಎಂದು ಕರೆಯುವ ಈ ಗ್ರಾಮ ಐಮಂಗಲದಿಂದ ೧೫ ಕಿ.ಮೀ. ದೂರದಲ್ಲಿದ್ದು ಹರ್ತಿಕೋಟೆಗೆ ಹತ್ತಿರವಿದೆ. ಈ ಗ್ರಾಮಕ್ಕೆ ಹೆಸರು ಬರಲು ಹರ್ತಿಕೋಟೆಯ ರಾಜನ ಮಗಳು ಕರಿಯೋಬೆಯನ್ನು ಬಸಪಿ ಬಿಟ್ಟಿರುತ್ತಾರೆ. ಈಕೆ ಬೇರೆ ಅರಮನೆಯಲ್ಲಿ ವಾಸ ಮಾಡುತ್ತಾ ಒಗಟುಗಳನ್ನು ಒಡ್ಡಿ ಸೋತವರಿಂದ ಹಣ ಸಂಪಾದಿಸುತ್ತಾ ಇರುತ್ತಾಳೆ. ಹೀಗಿರುವಾಗ ಹಟ್ಟಿ ಚಿಕ್ಕಮಲ್ಲಯ್ಯ ನಾಯಕನಿಗೆ ಒಗಟುಗಳನ್ನು ಬಿಡಿಸಲಾಗದೆ ಒದ್ದಾಡುತ್ತಿರುವಾಗ, ಕಾಡಿನಲ್ಲಿ ಗೊಲ್ಲರ ಕಲ್ಡಿ ಬುಳ್ಳಣ್ಣ ಸಿಗುತ್ತಾನೆ. ಅವನ ಚಿಕ್ಕಮಲ್ಲಪ್ಪ ನಾಯ್ಕನಿಗೆ ಒಗಟನ್ನು ಬಿಡಿಸಿಕೊಡುತ್ತಾನೆ. ಚಿಕ್ಕಮಲ್ಲಯ್ಯನು ಆಕೆಯ ಬಳಿ ಹೋಗಿ ಒಗಟಿಗೆ ಉತ್ತರ ಕೊಡುತ್ತಾನೆ. ಆದರೆ, ಆಕೆಗೆ ಅನುಮಾನವಾಗಿ ಒಗಟು ಬಿಡಿಸಿದವರು ಯಾರೆಂದು ಪತ್ತೆ ಹಚ್ಚಿ ಕಲ್ಡಿ ಬುಳ್ಳಣ್ಣನ ಬಳಿ ಬಂದು ತನ್ನನ್ನು ಮದುವೆಯಾಗೆಂದು ಕೇಳುತ್ತಾಳೆ. ಆದರೆ ಚಿಕ್ಕಮಲ್ಲಯ್ಯ ನನ್ನ ಇಬ್ಬರು ಹೆಂಡಿರು ಒಪ್ಪಿದರೆ ಮಾತ್ರ ಎನ್ನುತ್ತಾನೆ. ಕರಿಯೋಬಿ ಬುಳ್ಳಣ್ಣನ ಇಬ್ಬರು ಹೆಂಡಿರಾದ ಬಾಲಮ್ಮ, ನಾಗಮ್ಮರ ಬಳಿ ಹೋಗಿ ಅವರ ಸೇವೆ ಮಾಡಿ ಅವರನ್ನು ಒಲಿಸಿಕೊಂಡು ಕಲ್ಡಿ ಬುಳ್ಳಣ್ಣನನ್ನು ಮದುವೆಯಾಗುತ್ತಾಳೆ. ಆದರೆ ಈಕೆಗೆ ಮಕ್ಕಳಾಗುವುದಿಲ್ಲ. ಬಾಲಮ್ಮನ ಮಗನನ್ನೇ ದತ್ತು ತೆಗೆದುಕೊಳ್ಳುತ್ತಾಳೆ. ಆತನ ವಂಶ ಬೆಳೆಯುತ್ತದೆ. ಈ ಕರಿಯೋಬಿಯ ಹೆಸರನ್ನೇ ಈ ಗ್ರಾಮಕ್ಕೆ ಇಡುತ್ತಾರೆ.[೧೩]

ಹುಲಿತೊಟ್ಲು

ಹುಲಿಯ + ತೊಟ್ಟಿಲು = ಹುಲಿತೊಟ್ಟಿಲು, ಹುಲಿತೊಟ್ಲು

ಹುಲಿ = (ಪ್ರಾಣಿವಾಚಕ) 'ಪುಲಿ', ಒಂದು ಬಗೆಯ ಕ್ರೂರ ಪ್ರಾಣಿ

ತೊಟ್ಟಿಲು = ಜೋಲಿ, ಸಣ್ಣಮಕ್ಕಳನ್ನು ತೂಗುವ ತೊಟ್ಲು

ಈ ಗ್ರಾಮವು ಪ್ರಾಚೀನವಾದುದು, ಹಿಂದೆ ಇದನ್ನು ಲಕ್ಕವ್ವನಹಳ್ಳಿ ಎಂದು ಕರೆಯುತ್ತಿದ್ದರು. ಈ ಗ್ರಾಮಕ್ಕೆ ಹುಲಿತೊಟ್ಟಿಲು ಎಂದು ಹೆಸರು ಬರಲು ಕಾರಣವೆಂದರೆ ಈ ಊರಿನ ಮಹಿಳೆ ಒಮ್ಮೆ ಕುಡಿಯುವ ನೀರು ತರಲು ಬಾವಿಗೆ ಹೋಗುವ ಮುನ್ನ ತನ್ನ ಹಸುಗೂಸನ್ನು ತೊಟ್ಟಿಲಿನಲ್ಲಿ ಮಲಗಿಸಿ ಹೋಗಿದ್ದಳಂತೆ. ನೀರು ಹೊತ್ತು ಹಿಂತಿರುಗಿ ಮನೆಗೆ ಬಂದು ನೋಡಿದರೆ ಅಳುತ್ತಿದ್ದ ಮಗುವಿನ ತೊಟ್ಟಿಲನ್ನು ಹುಲಿಯೊಂದು ತೂಗುತ್ತಿತ್ತಂತೆ. ಹೀಗಾಗಿ ಈ ಊರಿಗೆ ಹುಲಿತೊಟ್ಟಿಲು ಎಂಬ ಹೆಸರು ಬಂತೆಂದು ಇಲ್ಲಿಯ ಜನರು ಹೇಳುವುದುಂಟು.[೧೪]

ಮೇಟಿಕುರ್ಕೆ

ಮೇಟಿಕುರ್ಕೆ ಎಂದು ಕರೆಯುವ ಈ ಗ್ರಾಮ ಐಮಂಗಲದಿಂದ ೧೩ ಕಿ.ಮೀ. ದೂರದಲ್ಲಿದ್ದು ಹಿರಿಯೂರಿಗೆ ಹತ್ತಿರವಿದೆ. ಈ ಗ್ರಾಮಕ್ಕೆ ಹೆಸರು ಬರಲು ಪುಟ್ಟಯ್ಯನಕಟ್ಟೆಯಲ್ಲಿ ಬೇಸಾಯ ಮಾಡುತ್ತಿದ್ದ ಭೀಮ ಸಿಟ್ಟಿನಿಂದ ಮೇಟಿಯನ್ನು ಕಿತ್ತೆಸೆದಾಗ, ಮೇಟಿ ಬಿದ್ದ ಸ್ಥಳವೇ ಮೇಟಿಕುರ್ಕೆಯಾಯಿತಂತೆ. ಮಟ್ಟಿ ಬಸವೇಶ್ವರನ ಗುಡಿಯ ಬಳಿ ಬಿದ್ದಿರುವ ಒಂದು ಕಲ್ಲಿಗೆ ಭೀಮನ ಕಲ್ಲು ಎಂದು. ಹತ್ತಿರದ ಒಂದು ದಿನ್ನೆಗೆ ಜೋಳದ ಗುಡ್ಡವೆಂದು ಹೇಳುತ್ತಾರೆ.

ಪಾಂಡವರು ಬೇಸಾಯ ಮಾಡಿ ಇಲ್ಲಿ ಜೋಳದ ರಾಶಿ ಹಾಕಿದ್ದರಂತೆ ಎಂದು ಇಲ್ಲಿನ ಹಿರಿಯರು ಹೇಳುತ್ತಾರೆ.[೧೫]

ಹೇಮದಳ

ಹೇಮನ + ದಳ - ಹೇಮದಳ ಶಾಸನದಲ್ಲಿ ಇದನ್ನು ಹೆಮಡಿಹಾಳು ಎಂದು ಕರೆದಿದೆ.

ಹೇಮ = ಬಂಗಾರ, ಚಿನ್ನ

ದಳ = ಹೂವು, ಪುಷ್ಪ — ಸಂಪತ್ತಿನ ಊರು

ಹರ್ತಿಕೋಟೆ ಶಾಸನ ಕಡೆಸಿದ ಲಕ್ಷ್ಮಿಪತಿ ನಾಯಕನ ಮಗ ಚಿಕ್ಕರಂಗಪ್ಪ ನಾಯಕನು ಹರತಿ ಸ್ಥಳದಲ್ಲಿ ಆಳುತ್ತಿದ್ದು ತನ್ನ ಕಾಳಾಮುಖೀ ಗುರುಗಳಾದ ಹೊಟ್ಟೆಯೀಶ್ವರಯ್ಯ ಎಂಬುವರ ಸಿಂಹಾಸನಕ್ಕೆ ಹೆಮಡಿಹಾಳು ಗ್ರಾಮವನ್ನು ಕ್ರಿ.ಶ. ೧೫೯೨ರ ಜುಲೈ ತಿಂಗಳಲ್ಲಿ ದಾನ ನೀಡಿದನೆಂದು ಅದರೊಂದಿಗೆ ಹರತಿ ನಾಯಕರ ವಂಶಾವಳಿಯನ್ನು ತಿಳಿಸುತ್ತದೆ. ಶಾಸನಗಳಲ್ಲಿ ಹೆಮಡಿಹಾಳು, ಹೆಮಡಾಳು, ಕ್ರಮೇಣ ಹೇಮ್‌ಡಾಳು, ಯಮ್ಡಾಳು ಎಂದೆಲ್ಲ ಆಗಿ, ಇತ್ತೀಚೆಗೆ ಇದೇ ಗ್ರಾಮದ ರಾಮದಾಸ ಸಂಬ ಶಿಕ್ಷಕರು 'ಹೇಮದಳ'ವೆಂದು ಊರಿನ ಹೆಸರನ್ನು ಸುಂದರಗೊಳಿಸಿದ್ದಾರೆ.[೧೬]

ತವಂದಿ

ತವ + ನಿಧಿ = ತವನಿಧಿ, ತವಂಧಿ, ಶಾಸನಗಳಲ್ಲಿ ಇದನ್ನು ತಡಸೂರರಕೆರೆ, ತವನಿಧಿ ಕೆರೆ ಎಂದಿದೆ.

ತವ = ನಾಶವಾಗು, ವ್ಯಯವಾಗು, ಬರಿದಾಗು

ನಿಧಿ = ಸಂಪತ್ತು ಐಶ್ವರ್ಯ ಎಂದರ್ಥ.

ಐಮಂಗಲದಿಂದ ೧೬ ಕಿ.ಮೀ. ದೂರದಲ್ಲಿರುವ ತವಂದಿ ಶಾಸನೋಕ್ತ ಸ್ಥಳ. ಚಿತ್ರದುರ್ಗ ಪಾಳೇಗಾರ, ಕಾಮಗೇತಿ ಅರಸರ ಕಾಲದಲ್ಲಿ ಶಾಸನಗಳಲ್ಲಿ ಉಕ್ತವಾಗಿರುವ ಮುಖ್ಯ ಸೀಮೆಯಲ್ಲಿ ತವನಿಧಿ ಸ್ಥಳವು ಒಂದು. ಈ ಗ್ರಾಮಕ್ಕೆ ಹಿಂದೆ ತವನಿಧಿ ಎಂದು ಹೆಸರಿದ್ದಿತು. ಇಲ್ಲಿಯ ಶಾಸನಗಳಿಂದ ಹಿಂದೆ ಈ ಗ್ರಾಮ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿ ಇತ್ತೆಂದು ತಿಳಿದುಬರುತ್ತದೆ. ವೀರಭದ್ರ ದೇವರ ಗುಡಿಯ ಶಾಸನದಿಂದ ತವಂದಿಯ ಗೌಡ ತಿಮ್ಮಪ್ಪನ ಮಗ ಜೋಗಣ್ಣನು ದೇವರ ಮೆರವಣಿಗೆ ಮಾಡಿಸಿದ ವಿಚಾರ ತಿಳಿಯುತ್ತದೆ.[೧೭] ತವಂದಿಯ ಅಡಕೆ ಮತ್ತು ಐಮಂಗಲದ ವಿಳೇಯದೆಲೆ ಎಂದರೆ ಇಲ್ಲಿಯ ಜನರಿಗೆ ಬಲು ಪ್ರೀತಿ.

ಬಾಲೇನಹಳ್ಳಿ

ಬಾಲೇನಹಳ್ಳಿ ಎಂದು ಕರೆಯುವ ಈ ಗ್ರಾಮ ಐಮಂಗಲದಿಂದ ೧೫ ಕಿ.ಮೀ. ದೂರದಲ್ಲಿದ್ದು ಹರ್ತಿಕೋಟೆಗೆ ಹತ್ತಿರವಿದೆ. ಈ ಗ್ರಾಮಕ್ಕೆ ಮೊದಲಿನ ಹೆಸರು 'ಬಂಗಾರದ ಹಳ್ಳಿ' ಎಂದು ಕರೆಯುತ್ತಿದ್ದರು. ಕಾರಣಾಂತರಗಳಿಂದ ಈ ಊರಿನಲ್ಲಿ ಒಂದಿಲ್ಲೊಂದು ತೊಂದರೆಗಳು ಜನರಲ್ಲಿ

ಕಾಡತೊಡಗಿ ಊರಿನಲ್ಲಿ ನೆಲೆಸಲು ಸಾಧ್ಯವಾಗುತ್ತಿರಲಿಲ್ಲವಂತೆ. ಆಗ ಹಳ್ಳಿಯ ಮುಖಂಡ ಅಥವಾ ಗೌಡನು ಆಲೋಚಿಸಿ ಬಾಲೇನಹಳ್ಳಿ ಎಂದು ಕರೆದನು.[೧೮] ಅಂದಿನಿಂದ ಬಾಲೇನಹಳ್ಳಿ ಆಯಿತಂತೆ. ಆ ಹೆಸರು ಈಗಲೂ ಮುಂದುವರೆದಿದೆ.

ಮರಡಿಹಳ್ಳಿ

ಮಾರಡಿಯ + ಯ + ಹಳ್ಳಿ + ಮಾರಡಿನಹಳ್ಳಿ →

ಮಾರಡಿಹಳ್ಳಿ → ಮರಡಿಹಳ್ಳಿ

ಮರಡಿ = ಮರಡಿ = ಮದ್ದಿ = ದಿಣ್ಣೆ, ತಿವರು, ಗುಡ್ಡ

ಎತ್ತರದಲ್ಲಿರುವ, ದಿಣ್ಣೆಯಲ್ಲಿರುವ ನೆಲೆ ಎಂಬರ್ಥದಲ್ಲಿ ಈ ಸ್ಥಳನಾಮ.

ಹಳ್ಳಿ = ಅಳಿ ಅಥವಾ ಳಿ ಎಂದರ್ಥ. ಒಂದೆಡೇ ಜನರು ಗುಂಪು ಕಟ್ಟಿಕೊಂಡು ವಾಸಿಸುವ ಸ್ಥಳ ಎಂದರ್ಥ.

ಐಮಂಗಲದಿಂದ ೪ ಕಿ.ಮೀ. ದೂರದಲ್ಲಿರುವ ಈ ಗ್ರಾಮವನ್ನು ಮೊದಲು 'ಓಬಕ್ಕನಹಳ್ಳಿ' ಎಂದು ಹೆಸರಿದ್ದು ಕ್ರಮೇಣ ಊರ ಬದಿಯಲ್ಲೆ ಮರಡಿ, ಗುಡ್ಡಗಳಿದ್ದುದರಿಂದ 'ಮರಡಿಹಳ್ಳಿ' ಎಂದೇ ಹೆಸರಾಯಿತು.

ಇಲ್ಲಿಯ ಗುಡ್ಡ ಸುಮಾರು ಎರಡೂವರೆ ಕೋಟಿ ವರ್ಷಗಳಷ್ಟು ಪ್ರಾಚೀನವಾದುದೆಂದು ಭೂಗರ್ಭಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ಬಹಳ ಕಾಲದ ಹಿಂದೆ ಜ್ವಾಲಾಮುಖಿಗಳು ಭೂಮಿಯ ಮೇಲು, ಸಾಗರದ ಅಡಿಯಲ್ಲಿ ಜೀವಂತವಾಗಿದ್ದು, ಕಲ್ಲು, ಲೋಹ, ಅನಿಲಗಳಿಂದ ಕೂಡಿದ ಲಾವಾರಸವನ್ನು ಹೊರಹಾಕಿದಾಗ, ಆ ಲಾವಾರಸ ತಣ್ಣಗಾಗಿ ಘನರೂಪ ಪಡೆದು ಶಿಲೆಗಳಾ ಗುತ್ತಿದ್ದವಂತೆ. ಈ ಶಿಲೆಗಳು ದಿಂಬಿನಾಕಾರದಲ್ಲಿವೆ. ಇದನ್ನೇ ಪಿಲ್ಲೋಲಾವಾ ಎಂದು ಕರೆಯುತ್ತಾರೆ. ಈ ಶಿಲೆಗೆ ಹೆಸರಾದ ಬೆಟ್ಟವೇ "ಮರಡಿಹಳ್ಳಿ ಬೆಟ್ಟ', ಭಾರತ ಮತ್ತು ಜಪಾನಿನ ಭೂಗರ್ಭಶಾಸ್ತ್ರಜ್ಞರ ಪ್ರಕಾರ ೨೭೦ ಕೋಟಿ ವರ್ಷಗಳಷ್ಟು ಹಿಂದಿನದಾಗಿದೆ.[೧೯] ಈ ಗುಡ್ಡದ ಬದಿಯಲ್ಲಿ ಜನರು ವಾಸವಾಗಿದ್ದರಿಂದ ಮರಡಿಹಳ್ಳಿ ಎಂದು ಕರೆದುಕೊಂಡಿರಬಹುದು.

ಚಿಕ್ಕೀರಣ್ಣ ನಾಯಕನ ಮಾಳಿಗೆ

ಚಿಕ್ಕೀರಣ್ಣ ನಾಯಕನು ಸಾಗುವಳಿ ಮಾಡುತ್ತಿದ್ದ ಜಮೀನು, ಆ ಕಾಲದಲ್ಲಿ ತಿಂಗಳುಗಟ್ಟಲೆ ಎಡೆಬಿಡದೆ ಸುರಿಯುತ್ತಿದ್ದ ಮಳೆಯಿಂದ ಕುಂಬಾರಗಟ್ಟೆ(ಭರಮಪುರ) ಕೆರೆ ಒಡೆದು ಸದಾ ಕಾಲ ಕುಂಟ ಹಳ್ಳ ಹರಿಯುತ್ತಿದ್ದರಂದ, ಆ ಹಳ್ಳವನ್ನು ಪದೇಪದೇ ದಾಟಬೇಕಿದ್ದ ಕಷ್ಟವನ್ನು ಅರಿತು ಕುಟುಂಬಸಮೇತರಾಗಿ ತನ್ನ ದನಕರುಗಳನ್ನು ಹೊಡೆದುಕೊಂಡು ಹಳ್ಳ ದಾಟಿ ಚಿಕ್ಕೀರಣ್ಣನಾಯಕನ ಜಮೀನಿನಲ್ಲಿ ಮನೆ ಕಟ್ಟಿಕೊಂಡು ಶಾಶ್ವತವಾಗಿ ನೆಲೆಸಿದ್ದರಿಂದ ಈ ಹಳ್ಳಿಗೆ ಸಾಗುವಳಿ ಮಾಡುತ್ತಿದ್ದ ಜಮೀನಿನ ಒಡೆಯ ಚಿಕ್ಕೀರಣ್ಣನಾಯಕನ ಹೆಸರನ್ನೇ ಇಡಲಾಯಿತು.

೩.೨. ಸ್ಥಳ ಪುರಾಣಗಳ ಅಧ್ಯಯನ

ಸ್ಥಳ ಪುರಾಣಗಳು ಚರಿತ್ರೆಯ ಪ್ರಮುಖ ಆಧಾರಗಳಾಗಿವೆ. ಪುರಾಣಗಳು ಎಂದರೆ ಈ ಓಂದೆ ನಡೆದ ಘಟನೆಗಳು ಎಂದು ಹೇಳಲಾಗಿದೆ. ಇವು ಗತಿಸಿದ ಘಟನೆಗಳನ್ನು ಮತ್ತು

ನೀತಿಯನ್ನು ತಿಳಿಸುತ್ತವೆ. ಪುರಾಣಗಳು ಅರಸರ ಜೀವನ, ವಂಶಾವಳಿ, ಸಂತರ ಜೀವನ ವೃತ್ತಾಂತ, ದೇವರ ಅವತಾರ ಕಥೆಗಳನ್ನು ಒಳಗೊಂಡಿರುತ್ತವೆ.[೨೦] ಪುರಾಣಗಳಲ್ಲಿ ಅತೀವ ವರ್ಣನೆ ಮತ್ತು ಕಾಲಗಣನೆ ಇಲ್ಲದಿರುವುದು ಪ್ರಮುಖ ದೋಷವಾಗಿದೆ. ಸ್ಥಳ ಪುರಾಣಗಳು ಒಂದು ಪ್ರದೇಶದ ಧಾರ್ಮಿಕ ಮಹತ್ವವನ್ನು ಹಾಗೂ ಆ ಪ್ರದೇಶದೊಂದಿಗೆ ದೇವತೆಗಳು ಹೊಂದಿರುವ ಸಂಬಂಧವನ್ನು ತಿಳಿಸುತ್ತವೆ.

ಐಮಂಗಲ ಪ್ರದೇಶವು ಪುರಾಣದ ಹಿನ್ನೆಲೆಯನ್ನು ಹೊಂದಿರುವ ಪ್ರದೇಶವಾಗಿದೆ. ಇದಕ್ಕೆ ಬಹುಮುಖ್ಯ ಕಾರಣವೆಂದರೆ ಪಾಂಡವರು ವನವಾಸ ಸಂದರ್ಭದಲ್ಲಿ ನಿರ್ಮಿಸಿದ ವಿಗ್ರಹಗಳು ತವಂದಿಯಲ್ಲಿ ದೊರೆತಿದ್ದು, ಭೊರನಮರಡಿ ಎಂಬಲ್ಲಿ ವೃತ್ತಾಕಾರದ, ಚೌಕಾಕಾರದ ಮನೆಯ ರಚನೆಯ ಅವಶೇಷಗಳು ಕಾಣಸಿಗುತ್ತವೆ.[೨೧] ಹೆಂಜೇರು ಸಿದ್ಧೇಶ್ವರಸ್ವಾಮಿಗಳು ಹೇಮಾವತಿಯಿಂದ ವದ್ದೀಕೆರೆಗೆ ಬಂದು ನೆಲೆಸಿದ ರೀತಿ, ಹರತಿ ಪಾಳೇಗಾರ ತಿಪ್ಪರಾಜನು ಜನಿಸಿದ ಜೀವನ ವೃತ್ತಾಂತ. ಕಬ್ಬಿಣದ ರಾಮಬಾಣ ತಯಾರಿಸಬಹುದಾದ ಕಾರ್ಖಾನೆ ಇದ್ದುದರ ಬಗ್ಗೆ ಕಾಣಸಿಗುವ ಕುರುಹುಗಳು.[೨೨] ಇವೆಲ್ಲವೂ ಪುರಾಣದ ಹಿನ್ನೆಲೆಯಲ್ಲಿ ನಾವು ನೋಡಬಹುದು.

ಜಾನಪದ ಸಾಹಿತ್ಯದಲ್ಲಿ ಹೆಂಜೇರು ಸಿದ್ಧೇಶ್ವರಸ್ವಾಮಿ ಮತ್ತು ಮಲ್ಲೇಗೌಡನ ವೃತ್ತಾಂತ

ನೊಳಂಬವಾಡಿ ೩೨,೦೦೦ ಎಂಬ ವಿಶಾಲ ಪ್ರಾಂತ್ಯವನ್ನು ಆಳುತ್ತಿದ್ದ ಮಲ್ಲೇಗೌಡ ಎಂಬುವವನು ಬಹಳ ಪ್ರಮುಖವಾದ ಅರಸ. ಈತನು ನೊಣಬಿಪಟ್ಟಣದಲ್ಲಿ ಪ್ರಜಾರಂಜಕನಾಗಿ ಆಳ್ವಿಕೆಯನ್ನು ನಡೆಸುತ್ತಿದ್ದನು. ಮಲ್ಲೇಗೌಡನು ತನ್ನ ಪ್ರಜೆಗಳ ನಡತೆಯ ವಿಷಯದಲ್ಲಿ ಸಮಗ್ರವಾದ ಎಚ್ಚರಿಕೆಯನ್ನು ವಹಿಸಿದ್ದನು. ಧೀಮಂತನೂ ಶೂರನೂ ಆಗಿದ್ದು, ಸಕಲ ವಿಧವಾದ ಸಂಪತ್ತುಗಳಿಂದ ಕೂಡಿ ನೊಣಬಿಪಟ್ಟಣವನ್ನು ಪಾಲಿಸುತ್ತಿದ್ದನು. ಮಲ್ಲೇಗೌಡನಿಗೆ ಏನಿದ್ದರೇನೂ ಮಕ್ಕಳಿರಲಿಲ್ಲ. ಆಗ ಹೇಮಾವತಿ ಪಟ್ಟಣಕ್ಕೆ ಹೋಗಿ ಅಲ್ಲಿಯ ಸಿದ್ಧೇಶ್ವರಸ್ವಾಮಿ ಮತ್ತು ಹೆಂಜೇರಸ್ವಾಮಿಗಳ ದರ್ಶನ ಮಾಡಿ ಅವರ ಮುಂದೆ ಕಷ್ಟ ಹೇಳಿಕೊಂಡರೆ ಮಕ್ಕಳಾಗಬಹುದೆಂದು ಕೆಲವರು ಸಲಹೆ ಇತ್ತ ಅನುಸಾರ ಮಲ್ಲೇಗೌಡ ಹೇಮಾವತಿ ಪಟ್ಟಣಕ್ಕೆ ಹೋಗಿ ಸಿದ್ಧೇಶ್ವರಸ್ವಾಮಿ ಮತ್ತು ಹೆಂಜೇರುಸ್ವಾಮಿಗಳ ಮುಂದೆ ತನ್ನ ಕೋರಿಕೆಯನ್ನು ತೋಡಿಕೊಂಡನಂತೆ. ಅದಕ್ಕೆ ಸಿದ್ಧೇಶ್ವರಸ್ವಾಮಿಗಳು ಮಲ್ಲೇಗೌಡನನ್ನು ಕುರಿತು "ನಿನಗೆ ಗಂಡುಮಕ್ಕಳ ಸಂತಾನವಿಲ್ಲ. ಆದರೆ ಏಳು ಜನ ಹೆಣ್ಣುಮಕ್ಕಳ ಸಂತಾನ ಭಾಗ್ಯವಿದೆ. ಆ ಏಳು ಹೆಣ್ಣುಮಕ್ಕಳಲ್ಲಿ ಒಬ್ಬ ಮಗಳನ್ನು ಯತಿವರ್ಯರ ಶಿಷ್ಯನಾದ ಪರದೇಶಿ ನಿಂಗಣ್ಣನಿಗೆ ಮದುವೆ ಮಾಡಿಕೊಡಬೇಕೆಂದು ಅಪ್ಪಣೆ ಮಾಡಿದ್ದರಂತೆ. ಸಿದ್ಧೇಶ್ವರಸ್ವಾಮಿಗಳ ಅಪ್ಪಣೆಯಂತೆ ಮಲ್ಲೇಗೌಡನಿಗೆ ಏಳು ಜನ ಹೆಣ್ಣುಮಕ್ಕಳಾಗಿ ಸುಖವಾಗಿದ್ದ ಮಲ್ಲೇಗೌಡ ಪರದೇಶಿ ನಿಂಗಣ್ಣನಿಗೆ ಹೆಣ್ಣು ಕೊಟ್ಟು ಮದುವೆ ಮಾಡದೆ ಅವನಿಗೆ ಚಿತ್ರಹಿಂಸೆ ಕೊಟ್ಟನಂತೆ. ಇದನ್ನು ಅರಿತ ಸಿದ್ಧೇಶ್ವರಸ್ವಾಮಿ ಕುಪಿತರಾಗಿ ಹೇಮಾವತಿಯಿಂದ ನೊಳಂಬ ಪಟ್ಟಣಕ್ಕೆ ಬಂದು ಮಲ್ಲೇಗೌಡ ಮತ್ತು ನೊಣಬಿಪಟ್ಟಣವನ್ನು ಭಸ್ಮ ಮಾಡಿದರು. ನಂತರ ಅಲ್ಲಿಂದ ಈಗಿನ ವದ್ದೀಕೆರೆಗೆ ಬಂದು ತನ್ನ ತ್ರಿಶೂಲದಿಂದ ಬಾವಿಯನ್ನು ಕೊರೆದು ಅಲ್ಲಿನ ನೀರು ಕುಡಿದು ಶಾಂತರಾದರು. ಅಂದಿನಿಂದ ಸಿದ್ಧೇಶ್ವರಸ್ವಾಮಿ ವದ್ದೀಕೆರೆಯಲ್ಲಿ ನೆಲೆಯೂರಿ ಭಕ್ತರ ಕಷ್ಟಗಳನ್ನು ಪರಿಹರಿಸುತ್ತಿದ್ದಾರೆ.[೨೩]

ಮಜ್ಜನಬಾವಿ

ನೊಳಂಬವಾಡಿ ೩೨,೦೦೦ ಎಂಬ ವಿಶಾಲ ಪ್ರಾಂತ್ಯದ ಪ್ರಖ್ಯಾತ ದೊರೆ ಮಲ್ಲೇಗೌಡನು ಹೇಮಾವತಿಯಲ್ಲಿ ನೆಲೆಸಿದ್ದ ಸಿದ್ಧೇಶ್ವರಸ್ವಾಮಿಗಳ ಮಾತಿನಂತೆ ನಡೆದುಕೊಳ್ಳದೇ ಪರದೇಶಿ ಲಿಂಗಣ್ಣನಿಗೆ ಹೆಣ್ಣು ಕೊಟ್ಟು ಮದುವೆ ಮಾಡದೆ ಅವನಿಗೆ ಚಿತ್ರಹಿಂಸೆ ಕೊಟ್ಟನಂತೆ. ಇದನ್ನು ಅರಿತ ಸಿದ್ಧೇಶ್ವರಸ್ವಾಮಿ ಕುಪಿತರಾಗಿ ಹೇಮಾವತಿಯಿಂದ ನೊಳಂಬ ಪಟ್ಟಣಕ್ಕೆ ಬಂದು ಮಲ್ಲೇಗೌಡ ಮತ್ತು ನೊಣಬಿಪಟ್ಟಣವನ್ನು ಭಸ್ಮ ಮಾಡಿದರು. ನಂತರ ಅಲ್ಲಿಂದ ವದ್ದೀಕೆರೆಗೆ ಬಂದು ತನ್ನ ತ್ರಿಶೂಲದಿಂದ ಬಾವಿಯನ್ನು ಕೊರೆದು ಅಲ್ಲಿನ ನೀರು ಕುಡಿದು ಶಾಂತರಾದರು. ಈಗಿರುವ ವದ್ದೀಕೆರೆಯ ಬಾವಿ "ಮಜ್ಜನಬಾವಿ" ಎಂದು ಕರೆಯುವ ವಾಡಿಕೆ ಇದೆ. ಅಂದಿನಿಂದ ಸಿದ್ಧೇಶ್ವರಸ್ವಾಮಿಯನ್ನು ಕಾಲಭೈರವೇಶ್ವರ ಸ್ವಾಮಿ ಎಂದು ಕೂಡ ಕರೆಯುವುದುಂಟು. ಇಲ್ಲಿಯ ಬಾವಿಯ ನೀರು ಸರ್ವರೋಗ ನಿವಾರಣೆ ಮಾಡುವ ಶಕ್ತಿ ಹೊಂದಿದೆ. ಪ್ರತಿ ಭಾನುವಾರದಂದು ಭಕ್ತಾದಿಗಳು ದೂರದ ಊರುಗಳಿಂದ ಇಲ್ಲಿಗೆ ಬಂದು ಬಾವಿಯಿಂದ ನೀರು ತೆಗೆದು ಮೈಮೇಲೆ ಸ್ವಾಮಿಯ ನಾಮಸ್ಮರಣೆ ಮಾಡುತ್ತಾ ಪವಿತ್ರರಾಗುತ್ತಾರೆ. ಪ್ರತಿ ವರ್ಷ ನಡೆಯುವ ಸಿದ್ಧೇಶ್ವರಸ್ವಾಮಿ ಜಾತ್ರೆಯಲ್ಲಿ "ಸಿದ್ಧಭುಕ್ತಿ" ಎಂಬ ಆಚರಣೆ ಇದೆ. ಈ ದಿವಸ ಪ್ರಾಣಿ ಬಲಿ ಕೊಡುವುದರಿಂದಲೋ ಏನೋ ಇಲ್ಲಿಯ ಬಾವಿಯಲ್ಲಿ ಒಂದೇ ಒಂದು ಹನಿ ನೀರೂ ಇಲ್ಲದೆ ಭತ್ತಿ ಹೋಗುತ್ತದೆ. ಮರುದಿನ ಗಂಗಾದೇವತೆಗೆ ಪೂಜೆ ಮಾಡಿದ ಮೇಲೆ ಊರಿನವರೆಲ್ಲರಿಗೂ ಜಾತ್ರೆಗೆ ಬಂದಿರುವರೆಲ್ಲರಿಗೂ ಆಗುವಷ್ಟು ನೀರು ಬರುತ್ತದೆ ಎಂದು ಇಲ್ಲಿಯ ಸ್ಥಳೀಯರು ಹೇಳುತ್ತಾರೆ.[೨೪]

ಪೂಜಾರಿ ಗುಡ್ಡೆ

ಸಿದ್ಧೇಶ್ವರಸ್ವಾಮಿಯ ಪವಾಡದಿಂದ ನಾಶವಾದ ನೊಣಬಿ ಪಟ್ಟಣದಲ್ಲಿ ಹರತಿ ನಾಯಕರ ತಂಡ ಕುಂಬಾರಗಟ್ಟೆ ಪೂಜಾರಪ್ಪನನ್ನು ಹುಡುಕಲು ತಂಗಿದ್ದಾಗ, ಆ ರಾತ್ರಿ ಅವರ ಕನಸಿನಲ್ಲಿ ವದ್ದೀಕೆರೆ ಸಿದ್ಧಪ್ಪ ಕಾಣಿಸಿಕೊಂಡು ಅಮಾವಾಸ್ಯೆ ಸೋಮವಾರ ಬೆಳಗಿನ ಜಾವದಂದು ಮಲ್ಲಜ್ಜನ ಬಾವಿಯಲ್ಲಿ ಬ್ರಹ್ಮಲಿಂಗೇಶ್ವರ ದೇವರ ನೂರಾಒಂದು ಪೂಜೆಯಲ್ಲಿ ಪೂಜಾರಪ್ಪ ಮಗ್ನನಾಗಿರುತ್ತಾನೆ. ಅಂದು ನಿಮಗೆ ಸಿಕ್ಕುತ್ತಾನೆ ಎಂದು ಹೇಳಿದ್ದರಿಂದ ಹರತಿ ನಾಯಕರ ದಂಡು ಮಲ್ಲಜ್ಜನ ಬಾವಿಯ ಕಡೆಗೆ ಧಾವಿಸಿತು. ನಂತರ ಮಲ್ಲಜ್ಜನ ಬಾವಿಯನ್ನು ಸುತ್ತುವರೆದು, ನೋಡಿದಾಗ ವದ್ದೀಕೆರೆ ಸಿದ್ಧಪ್ಪ ಹೇಳಿದಂತೆ ಪೂಜಾರಪ್ಪ ಕಾಸೆ ಹಾಕಿಕೊಂಡು, ಹೊಕ್ಕಳ ಗಂಟೆ, ಉರಿಗೆಜ್ಜೆ ಕಟ್ಟಿಕೊಂಡು ಬಾವಿಯಲ್ಲಿ ಬ್ರಹ್ಮಲಿಂಗೇಶ್ವರ ದೇವರ ಪೂಜೆಯಲ್ಲಿ ಮಗ್ನನಾಗಿದ್ದ. ಬಾವಿಯ ದಡದ ಒಂದು ಕಡೆ ಮಣಿಗಾರ ಮತ್ತೊಂದು ಕಡೆ ಛಲವಾದಿ ನಿಂತಿದ್ದರು. ಪೂಜೆ ಮುಗಿಸಿದ ಪೂಜಾರಪ್ಪ ಎದ್ದು ನಿಂತು ನೋಡಲು ಬಾವಿಯ ಸುತ್ತಲೂ ಹರತಿ ನಾಯಕರ ದಂಡು ನಿಂತಿದ್ದನ್ನು ಅರಿತು, ತಪ್ಪಿಸಿಕೊಳ್ಳಲು ಸಾಧ್ಯವಾಗದೆ, ತಾನು ಹರತಿ ನಾಯಕರಿಂದ ಹತನಾದರೆ ಇಡೀ ನನ್ನ ವಂಶ ಅಪಹಾಸ್ಯಕ್ಕೆ ಗುರಿಯಾಗಬಹುದು. ನಿಂದನೆಗೆ ದಾರಿಯಾಗಬಹುದೆಂದು ಅರಿತುಕೊಂಡು ಇವರಿಂದ ಸಾಯುವುದಕ್ಕಿಂತ ತನ್ನ ಬೆಂಗಾವಲಾಗಿರುವ ಹೊಲೆ ಮಾದಿಗರಿಂದ ಸಾಯುವುದೇ ಲೇಸೆಂದು ತನ್ನ ವಜ್ರಾಯುಧವನ್ನು ಛಲವಾದಿ ಕೈಗೆ ಕೊಟ್ಟು ತನ್ನ ಶಿರವನ್ನು

ಕಡಿಸಿಕೊಂಡ ಎಂಬ ಪ್ರತೀತಿ ಇದೆ. ಅಂದು ಕಡಿದ ಪೂಜಾರಪ್ಪನ ತಲೆ ಬಿದ್ದ ಜಾಗವೇ ಈಗಿನ ಪೂಜಾರಿಗುಡ್ಡೆ[೨೫] ಎಂದು ಸ್ಥಳೀಯರು ಹೇಳುತ್ತಾರೆ.

ನೊಳಂಬ(ನೊಣಬಿ) ಪಟ್ಟಣ ಹಾಳಾದ ವೃತ್ತಾಂತ

ಆಂಧ್ರಪ್ರದೇಶದ ಅನಂತರಪುರ ಜಿಲ್ಲೆಯ ಮಡಕ್‌ಶಿರ ತಾಲೂಕಿನ ಹೆಂಜೇರು ಅಥವಾ ಹೇಮಾವತಿ ಎಂಬ ಈಗಿನ ಪಟ್ಟಣದಲ್ಲಿ ಸಿದ್ಧೇಶ್ವರ ಮತ್ತು ಹೆಂಜೇರುಸ್ವಾಮಿಗಳು ಮಠವನ್ನು ಸ್ಥಾಪಿಸಿಕೊಂಡು ಅನೇಕ ಪವಾಡಗಳನ್ನು ನಡೆಸುತ್ತಾ ದಿವ್ಯಜ್ಞಾನಿಗಳೆಸಿದ್ದರು. ಆ ಕಾಲ ಕ್ರಿ.ಶ. ೭೩೫ ಚಿತ್ರದುರ್ಗ ಸಂಸ್ಥಾನದಲ್ಲಿ ನೊಳಂಬರು 'ನೊಳಂಬ ಸಾಸಿರ' ಎಂಬ ಸಣ್ಣ ಪ್ರಾಂತ್ಯದ ಮೇಲೆ ಆಡಳಿತವನ್ನು ನಡೆಸಲಾರಂಭಿಸಿದ್ದರು. ಕ್ರಿ.ಶ. ೯೦೦ ವೇಳೆಗೆ ರಾಜ್ಯ ವಿಸ್ತಾರವಾಗಿ ನೊಳಂಬವಾಡಿ ೩೨,೦೦೦ ಎಂಬ ಪ್ರಾಂತ್ಯವಾಯಿತು. ಇವರ ರಾಜಧಾನಿ ಹೇಮಾವತಿ ಆಗಿದ್ದಿತು. ಈ ನೊಳಂಬರು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಐಮಂಗಲದ ಸಮೀಪ ಇರುವ ಬಯಲು ಪ್ರದೇಶದ ನಡುಗಡ್ಡೆಯಲ್ಲಿ ನೊಳಂಬರು ಆಳಿದ್ದಾಗಿ ತಿಳಿದುಬರುತ್ತದೆ. ಇಲ್ಲಿ ನೊಳಂಬ ಪಟ್ಟಣವಿದ್ದ ಕುರುಹಾಗಿ ಹಾಳಾದ ಜಾಗದಲ್ಲಿ ಭಗ್ನವಾಗಿರುವ ಸ್ಮಾರಕಗಳು, ವಿಗ್ರಹಗಳು ಕಾಣಸಿಗುತ್ತವೆ. ಜಾನಪದ ಸಾಹಿತ್ಯದಲ್ಲಿ ಇಲ್ಲಿದ್ದ ನೊಳಂಬ ಪಟ್ಟಣವು ಒಂದು ಪ್ರಾಂತ್ಯದ ಕೇಂದ್ರ ಸ್ಥಾನ ಎಂಬುದಾಗಿ ತಿಳಿದುಬರುತ್ತದೆ. ಇದು ಇಲ್ಲಿಯ ಎರೆಸೀಮೆಯ ನಡುಗಡ್ಡೆಯಲ್ಲಿ ನಿರ್ಮಾಣವಾಗಿ ಆಯಕಟ್ಟಿನ ಸ್ಥಳವಾಗಿತ್ತು. ಇದು ಹಾಳಾದ ನಂತರ ಇಲ್ಲಿಯ ನೊಳಂಬ ಪಟ್ಟಣವನ್ನು ನೊಣಬಿ ಪಟ್ಟಣ, ನೊಣವಿ ಪಟ್ಟಣ ಎಂದು ಕರೆಯುತ್ತಾರೆ.[೨೬] ಇಲ್ಲಿ ಮಲ್ಲೇಗೌಡ ಎಂಬುವನು ಆಳುತ್ತಿದ್ದ ಎಂದು ಜಾನಪದ ಸಾಹಿತ್ಯದಿಂದ ತಿಳಿಯುತ್ತದೆ.

ಸಿದ್ಧೇಶ್ವರಸ್ವಾಮಿಯ ಕೆಂಗಣ್ಣಿನಿಂದ ಹಾಳಾದ ನೊಣಬಿಪಟ್ಟಣ ಮಲ್ಲೇಗೌಡನ ಹೊಲ, ಮನೆ ಕಣಗಳಲ್ಲಿದ್ದ ಜೋಳದ ರಾಶಿಗಳು, ಹತ್ತಿಯ ಗುಡ್ಡೆಗಳು ಬಿಳಿ ಬೆಣಚು ಕಲ್ಲುಗಳ ಗುಡ್ಡೆಗಳಾಗಿ ರಾಶಿ ರಾಶಿ ಬಿದ್ದಿರುವುದು ಇಂದಿಗೂ ಸಾಕ್ಷಿಯಾಗಿ ಕಾಣಸಿಗುತ್ತವೆ.

ಹರತಿ ಪಾಳೇಗಾರ ತಿಪ್ಪರಾಜನ ಜೀವನ ವೃತ್ತಾಂತ

ಹಿಂದಿನ ಕಾಲದಲ್ಲಿ ಮಂದಲ ರಾಜನೆಂಬುವನು ಆನೆಗೊಂದಿ ಸಂಸ್ಥಾನದಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಆತನಿಗೆ ಏಕೈಕ ರತ್ನಾಂಬಿಕೆಯೆಂಬ ಸುಪುತ್ರಿ ಇದ್ದಳು. ಇವಳು ಅರಮನೆಯ ಉಪ್ಪರಿಗೆಯಲ್ಲಿ ವಾಸವಾಗಿದ್ದಳು. ತನ್ನ ಮಗಳ ಉಸ್ತುವರಿಗಾಗಿ ಮಂದಲ ರಾಜ ಸಖಿಯರನ್ನು ನಿಯೋಜಿಸಿದ್ದು, ಅವರಿಂದ ಮಗಳ ಬಗ್ಗೆ ಮಾಹಿತಿ ಪಡೆಯುತ್ತಿದ್ದನು. ಏಳು ಮಲ್ಲಿಗೆ ಹೂವಿನ ತೂಕವನ್ನು ತೂಗುತ್ತಿದ್ದ ಮಗಳ ಬಗ್ಗೆ ಅತ್ಯಂತ ಪ್ರೀತಿಯನ್ನು ಅಕ್ಕರೆಯನ್ನು ತೋರಿಸುತ್ತಿದ್ದುಂಟಂತೆ. ದಿನನಿತ್ಯ ರತ್ನಾಂಬಿಕೆಯು ಸೂರ್ಯೋದಯಕ್ಕಿಂತ ಮುಂಚೆ ಎದ್ದು ಸಂಧ್ಯಾ ವಂದನೆಗಳನ್ನು ಪೂರೈಸಿ ಸೂರ್ಯ ನಮಸ್ಕಾರ ಮಾಡುತ್ತಿದ್ದಳು. ಒಂದು ದಿನ ರತ್ನಾಂಬಿಕೆ ಸೂರ್ಯದೇವನನ್ನು ಭಕ್ತಿಯಿಂದ ಪೂಜಿಸಿ "ನಿನ್ನಂಥ ಸ್ಫುರದ್ರೂಪಿಯಾದ ಗಂಡು ಮಗುವನ್ನು ಕರುಣಿಸು ಎಂದು ಬೇಡಿದಳು. ಆಗ ರತ್ನಾಂಬಿಕೆಯ ಮುಗ್ಧತೆಗೆ ಮಾರುಹೋದ ಸೂರ್ಯದೇವ ರತ್ನಾಂಬಿಕೆಗೆ ಒಂದು ಗಂಡುಮಗುವನ್ನು ಕರುಣಿಸಿದನಂತೆ. ಆಗ ರತ್ನಾಂಬಿಕೆ

ನವಮಾಸ ತುಂಬುತ್ತಿದ್ದಂತೆ ಗಂಡುಮಗುವಿಗೆ ಜನ್ಮ ನೀಡಿದಳು. ಮಗುವನ್ನು ನೋಡಿ ಹೆದರಿ. ಮದುವೆ ಇಲ್ಲದೆ ಮಗು ಹೆತ್ತರೆ ತಪ್ಪಲ್ಲವೆ? ಎಂದುಕೊಂಡು ಭಯದಿಂದ ಆ ಮಗುವನ್ನು ತಿಪ್ಪೆಗುಂಡಿಗೆ ಎಸೆದು ಬರುವಂತೆ ತನ್ನ ಸಖಿಯರಿಗೆ ಹೇಳಿದಳು. ಅದರಂತೆ ಮಗುವನ್ನು ತಿಪ್ಪೆಗುಂಡಿಗೆ ಬಿಟ್ಟು ಬಂದ ನಂತರ ಮಂದಲರಾಜನ ಎಮ್ಮೆಗಳಲ್ಲಿ ಒಂದು ಎಮ್ಮೆ ದಿನಾಲೂ ತಿಪ್ಪೆಗುಂಡಿಗೆ ಹೋಗಿ ಆ ಮಗುವಿಗೆ ಹಾಲು ಉಣಿಸುತ್ತಿತ್ತಂತೆ. ಮಗು ಹುಟ್ಟಿದ ಬಗ್ಗೆ ಮಂದಲ ರಾಜನಿಗೆ ಗೊತ್ತಾಗಿ ತನ್ನ ಮಗಳು ರತ್ನಾಂಬಿಕೆಯ ಶಿರಚ್ಛೇದನ ಮಾಡುವಂತೆ ಆಜ್ಞೆ ಮಾಡಿದನು. ಆಗ ಅಶರೀರವಾಣಿ ನುಡಿದು "ನಿನ್ನ ಮಗಳು ಪತಿವ್ರತೆ, ಸೂರ್ಯನ ವರದಿಂದ ಮಗುವಿಗೆ ಜನ್ಮ ನೀಡಿದ್ದಾಳೆ". ನಿನಗೆ ಹೆದರಿ ತಿಪ್ಪೆಯಲ್ಲಿಟ್ಟಿದ್ದಾಳೆ. ನಿನ್ನ ಎಮ್ಮೆಯೊಂದು ದಿನಾಲೂ ಹಾಲು ಉಣಿಸುತ್ತದೆ. ಇದು ಸತ್ಯ. ಒಂದು ವೇಳೆ ಅನುಮಾನವಾದಲ್ಲಿ ಎಮ್ಮೆಗಳನ್ನು ಬಿಟ್ಟು ನೋಡು, ಹಾಗೆಯೇ ನಿನ್ನ ಮಗಳನ್ನು ಯಾವುದೇ ಪರೀಕ್ಷೆಗೆ ಒಳಪಡಿಸಬಹುದಾಗಿದೆ ಎಂದು ನುಡಿಯಿತು".

ಅಶರೀರವಾಣಿಯ ನುಡಿಯಂತೆ ಎಮ್ಮೆಗಳನ್ನು ಬಿಟ್ಟು ನೋಡಿದ, ಅದರಲ್ಲಿ ಒಂದು ತಿಪ್ಪೇಗುಂಡಿಯಲ್ಲಿದ್ದ ಮಗುವಿನ ಹತ್ತಿರ ಹೋಗಿ ಹಾಲು ಉಣಿಸಲು ಪ್ರಯತ್ನಿಸುತ್ತಿತ್ತು. ನಂತರ ತನ್ನ ಮಗಳನ್ನು ಕುರಿತು 'ನೀನು ಸೂರ್ಯನಿಂದ ವರ ಪಡೆದು ಮಗು ಪಡೆದದ್ದು ನಿಜವಾದರೆ, ಏಳು ಪರದೆ ದಾಟಿ ನಿನ್ನ ಎದೆ ಹಾಲು ಮಗುವಿನ ಬಾಯಿಗೆ ಬೀಳಬೇಕೆಂದು ಆಜ್ಞಾಪಿಸಿದ. ಅದರಂತೆ ಮಗುವಿನ ಬಾಯಿಗೆ ಹಾಲು ಬಿದ್ದುದರಿಂದ ತನ್ನ ಮಗಳನ್ನು, ಮೊಮ್ಮಗನನ್ನು ಎತ್ತಿ ಮುದ್ದಾಡಿ, ತಿಪ್ಪೆಯಲ್ಲಿ ಸಿಕ್ಕಿದ ಮಗುವಿಗೆ ತಿಪ್ಪರಾಜ ಎಂದು ನಾಮಕರಣ ಮಾಡಿ, ಸೂರ್ಯನ ವರಪ್ರಸಾದದಿಂದ ಹುಟ್ಟಿದ ಅವನು ಸೂರ್ಯ ವಂಶದವನೆಂದು ಕರೆದು, ಆ ಮಗು ಎಮ್ಮೆ ಹಾಲು ಕುಡಿದಿದ್ದರಿಂದ ಎಮ್ಮೆಲರು(ಎನುಮೆಲರು) ಎಂಬ ಕುಲವನ್ನು ಕೊಟ್ಟು ತನ್ನ ದೊರೆ ಪಟ್ಟವನ್ನು ತಿಪ್ಪರಾಜನಿಗೆ ವಹಿಸಲಾಯಿತು.[೨೨] ಇವನೇ ಹರತಿ ಪಾಳೇಗಾರರ ಮೂಲ ಸ್ಥಾಪಕ.

ಕುಂಬಾರನಗುಂಡಿ ಕಂಬಾರಕಟ್ಟೆಯಾದ ಬಗೆ

ಕುಂಬಾರಗುಂಡಿ ಕುಂಬಾರಕಟ್ಟೆ ಎಂದು ಬದಲಾಗಲು ಕಾರಣವೇನೆಂದರೆ ಮೈಸೂರು ಸಂಸ್ಥಾನದ ಅರಸರು ತಮ್ಮ ಪಾಳೇಪಟ್ಟುಗಳ ವೀಕ್ಷಣೆಗಾಗಿ ಭೇಟಿ ಕೊಡುತ್ತಿದ್ದ ಸಂದರ್ಭದಲ್ಲಿ ಈ ಮಾರ್ಗವಾಗಿ ಸಾಗುವಾಗ ಅವರನ್ನು ಸ್ವಾಗತಿಸಲೆಂದು ಕುಂಬಾರರು ಸೋರೆ ಮಡಕೆಗಳನ್ನು ತೂರಾಡಿಸಿಕೊಂಡು ಕುಣಿದಾಡಿದ್ದಾಗಿ ಮೇಲಕ್ಕೆ ಎಸೆದ ಮಡಕೆಗಳು ನೆಲಕ್ಕೆ ಬಿದ್ದರೂ ಚೂರಾಗದಿದ್ದನ್ನು ನೋಡಿದ ಅರಸರು ಮಡಕೆಗಳ ತಯಾರಿಕೆಯ ಮಣ್ಣಿನ ಬಗ್ಗೆ ವಿಚಾರಿಸಿ ಜಿಗುಟಾದ ಮಣ್ಣಿನಿಂದ ಮಡಕೆಗಳನ್ನು ಇನ್ನು ಮುಂದೆ ತಯಾರಿಸಬೇಡಿ. ಮಡಕೆಗಳು ಚೂರಾಗದಿದ್ದರೆ ವ್ಯಾಪಾರದಲ್ಲಿ ನಷ್ಟವಾಗಿ ಜೀವನ ಕಷ್ಟವಾಗುತ್ತದೆ. ಮಡಕೆ ಮಾಡಲು ನೀವು ಬೇರೆ ಮಣ್ಣು ಉಪಯೋಗಿಸಿ ಎಂದು ಸೂಚನೆ ನೀಡಿ, ಅದೇ ಸಂದರ್ಭದಲ್ಲಿ ಈ ಕುಂಬಾರ ಗುಂಡಿಯನ್ನು ಇನ್ನು ಮುಂದೆ "ಕುಂಬಾರಗಟ್ಟೆ ಕೆರೆ" ಎಂದು ಕರೆಯಿರಿ ಎಂದು ಸೂಚನೆ ಕೊಟ್ಟಿದ್ದಾಗಿ ಜನರು ಹೇಳುತ್ತಾರೆ.

ಕುಂಬಾರಗಟ್ಟೆ ಬೇಚಿರಾಕ್ ಗ್ರಾಮವಾದ ನಂತರ ಹುಟ್ಟಿದ ಈಗಿನ ಭರಮಪುರ

ಪ್ರಾಚೀನ ಕಾಲದ ದಟ್ಟಾರಣ್ಯದ ಮಧ್ಯದಲ್ಲಿರುತ್ತಿದ್ದ ಸಣ್ಣಪುಟ್ಟ ಪಾಳೇಪಟ್ಟುಗಳು ಇದ್ದಂತೆ ಕುಂಬಾರಗಟ್ಟೆ ಒಂದು ಸಣ್ಣ ಪಾಳೇಪಟ್ಟಾಗಿದ್ದಿರಬಹುದು. ಹಿಂದಿನ ಕಾಲದಲ್ಲಿ 'ಸೌಡು' ಎಂಬ ದರೋಡೆಕೋರರು ರಾತ್ರಿಯ ವೇಳೆ ಕುದುರೆಗಳ ಮೇಲೇರಿ ಬಂದು ಊರುಗಳಿಗೆ ನುಗ್ಗಿ ಜನರನ್ನು ಹಿಂಸಿಸಿ, ಕೈಗೆ ಸಿಕ್ಕುತ್ತಿದ್ದನ್ನು ದೋಚಿಕೊಂಡು ಹೋಗುತ್ತಿದ್ದರಂತೆ. ಅವರನ್ನು 'ಕಳ್ಳ ಕುದುರೆ'ಯವರು, 'ದಂಡಿನವರು' ಎಂದು ಕರೆಯುವುದುಂಟು. ಈ ಕಳ್ಳಕುದುರೆಯವರ ಉಪಟಳವನ್ನು ತಾಳಲಾರದೆ ರಾತ್ರಿ ವೇಳೆ ತಮ್ಮನ್ನು ರಕ್ಷಿಸಿಕೊಳ್ಳಲು ನೆಲಮಾಳಿಗೆಗಳನ್ನು ನಿರ್ಮಿಸಿಕೊಂಡು ಜೀವಭಯದಿಂದ ಬದುಕುತ್ತಿದ್ದರಂತೆ. ಅದು ಅಲ್ಲದೆ, ತಿಂಗಳುಗಟ್ಟಲೆ ಬಿರುಸಾದ ಆಲಿಕಲ್ಲಿನ ಮಳೆ ಎಡಬಿಡದೆ ಸುರಿಯುತ್ತಿದ್ದ ಕಾಲವದಂತೆ. ಸುತ್ತಲೂ ದಟ್ಟವಾದ ಮತ್ತು ಭಯಾನಕ ಕಾಡು ಇದ್ದುದರಿಂದ ಅಲ್ಲಿಯ ಕಾಡುಮೃಗಗಳಿಂದ ಜನರಿಗೂ ಜಾನುವಾರುಗಳಿಗೂ ಪ್ರಾಣಭಯ ಇರುತ್ತಿತಂತೆ. ಈ ಕಾರಣಗಳಿಂದ ಕುಂಬಾರಗಟ್ಟೆಯ ಮನೆಗಳನ್ನು ತೊರೆದು ಭರಮಪುರದಲ್ಲಿ ಬಂದು ನೆಲೆಸಿದರು ಎಂದು ಜನರು ಹೇಳುತ್ತಾರೆ.[೨೮]

ಪಾಂಡವರ ಗುತ್ತಿ ಹಾಳಾಗಿದ್ದು

ಕುಂಬಾರಗಟ್ಟೆ ಗ್ರಾಮ ಎಡಭಾಗದಲ್ಲಿರುವ ಭೋರನಮರಡಿ ಎಂಬಲ್ಲಿದ್ದ ಊರೇ ಪಾಂಡವರ ಗುತ್ತಿ. ಇದನ್ನು ರಸಋುಷಿಗಳ ಬುತ್ತಿ(ಸಿದ್ಧಿ) ರಸಸಿದ್ಧರ ಗುತ್ತಿ ಎಂಬ ಹೆಸರುಗಳಿಂದ ಪೂರ್ವದಲ್ಲಿ ಕರೆಯುವುದು ರೂಢಿಯಲ್ಲಿ ಇತ್ತಂತೆ. ಮರಡಿ ಮೇಲೆ ಭೋರಪ್ಪ ದೇವರ ದೇವಸ್ಥಾನವಿತ್ತು ಎಂದು ಹೇಳುವುದಾದರೂ ಅಲ್ಲಿ ದೇವಸ್ಥಾನ ಕಂಡುಬರುವುದಿಲ್ಲ. ಆದರೆ ಊರು ಇದ್ದ ಜಾಗದಲ್ಲಿ ವೃತ್ತಾಕಾರದ, ಚೌಕಾಕಾರದ ಬೃಹತ್ ಶಿಲಾಸಮಾಧಿಯ ಅವಶೇಷಗಳು ಕಾಣಸಿಗುತ್ತವೆ. ಇವುಗಳನ್ನು ಕಲ್ಲುಗುಚ್ಚಿಗಳೆಂದು ಕರೆಯುತ್ತಾರೆ. ಇಲ್ಲಿ ಋಷಿಗಳು, ಸಿದ್ಧರು, ತಪಸ್ಸು ಮಾಡಿಕೊಂಡು ಗಿಡಮೂಲಿಕೆಗಳಿಂದ ಔಷಧವನ್ನು 'ಮಂಡೋರ' ಎಂಬ ಹೆಸರಿನಲ್ಲಿ ತಯಾರಿಸುತ್ತಿದ್ದರಂತೆ. ಗಿಡಮೂಲಿಕೆಗಳಿಂದ ಭಟ್ಟಿ ಇಳಿಸಿ, ರಸವಿದ್ಯಾಜ್ಞಾನದಿಂದ ಬಂಗಾರವನ್ನು ತಯಾರಿಸುತ್ತಿದ್ದುದಾಗಿ ತಿಳಿದುಬರುತ್ತದೆ. ಅದಕ್ಕಾಗಿಯೇ ಈ ಪ್ರದೇಶವನ್ನು 'ರಸಸಿದ್ಧರ ಬುತ್ತಿ' ಎಂದು ಕರೆದಿರಬಹುದು.[೨೯]

ಇವರು ಔಷಧ ತಯಾರಿಸಲು ನೆಲವನ್ನು ೫ ಅಡಿ ಆಳ, ಅಗಲ ತೋಡಿ ಅದರ ಒಂದು ಭಾಗ ಗಿಡಮೂಲಿಕೆ, ಇನ್ನೊಂದು ಭಾಗ ಕರ್ಲಮಣ್ಣು, ಮತ್ತೊಂದು ಭಾಗ ಸೆಟ್‌ಮಣ್ಣು, ಮತ್ತೊಂದು ಭಾಗ ಜೆಜ್ಜಮಣ್ಣು ಹಾಕಿ ಮುಚ್ಚಿ ಮಂಡೋರ ತಯಾರಿಸುತ್ತಿದ್ದರಂತೆ. ಪಾಂಡವರು ತಮ್ಮ ಅಜ್ಞಾತವಾಸದ ಅವಧಿಯಲ್ಲಿ ಇಲ್ಲಿಗೆ ಬಂದು ಹೋಗಿದ್ದಕ್ಕೆ 'ಪಾಂಡವರ ಗುತ್ತಿ' ಎಂಬ ಹೆಸರು ಬಂದಿದೆಯೆಂಬ ಪ್ರತೀತಿ ಇದೆ.

ಒಟ್ಟಿನಲ್ಲಿ ಈ ಪರಿಸರದ ಸ್ಥಳನಾಮ ಮತ್ತು ಸ್ಥಳಪುರಾಣಗಳು ಇಲ್ಲಿನ ಸಂಸ್ಕೃತಿಯನ್ನು ಎತ್ತಿತೋರಿಸುತ್ತದೆ. ಸಾಮಾಜಿಕ ವ್ಯವಸ್ಥೆಯು ನಾಲ್ಕು ಅಂತಸ್ತುಗಳನ್ನು ಒಳಗೊಂಡಿದ್ದು, ಆ ವರ್ಗಗಳ ಆಯಾ ಕೆಲಸಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗುವುದು. ಈ ಎಲ್ಲಾ ವರ್ಗಗಳ ನಂತರವಾಗಿ ಕೆಲವು ಉಪಪಂಗಡಗಳು ಕಾಲಾನಂತರವಾಗಿ ಸಾಮಾಜಿಕ, ಆರ್ಥಿಕ,

ಧಾರ್ಮಿಕವಾಗಿ ಬೆಳವಣಿಗೆಯಾಗಲು ಪ್ರಯತ್ನಿಸಿದೆ. ಸ್ಥಳನಾಮಗಳು ಪ್ರಾಚೀನ ಕಾಲದಲ್ಲಿ ಗ್ರಾಮಗಳ ಪದನಿಷ್ಪತ್ತಿಯನ್ನು ಶಾಸನಗಳ ಹಿನ್ನೆಲೆಯಲ್ಲಿ ಪರಿಶೀಲಿಸಿ ಇದರ ಜೊತೆಗೆ ಸ್ಥಳಪುರಾಣದಲ್ಲಿ ಈ ಹಿಂದ ನಡೆದ ಘಟನೆಗಳನ್ನು ಐತಿಹ್ಯಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಅಡಿಟಿಪ್ಪಣಿಗಳು

೧. ಗೋಪಾಲಕೃಷ್ಣ ವಿ., **ಸ್ಥಳನಾಮ ಅಧ್ಯಯನಗಳು**, ಪು. ೩೯.

೨. ಅದೇ, ಪು. ೪೧.

೩. ರಾಜೇಗೌಡ ಹೊಸಳ್ಳಿ, **ಹಾಸನ ಜಿಲ್ಲೆಯ ಸ್ಥಳನಾಮಗಳು**, ಪು. ೧೨೯.

೪. ಕಲಬುರ್ಗಿ ಎಂ.ಎಂ., **ಧಾರವಾಡ ಗ್ರಾಮ ನಾಮ ವಿವೇಚನೆ**(ಮಾರ್ಗ-೨ರಲ್ಲಿ), ಪು. ೪೭೧.

೫. ಅದೇ, ಪು. ೪೭೧.

೬. ಅದೇ, ಪು. ೪೭೧.

೭. ಗೋಪಾಲಕೃಷ್ಣ ವಿ., **ಸ್ಥಳನಾಮ ಅಧ್ಯಯನಗಳು**, ಪು. ೪೧.

೮. ಗಿರಿಜಾ ಟಿ., **ಚಿತ್ರದುರ್ಗ ಜಿಲ್ಲಾ ದರ್ಶಿನಿ**, ಪು. ೩೬೦.

೯. ಗೋಪಾಲ್ ಆರ್., **ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪು. ೧೨೭.

೧೦. ಬಿ.ಎಲ್. ರೈಸ್, **ಎಪಿಗ್ರಫಿಯಾ ಕರ್ನಾಟಿಕ**, ಸಂಪುಟ ೧೧, ಹಿರಿಯೂರು, ಪು. ೨೯೨.

೧೧. ಅದೇ, ಪು. ೨೯೪.

೧೨. ಶಾಮಲಾ ರತ್ನಕುಮಾರಿ ಬೆಂ.ಶಾ., **ಚಿತ್ರದುರ್ಗ ಜಿಲ್ಲೆಯಲ್ಲಿ ಹರತಿ ಪಾಳೆಯಗಾರರು**, ಗೋಪಾಲ್ ಆರ್. ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (ಸಂ), ಪುಟ - ೧೩೩.

೧೩. ಗಿರಿಜಾ ಟಿ., **ಚಿತ್ರದುರ್ಗ ಜಿಲ್ಲಾ ದರ್ಶಿನಿ**, ಪುಟ - ೩೫೪.

೧೪. ಭರಂಪುರ ಕಣುಮಪ್ಪ, **ಬೇಚಿರಾಕ್ ಗ್ರಾಮ ಕುಂಬಾರಗಟ್ಟೆ ಸಂಸ್ಕೃತಿ**, ಪುಟ ೪೬.

೧೫. ಅದೇ, ಪು. ೪೭.

೧೬. ಗಿರಿಜಾ ಟಿ., **ಚಿತ್ರದುರ್ಗ ಜಿಲ್ಲಾ ದರ್ಶಿನಿ**, ಪು. ೩೭೨.

೧೭. ಭರಂಪುರ ಕಣುಮಪ್ಪ, **ಬೇಚಿರಾಕ್ ಗ್ರಾಮ ಕುಂಬಾರಗಟ್ಟೆ ಸಂಸ್ಕೃತಿ**, ಪು. ೩೪.

೧೮. ಗಿರಿಜಾ ಟಿ., **ಚಿತ್ರದುರ್ಗ ಜಿಲ್ಲಾ ದರ್ಶಿನಿ**, ಪು. ೩೬೭.

೧೯. ರಾಮದಾಸರೆಡ್ಡಿ ಎಸ್.ಜಿ., **ಕ್ಷೇತ್ರಕಾರ್ಯ(ಇತಿಹಾಸ ಮತ್ತು ಪುರಾತತ್ವ ಶೋಧಕಾರ್ಯ)**, ಪು. ೬೭.

೨೦. ಹೂಗಾರ ಬಿ.ಪಿ., **ಪ್ರಾಚೀನ ಭಾರತದ ಇತಿಹಾಸ**, ಪು. ೬.

೨೧. ಭರಂಪುರ ಕಣುಮಪ್ಪ, **ಬೇಚಿರಾಕ್ ಗ್ರಾಮ ಕುಂಬಾರಗಟ್ಟೆ ಸಂಸ್ಕೃತಿ**, ಪು. ೩೪.

೨೨. ಅದೇ, ಪು. ೮೮.

೨೩. ಅದೇ, ಪು. ೧೯.

೨೪. ಅದೇ, ಪು. ೧೯.

೨೫. ಅದೇ, ಪು. ೨೧.

೨೬. ಅದೇ, ಪು. ೯.

೨೭. ಚಿತ್ರಲಿಂಗಯ್ಯ ಎಂ.ವಿ., **ಹರತಿ ಪಾಳೆಯಗಾರರ ಮೂಲ ವಂಶಾವಳಿ : ಒಂದು ವ್ಯಾಸಂಗ**, ಲಕ್ಷ್ಮಣ್ ತೆಲಗಾವಿ ಹರತಿಸಿರಿ(ಸಂ). ಪು. ೨೮೩.

೨೮. ಭರಂಪುರ ಕಣುಮಪ್ಪ, **ಬೇಚಿರಾಕ್ ಗ್ರಾಮ ಕುಂಬಾರಗಟ್ಟೆ ಸಂಸ್ಕೃತಿ**, ಪು. ೬೨.

೨೯. ಅದೇ, ಪು. ೯.

□□□

ಅಧ್ಯಾಯ : ನಾಲ್ಕು

ಕಲೆ ಮತ್ತು ವಾಸ್ತುಶಿಲ್ಪ

೪.೧. ದೇವಾಲಯ ವಾಸ್ತುಶಿಲ್ಪ

೪.೨. ಮೂರ್ತಿಶಿಲ್ಪ

೪.೩. ಶಾಸನಶಿಲ್ಪ

೪.೪. ಲೌಕಿಕ ವಾಸ್ತುಶಿಲ್ಪ

ಅಧ್ಯಾಯ : ನಾಲ್ಕು

ಕಲೆ ಮತ್ತು ವಾಸ್ತುಶಿಲ್ಪ

೪.೧. ದೇವಾಲಯ ವಾಸ್ತುಶಿಲ್ಪ

ವಾಸ್ತವವಾಗಿ ಕಲೆ ಎಂದರೆ ಮನುಷ್ಯನ ಭಾವನೆಗಳನ್ನು ಚಿತ್ರ ಮತ್ತು ಶಿಲ್ಪಕಲೆಗಳ ರೂಪದಲ್ಲಿ ತೋರಿಸುವುದೇ ಆಗಿದೆ. ಸಾಂಸ್ಕೃತಿಕ ಘಟನಾವಳಿಗಳ ವಿಶಿಷ್ಠ ರೂಪವೇ ಕಲೆ ಎಂದು ಹೇಳಬಹುದು. ಮಾನವನು ಅಲೆದಾಡುವ ಪ್ರವೃತ್ತಿಯಿಂದ ಒಂದೆಡೆ ನೆಲೆನಿಲ್ಲಲು ಆರಂಭಿಸಿದಾಗಿನಿಂದ, ಅವನು ವಾಸಿಸಲು ತನಗೆ ಅನುಕೂಲವಾಗುವ ರೀತಿಯಲ್ಲಿ ಗೃಹ ನಿರ್ಮಿಸಲು ಆರಂಭಿಸಿದನು. ಇಲ್ಲಿಂದಲೇ ವಾಸ್ತುಶಿಲ್ಪವು ಆರಂಭವಾಯಿತೆನ್ನಬಹುದು. ಸಾಮಾನ್ಯವಾಗಿ ವಾಸ್ತು ಎಂದರೆ ಕಟ್ಟಡ, ಮನುಷ್ಯ ಹಾಗೂ ದೇವತೆಗಳು ವಾಸ ಮಾಡುವ ಸ್ಥಳ ಅಥವಾ ವಾಸಕ್ಕೆ ಮನೆಯನ್ನು ಕಟ್ಟಲು ಯೋಗ್ಯವಾದ ಭೂಮಿ. ಇಂತಹ ಕಟ್ಟಡಗಳು ದೇವಾಲಯಗಳಾಗಿರಬಹುದು, ಕೋಟೆಕೊತ್ತಲಗಳಾಗಿರಬಹುದು.

ವಾಸ್ತುಶಿಲ್ಪ ಎಂಬ ಪರಿಭಾಷೆಗೆ ವಿಶಾಲವಾದ ಅರ್ಥವ್ಯಾಪ್ತಿ ಇದ್ದರೂ, ಸಾಮಾನ್ಯವಾಗಿ ದೇವಾಲಯಗಳು ಮಾತ್ರ ವಾಸ್ತುಶಿಲ್ಪಗಳಾಗಿ ಕಣ್ಮುಂದೆ ನಿಲ್ಲುತ್ತವೆ. ಗಟ್ಟಿಯಾದ ವಸ್ತುವಿನಿಂದ ವಾಸ್ತು(ನಿವೇಶನ)ವಿನ ಮೇಲೆ ರಚನೆಗೊಂಡ ಎಲ್ಲಾ ವಾಸಯೋಗ್ಯ ರಚನೆಗಳೂ ವಾಸ್ತುರಚನೆ ಎನಿಸಿಕೊಳ್ಳುತ್ತವೆ. ಈ ರೀತಿಯ ವಾಸ್ತುರಚನೆಗಳು ಮಾನವನ ನಾಗರೀಕತೆಯ ಮಾನದಂಡ ಎಂದರೂ ತಪ್ಪಾಗಲಾರದು. ಕಾಲಾಂತರದಲ್ಲಿ ಮಾನವನ ಬೌದ್ಧಿಕ ವಿಕಸನ ರೀತಿಯ ಖಚಿತತೆಗೆ ಪ್ರತ್ಯಕ್ಷ ಸಾಕ್ಷಿಗಳೆಂದು ಹೇಳಬಹುದು.[೧]

ಸ್ತೂಪ, ಚೈತ್ಯ, ವಿಹಾರ, ಬಸದಿ, ಮಸೀದಿ, ಚರ್ಚ್, ಕೆರೆ-ಕಟ್ಟೆ, ಕೋಟೆ, ಬುರುಜು ಹಾಗೂ ಮನೆಗಳಂತಹ ಎಲ್ಲಾ ರಚನೆಗಳು ವಾಸ್ತುಶಿಲ್ಪಗಳೇ ಆಗಿವೆ.[೨] ಶುಕ್ರನ ಗ್ರಂಥವು ದೇವಾಲಯ, ಅರಮನೆ ಅಥವಾ ರಾಜಗೃಹ, ದೇವತಾಮೂರ್ತಿಗಳ ರಚನೆ, ಸರ್ವಜನೋಪಯೋಗಿ ಗೃಹಗಳು, ಬಾಪಿ, ಪುಷ್ಕರಣಿ ಮುಂತಾದವುಗಳನ್ನು ಶಿಲ್ಪಶಾಸ್ತ್ರದಡಿಯಲ್ಲಿ ಗುರುತಿಸುತ್ತದೆ.[೩] ವಾಸ್ತುವಿನ ಜೊತೆ ಜೊತೆಗೆ ಶಿಲ್ಪವು, ಶಿಲ್ಪಿಯ ಅಭಿರುಚಿಗೆ ಅನುಗುಣವಾಗಿ ವಾಸ್ತುವಿಗೆ ವಿವಿಧ ಭಾಗಗಳಲ್ಲಿ ವ್ಯಕ್ತವಾಗಿರುವುದನ್ನು ನಾವು ಕಾಣುತ್ತೇವೆ. ವಾಸ್ತು ಮತ್ತು ಶಿಲ್ಪಗಳೆರಡೂ

ಕಲಾ ಸೌಂದರ್ಯದ ಪ್ರತೀಕವಾಗಿದೆ. ಇವು ಆರಂಭದಿಂದಲೂ ಜೊತೆ ಜೊತೆಯಾಗಿಯೇ ಬೆಳೆದುಬಂದಿರುವುದನ್ನು ಕಾಣಬಹುದು.

ಮಾನಸಾರ, ಮಯಮತ, ಕಶ್ಯಪ, ವೈಖಾಸನ, ವಿಶ್ವಕರ್ಮಿಯ ಇನ್ನೂ ಮೊದಲಾದ ಶಿಲ್ಪಶಾಸ್ತ್ರ ಗ್ರಂಥಗಳಲ್ಲಿ ದೇವಾಲಯಗಳ ನಿರ್ಮಾಣ ಕುರಿತ ಅನೇಕ ವಿವರಗಳು ದೊರೆಯುತ್ತವೆ. ದುರಾದೃಷ್ಟವಶಾತ್ ಈ ಎಲ್ಲಾ ಗ್ರಂಥಗಳು ಪೂರ್ಣ ಪ್ರಮಾಣದಲ್ಲಿ ದೊರೆಯದೇ ಇದ್ದದ್ದು, ದೇವಾಲಯಗಳ ಬಗ್ಗೆ ಇನ್ನೂ ಹೆಚ್ಚಿನ ವಿವರಗಳು ತಿಳಿದುಕೊಳ್ಳಲು ಸಾಧ್ಯವಾಗುತ್ತಿಲ್ಲ.[೧] ಆದರೂ ಮಾನಸಾರ ಗ್ರಂಥವು ಪ್ರತಿ ಅಧ್ಯಾಯದಲ್ಲೂ ದೇವಾಲಯಗಳ ನಿರ್ಮಾಣದ ಉದ್ದೇಶ, ಶಿಲ್ಪಕ್ಕೆ ಇರಬೇಕಾದ ಅರ್ಹತೆಗಳು, ದೇವಾಲಯ ನಿರ್ಮಾಣಕ್ಕಿರುವ ಯೋಗ್ಯ ಸ್ಥಳ, ದೇವಾಲಯಗಳನ್ನು ಗ್ರಾಮದ, ನಗರಗಳ ಯಾವ ಭಾಗದಲ್ಲಿ, ಯಾವ ದಿಕ್ಕಿನಲ್ಲಿ ಕಟ್ಟಬೇಕು. ಸ್ಥಳ ವಿನ್ಯಾಸ, ಅಧಿಷ್ಠಾನ, ಶಿಖರ, ದೇವರುಗಳ ಪ್ರತಿಷ್ಠಾಪನೆ, ಪರಿವಾರ ದೇವರುಗಳ ಪ್ರತಿಷ್ಠಾಪನೆ ಇನ್ನೂ ಮುಂತಾದ ವಿವರಗಳನ್ನು ತಿಳಿಸುತ್ತದೆ.[೨]

ಮಯಮತ ಗ್ರಂಥವೂ ಮಾನಸಾರ ಕೃತಿಯಲ್ಲಿರುವ ವಿವರಗಳನ್ನು ಹೇಳುತ್ತಾ ಕಟ್ಟಡವನ್ನು ಕಟ್ಟಲು ಪ್ರಾರಂಭಿಸಿದಾಗ ವಾಸ್ತು ಪುರುಷನನ್ನು ತೃಪ್ತಿಪಡಿಸಲು ಮಾಡಬೇಕಾದ ಸಂಸ್ಕಾರ, ವಿಧಿ-ವಿಧಾನಗಳನ್ನು ತಿಳಿಸುತ್ತದೆ. ದೇವಾಲಯದ ಉಪಪೀಠ, ಅಧಿಷ್ಠಾನ, ಭಿತ್ತಿ, ಪ್ರಸ್ತರ, ಕಟ್ಟಡದ ಮೇಲ್ಛಾವಣಿ, ದೇವಾಲಯದ ಶಿಖರ, ಪ್ರಕಾರ, ಮಂಟಪಗಳು, ಬಲಿಪೀಠ ಇನ್ನು ಮುಂತಾದ ವಿವರಗಳನ್ನು ತಿಳಿಸುತ್ತದೆ. ಈ ಗ್ರಂಥದ ಕರ್ತೃ 'ಮಯ' ಇರಬಹುದೆಂದು ಹೇಳಲಾಗುತ್ತದೆ.[೩]

ದೇವಾಲಯಗಳು ಚರಿತ್ರೆಯ ರಚನೆಯಲ್ಲಿ ಪರಿಣಾಮಕಾರಿ ಮಾಧ್ಯಮಗಳಾಗಿ ಕಾರ್ಯ ನಿರ್ವಹಿಸುತ್ತವೆ. ಇವುಗಳು ಮಾನವನ ಚರಿತ್ರೆ ಮತ್ತು ಅವನ ಕಾಲದ ವಿಭಿನ್ನ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಸಾಮಾನ್ಯವಾಗಿ ದೇವಾಲಯ ಎಂದರೆ ದೇವರು ಇರತಕ್ಕ ಸ್ಥಾನ, ಎಡೆ, ಜಾಗ ಎಂದರ್ಥ.[೪] ದೇವಾಲಯವು ಧಾರ್ಮಿಕ ಶ್ರದ್ಧೆಯ ಪ್ರಮುಖ ಅಂಶವಾಗಿದೆ. ಇದಕ್ಕೆ ತನ್ನದೇ ಆದ ಸಂಸ್ಕೃತಿ, ಭವ್ಯ ಪರಂಪರೆ ಇದೆ. ಮಾನವ - ದೈವ, ಇಹ-ಪರ, ವಾಸ್ತವಿಕ-ಆದರ್ಶ ಇವುಗಳ ಮಿಲನದ ಸಂಕೇತವೇ ದೇವಾಲಯ.[೫] ಲೋಕ ಸಂರಕ್ಷಣೆಗಾಗಿ ಭಗವಂತನು ಭೂಮಿಯಲ್ಲಿ ವಾಸ ಮಾಡುವ ಸ್ಥಳವಾದ ದೇವಾಲಯವು ಜೀವಾತ್ಮ ಮತ್ತು ಪರಮಾತ್ಮದಲ್ಲಿ ಇರುವ ಅಂತರವನ್ನು ಬಹುಮಟ್ಟಿಗೆ ಕಡಿಮೆ ಮಾಡುತ್ತದೆ. ಜಗತ್ತಿನ ಸೃಷ್ಟಿಕರ್ತ ಹಾಗೂ ನಿಯಂತ್ರಿಕನಾದ ದೇವರ ಬಳಿಗೆ ಹೋಗಲು ಸರಿಯಾದ ಮಾರ್ಗವನ್ನು ತೋರಿಸುವಂತೆ ಅವನನ್ನು ಪ್ರಾರ್ಥಿಸುವ ಸ್ಥಳವೂ ದೇವಾಲಯವೇ ಆಗಿದೆ ಎಂದು ಹೇಳಬಹುದು.[೬]

ದೇವಾಲಯದ ಉಗಮವು ಬಹುಪ್ರಾಚೀನತೆಯನ್ನು ಪಡೆದಿರುವುದು. ಆದರೆ ಅವುಗಳ ನಿರ್ದಿಷ್ಟ ಸ್ವರೂಪ ವ್ಯಕ್ತವಾಗಿರುವುದಿಲ್ಲ. ಕ್ರಿಪೂ. ೩೦೦೦ ವರ್ಷಗಳಷ್ಟು ಹಿಂದಿನ ಹರಪ್ಪ ಮತ್ತು ಮೊಹಂಜೊದಾರೋ ಉತ್ಖನನಗಳಲ್ಲಿ ಸಾರ್ವತ್ರಿಕ ಕಟ್ಟಡಗಳು ದೊರೆತರೂ ದೇವಾಲಯಗಳು

ವಿಸ್ತಾರವಾದ ರಚನೆ ಕಾಣುವುದಿಲ್ಲ. ಈ ನಿವೇಶನಗಳಲ್ಲಿ ದೊರೆತಿರುವ ಸುಮಾರು ೨೦೦೦ಕ್ಕೂ ಅಧಿಕ ಮುದ್ರೆಗಳು. ಮೆಹಂಜೊದಾರೋದಲ್ಲಿ ದೊರೆತ ನರ್ತಕಿಯ ಕಂಚಿನ ವಿಗ್ರಹ, ಪುರೋಹಿತನ ಶಿಲ್ಪ, ಪಶುಪತಿ, ಶಿವ, ಗೂಳಿ ಹಾಗೂ ಇನ್ನಿತರ ಪ್ರಾಣಿ ಪಕ್ಷಿಗಳ ಆಟಿಕೆ ವಸ್ತುಗಳು ಮತ್ತು ಚಿತ್ರಿತ ಮಡಿಕೆಗಳು ಅವರ ಕಲಾಸಕ್ತಿಗೆ ಸಾಕ್ಷಿಗಳಾಗಿವೆ. ಇವುಗಳಿಂದ ನಮಗೆ ಒಂದಂಶ ಸ್ಪಷ್ಟವಾಗುತ್ತದೆ. ಏನೆಂದರೆ, ದೇವಾಲಯಗಳ ರಚನೆಗೂ ಪೂರ್ವದಲ್ಲಿ ಮೂರ್ತಿಶಿಲ್ಪದ ಬೆಳವಣಿಗೆ ಹಾಗೂ ಆರಾಧನೆ ಇತ್ತೆಂದು ಹೇಳಬಹುದು. ಮೂರ್ತಿ ಆರಾಧನೆಯು ಆರಂಭವಾದ ಬಳಿಕ ಅವರ ರಕ್ಷಣೆಗಾಗಿ ವಾಸ್ತುರೂಪ ನೀಡಲಾಯಿತು.

ಕ್ರಿ.ಪೂ. ೩ನೇ ಶತಮಾನದ ವೇಳೆಗೆ ಭಾರತೀಯ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಭದ್ರವಾದ ಬುನಾದಿಯನ್ನು ಹಾಕಿದ ಕೀರ್ತಿ ಮೌರ್ಯ ಅರಸರಿಗೆ ಸಲ್ಲುತ್ತದೆ. ಅವರ ಅವಧಿಯಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳು ಬಿರುಸುಗೊಂಡು ಬೌದ್ಧಧರ್ಮವು ಅತ್ಯಂತ ಪ್ರಬಲವಾದ ಧರ್ಮವಾಗಿ ಬೆಳೆಯಿತು. ಬುದ್ಧನ ಅವಶೇಷಗಳನ್ನಿಟ್ಟು ಅವುಗಳ ರಕ್ಷಣೆಗಾಗಿ ಕಟ್ಟಿದ ಕಟ್ಟಡವಾದ 'ಸ್ತೂಪ'ಗಳು ನಿರ್ಮಾಣವಾದವು. ಇದನ್ನು ಬೃಹತ್ ಶಿಲಾಸಂಸ್ಕೃತಿಯ ಸಮಾಧಿಯ ಮುಂದುವರೆದ ಹಂತವಾಗಿರುವುದನ್ನು ಗುರುತಿಸಬಹುದು. ದಕ್ಷಿಣ ಭಾರತದಲ್ಲಿ ವೃತ್ತಾಕಾರದ ಈ ರೀತಿಯ ಕಲ್ಲುಗಳಿಂದ ನಿರ್ಮಿತವಾದ ಸಮಾಧಿ ದಿಬ್ಬಗಳ ವೃತ್ತವನ್ನು ಕಾಣಬಹುದು.[೧೦] ಕರ್ನಾಟಕದಲ್ಲಿ ಈ ರೀತಿಯ ಕಟ್ಟಡಗಳು ಶಾತವಾಹನರ ಅವಧಿಯಲ್ಲಿ ಅನೇಕ ನೆಲೆಗಳಲ್ಲಿ ಕಂಡುಬಂದಿವೆ.

ಗುಪ್ತರು ಮೊಟ್ಟಮೊದಲು ಬಾರಿಗೆ ಕಲ್ಲಿನಿಂದ ಕಟ್ಟಡ ರೂಪದ ದೇವಾಲಯಗಳನ್ನು ಕಟ್ಟಲು ಪ್ರಾರಂಭಿಸಿದರು. ಅದುವರೆಗೂ ಸಾಧಾರಣವಾಗಿ ಇಟ್ಟಿಗೆ, ಮರ, ಮಣ್ಣು, ಕಟ್ಟಿಗೆಗಳಿಂದ ದೇಗುಲಗಳನ್ನು ನಿರ್ಮಿಸಿಸುತ್ತಿದ್ದರು. ಅಂದರೆ ಬೇಗ ನಾಶ ಹೊಂದುವಂತಹ ವಸ್ತುಗಳಿಂದ ವಾಸ್ತು ಕೃತಿಗಳನ್ನು ನಿರ್ಮಿಸುವ ಪದ್ಧತಿ ಇತ್ತು. ಗುಪ್ತರ ದೇವಾಲಯಗಳು ಸರಳತೆ, ನಿರಾಲಂಕೃತ ದಿಂದ ನಿರ್ಮಾಣಗೊಂಡಿವೆ. ಕರ್ನಾಟಕದಲ್ಲಿ ಕದಂಬರ ಅವಧಿಯಲ್ಲಿ ಶಿಲಾವಸ್ತುವಿನಿಂದ ನಿರ್ಮಿಸಿದ ದೇವಾಲಯಗಳನ್ನು ಕಾಣಬಹುದು. ಕ್ರಿ.ಶ. ೩ನೇ ಶತಮಾನದಿಂದ ಮೈಸೂರು ಒಡೆಯರವರೆಗಿನ ಅವಧಿಯ ವಾಸ್ತುಶಿಲ್ಪಕಲೆಯ ಉಗಮ ಮತ್ತು ವಿಕಾಸದ ಹೆಜ್ಜೆಗಳನ್ನು ಗುರುತಿಸಬಹುದು.

ಗುಪ್ತರು ಕಲ್ಲಿನಿಂದ ದೇವಾಲಯಗಳನ್ನು ನಿರ್ಮಾಣ ಮಾಡಿದಂತೆ ಬಾದಾಮಿ ಚಾಲುಕ್ಯರು ಹಾಗೂ ಪಲ್ಲವರು ಸಹ ದಕ್ಷಿಣ ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಶಿಲೆಯಿಂದ ಬಿಡಿ ಬಿಡಿಯಾದ ದೇವಾಲಯಗಳನ್ನು ನಿರ್ಮಿಸಿದರು. ನಂತರದ ರಾಷ್ಟ್ರಕೂಟರ ಅವಧಿಯಲ್ಲಿ ಕಲೆ ಮತ್ತು ವಾಸ್ತುಶಿಲ್ಪವು ಗಟ್ಟಿಯಾದ ಮತ್ತು ಸ್ಪಷ್ಟವಾದ ಸ್ವರೂಪವನ್ನು ಪಡೆಯಿತು. ಗೃಹನಿರ್ಮಾಣ ವಾಸ್ತುವಿನಲ್ಲಿ ಬಾದಾಮಿ ಚಾಲುಕ್ಯರಿಗಿಂತಲೂ ಉನ್ನತವಾದ ಕಲಾಕೃತಿಗಳು ಈ ಅವಧಿಯಲ್ಲಿ ನಿರ್ಮಾಣಗೊಂಡಿರುವುದನ್ನು ಗುರುತಿಸಬಹುದು. ಕಲ್ಯಾಣ ಚಾಲುಕ್ಯರು ದೇವಾಲಯಗಳನ್ನು ಸಾಮಾನ್ಯವಾಗಿ ಕಪ್ಪು ಮಿಶ್ರಿತ ನೀಲಿ ಛಾಯೆಯ ಬಳಪದ ಕಲ್ಲಿನಲ್ಲಿ (ಕ್ಲೋರೈಟಿಕ್ ಸಿಸ್ಟ್)

ನಿರ್ಮಿಸಿದ್ದಾರೆ. ಆದುದರಿಂದ ಇವರ ದೇವಾಲಯಗಳಲ್ಲಿ ಅತ್ಯಂತ ಸೂಕ್ಷ್ಮ ಕೆತ್ತನೆ ಹಾಗೂ ಹೆಚ್ಚಿನ ಅಲಂಕಾರಿಕ ಅಂಶಗಳನ್ನು ಕಾಣುತ್ತೇವೆ.[೧೮]

ಹೊಯ್ಸಳರ ಕಾಲವು ದೇವಾಲಯಗಳ ವಿಕಾಸದಲ್ಲಿ ಆಕರ್ಷಕವಾದ ಕಾಲಘಟ್ಟವೆನ್ನಬಹುದು. ಇವರು ತಮ್ಮ ದೇವಾಲಯಗಳನ್ನು ನಿರ್ಮಿಸಲು ಬಳಸಿದ ಮಾಧ್ಯಮ ಅತ್ಯಂತ ಸೂಕ್ಷ್ಮ ಕೆತ್ತನೆಗಳು, ನಿರ್ಮಾಣ ಶೈಲಿ 'ಹೊಯ್ಸಳ ಶೈಲಿ' ಎಂದೇ ಪ್ರತ್ಯೇಕವಾಗಿ ಗುರುತಿಸುವಷ್ಟು ಮಟ್ಟಿಗೆ ವಿಶೇಷತೆಯಿಂದ ಕೂಡಿದೆ.[೨] ಹೊಯ್ಸಳರ ನಂತರ ದಕ್ಷಿಣ ಭಾರತದಲ್ಲಿ ಆಳ್ವಿಕೆ ನಡೆಸಿದ ವಿಜಯನಗರದ ಅರಸರ ಕಾಲಕ್ಕೆ ದ್ರಾವಿಡ ಶೈಲಿಯು ಉಚ್ಛ್ರಾಯ ಸ್ಥಿತಿ ತಲುಪಿದ್ದನ್ನು ಕಾಣುತ್ತೇವೆ. ಇವರು ದೇವಾಲಯಗಳನ್ನು ನಿರ್ಮಿಸಲು ಗ್ರಾನೈಟ್ ಶಿಲೆಯನ್ನು ಬಳಸಿದ್ದರಿಂದ ಹೆಚ್ಚಿನ ಅಲಂಕಾರಿಕ ಅಂಶಗಳು ಕಂಡುಬರುವುದಿಲ್ಲ. ವಿಜಯನಗರ ಅರಸರ ಆಶ್ರಿತರಾಗಿದ್ದ ಪಾಳೇಗಾರರು ವಿಜಯನಗರ ಪತನ ನಂತರ ಅವರ ರಾಜ್ಯಾಡಳಿತ ಕ್ರಮ, ಅವರ ಸಂಸ್ಕೃತಿಯನ್ನು ಅನುಸರಿಸಿ ಕಾಪಾಡಿಕೊಂಡು ಬಂದರು. ಪಾಳೆಯಗಾರ ಆಳ್ವಿಕೆಯಲ್ಲಿ ವಿಜಯನಗರ ಅರಸರ ವೈಭವವಿರದಿದ್ದರೂ ತಕ್ಕಮಟ್ಟಿಗೆ ನಡೆಸಿಕೊಂಡು, ಉಳಿಸಿಕೊಂಡು ಬಂದಿದ್ದಾರೆ. ಇವರ ಶೈಲಿಯನ್ನು 'ವಿಜಯನಗರೋತ್ತರ ಶೈಲಿ' ಎಂದು ಕರೆಯಬಹುದು.[೨೩]

ಐಮಂಗಲ ಪರಿಸರದ ದೇವಾಲಯಗಳು ಹೆಚ್ಚಾಗಿ ನೊಳಂಬರು, ಹರತಿ ಪಾಳೇಗಾರರು, ಚಿತ್ರದುರ್ಗ ಪಾಳೆಯಗಾರರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿವೆ. ಈ ಪರಿಸರದಲ್ಲಿ ಹೆಚ್ಚಾಗಿ ಶೈವ, ವೈಷ್ಣವ ಹಾಗೂ ಶಾಕ್ತ ಪಂಥದ ದೇವಾಲಯಗಳು ಕಂಡುಬರುತ್ತವೆ. ಐಮಂಗಲ ಪರಿಸರದಲ್ಲಿ ಕಂಡುಬರುವ ಪ್ರಮುಖ ದೇವಾಲಯಗಳನ್ನು ಅಧ್ಯಯನದ ಹಿನ್ನೆಲೆಯಲ್ಲಿ ವಿವರಿಸುವ ಪ್ರಯತ್ನ ಮಾಡಲಾಗಿದೆ.

ಶೈವ ದೇವಾಲಯಗಳು

ಐಮಂಗಲ ಹೋಬಳಿಯ ವಿವಿಧ ಕಡೆ ಶೈವ, ವೈಷ್ಣವ, ಶಾಕ್ತಪಂಥದ ದೇವಾಲಯಗಳು ಹಾಗೂ ಇತರೆ ದೇವಾಲಯಗಳು ಕಂಡುಬರುತ್ತವೆ. ಆದರೆ ಪ್ರಸ್ತುತ ಪರಿಸರದ ಅನೇಕ ಕಡೆ ಶೈವ ದೇವಾಲಯಗಳು ಪ್ರಧಾನವಾಗಿ ಕಂಡುಬರುತ್ತವೆ. ಅವುಗಳಲ್ಲಿ ಮಹತ್ವದ ದೇವಾಲಯಗಳ ವಾಸ್ತುಕಲೆಯು ಈ ಕೆಳಕಂಡಂತಿದೆ.

ಊರು : ಮರಡಿದೇವಿಗೆರೆ

ಸ್ಮಾರಕ : ಕೋಡಿ ಮಲ್ಲೇಶ್ವರ

ಸ್ಥಳ : ಊರಿನ ಹೊರಭಾಗದಲ್ಲಿ

ಅಭಿಮುಖ : ಪೂರ್ವಾಭಿಮುಖ

ಕಾಲ : ಕ್ರಿ.ಶ. ಸುಮಾರು ೯-೧೦ನೇ ಶತಮಾನ

ಈ ದೇವಾಲಯವು ಗರ್ಭಗೃಹ, ನವರಂಗವನ್ನು ಹೊಂದಿದೆ. ಚೌಕಾಕಾರದ ಗರ್ಭಗೃಹವಿದ್ದು ಅದರಲ್ಲಿ ಸುಮಾರು ಎರಡು ಅಡಿ ಎತ್ತರದ ಶಿವಲಿಂಗವಿದೆ. ದ್ವಾರವು ಸರಳವಾಗಿದ್ದು,

ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಉಬ್ಬುಶಿಲ್ಪವಿದೆ. ಇದರ ಮುಂದಿನ ನವರಂಗದಲ್ಲಿ ಚೌಕ ಮತ್ತು ಅಷ್ಟಕೋನ ಚೌಕ ಮತ್ತು ವೃತ್ತಾಕಾರದ ನಾಲ್ಕು ಕಂಬಗಳಿದ್ದು ಅವು ಸರಳವಾಗಿವೆ. ಇಲ್ಲಿನ ಕಂಬವೊಂದರ ಚೌಕಾಕಾರದ ಭಾಗದಲ್ಲಿ ಕಲಶದ ರೀತಿಯ ಅಲಂಕಾರವಿದ್ದು, ಅದೇ ಕಂಬದ ದಂಡಾಗ್ರ ಭಾಗದಲ್ಲಿ ಮಾತ್ರ ಆಭರಣಗಳ ಅಲಂಕಾರವಿದೆ. ಈ ಕಂಬಗಳು ರಾಷ್ಟ್ರಕೂಟರ ಕಾಲದವುಗಳೆಂದು ಕಂಬಗಳ ಲಕ್ಷಣಗಳಿಂದ ಹೇಳಬಹುದು.[೧೪] ನವರಂಗದ ಮಧ್ಯಭಾಗದಲ್ಲಿ ಗರ್ಭಗುಡಿಗೆ ಎದುರಾಗಿ ಪೀಠದ ಮೇಲೆ ಸುಮಾರು ಎರಡು ಅಡಿ ಎತ್ತರದ ನಂದಿಯೊಂದಿದೆ. ಇಲ್ಲಿ ಗಣೇಶ, ನವದೇವತೆಗಳು ಹಾಗೂ ಶ್ರೀದೇವಿಯ ಮೂರ್ತಿಗಳಿವೆ. ಮುಚ್ಚುಗೆಯಲ್ಲಿ ಅರಳಿದ ಪದ್ಮವಿದೆ. ನವರಂಗದ ಒಳಭಿತ್ತಿಯನ್ನು ನಂತರ ಕಾಲದಲ್ಲಿ ಮಣ್ಣಿನಿಂದ ಗಾರೆ ಮಾಡಿ ಟೈಲ್ಸ್ ಹಾಕಿದ್ದಾರೆ. ನವರಂಗದ ಪ್ರವೇಶದ್ವಾರವು ಪೂರ್ವದಿಕ್ಕಿಗಿದ್ದು ಇಲ್ಲಿ ಶೈವ ದ್ವಾರಪಾಲಕರು ತ್ರಿಶೂಲ, ಡಮರುಗ, ಗದೆ ಹಿಡಿದು ನಿಂತಿದ್ದಾರೆ. ದ್ವಾರವು ಹೂಬಳ್ಳಿ, ಕುಂಭ, ಪುಷ್ಪಗಳಿಂದ ಕೂಡಿದ್ದು ಮೊದಲಿನ ಎರಡು ಶಾಖೆಗಳು ಲಲಾಟಬಿಂಬದವರೆಗೂ ಮುಂದುವರೆದಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು ಇದರ ಮೇಲ್ಭಾಗದಲ್ಲಿ ಗಣಪತಿಯ ಉಬ್ಬುಶಿಲ್ಪವಿದೆ.

ಈ ದೇವಾಲಯದ ಹೊರಭಾಗದ ಅಧಿಷ್ಠಾನವು ಭೂಮಿಯಲ್ಲಿ ಹೂತಿರುವುದರಿಂದ, ಅದರ ಭಾಗಗಳು ಗೋಚರಿಸುವುದಿಲ್ಲ. ದೇವಾಲಯದ ಭಿತ್ತಿಯನ್ನು ಗ್ರಾನೈಟ್ ಶಿಲೆಯನ್ನು ಬಳಸಿ ಕಟ್ಟಲಾಗಿದೆ. ಭಿತ್ತಿಭಾಗದಲ್ಲಿ ಯಾವುದೇ ಶಿಲ್ಪಗಳಿಲ್ಲ. ಪ್ರಸ್ತರದಲ್ಲಿನ ಕಪೋತ ಭಾಗವು ಸರಳವಾಗಿದ್ದು ಗರ್ಭಗುಡಿಯ ಮೇಲೆ ದ್ವಿತಲ ಮಾದರಿಯ ಶಿಖರವಿದೆ. ದೇವಾಲಯದ ಮುಂಭಾಗ ದೀಪಸ್ತಂಭ, ಸುತ್ತಲೂ ಪ್ರಕಾರ ಗೋಡೆ, ಶಿವಲಿಂಗ, ನಂದಿ, ವೀರಗಲ್ಲು ಮೊದಲಾದ ಶಿಲ್ಪಗಳಿವೆ.

ಊರು : ವದ್ದೀಕೆರೆ

ಸ್ಮಾರಕ : ಕಾಲಭೈರವ/ಸಿದ್ಧೇಶ್ವರ ದೇವಾಲಯ

ಸ್ಥಳ : ಗ್ರಾಮದ ಪೂರ್ವಕ್ಕೆ

ಅಭಿಮುಖ : ದಕ್ಷಿಣಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೬-೧೭ನೇ ಶತಮಾನ

ಈ ದೇವಾಲಯವು ಎರಡು ಗರ್ಭಗೃಹ. ಒಂದು ಅಂತರಾಳ, ನವರಂಗವನ್ನು ಹೊಂದಿದೆ. ಮುಖ್ಯ ಗರ್ಭಗೃಹವು ಚೌಕಾಕಾರವಾಗಿದ್ದು ಅದರಲ್ಲಿ ಸುಮಾರು ೪ ಅಡಿ ಎತ್ತರ, ೨ ಅಡಿ ಅಗಲ ವಿಸ್ತೀರ್ಣದಲ್ಲಿರುವ ಕಾಲಭೈರವ ಅಥವಾ ಸಿದ್ಧೇಶ್ವರನ ಮೂರ್ತಿಶಿಲ್ಪವಿದೆ. ಚತುರ್ಭುಜ ಧಾರಿಯಾದ ಭೈರವನು ಎತ್ತರದ ಪೀಠದ ಮೇಲಿದ್ದು ಕತ್ತಿ, ರುಂಡ, ತ್ರಿಶೂಲ, ಡಮರುಗಳನ್ನು ಹಿಡಿದಿದ್ದಾನೆ. ದ್ವಾರವು ಸರಳವಾಗಿದ್ದು, ಬಾಗಿಲುವಾಡಕ್ಕೆ ಹಿತ್ತಾಳೆ ಕವಚದಲ್ಲಿ ಮಾಡಿದ ಉಬ್ಬು ಶಿಲ್ಪದ ಪಟ್ಟಿಕೆಗಳನ್ನು ಅಲಂಕರಿಸಲಾಗಿದೆ. ಇದರ ಮುಂದಿನ ಅಂತರಾಳವು ಚೌಕಾಕಾರವಾಗಿದ್ದು ಇದರಲ್ಲಿ ಕಾಲಭೈರವನ ಉತ್ಸವಮೂರ್ತಿಯನ್ನು ಅಲಂಕರಿಸಿ ಕುಳ್ಳರಿಸಲಾಗಿದೆ. ದ್ವಾರವು ಸ್ತಂಭಶಾಖೆಯಿಂದ ಕೂಡಿದೆ. ಬಾಗಿಲುವಾಡಕ್ಕೆ ಹಿತ್ತಾಳೆ ಕವಚದಲ್ಲಿ ಮಾಡಿದ ಉಬ್ಬು ಶಿಲ್ಪದ

ಪಟ್ಟಿಕೆಗಳನ್ನು ಜೋಡಿಸಿದ್ದು ವಿವಿಧ ಕಿನ್ನರ ಶಿಲ್ಪಗಳು, ಗಣೇಶ, ಹೂಬಳ್ಳಿ ಹಂಸ ಮುಂತಾದ ಉಬ್ಬು ಕೆತ್ತನಗಳು ಅತ್ಯಂತ ಆಕರ್ಷಣೀಯವಾಗಿವೆ. ಶೈವ ದ್ವಾರಪಾಲಕರು ತ್ರಿಶೂಲ, ಡಮರುಗ, ಗದೆ ಹಿಡಿದು ನಿಂತಿದ್ದಾರೆ. ಇದನ್ನು ಸಹ ಹಿತ್ತಾಳೆ ಕವಚದಲ್ಲಿ ಮಾಡಲಾಗಿದೆ. ಪಶ್ಚಿಮ ಗರ್ಭಗೃಹ ಚೌಕಾಕಾರವಾಗಿದ್ದು ಅದರಲ್ಲಿ ಸುಮಾರು ೩೧/೨ ಅಡಿ ಎತ್ತರ, ೨ ಅಡಿ ಅಗಲ ವಿಸ್ತೀರ್ಣದಲ್ಲಿರುವ ಚನ್ನಕೇಶವ ಮೂರ್ತಿಶಿಲ್ಪವಿದೆ. ಚತುರ್ಭುಜಧಾರಿಯಾದ ಚೆನ್ನಕೇಶವನು ಶಂಕ, ಚಕ್ರ, ಪದ್ಮ, ಗದೆಗಳನ್ನು ಹಿಡಿದಿರುವನು. ದ್ವಾರವು ಸರಳವಾಗಿದ್ದು, ಬಾಗಿಲುವಾಡಕ್ಕೆ ಹಿತ್ತಾಳೆ ಕವಚದಲ್ಲಿ ಮಾಡಿದ ಉಬ್ಬು ಶಿಲ್ಪದ ಪಟ್ಟಿಕೆಗಳನ್ನು ಅಲಂಕರಿಸಲಾಗಿದೆ. ಇದರ ಮುಂದಿನ ನವರಂಗದಲ್ಲಿ ೪-೮-೪-೮-೪ ರೀತಿಯ ಪಾರ್ಶ್ವದಲ್ಲಿ ಕಡೆದಿರುವ ನಾಲ್ಕು ಕಂಬಗಳಿದ್ದು ಅವು ಸರಳವಾಗಿವೆ. ಇಲ್ಲಿನ ಕಂಬಗಳ ಮೇಲೆ ಉಬ್ಬು ಶಿಲ್ಪಗಳು ಕಂಡುಬಂದಿಲ್ಲ. ಮುಚ್ಚುಗೆಯಲ್ಲಿ ಅರಳಿದ ಪದ್ಮವಿದೆ. ನವರಂಗದ ಪ್ರವೇಶದ್ವಾರವು ಪೂರ್ವ ಮತ್ತು ದಕ್ಷಿಣ ದಿಕ್ಕಿಗಿದೆ.

ಈ ದೇವಾಲಯದ ಹೊರಗೋಡೆಯ ಅಧಿಷ್ಠಾನದಲ್ಲಿ ಉಪಾನ, ಜಗತಿ ತ್ರಿಪಟ್ಟಿ, ಕುಮುದ, ಪದ್ಮ ಭಾಗಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ದೇವಾಲಯದ ಭಿತ್ತಿಯನ್ನು ಚಪ್ಪಡಿ ಕಲ್ಲನ್ನು ಬಳಸಿ ಕಟ್ಟಲಾಗಿದೆ. ಭಿತ್ತಿ ಭಾಗದಲ್ಲಿ ಯಾವುದೇ ಶಿಲ್ಪಗಳಿಲ್ಲ. ಪ್ರಸ್ತರದಲ್ಲಿ ಕಪೋತ ಭಾಗವು ಸರಳವಾಗಿದ್ದು ಗರ್ಭಗುಡಿಯ ಮೇಲೆ ದ್ವಿತಲ ಮಾದರಿಯ ಶಿಖರವಿದೆ, ಶಿಖರದ ಮೇಲೆ ಸ್ತೂಪಿ ಇದೆ. ದೇವಾಲಯದ ಆವರಣದಲ್ಲಿ ಪೂರ್ವಕ್ಕೆ ಮುಖ ಮಾಡಿದ ಚಿಕ್ಕ ಗುಡಿಯಿದ್ದು ಅದರಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಶಿವಲಿಂಗಕ್ಕೆ ಅಭಿಮುಖವಾಗಿ ನಂದಿಯೊಂದಿದೆ. ಈ ನಂದಿಯು ಎಡಗಾಲನ್ನು ಮುಂದೆ ಚಾಚಿ ಮಲಗಿರುವ ಹಾಗೂ ಕಲಾತ್ಮಕ ಆಭರಣಗಳಿಂದ ಅಲಂಕೃತವಾದ ನಂದಿ ಶಿಲ್ಪವಿದೆ. ದೇವಾಲಯದ ಸುತ್ತಲೂ ವಿಶಾಲವಾದ ಆವರಣ, ಮುಂಭಾಗ ದೀಪಸ್ತಂಭ, ವೀರಗಲ್ಲು ಮತ್ತು ಮಹಾಸತಿಗಲ್ಲುಗಳು ಹಾಗೂ ಪ್ರಾಚೀನ ಕಾಲದ ಬಾವಿಗಳಿವೆ. ಇದನ್ನು 'ಮಜ್ಜನ ಬಾವಿ'[೧೫] ಎಂದು ಕರೆಯುತ್ತಾರೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಎರಡು ಶಾಸನಗಳಿವೆ. ದೇವಾಲಯಕ್ಕೆ ದಾನ ನೀಡಿದ್ದು ಹಾಗೂ ಮಠವಿದ್ದ ಬಗ್ಗೆ ಶಾಸನಗಳು ತಿಳಿಸುತ್ತವೆ.

ಊರು : ಹರ್ತಿಕೋಟೆ

ಸ್ಮಾರಕ : ವೀರಭದ್ರೇಶ್ವರ ದೇವಾಲಯ

ಸ್ಥಳ : ಗ್ರಾಮದ ಪೂರ್ವಕ್ಕೆ

ಅಭಿಮುಖ : ಉತ್ತರಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೬-೧೭ನೇ ಶತಮಾನ

ಈ ದೇವಾಲಯವು ಗರ್ಭಗೃಹ, ಅಂತರಾಳವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರ ವಾಗಿದ್ದು ಅದರಲ್ಲಿ ಸುಮಾರು ೪ ಅಡಿ ಎತ್ತರ ೨ ಅಡಿ ಅಗಲ ವಿಸ್ತೀರ್ಣದಲ್ಲಿರುವ ವೀರಭದ್ರನ ಮೂರ್ತಿಶಿಲ್ಪವಿದೆ. ಚತುರ್ಭುಜದಾರಿಯಾದ ವೀರಭದ್ರನು ಎತ್ತರದ ಪೀಠದ ಮೇಲಿದ್ದು ಖಡ್ಗ, ಬಿಲ್ಲು, ಬಾಣ ಹಾಗೂ ಗುರಾಣಿಗಳನ್ನು ಹಿಡಿದಿದ್ದಾನೆ. ದ್ವಾರವು ಸರಳವಾಗಿದ್ದು,

ಬಾಗಿಲುವಾಡಕ್ಕೆ ಪ್ರಭಾವಳಿಯನ್ನು ಇಡಲಾಗಿದೆ. ಇವರ ಮುಂದಿನ ಅಂತರಾಳವು ಆಯಾತಕಾರ ವಾಗಿದ್ದು ಇದರಲ್ಲಿ ವೀರಭದ್ರನ ಉತ್ಸವಮೂರ್ತಿಯನ್ನು ಅಲಂಕರಿಸಿ ಕುಳ್ಳಿರಿಸಲಾಗಿದೆ. ದ್ವಾರಪಾಲಕರು ತ್ರಿಶೂಲ, ಡಮರುಗ, ಗದೆ ಹಿಡಿದು ನಿಂತಿದ್ದಾರೆ. ದ್ವಾರವು ಹೂಬಳ್ಳಿಗಳಿಂದ ಕೂಡಿದ್ದು ಮೊದಲಿನ ಎರಡು ಶಾಖೆಗಳು ಲಲಾಟಬಿಂಬದವರೆಗೂ ಮುಂದುವರೆದಿದ್ದು ಲಲಾಟಬಿಂಬದಲ್ಲಿ ಗಣಪತಿ ಶಿಲ್ಪವಿದೆ. ಬಾಗಿಲುವಾಡಕ್ಕೆ ಓತ್ತಾಳೆ ಕವಚನಗಳಲ್ಲಿ ಅಲಂಕರಿಸಿದ್ದಾರೆ.

ಈ ದೇವಾಲಯದ ಹೊರಗೋಡೆಯ ಅಧಿಷ್ಠಾನದಲ್ಲಿ ಉಪಾನ, ಜಗತಿ, ತ್ರಿಪಟ್ಟ, ಕುಮುದ, ಪದ್ಮ ಭಾಗಗಳು ಸ್ಪಷ್ಟವಾಗಿ ಗೋಚರಿಸುತ್ತವ. ದೇವಾಲಯದ ಭಿತ್ತಿಯನ್ನು ಚಪ್ಪಡಿ ಕಲ್ಲನ್ನು ಬಳಸಿ ಕಟ್ಟಲಾಗಿದೆ. ಭಿತ್ತಿ ಭಾಗದಲ್ಲಿ ಯಾವುದೇ ಶಿಲ್ಪಗಳಿಲ್ಲ. ಪ್ರಸ್ತರದಲ್ಲಿ ಕಪೋತ ಭಾಗವು ಸರಳವಾಗಿದ್ದು ಗರ್ಭಗುಡಿಯ ಮೇಲೆ ದ್ವಿತಲ ಮಾದರಿಯ ಶಿಖರವಿದೆ. ಈ ದೇವಾಲಯ ಶಿಥಿಲಾವಸ್ಥೆಯಲ್ಲಿದ್ದರಿಂದ ನವರಂಗವನ್ನು ಕೆಡವಲಾಗಿದೆ. ದೇವಾಲಯದ ಆವರಣದಲ್ಲಿ ಸುಮಾರು ೩ ಅಡಿ ಎತ್ತರದ ಶಿವಲಿಂಗ, ೨ ಅಡಿ ಎತ್ತರದ ಬಸವಣ್ಣ ಶಿಲ್ಪಗಳಿದ್ದು ಕಪ್ಪು ಗ್ರಾನೈಟ್ ಶಿಲೆಯಲ್ಲಿ ಖಂಡರಿಸಲಾಗಿದೆ. ದೇವಾಲಯದ ಸುತ್ತಲೂ ಪ್ರಕಾರ ಗೋಡೆಯಿದ್ದು, ದ್ವಾರಮಂಟಪವನ್ನು ಹೊಂದಿದೆ. ಮುಂಭಾಗ ದೀಪಸ್ತಂಭವಿದೆ.

ದೇವಾಲಯದ ಮುಂಭಾಗದಲ್ಲಿ ಶಾಸನವಿದೆ. ಕ್ರಿ.ಶ. ೧೭೦೦ ರ ಶಾಸನವು "ಶ್ರೀಮನ್ ಮಹಾಮಲ್ಲಿಕಾರ್ಜುನ ದೇವರ ಶ್ರೀಪಾದಪದ್ಮಂಗಳಿಗೆ ಶ್ರೀ ವೀರಶೈವ ಭಿಕ್ಷಾವತಿ ಅಯ್ಯನವರು ತಮ್ಮ ಗುರುಸ್ವಾಮಿ ಸಿದ್ದಭಿಕ್ಷಾವತಿಗೆ ಪುಣ್ಯವಾಗಲೆಂದು ಹರತಿಯ ವೀರಭದ್ರ ದೇವರ ಹರಮಂದರ ಪರ್ವತ ದೇವರಿಗೆ ಪಡಿಗೆ ಕೊಟ್ಟ ಭಿಕ್ಷೆ" ಎಂತಲೂ ಹರತಿಕರಿ ಒಡೆಯರ ಮಗ ವೀರಣ್ಣ ಒಡೆಯರಿಗೆ ನಿರೂಪಮ ಕೊಟ್ಟು ಹಾಕಿಸಿದ ವಿವರವನ್ನು ತಿಳಿಸುತ್ತದೆ.[೧೬]

ಊರು : ಹುಲಿತೊಟ್ಲು

ಸ್ಮಾರಕ : ಭೈರವೇಶ್ವರ ದೇವಾಲಯ

ಸ್ಥಳ : ಗ್ರಾಮದ ಹೊರಭಾಗದಲ್ಲಿ

ಅಭಿಮುಖ : ದಕ್ಷಿಣಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೭-೧೮ನೇ ಶತಮಾನ

ಈ ದೇವಾಲಯವು ಗರ್ಭಗೃಹ, ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಅದರಲ್ಲಿ ಸುಮಾರು ೪ ಅಡಿ ಎತ್ತರ, ೨ ಅಡಿ ಅಗಲ ವಿಸ್ತೀರ್ಣದಲ್ಲಿ ಭೈರವನ ಮೂರ್ತಿಶಿಲ್ಪವಿದೆ. ಚತುರ್ಭುಜಧಾರಿಯಾದ ಭೈರವನು ಎತ್ತರದ ಪೀಠದ ಮೇಲಿದ್ದು ಕತ್ತಿ, ರುಂಡ, ತ್ರಿಶೂಲ, ಡಮರುಗವನ್ನು ಹಿಡಿದಿದ್ದಾನೆ. ದ್ವಾರವು ಸರಳವಾಗಿದ್ದು, ಲಲಾಟದಲ್ಲಿ ಗಣೇಶನ ಉಬ್ಬು ಶಿಲ್ಪವಿದೆ. ಇದರ ಮುಂದಿನ ಸಭಾಮಂಟಪದಲ್ಲಿ ಪೀಠ ಭಾಗದ ಮೇಲೆ ೪-೮-೪-೮ ವೃತ್ತಾಕಾರದ ಬೋಧಿಗೆ ಇರುವ ಆರು ಕಂಬಗಳಿದ್ದು ಅವು ಸರಳವಾಗಿವೆ. ಇಲ್ಲಿನ ಕಂಬಗಳ ಮೇಲೆ ಚೌಕಾಕಾರದ ಭಾಗದಲ್ಲಿ ೪-೬-೮ ರೀತಿಯ ಪುಷ್ಪ ಧಳಗಳನ್ನು ಖಂಡರಿಸಲಾಗಿದೆ.

ಈ ದೇವಾಲಯದ ಅಧಿಷ್ಠಾನವು ಭೂಮಿಯಲ್ಲಿ ಹೂತಿರುವುದರಿಂದ, ಅದರ ಭಾಗಗಳು ಗೋಚರಿಸುವುದಿಲ್ಲ. ದೇವಾಲಯದ ಭಿತ್ತಿಯನ್ನು ಚಪ್ಪಡಿ ಕಲ್ಲನ್ನು ಬಳಸಿ ಕಟ್ಟಲಾಗಿದೆ. ಭಿತ್ತಿ ಭಾಗದಲ್ಲಿ ಯಾವುದೇ ಶಿಲ್ಪಗಳಿಲ್ಲ. ಪ್ರಸ್ತರದಲ್ಲಿನ ಕಪೋತ ಭಾಗವು ಸರಳವಾಗಿದ್ದು ಗರ್ಭಗುಡಿಯ ಮೇಲೆ ಶಿಖರವಿಲ್ಲ. ದೇವಾಲಯ ಮುಂಭಾಗದಲ್ಲಿ ಸುಮಾರು ೧೫ ಅಡಿ ಎತ್ತರದ ದೀಪಸ್ತಂಭವಿದೆ.

ಊರು : ಎಂ.ಡಿ. ಕೋಟೆ

ಸ್ಮಾರಕ : ಈಶ್ವರ ದೇವಾಲಯ

ಸ್ಥಳ : ಗ್ರಾಮದ ಊರಬಾಗಿಲು ಹತ್ತಿರ

ಅಭಿಮುಖ : ಉತ್ತರಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೭-೧೮ನೇ ಶತಮಾನ

ಈ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಅದರಲ್ಲಿ ಎರಡು ಅಡಿ ಎತ್ತರದ ಶಿವಲಿಂಗವಿದೆ. ದ್ವಾರವು ಸರಳವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಇದರ ಮುಂದಿನ ಅಂತರಾಳದಲ್ಲಿ ಗರ್ಭಗುಡಿಗೆ ಎದುರಾಗಿ ಪೀಠದ ಮೇಲೆ ಸುಮಾರು ಮೂರು ಅಡಿ ಎತ್ತರದ ನಂದಿಯೊಂದಿದೆ. ದ್ವಾರವು ಹೂಬಳ್ಳಿ - ಪುಷ್ಪಗಳಿಂದ ಕೂಡಿದ್ದು ಮೊದಲಿನ ಎರಡು ಶಾಖೆಗಳು ಲಲಾಟಬಿಂಬದವರೆಗೂ ಮುಂದುವರೆದಿದೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಇದರ ಮುಂದಿನ ತೆರೆದ ಮಂಟಪವನ್ನು ಇತ್ತೀಚಿಗೆ ನಿರ್ಮಿಸಲಾಗಿದೆ. ದೇವಾಲಯದ ಹೊರ ಗೋಡೆಯ ಅಧಿಷ್ಠಾನ ಹಾಗೂ ಭಿತ್ತಿಯು ಸರಳವಾಗಿದೆ. ಭಿತ್ತಿಯ ಮೇಲ್ಭಾಗವನ್ನು ಇತ್ತೀಚಿಗೆ ನವೀಕರಿಸಿದ್ದಾರೆ. ಗರ್ಭಗುಡಿಯ ಮೇಲೆ ಶಿಖರವಿಲ್ಲ. ದೇವಾಲಯದ ಸುತ್ತಲೂ ಪ್ರಕಾರ ಗೋಡೆಯೊಂದನ್ನು ಈಚೆಗೆ ನಿರ್ಮಿಸಿದ್ದಾರೆ.

ಊರು : ಐಮಂಗಲ

ಸ್ಮಾರಕ : ಬಸವಣ್ಣ ದೇವಾಲಯ

ಸ್ಥಳ : ಬಂಗಾರಪ್ಪನ ತೋಟದಲ್ಲಿ

ಅಭಿಮುಖ : ಉತ್ತರಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೬-೧೭ನೇ ಶತಮಾನ

ಈ ದೇವಾಲಯವು ಗರ್ಭಗೃಹ ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಅದರಲ್ಲಿ ಸುಮಾರು ೩ ಅಡಿ ಎತ್ತರದ ಪಾಣೀಪೀಠದ ಮೇಲೆ ನಂದಿ ಮಲಗಿರುವ ಶಿಲ್ಪವಿದೆ. ಶಿವಲಿಂಗದ ಬ್ರಹ್ಮಸೂತ್ರ ಒಡೆದು ಹೋಗಿರುವುದರಿಂದ ಅದನ್ನು ಪಾಣೀಪೀಠದ ಪಕ್ಕದಲ್ಲಿ ಇರಿಸಲಾಗಿದೆ. ದ್ವಾರವು ಸರಳವಾಗಿದ್ದು ಇಲ್ಲಿ ಶೈವ ದ್ವಾರಪಾಲಕರು ತ್ರಿಶೂಲ, ಡಮರುಗ, ಗದೆ ಹಿಡಿದು ನಿಂತಿದ್ದಾರೆ. ದ್ವಾರವು ಹೂಬಳ್ಳಿಗಳಿಂದ ಕೂಡಿದ್ದು, ಮೊದಲಿನ ಎರಡು ಶಾಖೆಗಳು ಲಲಾಟಬಿಂಬದವರೆಗೂ ಮುಂದುವರೆದಿದೆ. ಲಲಾಟಬಿಂಬದಲ್ಲಿ

ಗಜಲಕ್ಷ್ಮಿ ಶಿಲ್ಪವಿದೆ. ಇದರ ಮುಂದಿನ ತೆರೆದ ಮಂಟಪವಲ್ಲಿ ಕೆಳಗೆ ಮೇಲೆ ಚೌಕ. ಮಧ್ಯ ೧೬-೮-೧೬ ಭಾಗದ ಪಟ್ಟಿಗೆ, ಮೇಲ್ಭಾಗ ಚೌಕಾಕಾರದ ಫಲಕ, ಬೋದಿಗೆಯಿಂದ ಕೂಡಿದೆ. ಇಲ್ಲಿನ ಕಂಬವೊಂದರ ಚೌಕಾಕಾರ ಭಾಗದಲ್ಲಿ ಗಣಪತಿ, ಅಷ್ಟದಳ, ಆಂಜನೇಯ ಮುಂತಾದ ಉಬ್ಬು ಶಿಲ್ಪವನ್ನು ಖಂಡರಿಸಲಾಗಿದೆ. ಈ ದೇವಾಲಯದ ಅಧಿಷ್ಠಾನವು ಭೂಮಿಯಲ್ಲಿ ಹೂತಿದೆ. ಭಿತ್ತಿ ಸರಳವಾಗಿದ್ದು ಇದನ್ನು ಚಪ್ಪಡಿ ಕಲ್ಲಿನಿಂದ ಕಟ್ಟಲಾಗಿದೆ. ಇದರಲ್ಲಿ ಎಡೆ ಎತ್ತಿ ಹರಿದಾಡುತ್ತಿರುವ ಸರ್ಪದ ಶಿಲ್ಪವಿದೆ. ಪ್ರಸ್ತರದಲ್ಲಿನ ಕಪೋತ ಭಾಗವು ಸರಳವಾಗಿದ್ದು ಗರ್ಭಗುಡಿಯ ಮೇಲೆ ಶಿಖರವಿದೆ.

ಊರು : ಮೇಟಿಕುರ್ಕಿ

ಸ್ಮಾರಕ : ಗಣೇಶ

ಸ್ಥಳ : ಗ್ರಾಮದ ಮಧ್ಯಭಾಗದಲ್ಲಿ

ಅಭಿಮುಖ : ದಕ್ಷಿಣಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೬-೧೭ನೇ ಶತಮಾನ

ಈ ದೇವಾಲಯವು ಗರ್ಭಗೃಹ, ಸಭಾಮಂಟಪವನ್ನು ಹೊಂದಿದೆ. ಚೌಕಾಕಾರದ ಗರ್ಭಗೃಹವಿದ್ದು ಅದರಲ್ಲಿ ಸುಮಾರು ೨¹/೨ ಅಡಿ ಎತ್ತರದ ಗಣೇಶನ ಮೂರ್ತಿಶಿಲ್ಪವಿದೆ. ಚತುರ್ಭುಜಧಾರಿಯಾದ ಗಣೇಶನು ಅಂಕುಶ, ಪಾಶ, ಮೋಚಕ ಮತ್ತು ಲಡ್ಡು ಹಿಡಿದು ಸುಖಾಸೀನ ಭಂಗಿಯಲ್ಲಿ ಆಸೀನನಾಗಿದ್ದಾನೆ. ದ್ವಾರವು ಸರಳವಾಗಿದೆ. ಇದರ ಮುಂದಿನ ಸಭಾಮಂಟಪದಲ್ಲಿ ನಾಲ್ಕು ಮರದ ಕಂಬಗಳಿದ್ದು ಅವು ಸರಳವಾಗಿವೆ. ಈ ಕಂಬಗಳನ್ನು 'ಕಮರದ' (ಬೆಂಕಿ ಹಿಡಿಯದ?) ಮರದ ದಿಮ್ಮಿಗಳಲ್ಲಿ ಕಡೆದು ನಿರ್ಮಿಸಿದ್ದಾರೆ. ಈ ದೇವಾಲಯದ ಗರ್ಭಗೃಹವು ಮೊದಲೇ ರಚನೆಗೊಂಡಿದ್ದು ನಂತರ ಕಾಲದಲ್ಲಿ ಸಭಾಮಂಟಪವನ್ನು ಜೀರ್ಣೋದ್ಧಾರಗೊಳಿಸಲಾಗಿದೆ. ಗರ್ಭಗುಡಿಯ ಮೇಲೆ ಶಿಖರವಿಲ್ಲ.

ಪ್ರತಿ ವರ್ಷ ಜನವರಿ ಮೊದಲ ವಾರದಲ್ಲಿ ಹದಿನೈದು ದಿನಗಳ ಕಾಲ ನಡೆಯುವ ಜಾತ್ರೆಯಲ್ಲಿ ಮಡಿತೇರು, ಕಲ್ಲುಗಾಲಿ ತೇರು, ಆರತಿ, ಗಂಗಾಪೂಜೆ, ವಿಘ್ನೇಶ್ವರನ ಉತ್ಸವ, ಕೈಲಾಸೋತ್ಸವ, ನಂದೀಶ್ವರನ ಉತ್ಸವ ಮೊದಲಾದ ಪ್ರತಿನಿತ್ಯದ ಕಾರ್ಯಕ್ರಮಗಳು ಜರುಗುತ್ತವೆ. ವಿಶೇಷ ದಿನಗಳಲ್ಲಿ ಅಭಿಷೇಕ, ರುದ್ರಾಭಿಷೇಕ, ಹೋಮ ಇತ್ಯಾದಿ ಪೂಜೆಗಳನ್ನು ನಡೆಸಲಾಗುತ್ತದೆ.

ಊರು : ಮೇಟಿಕುರ್ಕೆ

ಸ್ಮಾರಕ : ವೀರಭದ್ರೇಶ್ವರ ದೇವಾಲಯ

ಸ್ಥಳ : ಗ್ರಾಮದ ಪಶ್ಚಿಮಕ್ಕೆ

ಅಭಿಮುಖ : ಉತ್ತರಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೬-೧೭ನೇ ಶತಮಾನ

ಈ ದೇವಾಲಯವು ಗರ್ಭಗೃಹ, ನವರಂಗ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗೃಹವು ಚೌಕಾಕಾರವಾಗಿದ್ದು ಅದರಲ್ಲಿ ಸುಮಾರು ೩¹/೨ ಅಡಿ ಎತ್ತರದ ವೀರಭದ್ರ ಶಿಲ್ಪವಿದೆ. ಚತುರ್ಭುಜಧಾರಿಯಾದ ವೀರಭದ್ರನು ಬಿಲ್ಲು, ಬಾಣ, ಖಡ್ಗ ಮತ್ತು ಗುರಾಣಿ

ಹಿಡಿದಿದ್ದು, ಶಿಲ್ಪದ ಕೆಳಭಾಗದಲ್ಲಿ ದಕ್ಷಬ್ರಹ್ಮನ ಶಿಲ್ಪವನ್ನು ಖಂಡರಿಸಲಾಗಿದೆ. ದ್ವಾರವು ಸರಳವಾಗಿದ್ದು ಸ್ತಂಭಶಾಖೆಯಿಂದ ಕೂಡಿದೆ. ಇದರ ಮುಂದಿನ ನವರಂಗದಲ್ಲಿ ನಾಲ್ಕು ಮರದ ಚಚ್ಚೌಕ ಕಂಬಗಳಿವೆ. ಇಲ್ಲಿನ ಒಂದು ಭಾಗದಲ್ಲಿ ಎರಡು ಅಡಿ ಎತ್ತರದ ಶೂಲ ಅಥವಾ ಭಕ್ತ(?) ಶಿಲ್ಪವಿದೆ. ಇನ್ನೊಂದೆಡೆ ೩ ೧/೨ ಅಡಿ ಎತ್ತರದ ತ್ರಿಶೂಲ ಮತ್ತು ಪಾಶ ಹಿಡಿದಿರುವ ವಿಷ್ಣು(?) ಶಿಲ್ಪವಿದೆ. ಇಕ್ಕೆಲಗಳಲ್ಲಿ ಶಿವಲಿಂಗ ಮತ್ತು ನಂದಿ ಶಿಲ್ಪಗಳಿವೆ. ಇದರ ಮುಂದಿನ ಮುಖಮಂಟಪ ದಲ್ಲಿ ಸರಳವಾದ ಆರು ಕಂಬಗಳಿದ್ದು, ಈ ಭಾಗವನ್ನು ಇತ್ತೀಚಿಗೆ ಜೀರ್ಣೋದ್ಧಾರಗೊಳಿಸಲಾಗಿದೆ. ಗರ್ಭಗುಡಿಯ ಮೇಲೆ ಶಿಖರವಿಲ್ಲ.

ಪ್ರತಿ ವರ್ಷ ಚೈತ್ರ ಮಾಸದ ಮೊದಲ ದಿನ ವೀರಭದ್ರಸ್ವಾಮಿಯ ಜಾತ್ರಾ ಮಹೋತ್ಸವವು ನಡೆಯುತ್ತದೆ. ಜಾತ್ರೆಯು ಏಳು ದಿನಗಳ ಕಾಲ ವಿವಿಧ ಆಚರಣೆಯೊಂದಿಗೆ ನಡೆಯುತ್ತದೆ. ವಿಶೇಷ ದಿನಗಳಲ್ಲಿ ಭಕ್ತಾದಿಗಳು ಅಭಿಷೇಕ, ರುದ್ರಾಭಿಷೇಕ, ಹೋಮ ಇತ್ಯಾದಿ ಪೂಜೆಗಳನ್ನು ನೆರವೇರಿಸುತ್ತಾರೆ. ಗ್ರಾಮಸ್ಥರು ಮನೆಯಲ್ಲಿ ತೊಂದರೆ, ಜಗಳ, ಕಿರುಕುಳ ಆದಾಗ ವೀರಭದ್ರನನ್ನು ಪಲ್ಲಕ್ಕಿಯಲ್ಲಿ ಕರೆದುಕೊಂಡು ಹೋಗಿ ತಮ್ಮ ಮನೆಯಲ್ಲಿ ಎರಡು ಅಥವಾ ಮೂರು ದಿನಗಳ ಕಾಲ ಇರಿಸಿಕೊಂಡು ಮತ್ತೆ ಗುಡಿ ತುಂಬಿಸುತ್ತಾರೆ.

ಊರು : ಮೇಟಿಕುರ್ಕೆ

ಸ್ಮಾರಕ : ಮಹಾಲಿಂಗೇಶ್ವರ ದೇವಾಲಯ

ಸ್ಥಳ : ಗ್ರಾಮದ ಉತ್ತರಕ್ಕೆ

ಅಭಿಮುಖ : ಪೂರ್ವಾಭಿಮುಖ

ಕಾಲ : ಕ್ರಿಶ. ಸುಮಾರು ೧೬-೧೭ನೇ ಶತಮಾನ

ಈ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು ಅದರಲ್ಲಿ ಸುಮಾರು ಎರಡು ಅಡಿ ಎತ್ತರದ ಶಿವಲಿಂಗವಿದೆ. ಇದರ ದ್ವಾರವು ಸರಳವಾಗಿದ್ದು ಸ್ತಂಭಶಾಖೆಯಿಂದ ಕೂಡಿದೆ. ಇದರ ಮುಂದಿನ ಅಂತರಾಳದಲ್ಲಿ ಗರ್ಭಗೃಹಕ್ಕೆ ಅಭಿಮುಖವಾಗಿ ಎರಡು ಅಡಿ ಉದ್ದ ೧ ೧/೨ ಅಡಿ ಎತ್ತರದ ನಂದಿಶಿಲ್ಪವಿದೆ. ದ್ವಾರವು ಸರಳವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಇದರ ಮುಂದಿನ ಸಭಾಮಂಟಪದಲ್ಲಿ ಕೆಳಗೆ ಮೇಲೆ ಚೌಕ, ಮಧ್ಯ ಆಯಾತಕಾರ, ಬೋಧಿಗೆಯಿಂದ ಕೂಡಿರುವ ನಾಲ್ಕು ಕಂಬಗಳಿವೆ. ಗರ್ಭಗುಡಿಯ ಮೇಲೆ ಶಿಖರವಿದ್ದು, ಮುಂಭಾಗದಲ್ಲಿ ಸುಮಾರು ೧೫ ಅಡಿ ಎತ್ತರದ ದೀಪಸ್ತಂಭವಿದೆ. ಉಳಿದಂತೆ ಈ ದೇವಾಲಯ ಆಧುನಿಕವಾಗಿದೆ.

ಪ್ರತಿ ವರ್ಷ ಚೈತ್ರ ಮಾಸದಲ್ಲಿ ರಥೋತ್ಸವ ನಡೆಯುತ್ತದೆ. ನಾಲ್ಕು ಕಲ್ಲುಗಾಲಿಯ ರಥವಿದ್ದು ಹಿಂದೆ ಬೃಹತ್ ಪ್ರಮಾಣದಲ್ಲಿ ರಥೋತ್ಸವ ನಡೆಯುತ್ತಿತ್ತು ಎಂದು ಇಲ್ಲಿಯ ವಯೋವೃದ್ಧರು ಹೇಳುವುದುಂಟು. ವಿಶೇಷ ದಿನಗಳಲ್ಲಿ ಹೋಮ, ಅಭಿಷೇಕ, ರುದ್ರಾಭಿಷೇಕ ಪೂಜೆಗಳು ನಡೆಯುತ್ತವೆ. ಇಲ್ಲಿಯ ಗ್ರಾಮಸ್ಥರು ಪಲ್ಲಕ್ಕಿಯ ಮೇಲೆ ದೇವರನ್ನು ತಮ್ಮ ತಮ್ಮ

ಮನೆಗಳಿಗೆ ಕರೆದುಕೊಂಡು ಹೋಗಿ ತಮ್ಮ ಕಷ್ಟಗಳನ್ನು ಬಗೆಹರಿಸಿಕೊಳ್ಳುವುದು ಇಲ್ಲಿಯ ವಿಶೇಷತೆ ಎನಿಸುತ್ತದೆ.

ಊರು : ಹರ್ತಿಕೋಟೆ

ಸ್ಮಾರಕ : ಕಲ್ಲೇಶ್ವರ ದೇವಾಲಯ

ಸ್ಥಳ : ಗ್ರಾಮದ ಪಶ್ಚಿಮಕ್ಕೆ

ಅಭಿಮುಖ : ಉತ್ತರಾಭಿಮುಖ

ಕಾಲ : ಕ್ರಿ.ಶ. ಸುಮಾರು ೮-೯ನೇ ಶತಮಾನ

ಈ ದೇವಾಲಯವು ಗರ್ಭಗೃಹವನ್ನು ಮಾತ್ರ ಹೊದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಅದರಲ್ಲಿ ಆಂಜನೇಯನ ವಿಗ್ರಹವನ್ನು ಇರಿಸಿದ್ದಾರೆ. ಇದು ಹಾಳುಮಂಟಪವಾಗಿದ್ದು, ಬಹುಶಃ ಹಿಂದೆ ಇಲ್ಲಿ ಕಲ್ಲೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿಸಲಾಗಿದ್ದಿತೆಂದು ತೋರುತ್ತದೆ. ಅದಕ್ಕೆ ಆಧಾರವಾಗಿ ಲಿಂಗವಿಲ್ಲದ ಪಾಣಿಪೀಠವು ಗರ್ಭಗೃಹದಲ್ಲಿದೆ. ಲಿಂಗವಿದ್ದ ಸ್ಥಳದಲ್ಲಿ ಈಚೆಗೆ ಆಂಜನೇಯನ ವಿಗ್ರಹವನ್ನು ನಿಲ್ಲಿಸಿದ್ದಾರೆ. ಈ ದೇವಾಲಯದ ಗರ್ಭಗೃಹವು ಸರಾಸರಿ ೧.೫ ಅಡಿ ಎತ್ತರ, ೫ ಅಡಿ ಉದ್ದವಿರುವ ಕಲ್ಲು ತೊಲೆಗಳಿಂದ ಭದ್ರವಾಗಿ ನಿರ್ಮಿತವಾಗಿದ್ದು, ಸುಟ್ಟ ಇಟ್ಟಿಗೆಗಳಿಂದ ನಿರ್ಮಿಸಲಾಗಿದೆ. ಒರಟು ಕಲ್ಲುತೊಲೆಗಳನ್ನು ಗರ್ಭಗೃಹದ ಮೇಲ್ಭಾಗದಲ್ಲಿ ಹೊದಿಸಲಾಗಿದೆ. ಇದು ಅತ್ಯಂತ ಪ್ರಾಚೀನ ದೇವಾಲಯವಾಗಿದ್ದು, ಗಂಗರ ಕಾಲಕ್ಕೆ ಸೇರಿದಿದ್ದಿರಬೇಕೆಂಬ ಅಭಿಪ್ರಾಯವಿದೆ. ಈ ದೇವಾಲಯದ ಹಾಸುಪಾಸಿನಲ್ಲಿ ಜಿನಮೂರ್ತಿ ಮೊದಲಾದ ಅವಶೇಷಗಳೂ ಕಂಡುಬಂದಿವೆ.

ಊರು : ತವಂದಿ

ಸ್ಮಾರಕ : ವೀರಭದ್ರ ದೇವಾಲಯ

ಸ್ಥಳ : ಕೆರೆಯ ಏರಿ ಪಕ್ಕದಲ್ಲಿ

ಅಭಿಮುಖ : ಉತ್ತರಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೬-೧೭ನೇ ಶತಮಾನ

ಈ ದೇವಾಲಯವು ಗರ್ಭಗೃಹ, ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರ ವಾಗಿದ್ದು, ಅದರಲ್ಲಿ ಸುಮಾರು ೪ ಅಡಿ ಎತ್ತರ, ೨ ಅಡಿ ಅಗಲ ವಿಸ್ತೀರ್ಣದಲ್ಲಿರುವ ವೀರಭದ್ರನ ಮೂರ್ತಿಶಿಲ್ಪವಿದೆ. ಚತುರ್ಭುಜಧಾರಿಯಾದ ವೀರಭದ್ರನು ಪೀಠದ ಮೇಲೆ ನಿಂತಿದ್ದು ಖಡ್ಗ, ಬಿಲ್ಲು, ಬಾಣ ಹಾಗೂ ಗುರಾಣಿ ಹಿಡಿದು ನಿಂತಿರುವ ಶಿಲ್ಪವಿದೆ. ದ್ವಾರವು ಸ್ತಂಭಶಾಖೆಯಿಂದ ಕೂಡಿದ್ದು, ಬಾಗಿಲುವಾಡವು ಸರಳವಾಗಿದೆ. ಇದರ ಮುಂದಿನ ತೆರೆದ ಮಂಟಪದಲ್ಲಿ ಸಮತಟ್ಟಾದ ಕಲ್ಲನ್ನು ಕಂಬಗಳಾಗಿ ಕಡೆದು ನಿಲ್ಲಿಸಲಾಗಿದೆ. ಗರ್ಭಗೃಹದ ಮೇಲೆ ಶಿಖರವಿಲ್ಲ. ಈ ದೇವಾಲಯದ ಬಲಭಾಗದಲ್ಲಿ ಚಂದ್ರಶೇಖರಯ್ಯನವರ ತೋಟದಲ್ಲಿ

ವೀರಸತಿಗಲ್ಲು, ಶಾಸನೋಕ್ತ ವೀರಗಲ್ಲು, ಗಣೇಶ, ದೇವಕ್ಕ, ಮೈಲಾರಲಿಂಗ, ಗುಡಿಯಪ್ಪ, ಬಸವಣ್ಣ, ವಿಷ್ಣು, ಶಿವಲಿಂಗ ಮುಂತಾದ ಅನೇಕ ಶಿಲ್ಪಗಳನ್ನು ಕಾಣಬಹುದು.

ಗ್ರಾಮದ ಮಧ್ಯಭಾಗದಲ್ಲಿ ಜಿದ್ದಿರುವ ಬೃಹತ್ ಕಲ್ಲುಗಾಲಿಗಳು ವೀರಭದ್ರ ದೇವಾಲಯಕ್ಕೆ ಸಂಬಂಧಿಸಿದ್ದು, ಹಿಂದೆ ಪಾಳೇಗಾರರ ಕಾಲದಲ್ಲಿ ಬೃಹತ್ ಪ್ರಮಾಣದಲ್ಲಿ ರಥೋತ್ಸವ ನಡೆಯುತ್ತಿತ್ತು ಎಂದು ಇಲ್ಲಿಯ ವಯೋವೃದ್ಧರು ಹೇಳುವುದುಂಟು. ಈ ವೀರಭದ್ರನಿಗೆ ವಿಶೇಷ ದಿನಗಳಲ್ಲಿ ಅಭಿಷೇಕ, ರುದ್ರಾಭಿಷೇಕ, ಹೋಮ ಇತ್ಯಾದಿ ಪೂಜೆಗಳು ನಡೆಯುತ್ತವೆ.

ವೈಷ್ಣವ ದೇವಾಲಯಗಳು

ಐಮಂಗಲ ಹೋಬಳಿಯಲ್ಲಿ ಶೈವ ದೇವಾಲಯಗಳಂತೆ ವೈಷ್ಣವ ದೇವಾಲಯಗಳು ಹರ್ತಿಕೋಟೆ, ಮರಡಿಹಳ್ಳಿ, ನೂಣಬಿಪಟ್ಟಣ, ಗುಯಿಲಾಳು, ಹೇಮದಳ, ಕಂದಿಕೆರೆ, ಮಲ್ಲಪ್ಪನಹಳ್ಳಿ ಮುಂತಾದ ಕಡೆ ಕಂಡುಬರುತ್ತವೆ. ವಾಸ್ತುಕಲೆಯ ಕಾಲಾನುಕ್ರಮದ ಬೆಳವಣಿಗೆಯನ್ನು ಗುರುತಿಸಲು ವೈಷ್ಣವ ದೇವಾಲಯಗಳು ಸಹಾಯಕವಾಗಿರುವುದರಿಂದ ಆ ಕುರಿತು ಈ ಕೆಳಗಿನಂತೆ ವಿವರಿಸಲಾಗಿದೆ.

ಊರು : ಹರ್ತಿಕೋಟೆ

ಸ್ಮಾರಕ : ಆಂಜನೇಯ ದೇವಾಲಯ

ಸ್ಥಳ : ಗ್ರಾಮದ ಪೂರ್ವಕ್ಕೆ

ಅಭಿಮುಖ : ದಕ್ಷಿಣಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೭-೧೮ನೇ ಶತಮಾನ

ಈ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು ಅದರಲ್ಲಿ ಸುಮಾರು ೧೫ ಅಡಿ ಎತ್ತರ, ೪ ಅಡಿ ಅಗಲ ವಿಸ್ತೀರ್ಣದಲ್ಲಿರುವ ಆಂಜನೇಯನ ಮೂರ್ತಿಶಿಲ್ಪವಿದೆ. ಈತನು ಬಲಗೈಯನ್ನು ಮೇಲೆ ಎತ್ತಿದ್ದು, ಎಡಗೈಯಲ್ಲಿ ಭಗ್ನಗೊಂಡಿರುವ ಗದೆ ಹಿಡಿದಿರುವಂತೆ ಕಪ್ಪು ಶಿಲೆಯಲ್ಲಿ ಖಂಡರಿಸಲಾಗಿದೆ. ದ್ವಾರವು ಸರಳವಾಗಿದೆ. ಇದರ ಮುಂದಿನ ಅಂತರಾಳವು ಆಯಾತಕಾರವಾಗಿದೆ. ದ್ವಾರವು ಸ್ತಂಭಶಾಖೆಯಿಂದ ಕೂಡಿದ್ದು ಇಲ್ಲಿ ವೈಷ್ಣವ ದ್ವಾರಪಾಲಕರು ಕೈಮುಗಿದು ನಿಂತಿದ್ದಾರೆ. ದ್ವಾರವು ಹೂ ಬಳ್ಳಿಯಿಂದ ಕೂಡಿದ್ದು ಮೊದಲಿನ ಎರಡು ಶಾಖೆಗಳು ಲಲಾಟಬಿಂಬದವರೆಗೂ ಮುಂದುವರೆದಿದ್ದು ಲಲಾಟಬಿಂಬದಲ್ಲಿ ಬಾಲಕೃಷ್ಣನ ಶಿಲ್ಪವಿದೆ. ಇದರ ಮುಂದಿನ ತೆರದ ಮಂಟಪದಲ್ಲಿ ಕೆಳಗೆ ಮೇಲೆ ಚೌಕ, ಮಧ್ಯ ೧೬-೮-೬ ಭಾಗದ ಪಟ್ಟಿಕೆ, ಮೇಲ್ಭಾಗ ವೃತ್ತಾಕಾರದ ಮುಚ್ಚುಳ, ಬೋಧಿಗೆಯಿಂದ ಕೂಡಿದ ಎರಡು ಕಂಬಗಳಿದ್ದು ಅವು ಸರಳವಾಗಿವೆ. ಇಲ್ಲಿನ ಕಂಬಗಳ ಮೇಲೆ ಆಂಜನೇಯ, ನಾಗ, ನಾಗಿಣಿ, ನವಿಲು, ಆನೆ ಮುಂತಾದ ಶಿಲ್ಪಗಳನ್ನು ಖಂಡರಿಸಲಾಗಿದೆ.

ಈ ದೇವಾಲಯದ ಹೊರಗೋಡೆಯ ಅಧಿಷ್ಠಾನದಲ್ಲಿ ಉಪಾನ, ಜಗತಿ, ತ್ರಿಪಟ್ಟಿ, ಕುಮುದ, ಪದ್ಮ - ಭಾಗಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ದೇವಾಲಯದ ಭಿತ್ತಿ ಸರಳವಾಗಿದ್ದು,

ಚಪ್ಪಡಿ ಕಲ್ಲನ್ನು ಬಳಸಿ ಕಟ್ಟಲಾಗಿದೆ. ಈ ಭಾಗದಲ್ಲಿ ಯಾವುದೇ ಶಿಲ್ಪಗಳಿಲ್ಲ. ಪ್ರಸ್ತರ ಭಾಗದಲ್ಲಿ ಕಪೋತ ಸರಳವಾಗಿದ್ದು ಗರ್ಭಗುಡಿಯ ಮೇಲೆ ಶಿಖರವಿದೆ. ಶಿಖರದ ಮೇಲೆ ಸ್ತೂಪಿ ಇದೆ. ದೇವಾಲಯದ ಸುತ್ತಲೂ ಪ್ರಕಾರಗೋಡೆ ಇದ್ದು, ಮುಂಭಾಗ ಸುಮಾರು ೨೦ ಅಡಿ ಎತ್ತರದ ಉಯ್ಯಾಲೆ ಕಂಬ ಹಾಗೂ ದೀಪಸ್ತಂಭವಿದೆ. ದೀಪಸ್ತಂಭದ ಕೆಳಭಾಗದಲ್ಲಿ ಒಬ್ಬ ವೀರನ ಶಿಲ್ಪವಿದ್ದು[೧೭] ಈತನು ಕೈ ಮುಗಿದು ದೇವಾಲಯದ ಮುಖ ದಿಕ್ಕಿಗೆ ನಿಂತಿದ್ದಾನೆ.

ಊರು : ಯರಬಳ್ಳಿ

ಸ್ಮಾರಕ : ರಂಗನಾಥಸ್ವಾಮಿ ದೇವಾಲಯ

ಸ್ಥಳ : ಗ್ರಾಮದ ಮಧ್ಯಭಾಗ

ಅಭಿಮುಖ : ಪೂರ್ವಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೭-೧೮ನೇ ಶತಮಾನ

ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು ಅದರಲ್ಲಿ ಸುಮಾರು ೨೧/೨ ಅಡಿ ಎತ್ತರದ ರಂಗನಾಥಸ್ವಾಮಿಯ ಶಿಲ್ಪವಿದೆ. ಇದು ಇರುವುದು ಕಂಬದ ಮೇಲೆ, ಈ ಕಂಬ ಸುಮಾರು ೧೦ ಅಡಿ ಎತ್ತರದಲ್ಲಿದೆ. ಚತುರ್ಭುಜದಾರಿಯಾದ ರಂಗನಾಥನು ಶಂಕ, ಚಕ್ರ, ವರದಮುದ್ರೆ ಹಾಗೂ ಎಡಗೈ ಸೊಂಟದ ಮೇಲಿದೆ. ಶಿಲ್ಪದ ಕೆಳಭಾಗದಲ್ಲಿ ಶ್ರೀದೇವಿ, ಭೂದೇವಿಯವರ ಉಬ್ಬು ಕೆತ್ತನೆಗಳಿವೆ. ದ್ವಾರವು ಸರಳವಾಗಿದ್ದು, ಸ್ತಂಭ ಶಾಖೆಯಿಂದ ಕೂಡಿದೆ. ಬಾಗಿಲುವಾಡದಲ್ಲಿ ಯಾವುದೇ ಅಲಂಕಾರಗಳಿಲ್ಲ. ಮುಂದಿನ ಅಂತರಾಳವು ಚೌಕಾಕಾರವಾಗಿದ್ದು ಸರಳವಾಗಿದೆ. ಬಾಗಿಲುವಾಡದಲ್ಲಿ ವೈಷ್ಣವ ದ್ವಾರಪಾಲಕರು ತ್ರಿಶೂಲ, ಡಮರುಗ, ಗದೆ ಹಿಡಿದು ನಿಂತಿದ್ದಾರೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ. ಇದರ ಮುಂದಿನ ನವರಂಗದಲ್ಲಿ ಚಚೌಕ ಹಾಗೂ ಅಷ್ಟಮುಖಗಳಿರುವ ನಾಲ್ಕು ಕಂಬಗಳನ್ನು ಕಡೆಯಲಾಗಿದೆ. ಈ ಕಂಬಗಳಲ್ಲಿ ಹುಲಿಬೇಟೆ, ಭಕ್ತಶಿಲ್ಪ, ಶಿವ, ವೀರ, ಬಾಲಕೃಷ್ಣ, ಅರ್ಜುನ, ಆನೆ, ಕೋತಿ, ಹಂಸ, ನೃತ್ಯಗಾರರು, ವಾದ್ಯಗಾರರು, ವೇಣುಗೋಪಾಲನ ಉಬ್ಬು ಕೆತ್ತನೆಗಳಿವೆ. ನವರಂಗದ ಮೇಲ್ಭಾಗದಲ್ಲಿ ಅಷ್ಟಕೋನಾಕಾರದ ಚಪ್ಪಡಿ ಜೋಡಿಸಿದ್ದು ಮಧ್ಯಭಾಗದಲ್ಲಿ ಪದ್ಮವನ್ನು ಕಡೆಯಲಾಗಿದೆ.

ನವರಂಗದ ದ್ವಾರದಲ್ಲಿ ವೈಷ್ಣವ ದ್ವಾರಪಾಲಕರಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬು ಕೆತ್ತನೆಯಿದೆ. ಇದರ ಮುಂದಿನ ಮುಖಮಂಟಪದಲ್ಲಿ ಚಚ್ಚೌಕ ಮತ್ತು ಅಷ್ಟಮುಖಕಾರದ ನಾಲ್ಕು ಕಂಬಗಳನ್ನು ಕಡೆಯಲಾಗದೆ. ಇಲ್ಲಿ ಕಾಳಿಂಗಮರ್ದನ, ಆನೆ, ಲಕ್ಷ್ಮಿ, ಆಮೆ, ಮೀನು, ನೃತ್ಯಗಾರರು ಹಾಗೂ ಮಿಥುನ ಶಿಲ್ಪಗಳಿವೆ. ದೇವಾಲಯದ ಶಿಖರವು ದ್ವಿತಲವಾಗಿದ್ದು ಆಧುನಿಕವಾಗಿ ನಿರ್ಮಿಸಲಾಗಿದೆ ಇದರಲ್ಲಿ ಕೃಷ್ಣ, ಲಕ್ಷ್ಮಿ ಸಮೇತನಾದ ನರಸಿಂಹ, ಶ್ರೀರಾಮ ಪ್ರತಿಮೆಗಳನ್ನು ರಚಿಸಲಾಗಿದೆ. ಶಿಖರದ ಮೇಲೆ ಸ್ತೂಪಿ ಇದೆ. ದೇವಾಲಯದ ಮುಂಭಾಗದಲ್ಲಿ ನಾಲ್ಕು ದೀಪಸ್ತಂಭಗಳಿದ್ದು ಅದರಲ್ಲಿ ಮೂರು ಕಂಬಗಳ ಕೆಳಭಾಗದಲ್ಲಿ ಸುಮಾರು ಒಂದು

ಅಡಿ ಎತ್ತರದ ಭಕ್ತಶಿಲ್ಪಗಳಿವೆ(ಇವು ಹರತಿ ನಾಯಕರು ಮತ್ತು ನಾಗತಿಯರಿರಬಹುದು). ಒಂದು ಗರುಡಸ್ತಂಭದ ಮೇಲೆ ಸುಮಾರು ೧½ ಅಡಿ ಎತ್ತರದ ಗರಡಶಿಲ್ಪವಿದೆ. ಈ ದೇವಾಲಯದ ಎಡಭಾಗದಲ್ಲಿ ದಕ್ಷಿಣಾಭಿಮುಖವಾಗಿರುವ ಆಂಜನೇಯನ ದೇವಾಲಯವಿದೆ.

ಊರು : ಮಲ್ಲಪ್ಪನಹಳ್ಳಿ

ಸ್ಮಾರಕ : ರಂಗನಾಥಸ್ವಾಮಿ ದೇವಾಲಯ

ಸ್ಥಳ : ಗ್ರಾಮದ ಮಧ್ಯ ಭಾಗ

ಅಭಿಮುಖ : ಪೂರ್ವಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೭-೧೮ನೇ ಶತಮಾನ

ಈ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಅದರಲ್ಲಿ ವೃಂದಾವನ ಮತ್ತು ಪೆಟ್ಟಿಗೆಯನ್ನಿಟ್ಟು ಆರಾಧಿಸಲಾಗುತ್ತದೆ. ದ್ವಾರವು ಸರಳವಾಗಿದ್ದು, ಸ್ತಂಭ ಶಾಖೆಯಿಂದ ಕೂಡಿದೆ. ಮುಂದಿನ ಅಂತರಾಳವು ಚೌಕಾಕಾರವಾಗಿದ್ದು ಸರಳವಾಗಿದೆ. ಇದರ ಬಾಗಿಲುವಾಡ ಸರಳವಾಗಿದೆ. ಇದರ ಮುಂದಿನ ಸಭಾಮಂಟಪದಲ್ಲಿ ೪-೮-೪-೮-೪ ರೀತಿಯ ನಾಲ್ಕು ಕಂಬಗಳನ್ನು ಚೌಕಗಳಲ್ಲಿ ಕಡೆಯಲಾಗಿದೆ. ಸಭಾಮಂಟಪದ ಮೇಲಿನ ಅರ್ಪಿತ ಹಾರದಲ್ಲಿ ಗಣೇಶನ ಶಿಲ್ಪಗಳಿವೆ. ಗರ್ಭಗೃಹ ಮೇಲೆ ಆಧುನಿಕವಾಗಿ ನಿರ್ಮಿಸಿದ ದ್ವಿತಲ ಮಾದರಿಯ ಶಿಖರವಿದೆ. ಮೇಲ್ಭಾಗ ಗುಮ್ಮಟಾಕಾರದಲ್ಲಿದ್ದು ಮೇಲೆ ಕಳಶವಿದೆ. ದೇವಾಲಯದ ಮುಂಭಾಗದಲ್ಲಿ ಎರಡು ದೀಪಸ್ತಂಭಗಳಿದ್ದು, ಅದರಲ್ಲಿ ನಾಲ್ಕು ಭಕ್ತಶಿಲ್ಪಗಳಿವೆ. ಒಂದರಲ್ಲಿ ಮೂರು, ಒಂದರಲ್ಲಿ ಒಂದು ಭಕ್ತ ಶಿಲ್ಪಗಳಿವೆ. ದೇವಾಲಯದ ಎಡಭಾಗದಲ್ಲಿ ಆಂಜನೇಯನ ಚಿಕ್ಕ ಗುಡಿಯಿದ್ದು ಅದರಲ್ಲಿ ಆಂಜನೇಯ ಶಿಲ್ಪವಿದೆ.

ಗರ್ಭಗೃಹದಲ್ಲಿ ವೃಂದಾವನವಿದ್ದು ಮಧ್ಯಭಾಗ ಉತ್ತವಿದೆ. ಈ ಉತ್ತಕ್ಕೆ ಹಾಲು, ತುಪ್ಪದಲ್ಲಿ ಪ್ರತಿನಿತ್ಯ ನೈವೇದ್ಯ ಮಾಡಲಾಗುತ್ತದೆ. ರಂಗನಾಥನ ಜಾತ್ರೆ ಪ್ರತಿವರ್ಷ ಶ್ರಾವಣಮಾಸದಲ್ಲಿ ಒಂಬತ್ತು ದಿನಗಳ ಕಾಲ ನಡೆಯುತ್ತದೆ. ಮೊದಲ ದಿನ ಗಂಗಾಪೂಜೆ, ಕಂಕಣಧಾರಣೆ, ಆರತಿ, ಸಿಡಿ, ಗಾವು, ಸಿದ್ಧಭುಕ್ತಿ ಹೀಗೆ ಕ್ರಮವಾಗಿ ಜಾತ್ರೆ ಜರುಗುತ್ತದೆ. ವಿಶೇಷ ಹಬ್ಬಗಳಲ್ಲಿ ಪೆಟ್ಟಿಗೆಯನ್ನಿಟ್ಟು ಆರಾಧಿಸಲಾಗುತ್ತದೆ. ಈ ದೇವಾಲಯದ ಪೂರ್ಣ ಜವಾಬ್ದಾರಿ ಗುಡಿಕಟ್ಟಿಗೆ ಸೇರಿದ ಅಣ್ಣ-ತಮ್ಮಂದಿರುಗಳು ಮತ್ತು ಪೂಜಾರಿಯವರದ್ದಾಗಿರುತ್ತದೆ.

ಊರು : ಮರಡಿಹಳ್ಳಿ

ಸ್ಮಾರಕ : ವೆಂಕಟರಮಣಸ್ವಾಮಿ ದೇವಾಲಯ

ಸ್ಥಳ : ಗ್ರಾಮದ ಮಧ್ಯ ಭಾಗ

ಅಭಿಮುಖ : ಪೂರ್ವಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೬-೧೭ನೇ ಶತಮಾನ

ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಅದರಲ್ಲಿ ಸುಮಾರು ೩½ ಅಡಿ ಎತ್ತರದ

ವೆಂಕಟರಮಣನ ಶಿಲ್ಪವಿದೆ. ಚತುರ್ಭುಜಧಾರಿಯಾದ ವೆಂಕಟರಮಣನು ಅಭಯ ಹಸ್ತ, ಚಕ್ರ, ಶಂಖ ಹಾಗೂ ಎಡಗೈ ಸೊಂಟದ ಮೇಲಿರುವಂತೆ ಕಡೆಯಲಾಗಿದೆ. ಇದರ ದ್ವಾರವು ಸರಳವಾಗಿದ್ದು, ಅಷ್ಟಧಳ ಮತ್ತು ಹೂಬಳ್ಳಿಗಳಿಂದ ಅಲಂಕರಿಸಲಾಗಿದೆ. ಇದರ ಮುಂದಿನ ಅಂತರಾಳವು ಆಯಾತಕಾರವಾಗಿದೆ. ಇಲ್ಲಿ ಮೂರು ದ್ವಾರವನ್ನು ಇಡಲಾಗಿದೆ. ಒಂದು ಗರ್ಭಗುಡಿಗೆ ಅಭಿಮುಖವಾಗಿರುವ ದ್ವಾರ ಇದ್ದು ಬಲಭಾಗದ ದ್ವಾರ ಒಳಗೆ ಸುಮಾರು ೧೧/೨ ಅಡಿ ಎತ್ತರವಿರುವ ಲಕ್ಷ್ಮಿಯ ಶಿಲ್ಪವಿದೆ. ಎಡಭಾಗದ ದ್ವಾರದ ಒಳಗೆ ವೆಂಕಟರಮನನ ಉತ್ಸವ ಮೂರ್ತಿಯನ್ನು ಕುಳ್ಳಿರಿಸಲಾಗಿದೆ. ಮುಖ್ಯದ್ವಾರದ ಬಾಗಿಲುವಾಡಕ್ಕೆ ಕಂಚಿನ ತಗಡುಗಳಲ್ಲಿ ಮಾಡಿದ ಉಬ್ಬು ಶಿಲ್ಪದ ಪಟ್ಟಿಕೆಗಳನ್ನು ಜೋಡಿಸಿದ್ದು ಇಲ್ಲಿ ವೈಷ್ಣವ ದ್ವಾರಪಾಲಕರು ತ್ರಿಶೂಲ, ಡಮರುಗ, ಗದೆ ಹಿಡಿದು ನಿಂತಿದ್ದಾರೆ. ದ್ವಾರವು ಹೂಬಳ್ಳಿ, ಪುಷ್ಪಗಳಿಂದ ಕೂಡಿದ್ದು ಮೊದಲಿನ ಎರಡು ಶಾಖೆಗಳು ಲಲಾಟಬಿಂಬದವರೆಗೂ ಮುಂದುವರೆದಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಇದರ ಮುಂದಿನ ನವರಂಗದಲ್ಲಿ ೪-೮-೪-೮ ರೀತಿಯ ಆರು ಕಂಬಗಳಿವೆ. ಇದಕ್ಕೆ ಹೊಂದಿಕೊಂಡಂತೆ ಮುಖಮಂಟಪವಿದೆ. ಇದರ ಮೇಲಿನ ಅರ್ಪಿತಹಾರದಲ್ಲಿ ರಾಮ, ಲಕ್ಷ್ಮಣ, ಸೀತೆ, ಆಂಜನೇಯ ಸಮೇತರಾಗಿರುವ ಶಿಲ್ಪ, ವೆಂಕಟರಮಣನ ಶಿಲ್ಪ, ಕೃಷ್ಣ ಕೊಳಲನ್ನುದುತ್ತಿರುವ ಶಿಲ್ಪ, ಈಶ್ವರ, ಬ್ರಹ್ಮ, ಸರಸ್ವತಿ, ಶಾರದೆಯ ಶಿಲ್ಪಗಳಿವೆ.

ದೇವಾಲಯದ ಎಡಭಾಗ ಸತ್ಯನಾರಾಯಣನ ಗುಡಿ, ಬಲಭಾಗ ಸೂರ್ಯನಾರಾಯಣನ ಗುಡಿ, ಹಿಂಬದಿಯಲ್ಲಿ ನಾಗರಕಲ್ಲು ಮತ್ತು ಗರುಡ ಶಿಲ್ಪವಿರುವ ಪುಟ್ಟ ಗುಡಿಗಳಿವೆ. ಇದರ ಬಲಭಾಗದಲ್ಲಿ ಕಲ್ಯಾಣ ಮಂಟಪವಿದೆ. ಇಲ್ಲಿನ ಕಂಬಗಳು ನವರಂಗದಲ್ಲಿರುವ ಕಂಬಗಳ ಶೈಲಿಯನ್ನೇ ಹೋಲುತ್ತವೆ. ದೇವಾಲಯದ ಮುಂಭಾಗದ ಬಲಭಾಗದಲ್ಲಿ ಈಶ್ವರ, ಗಣೇಶ, ಬಸವಣ್ಣ ಶಿಲ್ಪಗಳಿರುವ ಪುಟ್ಟ ಗುಡಿ ಇದೆ. ಗರ್ಭಗೃಹದ ಮೇಲೆ ದ್ವಿತಲ ಮಾದರಿಯ ಶಿಖರವಿದೆ. ಶಿಖರದ ಮೇಲೆ ಸ್ತೂಪಿಯಿದೆ. ಮುಂಭಾಗ ಸುಮಾರು ೧೫ ಅಡಿ ಎತ್ತರದ ದೀಪಸ್ತಂಭವಿದ್ದು ಸುತ್ತಲೂ ಪ್ರಕಾರ ಗೋಡೆ ಇದೆ.

ಊರು : ಮರಡಿಹಳ್ಳಿ

ಸ್ಮಾರಕ : ಆಂಜನೇಯ ದೇವಾಲಯ

ಸ್ಥಳ : ಊರಿನ ಹೊರಭಾಗದಲ್ಲಿ

ಅಭಿಮುಖ : ದಕ್ಷಿಣಾಭಿಮುಖ

ಕಾಲ : ಕ್ರಿ.ಶ. ಸುಮಾರು ೯-೧೦ನೇ ಶತಮಾನ

ಈ ದೇವಾಲಯವು ಗರ್ಭಗೃಹ, ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಅದರಲ್ಲಿ ಸುಮಾರು ೮ ಅಡಿ ಎತ್ತರ ೪ ಅಡಿ ಅಗಲ ವಿಸ್ತೀರ್ಣದಲ್ಲಿರುವ ಆಂಜನೇಯನ ಮೂರ್ತಿಶಿಲ್ಪವಿದೆ. ಈತನು ಬಲಗೈಯನ್ನು ಮೇಲೆ ಎತ್ತಿದ್ದು, ಎಡಗೈಯಲ್ಲಿ ಗದೆಯನ್ನು ಹಿಡಿದಿದ್ದು ಕಪ್ಪು ಶಿಲೆಯಲ್ಲಿ ಖಂಡರಿಸಲಾಗಿದೆ. ದ್ವಾರವು ಸರಳವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಇದರ ಮುಂದಿನ ಸಭಾಮಂಟಪದಲ್ಲಿ ಕೆಳಗೆ ಮೇಲೆ ಚೌಕ, ಮಧ್ಯ ೧೦-೮-೧೦ ಭಾಗದ ಪಟ್ಟಿಕೆ, ಮೇಲ್ಭಾಗ ವೃತ್ತಾಕಾರದ ಮುಚ್ಚುಳ, ಬೋಧಿಗೆಯಿಂದ

ಕೂಡಿವೆ. ಇಲ್ಲಿನ ಕಂಬವೊಂದರ ಚೌಕಾಕಾರದ ಭಾಗದಲ್ಲಿ ಕಲಶದ ರೀತಿಯ ಅಲಂಕಾರವಿದ್ದು ಅದೇ ಕಂಬದ ದಂಡಾಗ್ರ ಭಾಗದಲ್ಲಿ ಆಭರಣಗಳ ಅಲಂಕಾರವಿರುವ ಆರು ಕಂಬಗಳಿವೆ.

ದೇವಾಲಯದ ಹೊರಭಾಗದ ಅಧಿಷ್ಠಾನ ಹಾಗೂ ಭಿತ್ತಿಯು ಸರಳವಾಗಿದೆ. ಭಿತ್ತಿಯ ಮೇಲ್ಭಾಗವನ್ನು ಇತ್ತೀಚಿಗೆ ನವೀಕರಿಸಿದ್ದಾರೆ. ಗರ್ಭಗುಡಿಯ ಮೇಲೆ ಶಿಖರವಿಲ್ಲ ದೇವಾಲಯದ ಸುತ್ತಲೂ ಪ್ರಕಾರ ಗೋಡೆ ಇದ್ದು, ಮುಂಭಾಗ ದೀಪಸ್ತಂಭವಿದೆ. ದೀಪಸ್ತಂಭದ ಕೆಳಭಾಗದಲ್ಲಿ ವೀರಗಲ್ಲು ಶಿಲ್ಪಗಳನ್ನು ಇಡಲಾಗಿದೆ. ಈ ದೇವಾಲಯ ಕ್ರಿ.ಶ. ೯-೧೦ನೇ ಶತಮಾನದ ದೇವಾಲಯವಾದರೂ ಇತ್ತೀಚೆಗೆ ಗರ್ಭಗುಡಿಯಲ್ಲಿ ಆಂಜನೇಯ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ.

ಊರು : ಹೇಮದಳ

ಸ್ಮಾರಕ : ವೀರಾಂಜನೇಯ ದೇವಾಲಯ

ಸ್ಥಳ : ಗ್ರಾಮದ ಮಧ್ಯಭಾಗ

ಅಭಿಮುಖ : ದಕ್ಷಿಣಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೭-೧೮ನೇ ಶತಮಾನ

ಈ ದೇವಾಲಯವು ಗರ್ಭಗೃಹ, ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಅದರಲ್ಲಿ ಸುಮಾರು ೬ ಅಡಿ ಎತ್ತರ ೩ ಅಡಿ ಅಗಲ ವಿಸ್ತೀರ್ಣದಲ್ಲಿರುವ ವೀರಾಂಜನೇಯನ ಮೂರ್ತಿಶಿಲ್ಪವಿದೆ. ಈತನು ಬಲಗೈಯನ್ನು ಮೇಲೆ ಎತ್ತಿದ್ದು, ಎಡಗೈಯಲ್ಲಿ ಗದೆಯನ್ನು ಹಿಡಿದು ಎಡಗಾಲನ್ನೂ ನೆಲಕ್ಕೆ ಊರಿದ್ದು ಬಲಗಾಲಿನ ಹೆಬ್ಬೆರಳ ತುದಿಯ ಮೇಲೆ ನಿಂತಿರುವಂತೆ ಖಂಡರಿಸಲಾಗಿದೆ. ದ್ವಾರವು ಸರಳವಾಗಿದ್ದು, ಕೆಳಭಾಗದಲ್ಲಿ ಅಷ್ಟದಳ ಪದ್ಮವಿದೆ. ಲಲಾಟಬಿಂಬದಲ್ಲಿ ಆಂಜನೇಯನ ಉಬ್ಬು ಶಿಲ್ಪವಿದೆ. ಇದರ ಮುಂದಿನ ತೆರದ ಮಂಟಪದಲ್ಲಿ ೪-೮-೪-೮-೪ ರೀತಿಯ ಕಂಬಗಳು ನಂತರ ಬೋಧಿಗೆಯಿಂದ ಕೂಡಿದೆ. ಇಲ್ಲಿನ ಕಂಬವೊಂದರ ಚೌಕಾಕಾರದ ಭಾಗದಲ್ಲಿ ಕುಂಭ, ಅಷ್ಟದಳ, ಕೈ ಮುಗಿದು ಕುಳಿತಿರುವ ಗರುಡ, ಬಸವಣ್ಣ, ಲಿಂಗ ಮುಂತಾದ ಉಬ್ಬು ಶಿಲ್ಪಗಳನ್ನು ಖಂಡರಿಸಲಾಗಿದೆ. ದೇವಾಲಯದ ಹೊರಭಾಗದ ಅಧಿಷ್ಠಾನ ಹಾಗೂ ಭಿತ್ತಿಯು ಸರಳವಾಗಿದೆ. ಭಿತ್ತಿಯ ಮೇಲ್ಭಾಗವನ್ನು ಇತ್ತೀಚಿಗೆ ನವೀಕರಿಸಿದ್ದಾರೆ. ಗರ್ಭಗುಡಿಯ ಮೇಲೆ ಶಿಖರವಿಲ್ಲ. ದೇವಾಲಯದ ಮುಂಭಾಗ ದೀಪಸ್ತಂಭವಿದೆ. ಈ ದೇವಾಲಯವು ಮೊದಲು ಮಣ್ಣಿನಿಂದ ರಚನೆಗೊಂಡಿದ್ದು ಅದು ಶಿಥಿಲಾವಸ್ಥೆಯಲ್ಲಿದ್ದಾಗ ೧೯೯೯ರಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ.

ಇದೇ ಗ್ರಾಮದ ಬಸವಣ್ಣ ದೇವಾಲಯದಲ್ಲಿ ಶಾಸನವಿದೆ.[೧೮] ಕ್ರಿ.ಶ. ೧೫೯೨ರ ಶಾಸನವು ಹರತಿ ಪಾಳೆಗಾರ ಹಿರಿಯ ರಂಗಪ್ಪನಾಯಕನ ತಮ್ಮ ಚಿಕ್ಕ ರಂಗಪ್ಪನಾಯಕನು ಹರತಿ ಸ್ಥಳದಲ್ಲಿ ಆಳುತ್ತಿದ್ದು ತನ್ನ ಮನೆತನದ ಗುರುಗಳಾದ ಕಾಳಾಮುಖ ಪಂಥದ ಹೊಟ್ಟೆಯೀಶ್ವರಯ್ಯ ನವರ ಸಿಂಹಾಸನ ಮಠಕ್ಕೆ ಹೆಮಡಿಹಾಳು ಎಂಬ ಗ್ರಾಮವನ್ನು ದಾನವಾಗಿ ನೀಡಿದನೆಂದು ಉಲ್ಲೇಖಿಸುತ್ತದೆ.

ಊರು : ಗುಬಿಲಾಳು

ಸ್ಮಾರಕ : ವೀರಾಂಜನೇಯ ದೇವಾಲಯ

ಸ್ಥಳ : ಗ್ರಾಮದ ಮಧ್ಯಭಾಗ

ಅಭಿಮುಖ : ದಕ್ಷಿಣಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೭-೧೮ನೇ ಶತಮಾನ

ಈ ದೇವಾಲಯವು ಗರ್ಭಗೃಹ, ತೆರದ ಮಂಟಪ ಹಾಗೂ ಹೆಂಚಿನ ಪ್ರಾಂಗಣವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಅದರಲ್ಲಿ ಸುಮಾರು ೮ ಅಡಿ ಎತ್ತರ, ೪ ಅಡಿ ಅಗಲ ವಿಸ್ತೀರ್ಣದಲ್ಲಿರುವ ವೀರಾಂಜನೇಯನ ಮೂರ್ತಿಶಿಲ್ಪವಿದೆ. ಇದು ದಕ್ಷಿಣಾಭಿಮುಖ ವಾಗಿದ್ದು, ಪೂರ್ವಕ್ಕೆ ಮುಖ ತಿರುಗಿಸಿ ನಿಂತಿದೆ. ಈತನು ಬಲಗೈಯನ್ನು ಮೇಲೆ ಎತ್ತಿದ್ದು ಎಡಗೈಯಲ್ಲಿ ಗದೆಯನ್ನು ಹಿಡಿದಿರುವಂತೆ ಕಪ್ಪು ಗ್ರಾನೈಟ್ ಶಿಲೆಯಲ್ಲಿ ಖಂಡರಿಸಲಾಗಿದೆ. ದ್ವಾರವು ಸರಳವಾಗಿದ್ದು, ಕಂಚಿನ ತಗಡುಗಳಿಂದ ಅಲಂಕರಿಸಲಾಗಿದೆ. ಕೆಳಭಾಗದಲ್ಲಿ ವೈಷ್ಣವ ದ್ವಾರಪಾಲಕರು ತ್ರಿಶೂಲ, ಡಮರುಗ, ಗದೆ ಹಿಡಿದು ನಿಂತಿದ್ದಾರೆ. ದ್ವಾರವು ಹೂಬಳ್ಳಿಯಿಂದ ಕೂಡಿದ್ದು ಇನ್ನೊಂದು ಪಟ್ಟಿಕೆಯಲ್ಲಿ ನವಿಲು ತನ್ನ ಗರಿ ಬಿಚ್ಚಿ ಕುಣಿಯುತ್ತಿರುವಂತೆ, ಈ ಮೊದಲಿನ ನಾಲ್ಕು ಶಾಖೆಗಳು ಲಲಾಟಬಿಂಬದವರೆಗೂ ಮುಂದುವರೆದಿದ್ದು ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಇದರ ಮುಂದಿನ ಸಭಾಮಂಟಪದಲ್ಲಿ ೪-೮-೪-೮-೪, ವೃತ್ತಾಕಾರದ ಮುಚ್ಚುಳ, ಬೋಧಿಗೆಯಿಂದ ಕೂಡಿರುವ ಆರು ಕಂಬಗಳಿವೆ.

ದೇವಾಲಯದ ಹೊರಭಾಗದ ಅಧಿಷ್ಠಾನ ಹಾಗೂ ಭಿತ್ತಿಯು ಸರಳವಾಗಿದ್ದು, ಭಿತ್ತಿಯನ್ನು ಗ್ರಾನೈಟ್ ಶಿಲೆಯನ್ನು ಬಳಸಿ ಕಟ್ಟಲಾಗಿದೆ. ಭಿತ್ತಿ ಭಾಗದಲ್ಲಿ ಯಾವುದೇ ಶಿಲ್ಪಗಳಿಲ್ಲ. ಪ್ರಸ್ತರದಲ್ಲಿನ ಕಪೋತ ಭಾಗವು ಸರಳವಾಗಿದ್ದು, ಗರ್ಭಗುಡಿಯ ಮೇಲೆ ಶಿಖರವಿದೆ. ದೇವಾಲಯದ ಮುಂಭಾಗ ಶಾಸನ. ವೀರಮಹಾಸತಿಗಲ್ಲು ಹಾಗೂ ದೀಪಸ್ತಂಭ ಇದೆ.

ಊರು : ಗೊಲ್ಲಹಳ್ಳಿ

ಸ್ಮಾರಕ : ವೀರಾಂಜನೇಯ ದೇವಾಲಯ

ಸ್ಥಳ : ಗ್ರಾಮದ ಮಧ್ಯಭಾಗ

ಅಭಿಮುಖ : ದಕ್ಷಿಣಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೭-೧೮ನೇ ಶತಮಾನ

ಈ ದೇವಾಲಯವು ಗರ್ಭಗೃಹ ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಅದರಲ್ಲಿ ಸುಮಾರು ೮ ಅಡಿ ಎತ್ತರ, ೪ ಅಡಿ ಅಗಲ ವಿಸ್ತೀರ್ಣದಲ್ಲಿರುವ ಆಂಜನೇಯ ಮೂರ್ತಿಶಿಲ್ಪವಿದೆ. ಈತನು ದಕ್ಷಿಣಾಭಿಮುಖವಾಗಿದ್ದು, ಪೂರ್ವಕ್ಕೆ ಮುಖ ತಿರುಗಿಸಿ ನಿಂತಿದ್ದು, ತನ್ನ ಬಲಗೈಯನ್ನು ಮೇಲೆ ಎತ್ತಿದ್ದು, ಎಡಗೈಯಲ್ಲಿ ಗದೆಯನ್ನು ಹಿಡಿದಿರುವಂತೆ ಕಪ್ಪು ಶಿಲೆಯಲ್ಲಿ ಖಂಡರಿಸಲಾಗಿದೆ. ದ್ವಾರವು ಸರಳವಾಗಿದ್ದು, ಕೆಳಭಾಗದಲ್ಲಿ ಹೂ ಕುಂಡದ

ಹೂವಿನ ಬಳ್ಳಿಗಳು ಮೊದಲಿನ ಎರಡು ಶಾಖೆಗಳು ಲಲಾಟಬಿಂಬದವರೆಗೂ ಮುಂದುವರೆದಿದ್ದು ಲಲಾಟಬಿಂಬದಲ್ಲಿ ಸಣ್ಣ ಗೂಡಲ್ಲಿ ಗಣೇಶನ ಶಿಲ್ಪವನ್ನು ಇಡಲಾಗಿದೆ. ಇದರ ಎಡ-ಬಲದಲ್ಲಿ ಸೂರ್ಯ, ಚಂದ್ರರ ಉಬ್ಬುಶಿಲ್ಪವನ್ನು ಖಂಡರಿಸಲಾಗಿದೆ. ಇದರ ಮುಂದಿನ ತೆರದ ಮಂಟಪದಲ್ಲಿ ೪-೮-೪-೮-೪ ವೃತ್ತಾಕಾರದ ಮುಚ್ಚುಳ, ಬೋಧಿಗೆಯಿಂದ ಕೂಡಿದ ನಾಲ್ಕು ಕಂಬಗಳಿದ್ದು ಅವು ಸರಳ ಶೈಲಿಯಲ್ಲಿವೆ. ದೇವಾಲಯದ ಹೊರಭಾಗದ ಅಧಿಷ್ಠಾನ ಹಾಗೂ ಭಿತ್ತಿಯು ಸರಳವಾಗಿದೆ. ಭಿತ್ತಿಯ ಮೇಲ್ಭಾಗವನ್ನು ಇತ್ತೀಚಿಗೆ ನವೀಕರಿಸಿದ್ದಾರೆ. ಗರ್ಭಗುಡಿಯ ಮೇಲೆ ಶಿಖರವಿದೆ. ದೇವಾಲಯದ ಮುಂಭಾಗ ಸುಮಾರು ೧೫ ಅಡಿ ಎತ್ತರದ ದೀಪಸ್ತಂಭವಿದೆ.

ಊರು : ಕಂದಿಕೆರೆ

ಸ್ಮಾರಕ : ರಂಗನಾಥ ದೇವಾಲಯ

ಸ್ಥಳ : ಗ್ರಾಮದ ಮಧ್ಯಭಾಗ

ಅಭಿಮುಖ : ಉತ್ತರಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೭-೧೮ನೇ ಶತಮಾನ

ಈ ದೇವಾಲಯವು ಗರ್ಭಗೃಹ ಅಂತರಾಳ, ನವರಂಗ ಮತ್ತು ಮುಖಮಂಟಪವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಅದರಲ್ಲಿ ವೃಂದಾವನವಿದೆ. ದ್ವಾರವು ಸರಳವಾಗಿದೆ. ಇದರ ಮುಂದಿನ ಅಂತರಾಳದಲ್ಲಿ ರಂಗನಾಥನ ಉತ್ಸವಮೂರ್ತಿಯವನ್ನು ಅಲಂಕರಿಸಿ ಇಡಲಾಗಿದೆ. ದ್ವಾರವು ಸರಳವಾಗಿದ್ದು ಕಂಚಿನ ತಗಡುಗಳಿಂದ ಅಲಂಕರಿಸಲಾಗಿದೆ. ಕೆಳಭಾಗದಲ್ಲಿ ವೈಷ್ಣವ ದ್ವಾರಪಾಲಕರು ತ್ರಿಶೂಲ, ಡಮರುಗ, ಗದೆ ಹಿಡಿದು ನಿಂತಿದ್ದಾರೆ. ದ್ವಾರದ ಪಟ್ಟಿಕೆಯಲ್ಲಿ ನವಿಲು ತನ್ನ ಗರಿ ಬಿಚ್ಚಿ ಕುಣಿಯುತ್ತಿರುವಂತೆ, ಈ ಮೊದಲಿನ ಎರಡು ಶಾಖೆಗಳು ಲಲಾಟಬಿಂಬದವರೆಗೂ ಮುಂದುವರೆದಿದ್ದು ಲಲಾಟಬಿಂಬದಲ್ಲಿ ಮಧ್ಯಭಾಗದಲ್ಲಿ ವಿಷ್ಣುನಾಮ ಎಡ-ಬಲದಲ್ಲಿ ಶಂಖ ಮತ್ತು ಚಕ್ರ ಶಿಲ್ಪಗಳಿವೆ. ಇದರ ಮುಂದಿನ ನವರಂಗದಲ್ಲಿ ೪-೮-೪-೮-೪, ನಂತರ ಬೋಧಿಗೆಯಿಂದ ಕೂಡಿದ ನಾಲ್ಕು ಕಂಬಗಳಿವೆ. ನವರಂಗದ ಮೇಲ್ಭಾವಣಿಯಲ್ಲಿ ಭುವನೇಶ್ವರಿ ಇದೆ. ಇದರ ಮುಂದಿನ ಮುಖಮಂಟಪದಲ್ಲಿ ಎರಡು ಕಂಬಗಳಿದ್ದು ನವರಂಗ ದಲ್ಲಿರುವ ಕಂಬಗಳ ಶೈಲಿಯನ್ನೇ ಹೋಲುತ್ತವೆ.

ದೇವಾಲಯದ ಹೊರಭಾಗದ ಅಧಿಷ್ಠಾನ ಹಾಗೂ ಭಿತ್ತಿಯು ಸರಳವಾಗಿದೆ. ಭಿತ್ತಿಯ ಮೇಲ್ಭಾಗವನ್ನು ಇತ್ತೀಚಿಗೆ ನವೀಕರಿಸಿದ್ದಾರೆ. ಗರ್ಭಗುಡಿಯ ಮೇಲೆ ಶಿಖರವಿಲ್ಲ. ದೇವಾಲಯದ ಸುತ್ತಲೂ ವಿಶಾಲವಾದ ಆವರಣ, ಮುಂಭಾಗ ಗರಡು ಸ್ತಂಭ, ದೀಪ ಸ್ತಂಭ, ವೀರಗಲ್ಲುಗಳು ಹಾಗೂ ಪ್ರಾಚೀನಕಾಲದ ಬಾವಿಗಳಿವೆ.

ಊರು : ಹರ್ತಿಕೋಟೆ

ಸ್ಮಾರಕ : ವೆಂಕಟರಮಣ ದೇವಾಲಯ

ಸ್ಥಳ : ಗ್ರಾಮದ ಪೂರ್ವಕ್ಕೆ

ಅಭಿಮುಖ : ಪೂರ್ವಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೬-೧೭ನೇ ಶತಮಾನ

ಈ ದೇವಾಲಯವು ಗರ್ಭಗೃಹ ಅಂತರಾಳವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಅದರಲ್ಲಿ ಸುಮಾರು ನಾಲ್ಕು ಅಡಿ ಎತ್ತರ, ಎರಡು ಅಡಿ ಅಗಲ ವಿಸ್ತೀರ್ಣದಲ್ಲಿರುವ ವೆಂಕಟರಮಣನ ಮೂರ್ತಿಶಿಲ್ಪವಿದೆ. ಚತುರ್ಭುಜಧಾರಿಯಾದ ವೆಂಕಟರಮಣನು ಸುಮಾರು ೧^೧/೨ ಅಡಿ ಎತ್ತರದ ಪಾಣಿಪೀಠದ ಮೇಲಿದ್ದು ಅಭಯ ಅಸ್ತ, ಚಕ್ರ, ಶಂಖ, ಗದೆ ಹಿಡಿದು ನಿಂತಿದ್ದಾನೆ ಶಿಲ್ಪದ ಕೆಳಭಾಗದಲ್ಲಿ ತುಳುಸಿ ಅಮ್ಮನವರು ಎಡ-ಬಲದಲ್ಲಿ ನಿಂತಿದ್ದಾರೆ. ಇದರ ಕೆಳಭಾಗದಲ್ಲಿ ವೆಂಕಟರಮಣನ ವಾಹನವಾದ ಗರಡು ಕುಳಿತಿದ್ದಾನೆ. ಇದರ ಮುಂದಿನ ಅಂತರಾಳವು ಆಯಾತಕಾರವಾಗಿದ್ದು ಸರಳವಾಗಿದೆ. ಇದರ ದ್ವಾರವು ಸ್ತಂಭ ಶಾಖೆಯಿಂದ ಕೂಡಿದೆ. ಬಾಗಿಲುವಾಡವು ಸರಳವಾಗಿದ್ದು, ಲಲಾಟದಲ್ಲಿ ಬಾಲಕೃಷ್ಣನ ಉಬ್ಬುಶಿಲ್ಪವಿದೆ. ಇದರ ಮೇಲ್ಭಾಗ ನಾಟ್ಯವಾಡುತ್ತಿರುವ ಹಾವಾಡಿಗನ ಶಿಲ್ಪವಿದೆ. ಈ ದೇವಾಲಯದ ಹೊರಗೋಡೆಯ ಅಧಿಷ್ಠಾನವು ಭೂಮಿಯಲ್ಲಿ ಹೂತಿರುವುದರಿಂದ ಅದರ ಭಾಗಗಳು ಗೋಚರಿಸುವುದಿಲ್ಲ. ಭಿತ್ತಿ ಮತ್ತು ಪ್ರಸ್ತರ ಭಾಗವು ಸರಳವಾಗಿದ್ದು: ಗರ್ಭಗುಡಿಯ ಮೇಲೆ ದ್ವಿತಲ ಮಾದರಿಯ ಶಿಖರವಿದೆ. ಶಿಖರದ ಮೇಲೆ ಸ್ತೂಪಿ ಇದೆ.

ಶಾಕ್ತ ದೇವಾಲಯಗಳು

ಐಮಂಗಲ ಹೋಬಳಿಯಲ್ಲಿ ಶೈವ, ವೈಷ್ಣವ ದೇವಾಲಯಗಳಂತೆ ಶಾಕ್ತ ದೇವಾಲಯಗಳು ಐಮಂಗಲ, ಯರಬಳ್ಳಿ, ಬಾಲೇನಹಳ್ಳಿ, ಮೇಟಿಕುರ್ಕೆ, ಬುರುಜಿನರೊಪ್ಪ ಮುಂತಾದೆಡೆ ಕಂಡು ಬರುತ್ತವೆ. ವಾಸ್ತುಕಲೆಯ ಕಾಲಾನುಕ್ರಮದ ಬೆಳವಣಿಗೆಯನ್ನು ಗುರುತಿಸಲು ಶಾಕ್ತ ದೇವಾಲಯಗಳು ಸಹಾಯಕವಾಗಿರುವುದರಿಂದ ಆ ಕುರಿತು ಈ ಕೆಳಗಿನಂತೆ ವಿವರಿಸಲಾಗಿದೆ.

ಊರು : ಐಮಂಗಲ

ಸ್ಮಾರಕ : ಕಲ್ಲುಕಂಟೇಶ್ವರಿ ದೇವಾಲಯ

ಸ್ಥಳ : ಗ್ರಾಮದ ಪಶ್ಚಿಮಕ್ಕೆ

ಅಭಿಮುಖ : ಪೂರ್ವಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೭-೧೮ನೇ ಶತಮಾನ

ಈ ದೇವಾಲಯವು ಗರ್ಭಗೃಹ ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಅದರಲ್ಲಿ ಸುಮಾರು ೪ ಅಡಿ ಉದ್ದ, ೨ ಅಡಿ ಅಗಲ ವಿಸ್ತೀರ್ಣದಲ್ಲಿರುವ ಕಲ್ಲುಕಂಟೇಶ್ವರಿ ಮೂರ್ತಿಶಿಲ್ಪವಿದೆ. ಚತುರ್ಭುಜಧಾರಿಯಾದ ಕಲ್ಲುಕಂಟೇಶ್ವರಿಯು ಎತ್ತರದ ಪೀಠದ ಮೇಲಿದ್ದು, ಖಡ್ಗ, ಫಲ, ತ್ರಿಶೂಲ, ಡಮರುಗ ಹಿಡಿದಿರುವಂತೆ ಕಪ್ಪು ಶಿಲೆಯಲ್ಲಿ ಖಂಡರಿಸಲಾಗಿದೆ.

ದ್ವಾರವು ಸರಳವಾಗಿದ್ದು, ಅದನ್ನು ಇತ್ತೀಚೆಗೆ ಟೈಲ್ಸ್ ಹಾಕಲಾಗಿದೆ. ಇದರ ಮುಂದಿನ ತೆರೆದ ಮಂಟಪದಲ್ಲಿ ೪-೮-೪-೮-೪ ರೀತಿಯಲ್ಲಿ ಕಡೆಯಲಾಗಿದ್ದು, ನಂತರ ಬೋಧಿಗೆಯಿಂದ ಕೂಡಿದೆ. ಇಲ್ಲಿನ ಕಂಬವೊಂದರ ಚೌಕಾಕಾರ ಭಾಗದಲ್ಲಿ ಅಷ್ಟದಳ, ಪದ್ಮದಳ ಮುಂತಾದ ಉಬ್ಬು ಶಿಲ್ಪಗಳಿವೆ.

ಈ ದೇವಾಲಯದ ಹೊರಭಾಗದ ಅಧಿಷ್ಠಾನವು ಭೂಮಿಯಲ್ಲಿ ಹೂತಿರುವುದರಿಂದ, ಅದರ ಭಾಗಗಳು ಗೋಚರಿಸುವುದಿಲ್ಲ. ದೇವಾಲಯದ ಭಿತ್ತಿಯನ್ನು ಗ್ರ್ಯಾನೈಟ್ ಶಿಲೆಯನ್ನು ಬಳಸಿ ಕಟ್ಟಲಾಗಿದೆ. ಕಪೋತ ಭಾಗವು ಸರಳವಾಗಿದ್ದು, ಗರ್ಭಗುಡಿಯ ಮೇಲೆ ಶಿಖರವಿದೆ. ದೇವಾಲಯದ ಮುಂಭಾಗ ಸಣ್ಣ ಗುಡಿ ಇದ್ದು, ಅದರಲ್ಲಿ ಶಿಲ್ಪಗಳಿವೆ. ಇದನ್ನು ವಾಲ್ಮೀಕಿ ಸಮುದಾಯದವರು ಪೂಜಿಸುತ್ತಾರೆ. ಸುತ್ತಲೂ ವಿಶಾಲವಾದ ಆವರಣ ಇದ್ದು ಮುಂಭಾಗ ದೀಪಸ್ತಂಭವಿದೆ. ದೇವಾಲಯದ ಬಲಭಾಗದ ಕೋಣೆಯಲ್ಲಿ ಸಾಕಷ್ಟು ವೀರಗಲ್ಲುಗಳನ್ನು ನಿಲ್ಲಿಸಲಾಗಿದೆ. ಅದಕ್ಕೆ ಕಟ್ಟಡವನ್ನು ಕಟ್ಟಲಾಗಿದೆ.

ವೀರಶೈವ ಧರ್ಮಕ್ಕೆ ಸೇರಿದ ಐಯ್ಯನ ಹೆಸರಿನಲ್ಲಿ ಕೋಟೆ ಕಟ್ಟಿದ್ದರಿಂದ 'ಐಯ್ಯಮಂಗಲ' ಎಂದು ಹೆಸರು ಬಂದಿತೆಂದೂ, ಈ ಕೋಟೆಯನ್ನು ಒಂದೇ ದಿನದಲ್ಲಿ ಕಟ್ಟಲಾಯಿತೆಂದೂ ಹೇಳುತ್ತಾರೆ. ಐತಿಹಾಸಿಕ ಶಾಸನಸ್ತ ಸ್ಥಳ. ಈ ಪ್ರದೇಶ ನೊಳಂಬರಿಗೆ ಸೇರಿದ್ದಿತೆಂದು ಇಲ್ಲಿಯ ಕಂಬದೇವನ ಗುಡಿಯ ಶಾಸನದಿಂದ ತಿಳಿಯುತ್ತದೆ. ಕ್ರಿ.ಶ. ೯೭೫ರಲ್ಲಿ ನೊಳಂಬರ ಪಾಂಡುಗೆರೆಯ ಸಾಮಂತನ ಅಧಿಕಾರಿ ಮಾರಯ್ಯನ ಮಗ ಏಚಯ್ಯನು ಹಿಂದಿನ ಸಂಪ್ರದಾಯದಂತೆ ಪೆರ್ಗಡೆ ಗುಂಡಯ್ಯನು ಅನುಭವಿಸುತ್ತಿದ್ದ ಭೂಮಿಯನ್ನು ಕಿತ್ತುಕೊಂಡಿದ್ದರಂದ ಇರಿವನೊಳಂಬ ದಿಲೀಪಯ್ಯನ ಮಗ ನನ್ನಿ ನೊಳಂಬನು ತನ್ನ ಮಂತ್ರಿಗೆ ಆಜ್ಞೆ ನೀಡಿ ಏಚಯ್ಯನನ್ನು ಬಂಧಿಸಿ ಪೆರ್ಗಡೆ ಗುಂಡಯ್ಯನಿಗೆ ಭೂಮಿಯನ್ನು ಕೊಡಿಸಿದನೆಂದು ಹಿರಿಯೂರಿನ ೧ನೇ ಶಾಸನದಿಂದ ತಿಳಿದು ಬರುತ್ತದೆ.[೧೯]

ಊರು : ಯರಬಳ್ಳಿ

ಸ್ಮಾರಕ : ಮಾರಮ್ಮ ದೇವಾಲಯ

ಸ್ಥಳ : ಗ್ರಾಮದ ಪೂರ್ವಕ್ಕೆ

ಅಭಿಮುಖ : ಪೂರ್ವಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೫-೧೬ನೇ ಶತಮಾನ

ಈ ದೇವಾಲಯವು ಗರ್ಭಗೃಹ, ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹವು ಆಯಾತಕಾರವಾಗಿದ್ದು, ಅದರಲ್ಲಿ ಸುಮಾರು ೧ ಅಡಿ ಎತ್ತರದ ಮಾರಮ್ಮನ ಉದ್ಭವ ಮೂರ್ತಿ ಇದೆ. ಇದು ದುಂಡಾದ ಶಿಲೆಯಾಗಿದ್ದು ಬೆಳ್ಳಿ ಆಭರಣಗಳನ್ನು ಅಲಂಕರಿಸಿ ಉತ್ಸವ ಮೂರ್ತಿಯ ರೂಪದಲ್ಲಿ ಪ್ರತಿಷ್ಠಾಪಿಸಲಾಗಿದೆ. ಚತುರ್ಭುಜಧಾರಿಯಾದ ಮಾರಮ್ಮಳು ಖಡ್ಗ,

ಫಲ, ತ್ರಿಶೂಲ, ಡಮರುಗ ಹಿಡಿದಿದ್ದಾಳೆ. ದ್ವಾರವು ಸ್ತಂಭ ಶಾಖೆಯಿಂದ ಕೂಡಿದ್ದು, ಬಾಗಿಲುವಾಡಕ್ಕೆ ಕಂಚಿನ ತಗಡನ್ನು ಹೊದಿಸಲಾಗಿದೆ. ಲಲಾಟಬಿಂಬದಲ್ಲಿ ಲಕ್ಷ್ಮಿ ಇದ್ದು ಎಡ-ಬಲದಲ್ಲಿ ಗಿಳಿ ಶಿಲ್ಪವನ್ನು ಖಂಡರಿಸಲಾಗಿದೆ. ಇದರ ಮುಂದಿನ ತೆರದ ಮಂಟಪದಲ್ಲಿ ೪-೮-೪-೮-೪ ರೀತಿಯಲ್ಲಿ ಕಡೆಯಲಾಗಿದ್ದು, ನಂತರ ಬೋಧಿಗೆಯಿಂದ ಕೂಡಿರುವ ನಾಲ್ಕು ಕಂಬಗಳಿವೆ.

ದೇವಾಲಯದ ಹೊರಭಾಗದ ಅಧಿಷ್ಠಾನ ಹಾಗೂ ಭಿತ್ತಿಯು ಸರಳವಾಗಿದೆ. ಭಿತ್ತಿಯನ್ನು ಚಪ್ಪಡಿ ಕಲ್ಲಿನಿಂದ ನಿರ್ಮಿಸಲಾಗಿದ್ದು, ಇಲ್ಲಿ ಯಾವುದೇ ಶಿಲ್ಪಗಳಿಲ್ಲ. ಭಿತ್ತಿಯ ಮೇಲ್ಭಾಗವನ್ನು ಇತ್ತೀಚಿಗೆ ನಮೀಕರಿಸಿದ್ದಾರೆ. ಗರ್ಭಗುಡಿಯ ಮೇಲೆ ಶಿಖರವಿಲ್ಲ ಹಾಗೂ ದೇವಾಲಯದ ಮುಂಭಾಗದಲ್ಲಿ ದೀಪಸ್ತಂಭವಿದೆ. ದೇವಾಲಯದ ಎಡಭಾಗದಲ್ಲಿ ನಾಗಶಿಲ್ಪಗಳು. ಬಲಭಾಗದಲ್ಲಿ ವೀರ-ಮಾಸ್ತಿಗಲ್ಲು ಶಿಲ್ಪಗಳಿವೆ. ಹರತಿ ಪಾಳೆಯಗಾರ ಪಾಲನಾಯಕನ ಮೊಮ್ಮಗ ಎರಂಬಾಪೆ ನಾಯಕನು ತನ್ನ ಹೆಸರಿನಲ್ಲಿ ಎರಬಾಪೆನಹಳ್ಳಿ ಅಥವಾ ಇಂದಿನ ಯರಬಳ್ಳಿಯನ್ನು ನಿರ್ಮಿಸಿದನೆಂದು ಶಾಸನದಲ್ಲಿ ಉಲ್ಲೇಖವಿದೆ.

ಊರು : ಪಾಲವ್ವನಹಳ್ಳಿ

ಸ್ಮಾರಕ : ಲಕ್ಕಮ್ಮ ದೇವಾಲಯ

ಸ್ಥಳ : ರಾಷ್ಟ್ರೀಯ ಹೆದ್ದಾರಿಯ ಬಲಬದಿಯಲ್ಲಿ

ಅಭಿಮುಖ : ಪೂರ್ವಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೬-೧೭ನೇ ಶತಮಾನ

ಈ ದೇವಾಲಯವು ಗರ್ಭಗೃಹ ಅಂತರಾಳ, ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಅದರಲ್ಲಿ ಸುಮಾರು ೩ ಅಡಿ ಎತ್ತರದ ಲಕ್ಷ್ಮಿಯ ಶಿಲ್ಪವಿದೆ. ಚತುರ್ಭುಜಧಾರಿಯಾದ ಲಕ್ಷ್ಮಿಯು ಶಂಖ, ಚಕ್ರ, ಕತ್ತಿ ಮತ್ತು ಪಾನಬಟ್ಟಲನ್ನು ಹಿಡಿದು ಸುಖಾಸೀನ ಭಂಗಿಯಲ್ಲಿ ಕುಳಿತಿದ್ದಾಳೆ. ದ್ವಾರವು ಸರಳವಾಗಿದ್ದು ಸ್ತಂಭಶಾಖೆಯಿಂದ ಕೂಡಿದೆ. ಇದರ ಮುಂದಿನ ಅಂತರಾಳ ಚೌಕಾಕಾರವಾಗಿದ್ದು ಸರಳವಾಗಿದೆ. ಇದರ ಬಾಗಿಲುವಾಡದಲ್ಲಿ ವೈಷ್ಣವ ದ್ವಾರಪಾಲಕರು ಶಂಖ, ಚಕ್ರ, ಗದೆ ಹಿಡಿದು ನಿಂತಿದ್ದಾರೆ. ದ್ವಾರವು ಹೂಬಳ್ಳಿ, ವಜ್ರಪಟ್ಟಿಕೆಗಳಿಂದ ಕೂಡಿದ್ದು ಮೊದಲಿನ ಎರಡು ಶಾಖೆಗಳು ಲಲಾಟಬಿಂಬದವರೆಗೂ ಮುಂದುವರೆದಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಇದರ ಮುಂದಿನ ಸಭಾಮಂಟಪದಲ್ಲಿ ೪-೮-೪-೮-೪ ಪಾರ್ಶ್ವದಲ್ಲಿ ಕಡೆದಿರುವ ೧೨ ಕಂಬಗಳಿವೆ. ಇದರ ಮೇಲ್ಭಾವಣೆಯಲ್ಲಿ ಮುಗುಚಿದ ಪದ್ಮದ ಅಲಂಕರಣೆಯಿದೆ. ಗರ್ಭಗೃಹದ ಮೇಲೆ ಶಿಖರವಿಲ್ಲ. ದೇವಾಲಯದ ಮುಂಭಾಗದಲ್ಲಿ ಎರಡು ದೀಪಸ್ತಂಭಗಳಿದ್ದು ಎರಡರಲ್ಲೂ ಕೈ ಮುಗಿದು ನಿಂತ ಮೂರು ಭಕ್ತ ಶಿಲ್ಪಗಳಿವೆ. ದೇವಾಲಯ ಎಡಭಾಗದಲ್ಲಿ ನಾಲ್ಕು ನಾಗರ ಕಲ್ಲುಗಳಿವೆ.

ಊರು : ಪರ್ತಿಕೋಟೆ

ಸ್ಮಾರಕ : ಉಡುಸಲಮ್ಮ ದೇವಾಲಯ

ಸ್ಥಳ : ಗ್ರಾಮದ ಉತ್ತರಕ್ಕೆ

ಅಭಿಮುಖ : ಪಶ್ಚಿಮಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೬-೧೭ನೇ ಶತಮಾನ

ಈ ದೇವಾಲಯವು ಗರ್ಭಗೃಹ, ಅಂತರಾಳ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಅದರಲ್ಲಿ ಸುಮಾರು ೧½ ಅಡಿ ಎತ್ತರದ ಉರುಸಲಮ್ಮನ ಶಿಲ್ಪವಿದೆ. ಚತುರ್ಭುಜಧಾರಿಯಾದ ಉರುಸಲಮ್ಮಳು ಪೀಠದ ಮೇಲಿದ್ದು ಖಡ್ಗ, ಫಲ, ತ್ರಿಶೂಲ, ಡಮರುಗ ಹಿಡಿದಿರುವಂತೆ ಕಪ್ಪುಶಿಲೆಯಲ್ಲಿ ಖಂಡರಿಸಲಾಗಿದೆ. ದ್ವಾರವು ಸರಳವಾಗಿದ್ದು ಸ್ತಂಭಶಾಖೆಯಿಂದ ಕೂಡಿದೆ. ಇದರ ಮುಂದಿನ ಅಂತರಾಳವು ಚೌಕಾಕಾರವಾಗಿದ್ದು ಸರಳವಾಗಿದೆ. ಇದರ ಬಾಗಿಲುವಾಡವು ವೈಷ್ಣವ ದ್ವಾರಪಾಲಕರು ಶಂಖ, ಚಕ್ರ, ಗದೆ ಹಿಡಿದು ನಿಂತಿದ್ದಾರೆ. ದ್ವಾರವು ಹೂಬಳ್ಳಿ, ವಜ್ರಪಟ್ಟಿಕೆಗಳಿಂದ ಕೂಡಿದ ದ್ವಿಶಾಖೆಯಲ್ಲಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಇದರ ಮುಂದಿನ ಸಭಾಮಂಟಪದಲ್ಲಿ ೪-೮-೪-೮ ರೀತಿಯ ೬ ಕಂಬಗಳಿವೆ. ಗರ್ಭಗುಡಿಯ ಮೇಲೆ ಶಿಖರವಿಲ್ಲ. ದೇವಾಲಯದ ಆವರಣದಲ್ಲಿ ಕುಕ್ಕಲಮ್ಮ, ಗೌರಸಮುದ್ರ ಮಾರಮ್ಮ, ಗಂಟಲ ಮಾರಮ್ಮನ ಶಿಲ್ಪಗಳಿವೆ. ಈ ದೇವಾಲಯದ ಸಮೀಪದಲ್ಲಿ ಕೊಲ್ಲಾಪುರದಮ್ಮ, ಯರಬಳ್ಳಿ ಮಾರಕ್ಕನ ಗುಡಿಗಳಿವೆ. ಇದರ ಸಮೀಪ ಪೂರ್ವ ದಿಕ್ಕಿಗೆ ಸಿಹಿ ನೀರಿನ 'ಮಜ್ಜನ ಬಾವಿ' ಇದೆ. ಈ ಗ್ರಾಮದಲ್ಲಿರುವ ಎಲ್ಲ ದೇವರುಗಳ ಅಭಿಷೇಕಕ್ಕೆ ಈ ನೀರನ್ನೇ ಬಳಸಲಾಗುವುದ ರಿಂದ ಇದನ್ನು ಮಜ್ಜನಬಾವಿಯೆಂದು ಕರೆಯುತ್ತಾರೆ.

ಊರು : ಬುರುಜಿನರೊಪ್ಪ

ಸ್ಮಾರಕ : ಶುಕ್ಲಾಂಭ ದೇವಾಲಯ

ಸ್ಥಳ : ಗ್ರಾಮದ ಪ್ರವೇಶದ್ವಾರದಲ್ಲಿ

ಅಭಿಮುಖ : ಪೂರ್ವಾಭಿಮುಖ

ಕಾಲ : ಕ್ರಿ.ಶ. ಸುಮಾರು ೧೬-೧೭ನೇ ಶತಮಾನ

ಈ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪದಿಂದ ಕೂಡಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಅದರಲ್ಲಿ ಸುಮಾರು ३½ ಅಡಿ ಎತ್ತರದ ಶುಕ್ಲಾಂಭದೇವಿಯ ಶಿಲ್ಪವಿದೆ. ಚತುರ್ಭುಜಧಾರಿಯಾದ ಶುಕ್ಲಾಂಬೆಯು ಖಡ್ಗ, ತ್ರಿಶೂಲ, ಡಮರುಗ ಹಾಗೂ ಅಕ್ಷಯ ಪಾತ್ರೆಯನ್ನು ಹಿಡಿದಿದ್ದಾಳೆ. ದ್ವಾರವು ಸರಳವಾಗಿದ್ದು, ಹೂಬಳ್ಳಿಗಳಿಂದ ಕೂಡಿದ್ದು, ಲಲಾಟದಲ್ಲಿ ಗಣಪತಿಯ ಉಬ್ಬುಶಿಲ್ಪವಿದೆ. ಇದರ ಮುಂದಿನ ಅಂತರಾಳವು ಚೌಕಾಕಾರವಾಗಿದ್ದು ಇದರಲ್ಲಿ ಶುಕ್ಲಾಂಬೆಯ ಉತ್ಸವಮೂರ್ತಿಯನ್ನು ಕುಳ್ಳಿರಿಸಲಾಗಿದೆ. ಬಾಗಿಲುವಾಡದಲ್ಲಿ ಸಿಂಹದ ಉಬ್ಬುಶಿಲ್ಪ

ಹಾಗೂ ಹೂಬಳ್ಳಿಗಳಿಂದ ಕೂಡಿದ್ದು ಮೊದಲಿನ ಎರಡು ಶಾಖೆಗಳು ಲಲಾಟಬಿಂಬದವರೆಗೂ ಮುಂದುವರೆದಿದ್ದು ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ. ಇದರ ಮುಂದಿನ ಸಭಾಮಂಟಪದಲ್ಲಿ ೪-೮-೪-೮-೪ ರೀತಿಯ ೬ ಕಂಬಗಳನ್ನು ಕಡೆಯಲಾಗಿದೆ. ಗರ್ಭಗುಡಿಯ ಮೇಲಿನ ಶಿಖರವು ದ್ವಿತಲವಾಗಿದ್ದು ಆಧುನಿಕವಾಗಿ ನಿರ್ಮಿಸಲಾಗಿದೆ. ಇದರಲ್ಲಿ ಶುಕ್ಲಾಂಭೆಯನ್ನು ನಾಲ್ಕು ಕಡೆಯಲ್ಲೂ ಪುಟ್ಟ ಗೂಡುಗಳಲ್ಲಿ ಸುಖಾಸೀನ ರೀತಿಯಲ್ಲಿ ಕುಳ್ಳಿರಿಸಲಾಗಿದೆ ಹಾಗೂ ನಾಲ್ಕು ಕಡೆ ಆಂಜನೇಯ, ಅಪ್ಸರ ರಾಕ್ಷಸರ ಶಿಲ್ಪವನ್ನು ರಚಿಸಲಾಗಿದೆ. ಶಿಖರದ ಮೇಲೆ ಸ್ತೂಪಿಯಿದೆ. ದೇವಾಲಯದ ಮುಂಭಾಗ ಸುಮಾರು ೧೫ ಅಡಿ ಎತ್ತರದ ದೀಪಸ್ತಂಭವಿದೆ.

೪.೨. ಮೂರ್ತಿಶಿಲ್ಪ

ಮೂರ್ತಿಶಿಲ್ಪದ ಉಗಮ, ವಿಕಾಸ, ಹಿನ್ನೆಲೆ

ಭಾರತದಲ್ಲಿ ದೇವತಾರಾಧನೆ ಹಾಗೂ ವ್ಯವಸ್ಥಿತ ದೇವಾಲಯಗಳ ನಿರ್ಮಾಣ ಎಂದು ಆರಂಭವಾಯಿತೊ ಅಂದಿನಿಂದಲೂ ದೇವತಾ ಮೂರ್ತಿಗಳ ಪ್ರತಿಷ್ಠಾಪನೆ ಮತ್ತು ಆರಾಧನೆ ನಡದೇ ಇದೆ. ಯಾವುದೇ ಪಂಥದ ದೇವಾಲಯವಿರಲಿ ಆ ದೇವಾಲಯಕ್ಕೊಂದು ದೇವತಾ ಮೂರ್ತಿ ಇದ್ದೇ ಇರುತ್ತದೆ. ಈ ರೀತಿಯ ಮೂರ್ತಿಗಳನ್ನು ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು ನಾವು ಸ್ಥೂಲವಾಗಿ "ಮೂರ್ತಿಶಾಸ್ತ್ರ" ಎಂದು ಕರೆಯಬಹುದು.

'ಮೂರ್ತಿ' ಎಂಬ ಶಬ್ದಗಳನ್ನೊಳಗೊಂಡು ಅದಕ್ಕೆ ಪರ್ಯಾಯವಾಗಿ ಬಳಸಿದ ಶಬ್ದಗಳಲ್ಲಿ ಅದೊಂದು ಭೌತಿಕವಸ್ತು ಎಂಬಂತೆಯ ಗ್ರಹಿಸಲಾಗುತ್ತದೆ. ಏಕೆಂದರೆ 'ದೇವತಾಮೂರ್ತಿ' ಎಂಬ ಶಬ್ದದಲ್ಲಿ ಮೂರ್ತಿಯೇ ದೇವತೆಯಲ್ಲ; ಮೂರ್ತಿ ದೇವತೆಯದು. ಈ ಕುರಿತು ಇರುವ 'ಪ್ರತಿಮಾ', 'ಬಿಂಬ', 'ಪ್ರತಿಕೃತಿ', 'ವಿಗ್ರಹ' ಮುಂತಾದ ಶಬ್ದಗಳು ಇದನ್ನು ಇನ್ನೂ ಸ್ಪಷ್ಟವಾಗಿ ಸೂಚಿಸುತ್ತವೆ. ಇಲ್ಲೆಲ್ಲ ಒಂದು ನಿರಾಕಾರ ಕಲ್ಪನೆಯನ್ನು ಯಥಾವತ್ತಾಗಿ ಅನುಕರಿಸಿದ 'ಸಾಕಾರಾ ವಸ್ತು' ಎಂಬ ಪರಿಕಲ್ಪನೆಯಿದೆ.[೨೦] 'ಅರ್ಚ್ಯ' ಎಂಬ ಶಬ್ದ ಪೂಜಿಸಲ್ಪಡುವಂತಹದ್ದು ಎಂದಾದರೆ 'ಬೇರೆ' ಕೂಡ ಅದೇ ಅರ್ಥವನ್ನು ಕೊಡುತ್ತದೆ. 'ತನು', 'ವಪು' ಮುಂತಾದ ಶಬ್ದಗಳು ಮೂರ್ತಿಯನ್ನು ದೇಹವನ್ನಾಗಿ ಗ್ರಹಿಸುವಲ್ಲಿ ಹಾಗೂ ದೇವರನ್ನು ಅದರ ಆತ್ಮವನ್ನಾಗಿ ಪ್ರತ್ಯೇಕಿಸುತ್ತವೆ.[೨೧]

ಮೂರ್ತಿ ಎಂಬ ಪದಕ್ಕೆ ಸಮಾನಾರ್ಥವಾಗಿ 'ಪ್ರತಿಮೆ' ಎಂಬ ಪದ ಪ್ರಯೋಗದಲ್ಲಿದೆ. ಅಲ್ಲದೆ, ಮೂರ್ತಿಶಾಸ್ತ್ರವನ್ನು 'ಪ್ರತಿಮಾಶಾಸ್ತ್ರ' ಎಂದೂ ಕರೆಯಲಾಗುತ್ತಿದೆ (Iconography - Iconomentry). ಪ್ರತಿಮಾ ಲಕ್ಷಣವೆಂದರೆ; ಒಂದು ದೇವತೆಯ ಲಕ್ಷಣವನ್ನು ಮೂರ್ತಿ ರೂಪದಲ್ಲಿ ಪ್ರಮಾಣಬದ್ಧವಾಗಿ ಹೇಗೆ ಹಿಡಿಯಬೇಕೆಂಬುದನ್ನು ವಿಧಿಸುವ ಶಾಸ್ತ್ರ. ಶಾಸ್ತ್ರೀಯ ನಿರೂಪಣೆ ಪ್ರಕಾರ ಮೂರ್ತಿಯು ಒಂದು ರೂಪ ಒಂಭತ್ತು ಅಂಗಗಳನ್ನು ಒಳಗೊಂಡಿರುತ್ತದೆ. ಅವೆಂದರೆ, ನ್ಯಾಸ (ರೂಪ ಸಂಯೋಜನೆ), ಅಲಂಕಾರ (ಆಭರಣ, ವಸ್ತ್ರ, ಕೇಶ ಮುಂತಾದವು), ಮುದ್ರಾ (ಹಸ್ತ ಮುದ್ರೆಗಳು), ಆಯುಧ (ದೇವತೆಯ ಕೈಯಲ್ಲಿರುವ ಆಯುಧಗಳು), ಭಾಪ್ರಕಕ್ಷೆ (ಆಸನ) ವಾಹನ, ಉಪದೇವ (ಪ್ರಧಾನ ದೇವತೆಯ ಜತೆ ತೋರಿಸಲ್ಪಡುವ ಇತರ ಕಡಿಮೆ

ಮಹತ್ವದ ದೇವತೆಗಳು), ಅರಿ (ದೇವತೆಯ ವೈರಿ) ಹಾಗೂ ಸ್ತುವಕ[೨೨] (ಭಕ್ತರು ಹಾಗೂ ಇತರ ಸೇವಕರು) ಈ ಶಾಸ್ತ್ರೀಯ ಸಂಪ್ರದಾಯಕ್ಕನುಗುಣವಾಗಿಯೇ ದೇವತಾಮೂರ್ತಿಗಳು ರೂಪುಗೊಳ್ಳುತ್ತವೆ. ಮೂರ್ತಿಶಿಲ್ಪಕ್ಕೆ ಪ್ರಾಗೈತಿಹಾಸಿಕ ಕಾಲದಿಂದಲೂ ಆಧಾರಗಳು ದೊರಕುತ್ತವೆ. ಭಾರತದ ವಿವಿಧ ನೆಲಗಳ ಉತ್ಖನನದಿಂದ ಹಲವಾರು ಮಾಹಿತಿಗಳು ದೊರಕಿವೆ. ಅವುಗಳಲ್ಲಿ ಬಿಹಾರ ರಾಜ್ಯದ ಚಿರಾಂಡ,[೨೩] ರಾಜಸ್ಥಾನದ ಆಹಾರ್,[೨೪] ಮಧ್ಯಪ್ರದೇಶದ ಕಾಯಥ. ನವದಾತೋಲಿ[೨೫] ಮತ್ತು ಮಹಾರಾಷ್ಟ್ರದ ನೆವಾಸಾ, ಇನಾಂಗಾಂವ್[೨೬], ಉತ್ತರ ಪ್ರದೇಶದ ಲಾಲ್-ಖಿಲಾದಲ್ಲಿ ಪ್ರಾಣಿ ಹಾಗೂ ಮಾತೃದೇವತೆಯ ಮಣ್ಣಿನ ಮೂರ್ತಿಗಳು ದೊರೆತಿವೆ. ಇವುಗಳು ನಂತರದ ಭಾರತೀಯ ಮೂರ್ತಿ ಲಕ್ಷಣಗಳಿಗೆ ಪ್ರೇರಕವಾಗಿವೆ. ಕರ್ನಾಟಕದ ಕುಪ್ಪಗಲ್, ಪಿಕ್ಲಿಹಾಳ, ಸಂಗನಕಲ್ಲು, ತೆಕ್ಕಲಕೋಟೆ ಮುಂತಾದ ಕಡೆ ನಡೆದ ಉತ್ಖನನಗಳಿಂದ ನೂತನ ಶಿಲಾಯುಗ/ಶಿಲಾ ತಾಮ್ರಯುಗಕ್ಕೆ ಸೇರಿದ ಸುಡಾಮ ಮಣ್ಣಿನ ಗೊಂಬೆಗಳು ದೊರತಿವೆ.[೨೭] ಇವು ಅಂದಿನ ಧಾರ್ಮಿಕ ನಂಬಿಕೆ, ಭಾವನೆ ಮತ್ತು ಪರಂಪರೆಯನ್ನು ಸೂಚಿಸುವ ಆಕರಗಳಾಗಿ ರುವುದಷ್ಟೇ ಅಲ್ಲದೇ, ಕರ್ನಾಟಕ ಮೂರ್ತಿಶಿಲ್ಪದ ಪೂರ್ವಭಾವಿ ಹಂತವನ್ನು ಸೂಚಿಸುತ್ತವೆ.[೨೮]

ಮಹೆಂಜೊದಾರೊದಲ್ಲಿ ದೊರೆತ ಪ್ರಾಣಿಗಳ ಶಿಲ್ಪಗಳು[೨೯] ಹಾಗೂ ನರ್ತನ ಶಿಲ್ಪ ಮುದ್ರೆಯ ಮೇಲ ದೊರೆತ ವಿಗ್ರಹಗಳಲ್ಲಿ ಮುಖ್ಯವಾಗಿ ಪಶುಪತಿಯೇ ಶಿವನೆಂದು ಗುರುತಿಸಲಾಗಿರುವ ಧ್ಯಾನಸ್ಥ ಮೂರ್ತಿಗಳು ಸಿಂಧೂ ನಾಗರೀಕತೆಯಲ್ಲಿ ದೊರೆಯುವ ಪ್ರಮುಖ ಮೂರ್ತಿಶಿಲ್ಪಗಳಾಗಿವೆ. ವೇದಗಳ ಕಾಲದಲ್ಲಿ ವಿಗ್ರಹಗಳಿಗೆ ಪ್ರಾಧಾನ್ಯವಿರಲಿಲ್ಲವೆಂದು ಪ್ರಕೃತಿ ಶಕ್ತಿಗಳನ್ನು ಆರಾಧಿಸುತ್ತಿದ್ದರೆಂದು ಹೇಳಲಾಗುತ್ತದೆ. ಆದರೂ ಇಂದ್ರ, ವರುಣ, ರುದ್ರ ಮೊದಲಾದ ದೇವತೆಗಳಿಗೆ ಮನುಷ್ಯಾಕಾರದ ಕಲ್ಪನೆಯನ್ನು ಕೊಟ್ಟಿರುವುದು ಕಂಡುಬರುತ್ತದೆ.[೩೦]

ಮೂರ್ತಿಶಾಸ್ತ್ರಕ್ಕೆ ಕ್ರಿಪೂ. ೩ನೇ ಶತಮಾನದಿಂದ ಆಧಾರಗಳು ಸಿಗುತ್ತವೆ. ಅವೈದಿಕರು ಕೂಡಾ ಮೂರ್ತಿಗಳ ಆರಾಧನೆಯಲ್ಲಿ ತೊಡಗಿದ್ದರೆಂಬುದು ವೈದಿಕ ಸಾಹಿತ್ಯದಿಂದ ವ್ಯಕ್ತವಾಗುತ್ತದೆ.[೩೧] ಕ್ರಿ.ಶ. ೪ನೇ ಶತಮಾನಕ್ಕೆ ಸೇರಿದ ಅವಶೇಷಗಳು ಗಂಗಾ ಬಯಲಿನಲ್ಲಿ ದೊರೆತಿದ್ದು, ಅವುಗಳಿಂದ ಕ್ರಿಪೂ. ೩ನೇ ಶತಮಾನಕ್ಕೆ ಪೂರ್ವದಲ್ಲೇ ಪ್ರಾಚೀನ ಭಾರತದ ಗ್ರಾಮಗಳಲ್ಲಿ ಮರದ ಮೂರ್ತಿಗಳು ಇದ್ದವೆಂಬುದು ಸ್ಪಷ್ಟವಾಗುತ್ತದೆ. ಈ ಎಲ್ಲಾ ಆಧಾರಗಳಿಂದ ಭಾರತೀಯ ನೆಲದ ಅವೈದಿಕ ಸಮಾಜಗಳಲ್ಲಿ ಮೂರ್ತಿ ಪೂಜೆ ಸಂಪ್ರದಾಯ ಪ್ರಚಲಿತದಲ್ಲಿತ್ತೆಂದು ಹೇಳಬಹುದು.[೩೨]

ಬೌದ್ಧ ಧರ್ಮದಲ್ಲಿ ಬುದ್ಧನನ್ನು ಮೂರ್ತಿರೂಪದಲ್ಲಿ ತೋರಿಸದಿದ್ದರೂ, ಬುದ್ಧನ ಪ್ರತೀಕವಾದ ಬೋಧಿವೃಕ್ಷ, ಸಿಂಹಾಸನ, ಸ್ತೂಪ, ಚಕ್ರ ರೂಪದಲ್ಲಿ ಪೂಜಿಸುವ ದೃಶ್ಯಗಳಿರುತ್ತವೆ. ಈ ಪೂಜೆಯಲ್ಲಿ ನಮಸ್ಕಾರ, ಪ್ರದಕ್ಷಿಣೆ, ಧೂಪ, ದೀಪ, ಪುಷ್ಪ, ನೈವೇದ್ಯ ಮುಂತಾದ ಪೂಜೆಯ ಅಂಗಗಳು ಚಿತ್ರಿತವಾಗಿರುತ್ತವೆ. ಈ ಪೂಜೆಯನ್ನು ಮೂರ್ತಿ ಪೂಜೆಯ ಇತಿಹಾಸದಲ್ಲಿ ಒಂದು ಪ್ರಾರಂಭಿಕ ಅವಸ್ಥೆ ಎಂದು ಹೇಳಬಹುದಾಗಿದೆ.

ಜೈನಧರ್ಮದಲ್ಲಿ ತೀರ್ಥಂಕರರನ್ನು ಮೂರ್ತಿ ರೂಪದಲ್ಲಿ ಪೂಜಿಸುವ ಸಂಪ್ರದಾಯ ಕ್ರಿ.ಶ. ಆರಂಭದಲ್ಲೇ ಇದ್ದುದಕ್ಕೆ ಪ್ರಾಕ್ತನ ಶಾಸ್ತ್ರೀಯ ಆಧಾರಗಳು ದೊರೆಯುತ್ತವೆ.[೩೩] ಜಿನ ಮೂರ್ತಿಯ ಉಲ್ಲೇಖ ಸ್ಪಷ್ಟವಾಗಿ ಖಾರವೇಲನ ಹಾಂಥಿಗುಂಪಾ ಶಾಸನದಲ್ಲಿ ದೊರಕುತ್ತದೆ. ಇದು ಕ್ರಿ.ಪೂ. ಮೊದಲನೇ ಶತಮಾನದ ಮಧ್ಯಭಾಗಕ್ಕೆ ಸೇರಿದ್ದಾಗಿದೆ.[೩೪] ಮಥುರಾದಲ್ಲಿ ಬೌದ್ಧಮೂರ್ತಿಗಳಂತೆ ಪ್ರಾಚೀನ ಜಿನಮೂರ್ತಿಗಳು ದೊರೆಯುತ್ತವೆ.

ದಕ್ಷಿಣ ಭಾರತದಲ್ಲಿ ಶಾತವಾಹನರ ಕಲೆ ಅನೇಕ ಕಡೆ ವಿಜೃಂಭಿಸಿತು. ಗುಡಿಮಲ್ಲಂ ಶಿವಲಿಂಗ ಶಾತವಾಹನರ ಶೈಲಿಯ ಅತ್ಯುತ್ತಮ ಕೊಡುಗೆಯಾಗಿದೆ. ನಾಗಾರ್ಜುನಕೊಂಡ ಶಿಲ್ಪಗಳು ಅಮರಾವತಿಯ ಶೈಲಿಯಲ್ಲಿವೆ. ಬಾದಾಮಿ ಚಾಲುಕ್ಯರ ಶಿಲ್ಪಗಳು ಕರ್ನಾಟಕದ ಐಹೊಳೆ, ಬಾದಾಮಿ, ಮಹಾಕೂಟ, ಪಟ್ಟದಕಲ್ಲು ಮುಂತಾದ ಕಡೆಗಳಲ್ಲಿ ಕಂಡುಬರುತ್ತವೆ. ಐಹೊಳೆಯ ಮೇಗುತಿ ದೇವಾಲಯ, ಹುಚ್ಚಮಲ್ಲಿಗುಡಿ ಮತ್ತು ಲಾಡಖಾನ ಗುಡಿಗಳಲ್ಲಿರುವ ಶಿಲ್ಪಗಳು ಆರಂಭಿಕ ಹಂತದ ಅತ್ಯುತ್ತಮ ಶಿಲ್ಪಗಳಾಗಿವೆ. ನೆರೆಯ ರಾಜ್ಯವಾದ ಮಹಾರಾಷ್ಟ್ರದ ಎಲಿಫೆಂಟಾ, ಎಲ್ಲೋರಾದಲ್ಲಿ ಹಾಗೂ ಕರ್ನಾಟಕದ ಗದಗ, ರೋಣ, ನಿಡಗುಂದಿ ಮುಂತಾದ ಕಡೆಗಳಲ್ಲಿ ರಾಷ್ಟ್ರಕೂಟರ ಶೈಲಿಯ ಮೂರ್ತಿಗಳು ಇವೆ. ಕರ್ನಾಟಕದ ದಕ್ಷಿಣ ಭಾಗದಲ್ಲಿ ಗಂಗರ ಶಿಲ್ಪಗಳು ದೊರೆತಿವೆ. ಶ್ರವಣಬೆಳಗೊಳದ ಗೊಮ್ಮಟೇಶ್ವರ ಮೂರ್ತಿ ಮಹತ್ವದ್ದಾಗಿದೆ. ಹೊಯ್ಸಳರ ಮೂರ್ತಿಗಳು ಹೆಚ್ಚಾಗಿ ಅಲಂಕೃತಗೊಂಡಿದ್ದು, ನೋಡಲು ಸುಂದರವಾಗಿವೆ. ವಿಜಯನಗರ ಕಾಲದ ಮೂರ್ತಿಗಳು ವಿಶಿಷ್ಟವಾಗಿವೆ. ಈ ಎಲ್ಲಾ ಸಾಮ್ರಾಜ್ಯಗಳು ಮೂರ್ತಿಶಿಲ್ಪ ಕಲೆಗೆ ಕೊಟ್ಟ ಕಾಣಿಕೆ ಗಣನೀಯವಾದದ್ದು. ಭಾರತ ಮತ್ತು ಕರ್ನಾಟಕ ಸಂದರ್ಭದಲ್ಲಿ ಮೂರ್ತಿಶಿಲ್ಪ ಕಲೆ ಬೆಳೆದು ಬಂದ ಬಗೆಯನ್ನು ಈವರೆಗೆ ಅವಲೋಕಿಸಲಾಗಿದೆ.

ರಾಜಮಹಾರಾಜರು, ರಾಣಿಯರು, ಸಾಮಂತರು, ವರ್ತಕರು, ಮೂರ್ತಿಶಿಲ್ಪಕ್ಕೆ ನೀಡಿದ ಅಪಾರ ಪ್ರೋತ್ಸಾಹದಿಂದಾಗಿ ಕರ್ನಾಟಕದಲ್ಲಿ ಮೂರ್ತಿಶಿಲ್ಪ ಕಲೆಯು ಅಪರಿಮಿತವಾಗಿ ಬೆಳೆದು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಈ ಪ್ರೋತ್ಸಾಹವು ಅವರ ಸೌಂದರ್ಯ ಪ್ರಜ್ಞೆಯ ದ್ಯೋತಕವಾಗಿದೆ. ವಿವಿಧ ರಾಜವಂಶದವರು ತಮ್ಮದೇ ಆದ ವಿಶೇಷ ಶೈಲಿ ಮತ್ತು ಅಲಂಕಾರಿಕ ಲಕ್ಷಣಗಳಲ್ಲಿ ವಿಭಿನ್ನ ಮೂರ್ತಿಗಳನ್ನು ನಿರ್ಮಿಸಿ ತಮ್ಮ ವೈಶಿಷ್ಟತೆಯನ್ನು ಉಳಿಸಿಕೊಂಡಿರುವುದು ಭಾರತೀಯ ಮೂರ್ತಿಶಾಸ್ತ್ರದಲ್ಲಿ ಗಮನಾರ್ಹವಾಗಿದೆ.

ಐಮಂಗಲ ಹೋಬಳಿಯು ಪ್ರಾಚೀನ ಮತ್ತು ಮಧ್ಯಯುಗೀನ ಕಾಲದಲ್ಲಿ ಎಲ್ಲ ಧರ್ಮಗಳ ತವರೂರಾಗಿತ್ತು. ಈ ಭಾಗದಲ್ಲಿ ಅಂದು ಆಳ್ವಿಕೆ ನಡೆಸಿದ ಅರಸರು ಸಕಲ ಧರ್ಮಗಳನ್ನು ಒಂದೇ ದೃಷ್ಟಿಯಿಂದ ನೋಡಿದ್ದರಿಂದಾಗಿ ವಿಭಿನ್ನ ಧರ್ಮೀಯರ ದೇವಾಲಯಗಳ ನಿರ್ಮಾಣ ಸಾಧ್ಯವಾಗಿದೆ. ಈ ದೇವಾಲಯಗಳ ತತ್ಸಂಬಂಧಿ ಧರ್ಮೀಯ ಮೂರ್ತಿಗಳು ಪ್ರತಿಷ್ಠಾಪನೆ ಗೊಂಡಿದ್ದನ್ನು ನಾವು ಗಮನಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಐಮಂಗಲ ಹೋಬಳಿಯಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಕಂಡುಬಂದ ವಿಭಿನ್ನ ಧರ್ಮದ ಪ್ರತಿಮಾ ವಿಧಾನವನ್ನು ಮುಂದಿನಂತೆ

ನಿರೂಪಿಸಲಾಗಿದೆ. ಈ ಹೋಬಳಿಯಲ್ಲಿ ದೊರೆತ ವಿವಿಧ ಮೂರ್ತಿಗಳನ್ನು ಹೀಗೆ ವಿಭಾಗಿಸಿಕೊಳ್ಳಲಾಗಿದೆ.

೧. ಶೈವ ಮೂರ್ತಿಗಳು

೨. ವೈಷ್ಣವ ಮೂರ್ತಿಗಳು

೩. ಶಾಕ್ತ ಮೂರ್ತಿಗಳು

೧. ಶೈವ ಮೂರ್ತಿಗಳು : ಭಾರತದಲ್ಲಿ ಪ್ರಚಲಿತದಲ್ಲಿರುವ ಆರಾಧನಾ ಪದ್ಧತಿಗಳಲ್ಲಿ ಶಿವನ ಆರಾಧನೆಯು ಪ್ರಮುಖವಾಗಿದೆ.[೩೫] ಹಿಂದೂ ಪರಂಪರೆಯ ಆರಾಧನಾ ಪದ್ಧತಿಯಲ್ಲಿ ಶಿವನ ಪ್ರತಿರೂಪಗಳಾದ ಲಿಂಗ ನಂದಿಯನ್ನು ಹೆಚ್ಚಾಗಿ ಪೂಜಿಸಲಾಗುತ್ತದೆ ಹಾಗೂ ಲಿಂಗೋದ್ಭವ ಮೂರ್ತಿ, ಕೇವಲ ಮೂರ್ತಿ, ಭಿಕ್ಷಾಟನಾ ಮೂರ್ತಿ, ಕಂಕಾಲಮೂರ್ತಿ, ಕ್ಷೇತ್ರಪಾಲ, ದಕ್ಷಿಣಾಮೂರ್ತಿ, ಗಜಸುರಸಂಹಾರಮೂರ್ತಿ, ಆಲಿಂಗನಮೂರ್ತಿ, ವೃಷಭಮೂರ್ತಿ, ಭೈರವ, ವೀರಭದ್ರ, ಗಣೇಶ, ಸ್ಕಂದ, ಅರ್ಧನಾರೀಶ್ವರ, ಉಮಾ ಮಹೇಶ್ವರಮೂರ್ತಿಗಳೆಲ್ಲವನ್ನು ಶೈವ ಪಂಥದ ಮೂರ್ತಿಗಳೆಂದು ಪರಿಗಣಿಸಲಾಗಿದೆ.[೩೬]

ಐಮಂಗಲ ಹೋಬಳಿಯಲ್ಲಿ ದೊರೆತ ಶೈವಮೂರ್ತಿಗಳಿಗೆ ಸಂಬಂಧಿಸಿದಂತೆ, ಶಿವಲಿಂಗದ ಹೊರತಾಗಿರುವ ಸ್ಥಾನೀಕ, ಆಸೀನ ಮೂರ್ತಿಗಳು ಇಲ್ಲಿ ಪ್ರಧಾನವಾಗಿವೆ. ಶಿವನ ಪ್ರತಿರೂಪವೆಂದು ಭಾವಿಸಲಾಗಿರುವ ಲಿಂಗ ಹಾಗೂ ಆತನ ವಾಹನವಾದ ನಂದಿ(ವೃಷಭ) ಇವು ಪ್ರತಿಯೊಂದು ಶೈವ ದೇವಾಲಯದಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಹಾಗೇ ಶೈವದ್ವಾರಪಾಲ, ಭೈರವ, ವೀರಭದ್ರ, ಗಣೇಶ, ಕೋಡಿಮಲ್ಲೇಶ್ವರ, ಸಿದ್ಧರಾಮೇಶ್ವರ, ಈಶ್ವರ, ರೇವಣಸಿದ್ಧೇಶ್ವರ, ಬಸವೇಶ್ವರ, ಬಸವಣ್ಣ, ಸಿದ್ಧೇಶ್ವರ/ಕಾಲಭೈರವ ಮೂರ್ತಿಗಳು ಈ ಪರಿಸರದಲ್ಲಿ ಕಂಡುಬರುತ್ತಿದ್ದು, ಅವುಗಳಲ್ಲಿ ಪ್ರಮುಖ ಮೂರ್ತಿಗಳನ್ನು ಪ್ರತ್ಯೇಕವಾಗಿ ಈ ಕೆಳಗಿನ ರೀತಿಯಲ್ಲಿ ಅಧ್ಯಯನ ಮಾಡಿ ವಿವರಿಸಲಾಗಿದೆ.

ನಂದಿಶಿಲ್ಪಗಳು

ಐಮಂಗಲ ಪ್ರದೇಶದಲ್ಲಿರುವ ಪ್ರತಿ ಶೈವ ದೇವಾಲಯಗಳಲ್ಲಿಯೂ ನಂದಿಶಿಲ್ಪಗಳಿರುವುದನ್ನು ಕಾಣುತ್ತೇವೆ. ನಂದಿಶಿಲ್ಪಗಳು ಗರ್ಭಗೃಹದಲ್ಲಿರುವಂತಹ ಶಿವಲಿಂಗಕ್ಕೆ ಅಭಿಮುಖವಾಗಿ ಅಂತರಾಳ ಅಥವಾ ನವರಂಗಗಳಲ್ಲಿ ಪ್ರತಿಷ್ಠಾಪಿಸಲ್ಪಟ್ಟಿವೆ. ಕೆಲವು ಶಿಲ್ಪಗಳನ್ನು ದೇವಾಲಯದ ಹೊರಭಾಗದಲ್ಲಿರುವ ಪ್ರತ್ಯೇಕವಾದ ನಂದಿ ಮಂಟಪದಲ್ಲಿ ಪ್ರತಿಷ್ಠಾಪಿಸಿರುವುದನ್ನು ಕಾಣುತ್ತೇವೆ. ಸಾಮಾನ್ಯವಾಗಿ ಈ ಎಲ್ಲಾ ನಂದಿಶಿಲ್ಪಗಳನ್ನು ಪೀಠದ ಮೇಲೆ ಕುಳ್ಳಿರಿಸಿರುವಂತೆ ಖಂಡರಿಸಲಾಗಿದೆ. ಇವುಗಳು ಕೆಲವು ಮುಂದಿನ ಬಲಗಾಲನ್ನು ಹಿಂದಕ್ಕೆ ಮಡಚಿ ಎಡಗಾಲನ್ನು ಸ್ವಲ್ಪ ಮುಂದಕ್ಕೆ ಚಾಚಿರುವಂತೆ, ಹಿಂದಿನ ಬಲಗಾಲನ್ನು ಮುಂದಕ್ಕೆ ಚಾಚಿ ಎಡಗಾಲನ್ನು ಹೊಟ್ಟೆಯ ಕೆಳಗೆ ಎಳೆದುಕೊಂಡು ಮಡಚಿ ಮಲಗಿರುವಂತೆ ಚಿತ್ರಿಸಲಾಗಿದೆ. ತಲೆಯನ್ನು ಮುಂದಕ್ಕೆ ಅಥವಾ ನೆಲಕ್ಕೆ ನೇರವಾಗಿ ಚಾಚಿಕೊಂಡಿರುತ್ತವೆ. ನಂದಿಗಳಿಗೆ ಘಂಟಾಸರ, ಗಗ್ಗರ, ಕೊರಳಸರ, ಹಣೆಪಟ್ಟಿ, ಕಾಲ್ಗಡಗ

ಮುಂತಾದ ಆಭರಣಗಳಿಂದ ಅಲಂಕರಿಸಲಾಗಿದೆ. ಮರಡಿದೇವಿಗೆರೆಯ ಕೋಡಿಮಲ್ಲೇಶ್ವರ ದೇವಾಲಯದ ನವರಂಗದಲ್ಲಿ ಸುಮಾರು ೩ ಅಡಿ ಎತ್ತರದ ನಂದಿಶಿಲ್ಪವಿದೆ. ವಟ್ಟೀಕೆರೆಯ ಸಿದ್ಧೇಶ್ವರ ದೇವಾಲಯದ ಆವರಣದಲ್ಲಿ ಪೂರ್ವಕ್ಕೆ ಮುಖ ಮಾಡಿದ ಚಿಕ್ಕ ಗುಡಿಯಲ್ಲಿ ಶಿವಲಿಂಗಕ್ಕೆ ಎದುರಾಗಿ ನಂದಿಶಿಲ್ಪವಿದೆ. ಪರ್ತಿಕೋಟೆಯ ರೇವಣಸಿದ್ಧೇಶ್ವರ ದೇವಾಲಯದಲ್ಲಿ ಸುಮಾರು ಎರಡು ಅಡಿ ಎತ್ತರದ ನಂದಿಶಿಲ್ಪವಿದೆ. ಐಮಂಗಲದ ಹತ್ತಿರ ಬಂಗಾರಪ್ಪನ ಜಮೀನಿನಲ್ಲಿ ಬಸವಣ್ಣ ದೇವಾಲಯದ ಗರ್ಭಗುಡಿಯಲ್ಲಿ ಸುಮಾರು ೨ ಅಡಿ ಎತ್ತರದ ಗ್ರಾನೈಟ್ ಕಲ್ಲಿನ ನಂದಿಶಿಲ್ಪವಿದೆ.

ಗಣೇಶ

ಐಮಂಗಳ ಪರಿಸರದಲ್ಲಿರುವ ಮೇಟಿಕುರ್ಕೆ ಗ್ರಾಮದಲ್ಲಿ ಪ್ರತ್ಯೇಕವಾದ ಗಣೇಶ ದೇವಾಲಯ ವಿದೆ. ಈ ದೇವಾಲಯದಲ್ಲಿ ಗಣೇಶನನ್ನು ಪೀಠದ ಮೇಲೆ ಇರುವಂತೆ ಪ್ರತಿಷ್ಠಾಪಿಸಿದ್ದಾರೆ. ಗಣೇಶನನ್ನು ಚತುರ್ಭುಜಗಳಲ್ಲಿರುವಂತೆ ಕಂಡರಿಸಲಾಗಿದ್ದು ಕೈಗಳಲ್ಲಿ ಅಂಕುಶ, ಪಾಶ, ಮೋಚಕ ಹಾಗೂ ಲಡ್ಡುಗಳನ್ನು ಹಿಡಿದಿರುವನು. ಕಿರೀಟ, ಹಾರ, ಸರ, ಕಿಂಕಣಿ, ಭುಜಬಂದಿ ಮುಂತಾದ ಆಭರಣಗಳಿಂದ ಅಲಂಕೃತಗೊಂಡಿದೆ. ಹಾಗೆಯೇ ಅಗಲವಾದ ಕಿವಿ, ಸೊಂಡಲಿನಿಂದ ಫಲ ತಿನ್ನುತ್ತಿರುವುದು, ಉದರದಲ್ಲಿ ನಾಗಬಂಧವಿದೆ. ಐಮಂಗಳ ಕಲ್ಲುಂಟೇಶ್ವರಿ ದೇವಾಲಯದ ಸಭಾಮಂಟಪ ಕೋಷ್ಟಕದಲ್ಲಿ ಗಣೇಶ ಶಿಲ್ಪವಿದ್ದು ಇದು ಕಪ್ಪು ಗ್ರಾನೈಟ್ ಕಲ್ಲಿನಲ್ಲಿ ೩ ಅಡಿ ಎತ್ತರ ೩ ಅಡಿ ಅಗಲದಲ್ಲಿದೆ. ಚತುರ್ಭುಜಧಾರಿಯಾಗಿದ್ದು ಅಭಯ ಅಸ್ತ, ಶಂಖ, ಪದ್ಮ, ವರದ ಮುದ್ರೆಯಲ್ಲಿದೆ.

ಶಿವಲಿಂಗಗಳು

ಐಮಂಗಲ ಪರಿಸರದಲ್ಲಿ ಹೆಚ್ಚಿನದಾಗಿ ಶಿವಲಿಂಗಗಳು ಕಂಡುಬರುತ್ತವೆ. ಕಾರಣ ಈ ಪ್ರದೇಶದಲ್ಲಿ (ನೊಳಂಬವಾಡಿ ೩೨೦೦೦) ನೊಳಂಬರು ಆಳ್ವಿಕೆ ನಡೆಸಿದ್ದು ಇವರು ಶೈವ ಧರ್ಮೀಯರಾಗಿದ್ದರು. ಆದ್ದರಿಂದ ಇವರು ಶೈವ ಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ಶಿವನನ್ನು ಲಿಂಗ ರೂಪದಲ್ಲಿ ಪೂಜಿಸುವುದು ಸರ್ವೇಸಾಮಾನ್ಯ. ಶಿವಲಿಂಗಗಳಲ್ಲಿ ಮೊಟ್ಟೆಯಾಕಾರದ (ಅಂಡಾಕಾರ), ಅರ್ಧಚಂದ್ರಾಕೃತಿಯ, ವೃತ್ತಾಕಾರದ ಹಾಗೂ ಬಾಣಾಕಾರದ ಲಿಂಗಗಳು ಈ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬಂದಿವೆ ಹಾಗೂ ಮುಖ ರೂಪದ ಲಿಂಗಗಳೂ ಅಲ್ಲಲ್ಲಿ ಕಂಡುಬಂದಿವೆ. ಪೀಠದಲ್ಲಿ ವೃತ್ತಾಕಾರದ, ಚೌಕಾಕಾರದ, ಆಯತಾಕಾರದ ಪೀಠಗಳೂ ಈ ಪ್ರದೇಶದ ವಿವಿಧ ಭಾಗಗಳಲ್ಲಿ ಕಂಡುಬರುತ್ತವೆ. ಪ್ರಸ್ತುತ ಐಮಂಗಲ ಹೋಬಳಿಗೆ ಸಂಬಂಧಿಸಿದಂತೆ ಶಿವಲಿಂಗಗಳಿಗೆ ಮತ್ತು ಅವುಗಳ ಪೀಠಭಾಗಗಳಿಗೆ ಬಳಪದ ಇಲ್ಲವೆ ಕಪ್ಪುಶಿಲೆಯನ್ನೇ ಹೆಚ್ಚಾಗಿ ಉಪಯೋಗಿಸಿದ್ದಾರೆ. ವದ್ದೀಕೆರೆ ಸಿದ್ಧೇಶ್ವರ ದೇವಾಲಯದ ಆವರಣದಲ್ಲಿ ಪೂರ್ವಕ್ಕೆ ಮುಖ ಮಾಡಿರುವ ಚಿಕ್ಕ ಗುಡಿಯಲ್ಲಿ ಶಿವಲಿಂಗವಿದ್ದು, ಇದು ಚೌಕಾಕಾರದ ಪೀಠ, ಪಟ್ಟಿಕೆಗಳು, ಬ್ರಹ್ಮಸೂತ್ರ, ಜಲಾಹರಿ ಭಾಗಗಳನ್ನು ಒಳಗೊಂಡಿದೆ. ಹಾಗೆಯೇ ಮರಡೀ ದೇವಿಗೆರೆ ಕೋಡಿಮಲ್ಲೇಶ್ವರ ದೇವಾಲಯದ ಗರ್ಭಗೃಹದಲ್ಲಿ ಸುಮಾರು ಎರಡು ಅಡಿ ಎತ್ತರದ ಶಿವಲಿಂಗವಿದೆ. ಇದು ಚಚೌಕಾಕಾರದ ಪೀಠ, ಪಟ್ಟಿಕೆಗಳು, ಬ್ರಹ್ಮಸೂತ್ರ, ಜಲಾಹರಿ ಭಾಗಗಳನ್ನು ಒಳಗೊಂಡಿದ್ದು,

ಕಪ್ಪು ಗ್ರಾನೈಟ್ ಕಲ್ಲಿನಲ್ಲಿ ಖಂಡರಿಸಲಾಗಿದೆ. ಮದಕರಿ ನಾಯಕನ ಕೋಟೆ ಈಶ್ವರ ದೇವಾಲಯದ ಗರ್ಭಗೃಹದಲ್ಲಿ ಸುಮಾರು ಎರಡು ಅಡಿ ಎತ್ತರದ ಶಿವಲಿಂಗವಿದೆ. ಐಮಂಗಲ ಪ್ರದೇಶದ ಹರ್ತಿಕೋಟೆ ಗ್ರಾಮದಲ್ಲಿಯೂ ಸಹ ವೀರಭದ್ರ ಮತ್ತು ರೇವಣಸಿದ್ಧೇಶ್ವರ ದೇವಾಲಯಗಳಿವೆ. ಇದರಲ್ಲಿಯೂ ಸಹ ಆಕರ್ಷಣೀಯವಾದ ಶಿವಲಿಂಗವನ್ನು ಕಾಣಬಹುದು. ಇದು ಕಪ್ಪು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಲ್ಪಟ್ಟಿದ್ದು ಚಚೌಕಾರದ ಪೀಠ, ಪಟ್ಟಿಕೆಗಳು, ಬ್ರಹ್ಮಸೂತ್ರ, ಜಲಾಹರಿ ಭಾಗಗಳನ್ನು ಒಳಗೊಂಡಿದೆ. ಕೆರೆಚಿಕ್ಕಯ್ಯನ ರೊಪ್ಪ ಸಿದ್ಧರಾಮೇಶ್ವರ ದೇವಾಲಯದ ಗರ್ಭಗೃಹದಲ್ಲಿ ಶಿವಲಿಂಗವಿದ್ದು ದೇವಾಲಯ ಪೂರ್ವಾಭಿಮುಖವಾಗಿದ್ದು ಇದರಲ್ಲಿಯೂ ಸಹ ಆಕರ್ಷಣೀಯವಾದ ಶಿವಲಿಂಗವನ್ನು ಕಾಣಬಹುದು.

ಭೈರವ

ಐಮಂಗಲ ಪರಿಸರದಲ್ಲಿ ಹಲವಾರು ಭೈರವನ ಶಿಲ್ಪಗಳು ಕಂಡುಬರುತ್ತವೆ. ಅವುಗಳಲ್ಲಿ ವದ್ದೀಕೆರೆ, ಹುಲಿತೊಟ್ಲುಗಳಲ್ಲಿರುವ ಭೈರವ ಶಿಲ್ಪಗಳು ಹೆಚ್ಚು ಆಕರ್ಷಣೀಯವಾಗಿವೆ. ವದ್ದೀಕೆರೆ ಸಿದ್ಧೇಶ್ವರ ದೇವಾಲಯದ ಗರ್ಭಗೃಹದಲ್ಲಿರುವ ಭೈರವ ಶಿಲ್ಪ ಕಪ್ಪು ಗ್ರಾನೈಟ್ ಕಲ್ಲಿನಲ್ಲಿ ಚಿತ್ರಿಸಲಾಗಿದ್ದು ಸುಮಾರು ೪ ಅಡಿ ಎತ್ತರ ೨ ಅಡಿ ಅಗಲ ವಿಸ್ತೀರ್ಣದಲ್ಲಿರುವ ಭೈರವನು ಪೀಠದ ಮೇಲಿರುವನು. ಚತುರ್ಭುಜಧಾರಿಯಾದ ಭೈರವನು ನಾಲ್ಕು ಕೈಗಳನ್ನು ಹೊಂದಿದ್ದು ಬಲಭಾಗದ ಎರಡು ಕೈಗಳಲ್ಲಿ ಕತ್ತಿ, ತ್ರಿಶೂಲ, ಎಡಭಾಗದ ಎರಡು ಕೈಗಳಲ್ಲಿ ರುಂಡ, ಡಮರುಗವನ್ನು ಹಿಡಿದಿದ್ದಾನೆ. ಕಿರೀಟಧಾರಿಯಾದ ಈತನು ಕಂಠಹಾರ, ಮಣಿಸರ, ಕೊರಳಲ್ಲಿ ರುಂಡಮಾಲೆ, ಯಜ್ಞೋಪವಿತ, ತೋಳಬಂದಿ. ಕೈಕಡಗ, ಕಾಲಕಡಗ, ಕಂಠೀಬಂದ, ತಲೆ ಮೇಲೆ ಎಡೆ ಎತ್ತಿದ ಸರ್ಪವಿದೆ. ಬಲಭಾಗ ಗಂಗಾಮಾಳಮ್ಮ ಎಡಭಾಗ ಪಾದದ ಬಳಿ ನಾಯಿ ಇದೆ. ನಾಯಿಯು ಭೈರವನು ಕೈಯಲ್ಲಿ ಹಿಡಿದಿರುವ ರುಂಡಕ್ಕೆ ಬಾಯಿ ಹಾಕಿರುವ ರೀತಿಯ ಉಬ್ಬು ಶಿಲ್ಪವಿದೆ. ಶಿಲ್ಪದ ಸುತ್ತಲೂ ಪ್ರಭಾವಳಿ ಇದ್ದು ಮಧ್ಯದಲ್ಲಿ ಕೀರ್ತಿಮುಖವಿದೆ.

ಇದೇ ತೆರೆನಾದ ಮತ್ತೊಂದು ಭೈರವನ ಶಿಲ್ಪ ಹುಲಿತೊಟ್ಲು ಭೈರವೇಶ್ವರ ದೇವಾಲಯದಲ್ಲಿದೆ. ಆದರೆ ಇದು ಆಕಾರ ಮತ್ತು ಗಾತ್ರದಲ್ಲಿ ಸ್ವಲ್ಪ ಚಿಕ್ಕದಿದೆ. ಇನ್ನುಳಿದಂತೆ ಚತುರ್ಭುಜಧಾರಿಯಾದ ಈತನು ಖಡ್ಗ, ತ್ರಿಶೂಲ, ಡಮರುಗ, ರುಂಡ ಹಿಡಿದಿರುವನು ಈತನು ಕಂಠಹಾರ, ಮಣಿಸರ, ಯಜ್ಞೋಪವಿತ, ರುಂಡಮಾಲೆ, ಕಾಲಕಡಗ, ಕೈಕಡಗ ಇತ್ಯಾದಿ ಆಭರಣಗಳಿಂದ ಅಲಂಕೃತ ಗೊಂಡಿರುವನು. ಶಿಲ್ಪದ ಬಲ ಭಾಗದಲ್ಲಿ ಭೃಂಗಿಯನ್ನು, ಎಡ ಭಾಗದಲ್ಲಿ ನಾಯಿಯನ್ನು ತೋರಿಸಲಾಗಿದೆ. ನಾಯಿಯು ಭೈರವನು ಕೈಯಲ್ಲಿ ಹಿಡಿದಿರುವ ರುಂಡಕ್ಕೆ ಬಾಯಿ ಹಾಕಿರುವಂತೆ ಚಿತ್ರಿಸಲಾಗಿದೆ. ಈ ಶಿಲ್ಪವನ್ನು ಕಪ್ಪು ಗ್ರಾನೈಟ್ ಕಲ್ಲಿನಲ್ಲಿ ಖಂಡರಿಸಲಾಗಿದೆ.

ವೀರಭದ್ರ

ಐಮಂಗಲ ಪರಿಸರದಲ್ಲಿ ಹಲವಾರು ವೀರಭದ್ರ ಶಿಲ್ಪಗಳು ಕಂಡುಬರುತ್ತವೆ. ಅವುಗಳಲ್ಲಿ ಹರ್ತಿಕೋಟೆಯ ವೀರಭದ್ರೇಶ್ವರ ದೇವಾಲಯದಲ್ಲಿರುವ ವೀರಭದ್ರನ ಶಿಲ್ಪವು ಆಕರ್ಷಣೀಯವಾಗಿದೆ. ಶಿಲ್ಪವು ಕಪ್ಪು ಗ್ರಾನೈಟ್ ಕಲ್ಲಿನಲ್ಲಿ ಖಂಡರಿಸಲಾಗಿದೆ. ನಾಲ್ಕು ಅಡಿ ಎತ್ತರ ಎರಡು ಅಡಿ

ಅಗಲ ವಿಸ್ತೀರ್ಣದಲ್ಲಿರುವ ವೀರಭದ್ರ ತ್ರಿಭಂಗಿಯಲ್ಲಿರುವನು ಚತುರ್ಭುಜಧಾರಿಯಾದ ಈತನು ತನ್ನ ಕೈಗಳಲ್ಲಿ ಖಡ್ಗ, ಬಿಲ್ಲು ಬಾಣ ಹಾಗೂ ಗುರಾಣಿಗಳನ್ನು ಹಿಡಿದಿರುವನು ಕಿರೀಟಧಾರಿಯಾದ ಈತನು ಯಜ್ಞೋಪವೀತ, ಕಾಲಕಡಗ, ಕಿಂಕಣಿ, ಕೈಕಡಗ, ಕೇಯುರ, ಕಠೀಬಂಧ, ಕೊರಳಸರ ಇತ್ಯಾದಿ ಆಭರಣಗಳಿಂದ ಅಲಂಕೃತಗೊಂಡಿರುವನು. ಶಿಲ್ಪದ ಸುತ್ತಲೂ ಪ್ರಭಾವಳಿಯಿದ್ದು ಮಧ್ಯದಲ್ಲಿ ಕೀರ್ತಿಮುಖವಿದೆ. ಹಾಗೆಯೇ ತವಂದಿ ಗ್ರಾಮದ ಕೆರೆ ಏರಿ ಪಕ್ಕದಲ್ಲಿ ವೀರಭದ್ರೇಶ್ವರ ದೇವಾಲಯದಲ್ಲಿರುವ ವೀರಭದ್ರನ ಶಿಲ್ಪವು ಆಕಾರ ಮತ್ತು ಗಾತ್ರದಲ್ಲಿ ಸ್ವಲ್ಪ ಚಿಕ್ಕದಿದೆ. ಇನ್ನುಳಿದಂತೆ ಚತುರ್ಭುಜಧಾರಿಯಾದ ಈತನು ಖಡ್ಗ, ಬಿಲ್ಲು, ಬಾಣ ಹಾಗೂ ಗುರಾಣಿಗಳನ್ನು ಹಿಡಿದಿರುವನು. ಈತನು ಯಜ್ಞೋಪಿತ, ಕಾಲಕಡಗ, ಕೈಕಡಗ, ಕೇಯುರ, ಕಿಂಕಣಿ, ಕಠೀಬಂಧ, ಕೊರಳಸರ ಇತ್ಯಾದಿ ಆಭರಣಗಳಿಂದ ಅಲಂಕೃತಗೊಂಡಿರುವನು. ಈ ಶಿಲ್ಪವನ್ನು ಕಪ್ಪು ಗ್ರಾನೈಟ್ ಕಲ್ಲಿನಲ್ಲಿ ಚಿತ್ರಿಸಲಾಗಿದೆ. ಶಿಲ್ಪಗಳಿಗೆ ಸಂಬಂಧಿಸಿದಂತೆ ಯಾವುದೇ ಕಾಲಮಾನವಿಲ್ಲದಿದ್ದರೂ ಶೈಲಿ ದೃಷ್ಟಿಯಿಂದ ಸುಮಾರು ೧೨-೧೩ನೇ ಶತಮಾನ ಎಂದು ಹೇಳಬಹುದು.

೨. ವೈಷ್ಣವ ಮೂರ್ತಿಗಳು

ಶೈವಧರ್ಮದಂತೆ ವೈಷ್ಣವ ಧರ್ಮವು ಕೂಡಾ ಪ್ರಾಚೀನ ಕಾಲದಿಂದಲೂ ಜನರಿಂದ ಮನ್ನಣೆ ಪಡೆದ ಧಾರ್ಮಿಕ ಪಂಥ. ಇಲ್ಲಿ ವಿಷ್ಣುವೇ ಪ್ರಧಾನವಾಗಿದ್ದು, ಇಪ್ಪತ್ನಾಲ್ಕು ರೂಪ (ಚತುರ್ವಂಶತಿ) ಮತ್ತು ಧರ್ಮೋತ್ತರ ಪುರಾಣ, ಸಮರಾಂಗಣ ಸೂತ್ರಧಾರ ಮೊದಲಾದ ಗ್ರಂಥಗಳು ಈ ಮೂರ್ತಿ ಆರಾಧನೆ ಮತ್ತು ಹಿನ್ನೆಲೆಯನ್ನು ಉಲ್ಲೇಖಿಸುತ್ತವೆ.[೩೭] ಈ ಪಂಥದಲ್ಲಿ ಸ್ಥಾನೀಕ, ಆಸೀನ, ಶಯನ, ವಾಹನಾರೂಢ, ದೇವಿಸಂಹಿತ ಮೂರ್ತಿ, ದಶಾವತಾರ, ಚತುರ್ವಂಶತಿ ಮೂರ್ತಿಗಳೆಂಬ ವಿಧಗಳಿವೆ. ಪ್ರಸ್ತುತ ಐಮಂಗಲ ಹೋಬಳಿಗೆ ಸಂಬಂಧಿಸಿದಂತೆ ಸ್ಥಾನೀಕ ಮೂರ್ತಿಗಳೇ ಹೆಚ್ಚಾಗಿದ್ದು ಅವುಗಳಲ್ಲಿ ಆಂಜನೇಯ, ಚೆನ್ನಕೇಶವ, ರಂಗನಾಥ ಮೂರ್ತಿಗಳು ಪ್ರಮುಖವಾಗಿದ್ದು ಅವುಗಳನ್ನು ಈ ಕೆಳಗಿನ ರೀತಿ ಅಧ್ಯಯನ ಮಾಡಲಾಗಿದೆ.

ಆಂಜನೇಯ

ಐಮಂಗಲ ಪರಿಸರದಲ್ಲಿ ಪ್ರತಿಯೊಂದು ಊರುಗಳಲ್ಲಿ ಆಂಜನೇಯನ ಮೂರ್ತಿಗಳನ್ನು ಅತೀ ಹೆಚ್ಚಾಗಿ ಕಾಣಬಹುದು. ಈ ಮೂರ್ತಿಗಳೆಲ್ಲವೂ ಶಿಲೆಯಿಂದ ಕೆತ್ತಿದಂತಹ ಉಬ್ಬು ಶಿಲ್ಪಗಳಾಗಿವೆ. ಇಲ್ಲಿ ಪ್ರಮುಖವಾಗಿ ಪಾಳೇಗಾರರ ಅವಧಿಯಲ್ಲಿ ನಿರ್ಮಿಸಿದಂತಹ ಮೂರ್ತಿಗಳೇ ಕಂಡುಬರುತ್ತವೆ.

ನೊಣವಿ ಪಟ್ಟಣದ ಆಂಜನೇಯ ಸ್ವಾಮಿ ದೇವಾಲಯವು ನೂತನವಾಗಿದ್ದರೂ ಕೂಡ ಗರ್ಭಗುಡಿಯಲ್ಲಿ ಪೂರ್ವಕ್ಕೆ ಮುಖ ಮಾಡಿರುವ ಆಂಜನೇಯ ಆಳೆತ್ತರದ ವಿಗ್ರಹವೂ ತುಂಬಾ ಸುಂದರವಾಗಿದೆ. ಹಾಗೆಯೇ ಹರ್ತಿಕೋಟೆಯ ಆಂಜನೇಯಸ್ವಾಮಿ ದೇವಾಲಯದ ಗರ್ಭಗುಡಿಯಲ್ಲಿರುವ ಆಂಜನೇಯನ ಮೂರ್ತಿಯೂ ಸುಮಾರು ೧೫ ಅಡಿ ಎತ್ತರವಾಗಿದ್ದು ನೋಡಲು ತುಂಬಾ ಮನಮೋಹಕವಾಗಿದೆ. ಹಾಗೆಯೇ ಹೆಮದಲದ ಆಂಜನೇಯನ ಮೂರ್ತಿ, ಭರಮಪುರದ ಆಂಜನೇಯ ಮೂರ್ತಿ, ಮರಡಿಹಳ್ಳಿಯ ಆಂಜನೇಯನ ಮೂರ್ತಿ ಮುಂತಾದವು ಕಪ್ಪು

ಗ್ರಾನೈಟ್ ಶಿಲೆಯಲ್ಲಿ ಖಂಡರಿಸಲ್ಪಟ್ಟಿವೆ. ಸಾಮಾನ್ಯವಾಗಿ ಈ ಮೂರ್ತಿಗಳು ದಕ್ಷಿಣಾಭಿಮುಖವಾಗಿದ್ದು ಪೂರ್ವಕ್ಕೆ ಮುಖ ತಿರುಗಿಸಿ ನಿಂತಿದೆ. ಇವುಗಳಲ್ಲಿ ಸುಮಾರು ೫ ಅಡಿಯಿಂದ ೧೫ ಅಡಿಯವರೆಗೆ ಎತ್ತರವಾಗಿದೆ. ಇವುಗಳ ಮೇಲ್ಭಾಗದಲ್ಲಿ ವೈಷ್ಣವ ಧರ್ಮವನ್ನು ಸೂಚಿಸುವ ಚಿಹ್ನೆಗಳನ್ನು ಕಾಣಬಹುದು. ಕೆಳಭಾಗದಲ್ಲಿ ಆಯುಧ ಹಿಡಿದು ಮಲಗಿರುವ ರಾಕ್ಷಸನನ್ನು ಆಂಜನೇಯನು ತುಳಿಯುತ್ತಿರುವಂತೆ ಕೆತ್ತಲಾಗಿದೆ.

ಈ ಮೂರ್ತಿಗಳಲ್ಲಿ ಕಂಡುಬರುವ ಪ್ರಮುಖ ಲಕ್ಷಣಗಳೆಂದರೆ ಕಿವಿಯಲ್ಲಿ ಕುಂಡಲಗಳನ್ನು ಧರಿಸಿದ್ದು, ಕಂಠಿಹಾರ, ಸೊಂಟಪಟ್ಟಿ ಹಾಗೂ ಕಂಠದಲ್ಲಿ ಹಲವು ಹಾರಗಳನ್ನು ಕಾಣಬಹುದು. ಭುಜದ ಮೇಲೆ ಮಣಿಸರಗಳಿಂದ ವಸ್ತ್ರವಿರುತ್ತದೆ. ಬಲಗೈಯನ್ನು ಮೇಲೆ ಎತ್ತಿದ್ದು, ಎಡಗೈಯಲ್ಲಿ ಗದೆಯನ್ನು ಹಿಡಿದಿರುವಂತೆ ಖಂಡರಿಸಲಾಗಿದೆ. ಕೈಯಲ್ಲಿ ಕೈಕಡಗ, ಭುಜಕೀರ್ತಿ, ಕೇಯೂರಗಳನ್ನು ಹಾಗೂ ಕಾಲಲ್ಲಿ ಕಾಲ್ಗಡಗ, ಪಾದ ಸರಗಳನ್ನು ಕೆತ್ತಲಾಗಿರುವುದು ಕಂಡುಬಂದಿದೆ.

ಚೆನ್ನಕೇಶವ

ಐಮಂಗಲ ಹೋಬಳಿ ವದ್ದೀಕೆರೆ ಗ್ರಾಮದ ಸಿದ್ಧೇಶ್ವರಸ್ವಾಮಿ ದೇವಾಲಯದ ಪೂರ್ವಾಭಿಮುಖವಾಗಿರುವ ಗರ್ಭಗೃಹದಲ್ಲಿ ೨ ಅಡಿ ಎತ್ತರದ ಗರುಡ ಪೀಠದ ಮೇಲೆ ೩½ ಅಡಿ ಎತ್ತರ ೨ ಅಡಿ ಅಗಲ ವಿಸ್ತೀರ್ಣದಲ್ಲಿರುವ ಕಪ್ಪುಶಿಲೆಯ ಚೆನ್ನಕೇಶವ ಮೂರ್ತಿ ಶಿಲ್ಪವಿದೆ. ವಿಷ್ಣುವಿನ ಇಪ್ಪತ್ನಾಲ್ಕು ಅವತಾರಗಳಲ್ಲಿ ಇದು ವಾಸುದೇವನದು. ವಾಸುದೇವನು ತನ್ನ ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಪದ್ಮ, ಗದೆಗಳನ್ನು ಹಿಡಿದಿರುವನು. ಕಿರೀಟ ಮುಕುಟಧರಿಸಿದ್ದು, ಇದರ ಮೇಲೆ ಕೀರ್ತಿಮುಖದ ಪ್ರಭಾವಳಿ ಕೆತ್ತನೆ ಇದೆ. ಕೊರಳಲ್ಲಿ ವೈಜಯಂತಿ ಮಾಲೆ, ಕಂಠಿಹಾರ ಧರಿಸಿದ್ದಾನೆ. ಉಳಿದಂತೆ ಉಪವೀತ, ಯಜ್ಞೋಪವೀತ, ಭುಜವಲ್ಯ, ಕೇಯೂರ, ಕಂಕಣ, ಸೊಂಟಪಟ್ಟಿ, ಅಂದುಗೆ, ಕಾಲುಕಡಗ ಧರಿಸಿರುವಂತೆ ಬಿಂಬಿತನಾಗಿದ್ದಾನೆ. ವಾಸುದೇವನ ಕೆಳಬದಿಯಲ್ಲಿ ಶ್ರೀದೇವಿ, ಭೂದೇವಿಯರ ಚಿಕ್ಕ ಶಿಲ್ಪಗಳನ್ನು ಕಡೆಯಲಾಗಿದೆ.

ರಂಗನಾಥ

ಐಮಂಗಲ ಪರಿಸರದಲ್ಲಿ ಹಲವಾರು ರಂಗನಾಥನ ಶಿಲ್ಪಗಳು ಕಂಡುಬರುತ್ತವೆ. ಅವುಗಳಲ್ಲಿ ಕಳವಿಭಾಗಿ, ಮಲ್ಲಪ್ಪನಹಳ್ಳಿ ಕಂದಿಕೆರೆಯಲ್ಲಿರುವ ರಂಗನಾಥನ ಶಿಲ್ಪಗಳು ಹೆಚ್ಚು ಆಕರ್ಷಣೀಯವಾಗಿವೆ. ಕಳವಿಭಾಗಿ ಲಕ್ಷ್ಮಿ ರಂಗನಾಥ ದೇವಾಲಯದ ಗರ್ಭಗೃಹದಲ್ಲಿರುವ ರಂಗನಾಥನ ಶಿಲ್ಪ ಕಪ್ಪು ಗ್ರಾನೈಟ್ ಶಿಲೆಯಲ್ಲಿ ಚಿತ್ರಿಸಲಾಗಿದ್ದು ಸುಮಾರು ೪ ಅಡಿ ಎತ್ತರ, ೨ ಅಡಿ ಅಗಲ ವಿಸ್ತೀರ್ಣದಲ್ಲಿರುವ ರಂಗನಾಥನು ಪೀಠದ ಮೇಲಿರುವನು. ಚತುರ್ಭಜಧಾರಿಯಾದ ರಂಗನಾಥನು ನಾಲ್ಕು ಕೈಗಳನ್ನು ಹೊಂದಿದ್ದು ಮುಂದಿನ ಎರಡು ಕೈಗಳಲ್ಲಿ ಅಭಯ ಹಾಗೂ ವರದ ಮುದ್ರೆಗಳು. ಹಿಂದಿನ ಎರಡು ಕೈಗಳಲ್ಲಿ ಚಕ್ರ ಮತ್ತು ಶಂಕ ಹಿಡಿದಿದ್ದಾನೆ. ಕಿರೀಟಧಾರಿಯಾದ ಈತನು ಕಂಠಹಾರ, ಮಣಿಸರ, ತೋಳಬಂದಿ, ಕೈಕಡಗ, ಕಾಲುಕಡಗ ಧರಿಸಿದ್ದು, ಕೆಳಭಾಗದಲ್ಲಿ ಎರಡೂ ಕಡೆ ಶ್ರೀದೇವಿ, ಭೂದೇವಿಯರ ಶಿಲ್ಪಗಳಿವೆ. ಶಿಲ್ಪದ ಸುತ್ತಲೂ ಪ್ರಭಾವಳಿ ಇದ್ದು ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರದ ಚಿತ್ರಗಳಿವೆ. ಅದೇ ರೀತಿ ಕಂದಿಕೆರೆ ರಂಗನಾಥ

ದೇವಾಲಯದ ಗರ್ಭಗೃಹದಲ್ಲಿ ವೃಂದಾವನವಿದೆ. ಇದು ಸುಮಾರು ೫ ಅಡಿ ಎತ್ತರ. ೫ ಅಡಿ ಅಗಲ ವಿಸ್ತೀರ್ಣ ಹೊಂದಿದೆ. ವೃಂದಾವನದ ಮಧ್ಯಭಾಗದಲ್ಲಿ ಉತ್ತವಿದೆ. ಇದನ್ನು ಸ್ಥಳೀಯರು ವೃಂದಾವನ ಎಂದು ಕರೆಯುತ್ತಾರೆ.

೩. ಶಾಕ್ತ ಮೂರ್ತಿಗಳು

ಶಾಕ್ತ ಸಂಪ್ರದಾಯ ವೈದಿಕಯುಗಕ್ಕಿಂತಲೂ ಪ್ರಾಚೀನವೆನ್ನುವುದು ನಿರ್ವಿವಾದ,[೩೮] ಮಾತೃ ಮರ್ಯಾದೆ ಮತ್ತು ಆಚರಣೆಯೇ ಈ ಸಂಪ್ರದಾಯದ ಮೂಲಾಧಾರ, 'ಜಗತ್‌ಶಕ್ತಿಮಯಂ ವಿದ್ಯಾತ್', 'ಶಕ್ತಿ ಪ್ರೇರಯಿತಾ ಶಿವಃ'(ಕಾರಣಾಗಮ) ಎನ್ನುವುದು ಈ ಸಂಪ್ರದಾಯದ ಮುಖ್ಯ ನಿಲುವು. ಇದರಲ್ಲಿ ದಕ್ಷಿಣಾಚಾರವೆಂದೂ, ವಾಮಚಾರವೆಂದೂ ಎರಡು ಬಗೆಗಳಿವೆ.[೩೯] ಮೊದಲನೆಯದು ಸಾತ್ವಿಕ ವೇದಗಳನ್ನವಲಂಬಿಸಿ ನಿಂತ ಪಂಥವಾಗಿದ್ದು, ಪುರಾಣಗಳ ಪ್ರಭಾವ ಹೆಚ್ಚು. ಇಲ್ಲಿ ದೇವಿ ಪ್ರಧಾನವಾಗಿದ್ದು ಭಕ್ತರಿಂದ ಆರಾಧನೆಗೊಳಪಡುವ ದೇವತೆಯಾಗಿದ್ದಾಳೆ ಹಾಗೂ ವಿವಿಧ ಹೆಸರುಗಳಿಂದ ಕರೆಯಲ್ಪಡುತ್ತಾಳೆಂದು 'ಬಹ್ವೃಚೋಪನಿಷತ್', 'ಕೇನೋಪನಿಷತ್', 'ವಾಜಸನೇಯಿ ಸಂಹಿತೆ' ಮತ್ತು 'ತೈತ್ತರೀಯ ಬ್ರಾಹ್ಮಣ', 'ಮಾರ್ಕಂಡೇಯ' ಮೊದಲಾದ ಪುರಾಣ ಗ್ರಂಥಗಳಲ್ಲಿ ಉಲ್ಲೇಖವಿದೆ.[೪೦] ಶಾಕ್ತರ ನಂಬಿಕೆ ಪ್ರಕಾರ ಎಲ್ಲಾ ಸ್ತ್ರೀಯರು ದೇವತಾ ಸ್ವರೂಪರು. ಇದು ನೂರಾರು ಮಾತೃದೇವತೆಯರ ಕಲ್ಪನೆಗೆ ಎಡೆಮಾಡಿಕೊಟ್ಟಿತು. ಮಾತೃ ಪರಂಪರೆಯಲ್ಲಿ ಪಾರ್ವತಿ ಶಿವನ ಹಿನ್ನೆಲೆಯಲ್ಲಿ ಪೂಜೆಗೊಳಪಟ್ಟರೆ, ಲಕ್ಷ್ಮಿ ವಿಷ್ಣುವಿನ ಜೊತೆ, ಸರಸ್ವತಿ ಬ್ರಹ್ಮನೊಂದಿಗೆ ಗುರುತಿಸಲ್ಪಟ್ಟು ಆರಾಧನೆಗೊಳ್ಳುತ್ತಾರೆ.[೪೧]

ಪ್ರಸ್ತುತ ಅಧ್ಯಯನ ಪ್ರದೇಶವಾದ ಐಮಂಗಲ ಪರಿಸರದಲ್ಲಿ ಶಾಕ್ತಶಿಲ್ಪಗಳು ಸಹ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದಿವೆ. ಅವುಗಳಲ್ಲಿ ಕಲ್ಕುಂಟೇಶ್ವರಿ, ಲಕ್ಕಮ್ಮ, ಮಾರಮ್ಮ, ಗೊಲ್ಲಾಳಮ್ಮ, ಹೆಮರೆಡ್ಡಿ ಮಲ್ಲಮ್ಮ ಇತ್ಯಾದಿ ಶಿಲ್ಪಗಳು ಕಂಡುಬಂದಿವೆ. ಐಮಂಗಲ ಗ್ರಾಮದಲ್ಲಿ ಕಲ್ಕುಂಟೇಶ್ವರಿ ದೇವಾಲಯದ ಗರ್ಭಗೃಹದಲ್ಲಿ ಕಪ್ಪುಕಲ್ಲಿನಲ್ಲಿ ನಿರ್ಮಿಸಿರುವ ಶಿಲ್ಪವು ತುಂಬಾ ಆಕರ್ಷಣೀಯವಾಗಿದೆ. ಚತುರ್ಭುಜಧಾರಿಯಾದ ದೇವತೆಯು ಆಸೀನರಾಗಿದ್ದು, ತನ್ನ ಕೈಗಳಲ್ಲಿ ಖಡ್ಗ, ಫಲ, ತ್ರಿಶೂಲ ಡಮರುಗ ಹಿಡಿದಿರುವಳು. ಭುಜಬಂದಿ, ಕಾಲುಕಡಗ, ಕೈಕಡಗ ಮುಂತಾದ ಆಭರಣಗಳಿಂದ ಅಲಂಕೃತಗೊಂಡಿರುವಳು. ಸುತ್ತಲೂ ಪ್ರಭಾವಳಿ ಇದೆ.

ಅದೇ ರೀತಿ ಬಾಲೇನಹಳ್ಳಿ ದೇವಿಗೊಲ್ಲೆಲಮ್ಮ ದೇವಾಲಯದ ಗರ್ಭಗೃಹದಲ್ಲಿ ಉತ್ಸವಮೂರ್ತಿಯನ್ನೆ ಕೂರಿಸಿದ್ದು ವಿಶೇಷವಾಗಿದೆ. ದೇವತೆಯು ೬ ಕೈಗಳನ್ನು ಹೊಂದಿದ್ದು ಕ್ರಮವಾಗಿ ಅಭಯಅಸ್ತ, ಖಡ್ಗ, ತ್ರಿಶೂಲ, ಬಿಲ್ಲು ಬಲಗೈನಲ್ಲಿ ಹಿಡಿದಿದ್ದು, ಗದೆ, ಬಿಲ್ಲು, ಬಾಣ ಕಮಲವನ್ನು ಎಡಗೈನಲ್ಲಿ ಹಿಡಿದಿರುವಳು. ಇವೆಲ್ಲವೂ ಬೆಳ್ಳಿಯಿಂದ ಅಲಂಕರಿಸಿದ್ದು ಉತ್ಸವಮೂರ್ತಿ ಆಗಿದೆ.

ಅದೇ ರೀತಿ ಪಾಲವ್ವನಹಳ್ಳಿ ಲಕ್ಕಮ್ಮ ದೇವಾಲಯದ ಗರ್ಭಗೃಹದಲ್ಲಿ ಸುಮಾರು ೩ ಅಡಿ ಎತ್ತರದ ಲಕ್ಷ್ಮೀಯ ಶಿಲ್ಪವಿದೆ. ಚತುರ್ಭುಜಧಾರಿಯಾದ ಲಕ್ಷ್ಮೀಯು ಶಂಖ, ಚಕ್ರ, ಕತ್ತಿ

ಮತ್ತು ಪಾನಪಟ್ಟಲನ್ನು ಹಿಡಿದು ಸುಖಾಸೀನ ಭಂಗಿಯಲ್ಲಿ ಕುಳಿತಿದ್ದಾಳೆ. ಅದೇ ರೀತಿಯಾಗಿ ಮೇಟಿಕುರ್ಕೆ ಹೇಮರೆಡ್ಡಿ ಮಲ್ಲಮ್ಮನ ದೇವಾಲಯದ ಗರ್ಭಗೃಹದಲ್ಲಿ ಸುಮಾರು ೨ ಅಡಿ ಉದ್ದ ೧ ಅಡಿ ಅಗಲದ ಕಪ್ಪುಶಿಲೆಯಲ್ಲಿ ನಿರ್ಮಿಸಿರುವ ಹೇಮರೆಡ್ಡಿ ಮಲ್ಲಮ್ಮನ ಶಿಲ್ಪವು ತುಂಬಾ ಆಕರ್ಷಣೀಯವಾಗಿದೆ. ದೇವತೆಯು ಎರಡು ಕೈಗಳನ್ನು ಹೊಂದಿದ್ದು ಬಲಗೈನಲ್ಲಿ ಅಭಯ ಅಸ್ತ್ರ. ಎಡಗೈನಲ್ಲಿ ಫಲ ಹಿಡಿದಿದ್ದಾಳೆ. ಭುಜಬಂದಿ. ಕೈಕಡಗ. ಕಾಲುಕಡಗ ಮುಂತಾದ ಆಭರಣಗಳಿಂದ ಅಲಂಕೃತಗೊಂಡಿರುವಳು.

ಬುರುಜನರೂಪ್ಪ ಶುಕ್ಲಾಂಭದೇವಿ ದೇವಾಲಯದ ಗರ್ಭಗೃಹದಲ್ಲಿ ಸುಮಾರು ೩ ಅಡಿ ಉದ್ದ ೧೧/೨ ಅಡಿ ಅಗಲದ ಕಪ್ಪುಶಿಲೆಯಲ್ಲಿ ನಿರ್ಮಾಣಗೊಂಡಿರುವ ಶುಕ್ಲಾಂಭದೇವಿಯ ಶಿಲ್ಪವು ಮನಮೋಹಕವಾಗಿದೆ. ಚತುರ್ಭುಜಧಾರಿಯಾದ ದೇವತೆಯು ತನ್ನ ಕೈಗಳಲ್ಲಿ ಖಡ್ಗ ಅಕ್ಷಯ ಪಾತ್ರೆ, ತ್ರಿಶೂಲ, ಡಮರುಗ ಹಿಡಿದಿದ್ದಾಳೆ. ಕೊರಳಲ್ಲಿ ಹಾರ, ಕೈಕಡಗ, ಕಾಲಕಡಗ ಇತ್ಯಾದಿ ಆಭರಣಗಳಿಂದ ಅಲಂಕೃತಗೊಂಡಿದ್ದು, ಸುತ್ತಲೂ ಪ್ರಭಾವಳಿ ಇದ್ದು ಮಧ್ಯದಲ್ಲಿ ಕೀರ್ತಿಮುಖವಿದೆ. ಈ ಶಿಲ್ಪವನ್ನು ಸ್ಥಳೀಯ ಶೃಂಗೇರಿಯಲ್ಲಿರುವ ೨ನೇ ಶಾರಾದಾಂಬೆ ಎಂದು ಹೇಳುತ್ತಾರೆ.

೪.೩. ಶಾಸನ ಶಿಲ್ಪ

ಭಾರತೀಯ ಶಿಲ್ಪವು ಧಾರ್ಮಿಕ ಪ್ರೇರಣೆ ಮತ್ತು ಪ್ರಭಾವಗಳಿಂದ ಮೂಡಿಬಂದದ್ದಾಗಿದೆ. 'ಯಾವುದೇ ಒಂದು ವಾಸ್ತವಿಕ ಇಲ್ಲವೇ ಕಾಲ್ಪನಿಕ ಆಕೃತಿಯನ್ನು ಒಂದು ಮಾಧ್ಯಮದ ಮೂಲಕ ರೂಪಿಸುವ ಕಲೆಯನ್ನು ಶಿಲ್ಪ' ಎಂದು ಕರೆಯಲಾಗುತ್ತದೆ.[೪೨] 'ಶಿಲ್ಪ' ಎಂಬುದು ಕೇವಲ ದೇವರ ವಿಗ್ರಹಗಳನ್ನು ಕೆತ್ತುವ ಕಲೆಯಾಗಿದೆ. ಜೀವ ಜಡವಸ್ತುಗಳ ಬಾಹ್ಯರೂಪವನ್ನು ಕೆತ್ತುವ ಕಲೆಯಾಗಿದೆ. ಪ್ರಾಚೀನ ಕಾಲದಲ್ಲಿ ಶಿಲ್ಪವು ಸಾಮಾಜಿಕ, ಧಾರ್ಮಿಕ ಜೀವನವನ್ನು ಬಿಂಬಿಸುವ ಮತ್ತು ಸಾಮಾನ್ಯ ಜನರಿಗೆ ತಿಳಿಸುವ ಒಂದು ಮಾಧ್ಯಮವಾಗಿತ್ತು. ಶಿಲ್ಪ ಮತ್ತು ಶಾಸನಶಿಲ್ಪಗಳು ಒಂದೆಯಾದರೂ ಸೂಕ್ಷ್ಮತೆಯಲ್ಲಿ ಎರಡೂ ಬೇರೆ ಬೇರೆಯಾಗಿ ಕಂಡುಬರುತ್ತವೆ. ಶಿಲ್ಪ ವಿಶಾಲವಾದ ಸ್ವರೂಪವನ್ನು ಪಡೆದಿದ್ದು, ಶಾಸನಶಿಲ್ಪವು ಕೇವಲ ಶಾಸನಗಳಿಗೆ ಮಾತ್ರ ಸೀಮಿತವಾಗಿದೆ. 'ಶಾಸನಶಿಲ್ಪದ ಅಧ್ಯಯನವೆಂದರೆ ಶಾಸನಗಳ ಮೇಲಿರುವ ಉಬ್ಬುಶಿಲ್ಪಗಳ ಅಧ್ಯಯನವೆಂದೇ ಅರ್ಥ'.[೪೩]

ಚಪ್ಪಟೆಯಾದ ಹಿನ್ನೆಲೆಯಿಂದ ಮುಂದಕ್ಕೆ ಉಬ್ಬಿದಂತೆ ಕಾಣುವ ಶಿಲ್ಪಗಳನ್ನು ಉಬ್ಬುಶಿಲ್ಪಗಳು ಎಂದು ಅರ್ಥೈಸಬಹುದಾಗಿದೆ. ವಸ್ತುವಿನಿಂದ ಮುಂದಕ್ಕೆ ಉಬ್ಬಿದಂತೆ ಕಾಣುವ ಎಲ್ಲಾ ಶಿಲ್ಪಗಳು ಉಬ್ಬುಶಿಲ್ಪಗಳು ಎಂದು ಹೇಳಬಹುದು. ಶಾಸನಶಿಲ್ಪವು ಉಬ್ಬುಶಿಲ್ಪದ ಒಂದು ಪ್ರಕಾರವಾಗಿದೆ. ಶಾಸನಗಳು ಸಂಪೂರ್ಣವಾಗಿ ಉಬ್ಬುಶಿಲ್ಪದ ಮಾದರಿಗಳೇ ಆಗಿವೆ. ನಮ್ಮ ಪ್ರಾಚೀನ ಶಿಲ್ಪಶಾಸ್ತ್ರ ಗ್ರಂಥಗಳಾದ ಮಯಮತ, ಮಾನಸಾರ, ಶಿಲ್ಪಸಂಗ್ರಹ ಮೊದಲಾದವುಗಳಲ್ಲಿ ಉಬ್ಬುಶಿಲ್ಪದ ಬಗ್ಗೆ ಏನನ್ನು ಹೇಳಿಲ್ಲ. ಏಕೆಂದರೆ, ಆ ಕಾಲದಲ್ಲಿ ಶಿಲ್ಪ - ಉಬ್ಬು ಶಿಲ್ಪಗಳ ಮಧ್ಯೆ ಯಾವುದೇ ವ್ಯತ್ಯಾಸಗಳಿಲ್ಲದೇ ಒಂದೇ ಆಗಿದ್ದವು.

ಶಾಸನ ಶಿಲ್ಪವು ಶಿಲ್ಪಶಾಸ್ತ್ರದ ಬೆಳವಣಿಗೆಗೆ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಭಾರತೀಯ ಶಿಲ್ಪ ಇತಿಹಾಸ ಅಧ್ಯಯನದ ಮೊದಲ ಕೃತಿಗಳು ಉಬ್ಬುಶಿಲ್ಪಗಳೇ ಎಂಬುದು ಗಮನಾರ್ಹ. ಕ್ರಿಪೂ. ೩೦೦೦ದಷ್ಟು ಹಳೆಯದಾದ ಸಿಂಧೂ ಚಿಹ್ನೆಗಳೆಂದೂ ಹಲವು ವಿದ್ವಾಂಸರ ಅಭಿಮತ. ಇವು ಉಬ್ಬು ತಂತ್ರದಿಂದಲೇ ರಚನೆಯಾದವುಗಳು.[೪೪]

ಶಿವರಾಮ ಕಾರಂತರು ಕನ್ನಡದಲ್ಲಿ ಉಬ್ಬುಶಿಲ್ಪದ ಬಗ್ಗೆ ಬರೆದ ಮೊದಲ ವಿದ್ವಾಂಸರು. ಇವರು 'ಚಿತ್ರಶಿಲ್ಪ ವಾಸ್ತುಕಲೆಗಳು', 'ಭಾರತೀಯ ಶಿಲ್ಪ' ಮತ್ತು ಕಲಾ ಪ್ರಪಂಚದಲ್ಲಿ ಉಬ್ಬುಶಿಲ್ಪದ ಬಗ್ಗೆ ಪ್ರಸ್ತಾಪಿಸಲಾಗಿದೆ. 'ಜ್ಞಾನಗಂಗೋತ್ರಿ' ಸಂಪುಟದ 'ಕಲಾಕೋಶ' ಗ್ರಂಥದಲ್ಲಿ ಉಬ್ಬುಶಿಲ್ಪದ ಬಗ್ಗೆ ಉಲ್ಲೇಖಗಳಿವೆ. ಸಾಮಾನ್ಯವಾಗಿ ಮುಂದಕ್ಕೆ ಉಬ್ಬಿದಂತೆ ಕಾಣುವ ಎಲ್ಲಾ ಶಿಲ್ಪಗಳು ಉಬ್ಬುಶಿಲ್ಪಗಳೇ ಆಗಿವೆ.

ಪುರಾತನ ಕಾಲದಿಂದ ಶಿಲ್ಪಕಲೆಗೆ ಪ್ರಧಾನವಾದದ್ದು ಶಿಲೆ. ಈ ಶಿಲೆಯಲ್ಲಿ ಹಲವಾರು ಶಿಲೆಗಳಿದ್ದು, ಅವುಗಳನ್ನು ಸಾಮಾನ್ಯ ಶಿಲೆ, ಮರಳು ಶಿಲೆ, ಬಳಪದ ಶಿಲೆ, ಅಮೃತಶಿಲೆ ಮತ್ತು ಕಪ್ಪುಶಿಲೆ ಎಂದು ವಿಂಗಡಣೆಗಳನ್ನು ಮಾಡಿಕೊಳ್ಳಬಹುದು. 'ಮರಳುಮಿಶ್ರಿತ ಕೆಂಪು ಶಿಲೆಯನ್ನು' ಬಾದಾಮಿ ಚಾಲುಕ್ಯರು ದೇವಾಲಯಗಳ ನಿರ್ಮಾಣಕ್ಕೆ ಬಳಸಿದ್ದಾರೆ. 'ಬಳಪದ ಕಲ್ಲ'ನ್ನು ಕಲ್ಯಾಣಿ ಚಾಲುಕ್ಯರು ಮತ್ತು ಹೊಯ್ಸಳರು ಬಳಸಿದ್ದಾರೆ. ಈ ಕಲ್ಲು ಮೃದುವಾಗಿದ್ದು, ಕೆತ್ತಲೂ ಸುಲಭವಾಗಿರುತ್ತದೆ. ಹೀಗಾಗಿ ಈ ಕಲ್ಲನ್ನೇ ಹೆಚ್ಚಾಗಿ ಬಳಸಿರುವುದು ಕಂಡುಬರುತ್ತದೆ. ವಿಜಯನಗರ ಕಾಲದಲ್ಲಿ ಶಿಲ್ಪ ಮತ್ತು ದೇವಾಲಯ ನಿರ್ಮಾಣಕ್ಕೆ 'ಕಠಿಣಕಲ್ಲ'ನ್ನು ಬಳಸಿದರು. ಈ ರೀತಿಯ ಶಿಲೆಗಳಲ್ಲಿನ ವಿಂಗಡಣೆ ಅಥವಾ ಪ್ರಕಾರ ನಮ್ಮ ನಾಡಿನ ಕಲಾ ಸಮೃದ್ಧಿ, ಶ್ರೀಮಂತಿಕೆಯನ್ನು ನಿರ್ಧರಿಸುತ್ತದೆ. ಶಿಲೆಗಿಂತ ಮೃದವಾದ ಇನ್ನೊಂದು ಮಾಧ್ಯಮ ಮರ. ಶಿಲೆಯ ನಂತರ ಸ್ಥಾನವನ್ನು ಇದಕ್ಕೆ ನೀಡಲಾಗಿದೆ. ಇದಕ್ಕೆ ಶಿಲೆಗಿಂತ ಬಾಳಿಕೆ ತುಂಬಾ ಕಡಿಮೆ. ನಮಗೆ ಕಂಡು ಬರುವ ಮರದ ಶಿಲ್ಪಗಳು ತೀರ ಇತ್ತೀಚಿನವು. ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ಯಾವುದೇ ಮರದ ಶಿಲ್ಪಗಳು ಕಂಡುಬಂದಿಲ್ಲ.

ವೀರಗಲ್ಲುಗಳು

ಆಂಗ್ಲ ಭಾಷೆಯ 'Hero Stone' ಎಂಬ ಪದಕ್ಕೆ ಸಮನಾರ್ಥಕವಾಗಿ 'ವೀರಗಲ್ಲು' ಎಂಬ ಪದವನ್ನು ಬಳಸಲಾಗುತ್ತದೆ. ಇಲ್ಲಿ ವೀರ ಮತ್ತು ಕಲ್ಲು ಎಂಬ ಎರಡು ಪದಗಳು ಬಳಕೆಯಲ್ಲಿವೆ. ವೀರ ಇದು ಗುಣವಾಚಕವಾಗಿದ್ದು ವ್ಯಕ್ತಿಯ ವಿಶಿಷ್ಟ ಸಾಧನೆ, ಶೌರ್ಯ, ಸಾಹಸ ಮುಂತಾದ ಗುಣಗಳನ್ನು ಸೂಚಿಸುತ್ತದೆ.[೪೫] ಕಲ್ಲು ವಸ್ತು ಸೂಚಕದಂತೆ ಬಳಕೆಯಾಗಿದೆ. ಈ ವೀರ ಪದವು ಸಂಸ್ಕೃತದ 'ಬೀರ' ಪದದಿಂದ ಉಗಮಗೊಂಡಿದೆ. ಪುರಾತನ ಕಾಲದಿಂದ ಕನ್ನಡನಾಡಿನ ಜನರು ಶೂರರಾಗಿದ್ದರೆಂಬುದಕ್ಕೆ ಸ್ಮಾರಕ ಶಾಸನಗಳೇ ಸಾಕ್ಷಿಗಳಾಗಿವೆ. ಪ್ರಾಚೀನ ಕರ್ನಾಟಕದ ಸಾಮಾಜಿಕ ಮೌಲ್ಯಗಳಲ್ಲಿ ದಾನಧರ್ಮ ತ್ಯಾಗದಷ್ಟೆ ಮುಖ್ಯವಾದದು ವೀರತನ. ದುರ್ಗಸಿಂಹನ ಪಂಚತಂತ್ರದಲ್ಲಿ ಉಲ್ಲೇಖವಿರುವ ಪ್ರಸಿದ್ಧಿ ಪಡೆದ ಶ್ಲೋಕ[೪೬]

"ಜೀತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ
ಕ್ಷಣ ವಿಧ್ವಂಸಿನೀ ಕಾಯೇ ಕಾ ಚಿಂತಾ ಮರಣೇರಣೇ"

ಅಂದರೆ 'ಹೋರಾಟದಲ್ಲಿ ಗದ್ದರೆ ಸಂಪತ್ತು ಲಭಿಸುವುದು. ಮೃತಪಟ್ಟರೆ ದೇವಲೋಕದ ಅಪ್ಸರೆಯರು ಲಭಿಸುತ್ತಾರೆ. ಕ್ಷಣ ಮಾತ್ರದಲ್ಲಿ ನಾಶವಾಗುವ ಈ ದೇಹದ ಬಗ್ಗೆ ಏಕೆ ಮೋಹ. ಈ ಅಶಾಶ್ವತ ದೇಹದ ಮೇಲಿನ ವ್ಯಾಮೋಹವನ್ನು ತೊರೆದು ಹೋರಾಡು ಇಲ್ಲ ಮರಣಹೊಂದು' ಎಂಬ ಈ ಶ್ಲೋಕವು ವೀರಧರ್ಮ ಹಾಗೂ ವೀರ ಮೌಲ್ಯಗಳನ್ನು ವಿವರಿಸುತ್ತದೆ. ಆದಿಕವಿ ಪಂಪನು ರಚಿಸಿದ ವಿಕ್ರಮಾರ್ಜುನ ವಿಜಯದಲ್ಲಿ ವೀರ ಸಿದ್ಧಾಂತವನ್ನು ನಿರೂಪಿಸಿದ್ದಾನೆ.[೪೭]

"ಒತ್ತಿ ತುರುಬಿನಿಂದ ರಿಪುಭೂಜ ಸಮಾಜದ ಭೆರ್ಗಳಂನಭ
ಕ್ಕೆತ್ತದೆ ಬಂದ ತನ್ನ ಒಂದು ಮರೆವೊಕ್ಕೊಡೆ ಕಾಯದೆ ಚಾಗದೊಳ್ವನ
ಚ್ಚೊತ್ತದೆ ಮಾಣ್ದು ಬಾಳ್ವಪುರುವಾಸವೆಂಬ ಅಜಾಂಡ ಮೊಬುದೋಂ
ದತ್ತಿಯ ಪಣ್ಣೊಳಿಪರ್ವ ಪುಳುವಲ್ಲದೇ ಮಾನಸನೇ ಮಾರಾಂತಕಾ"

ಅಂದರೆ ಬಲವಾಗಿ ನಿಂತ ವೈರಿಗಳ ಬೇರುಗಳನ್ನು ಕಿತ್ತು ಆಕಾಶಕ್ಕೆ ಒಗೆಯದೆ, ವೈರಿ ಬಂದು ಮೊರೆ ಹೋದಾಗ ಕಾಯದೆ ತ್ಯಾಗದ ಒಳ್ಳೆತನದ ಅಚ್ಚು ಒತ್ತದೆ ಬಾಳುವ ಮನುಷ್ಯನು ಅತ್ತಿಯ ಹಣ್ಣಿನಲ್ಲಿದ್ದ ಹುಳುವಿನಂತೆ ಬ್ರಹ್ಮಾಂಡದಲ್ಲಿದ್ದಾನೆ. ಹೇಗೆ ವೈರಿಯನ್ನು ಕೊಲ್ಲುವ, ಕಾಯುವ ಹಾಗೂ ಒಳ್ಳೆಯತನದ ಮತ್ತು ತ್ಯಾಗದ ಮೌಲ್ಯಗಳನ್ನು ಹೊಂದಿರಬೇಕೆಂದು ಉಲ್ಲೇಖಿಸಲಾಗಿದೆ.[೪೮] ಮಹಾಕವಿ ರನ್ನನು ಸಾಮಾಜಿಕ ವೀರತನದ ಹೋರಾಟದ ಐದು ಮುಖ್ಯ ನೆಲೆಗಳನ್ನು ಗುರುತಿಸಿದ್ದಾನೆ.

"ತುರುಗೊಳೊಳ್ ಪೆಣ್ಬುಯ್ಯಲೊ
ಳೆರೆವೆಸದೊಳ್ ನೆಂಟನೆಡರೊಳೊರಳಿವಿನೊಳಂ
ತರಿಸಂದು ಗಂಡುತನಮನೆ
ನೆರೆಪದವಂ ಗಂಡನಲ್ಲನೆಂತೂ ಷಂಡಂ"

ಹೀಗೆ ವೀರನ ಸ್ವಯಂ ಪ್ರೇರಣೆಗೆ ಯಾವ ಮನೋಧರ್ಮ ಕಾರಣ ಎಂಬುದನ್ನು ರನ್ನ ಮಹಾಕವಿ ತನ್ನ ಗದಾಯುದ್ಧದಲ್ಲಿ ಮೇಲಿನಂತೆ ಹೇಳಿದ್ದಾನೆ. ಈ ಮಾತುಗಳು ಅಂದಿನ ವೀರತ್ವದ ಮೌಲ್ಯಗಳನ್ನು ಎತ್ತಿ ಹಿಡಿದಿವೆ.

"ಒಡಲೊಡಮೆಯೆಂಬವೆರಡುಂ
ಕೆಡಲಿರ್ಪುವು ಕೆಡದ ಕನವರಂ ಜಸಮದರುಂ
ಕೆಡವೊಡಲೊಡಮೆಯನೆಂದಾಂ
ಕೆಡದೊಡಮೆಗೆ ಮಾರುಗುಡುವುದಿರೆವಬೇಡಂಗಾ"

ಮಹಾಕವಿ ರನ್ನನ ಈ ಶ್ಲೋಕ ದೇಹವೆನ್ನುವುದು ಅಶಾಶ್ವತವಾದುದು. ಆದರೆ ಕೀರ್ತಿಯು ಚಿರಸ್ಥಾಯಿಯಾದುದು. ಈ ಅಶಾಶ್ವತವಾದ ದೇಹವು ಹೋದರೂ ಶಾಶ್ವತವಾದ ಚಿರಂತನವಾದ ಕೀರ್ತಿಯನ್ನು ಸಂಪಾದಿಸಬೇಕೆಂಬುದು ಜನರ ಬಯಕೆ ಆಗಿತ್ತು. ಯುದ್ಧದಲ್ಲಿ ಪ್ರಾಣ ತ್ಯಾಗವನ್ನು

ಮಾಡಿದ ವೀರ ಈ ಲೋಕದಲ್ಲಿ ಅಷ್ಟೇ ಅಲ್ಲ ಪರಲೋಕದಲ್ಲೂ ಕೀರ್ತಿಗೆ ಪಾತ್ರನಾಗುತ್ತಾನೆ. ಅಲ್ಲದೇ ಸಮಾಜದಲ್ಲಿನ ಜನರ ಪ್ರಶಂಸೆಗೂ ಅರ್ಹನಾಗುತ್ತಾನೆ. ಬಹುಶಃ ಈ ಭಾವನೆಗಳೇ ಯುದ್ಧೋತ್ಸಾಕ್ಕೆ ಮೂಲ ಪ್ರಚೋದನೆ ಇರಬೇಕು.

ಅರಸನಿಗಾಗಿ ಸಾಮ್ರಾಜ್ಯದ ರಕ್ಷಣೆಗಾಗಿ. ಇಲ್ಲವೇ ಊರಿನ ಹಿತಕ್ಕಾಗಿ. ವೈರಿಗಳ ವಿರುದ್ಧ ಹೋರಾಡಿ ಮರಣ ಹೊಂದಿದ ವೀರನ ಸ್ಮರಣೆಗಾಗಿ ನೆಟ್ಟ ಶಿಲ್ಪ ಫಲಾಫಲಕಗಳೇ ವೀರಗಲ್ಲುಗಳು. ಇಂಥ ವೀರಗಲ್ಲುಗಳನ್ನು ಇಂಥವರೇ ಹಾಕಿಸಬೇಕೆಂಬ ನಿಯಮವಿಲ್ಲ. ಸಾಮಾನ್ಯವಾಗಿ ಮರಣ ಹೊಂದಿದ ವೀರನ ಊರಿನವರೆಲ್ಲಾ ಸೇರಿ ಅವನ ಸ್ಮರಣೆಗಾಗಿ ವೀರಗಲ್ಲುಗಳನ್ನು ನಡೆಸುತ್ತಾರೆ. ಈ ವೀರಗಲ್ಲುಗಳು ವೀರರ ಶೌರ್ಯ ಸಾಹಸವನ್ನು ಬಿಂಬಿಸುತ್ತದೆ.

ವೀರಗಲ್ಲುಗಳ ಪರಿಚಯವನ್ನು ಹೋರಾಟದ ಸ್ವರೂಪವನ್ನು, ಹೋರಾಟದ ದೃಷ್ಟಿಯಿಂದ ಈ ರೀತಿಯಾಗಿ ವಿಂಗಡಿಸಬಹುದಾಗಿದೆ.

- ಯುದ್ಧದ ವೀರಗಲ್ಲುಗಳು
- ತುಱುಗೋಳ್ ವೀರಗಲ್ಲುಗಳು
- ಬೇಟೆಯಲ್ಲಿ ಮಡಿದ ವೀರರ ಸ್ಮಾರಕಗಳು
- ಪೆಣ್ಬುಯ್ಯಲ್ ವೀರಗಲ್ಲುಗಳು
- ಊರಳಿವು ವೀರಗಲ್ಲುಗಳು
- ಕಳ್ಳರೊಡನೆ ಹೋರಾಡಿ ಮಡಿದ ವೀರರ ಸ್ಮಾರಕಗಳು
- ಸೀಮಾ ಸಂಬಂಧ, ಊರು ಜಗಳಗಳಲ್ಲಿ ಮಡಿದವರ ಸ್ಮಾರಕಗಳು

ಇಂತಹ ವೀರಗಲ್ಲುಗಳು ಕರ್ನಾಟಕದಾದ್ಯಂತ ಹೇರಳವಾಗಿ ಕಾಣಬಹುದಾಗಿದೆ.[೪೯] ಈ ಮೇಲಿನ ವಿಂಗಡಣ ಕ್ರಮದಲ್ಲಿನ ಎಲ್ಲಾ ವೀರಗಲ್ಲುಗಳು ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ಕಂಡುಬಂದಿಲ್ಲ. ಅವುಗಳಲ್ಲಿ ಯುದ್ಧದ ವೀರಗಲ್ಲುಗಳು, ವೀರಮಾಸ್ತಿಕಲ್ಲುಗಳು, ಪ್ರಾಣಿ ಬೇಟೆ ವೀರಗಲ್ಲುಗಳು ಮಾತ್ರ ದೊರೆತಿವೆ. ಅವುಗಳು ಐಮಂಗಲ, ತವಂದಿ, ಮೇಟಿಕುರ್ಕೆ, ಗುಯಿಲಾಳು, ವದ್ದೀಕೆರೆಯಲ್ಲಿವೆ. ದೊರೆತಿರುವ ಸ್ಮಾರಕ ಶಿಲೆಗಳಲ್ಲಿ ವೀರಗಲ್ಲುಗಳೇ ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿವೆ.

ಯುದ್ಧದ ವೀರಗಲ್ಲುಗಳ ಶಿಲ್ಪ

ಅರಸು ಮನೆತನಗಳ ಆಳ್ವಿಕೆ ಕಾಲದಲ್ಲಿ ಸಾಮ್ರಾಜ್ಯದ ವಿಸ್ತರಣೆಗಾಗಿ ಯುದ್ಧಗಳು ಸಾಮಾನ್ಯವಾಗಿದ್ದವು. ಅಶಕ್ತ ದೊರೆಗಳ ಮೇಲೆ ಬಲಿಷ್ಠ ದೊರೆಗಳು ದಾಳಿ ನಡೆಸುತ್ತಿದ್ದರು. ಇದನ್ನು ಹೊರತುಪಡಿಸಿ ಸಾಮ್ರಾಜ್ಯ ಸಾಮ್ರಾಜ್ಯಗಳ ಮಧ್ಯದಲ್ಲಿನ ದ್ವೇಷ, ಉತ್ತರಾಧಿಕಾರತ್ವಕ್ಕಾಗಿ ತಂದೆ, ಮಕ್ಕಳ ಮಧ್ಯದ ನಡುವಿನ ದ್ವೇಷ ಹಾಗೂ ಸಾರ್ವಜನಿಕರು ಅರಸ ಹಾಗೂ ಆತನ ಆಡಳಿತಾಧಿಕಾರಿಗಳ ವಿರುದ್ಧ ಸಿಡಿದೆದ್ದ ಪ್ರತಿಭಟನೆ ಇದೆಲ್ಲವೂ ಯುದ್ಧಕ್ಕೆ ಕಾರಣಗಳಾಗಿದ್ದವು.[೫೦]

ಇಂಥ ಯುದ್ಧಗಳಲ್ಲಿ ಸೈನಿಕರದ್ದೇ ಮಹತ್ವದ ಪಾತ್ರವಾಗಿತ್ತು. ಯುದ್ಧದಲ್ಲಿ ಹೋರಾಡಿ ವೀರ ಮರಣ ಹೊಂದಿದ ವೀರರ ಸ್ಮಾರಕಗಳೇ ಈ ಯುದ್ಧದ ವೀರಗಲ್ಲುಗಳು.

ನನ್ನ ಅಧ್ಯಯನದ ವ್ಯಾಪ್ತಿಯಲ್ಲಿ ಹರ್ತಿಕೋಟೆ, ಐಮಂಗಲ, ವದ್ದೀಕೆರೆ, ಮರಡಿದೇವಿಗೆರೆಗಳಲ್ಲಿ ಯುದ್ಧದ ವೀರಗಲ್ಲುಗಳು ಕಂಡುಬಂದಿವೆ. ಐಮಂಗಲ ಪರಿಸರದಲ್ಲಿ ಕಂಡುಬಂದಿರುವ ಯುದ್ಧದ ವೀರಗಲ್ಲುಗಳ ಪರಂಪರೆ ಕ್ರಿ.ಶ.ಸು. ೮ನೇ ಶತಮಾನದಿಂದ ಕ್ರಿ.ಶ. ೧೮ನೇ ಶತಮಾನದವರೆಗೆ ಕಂಡುಬರುತ್ತದೆ.[೫೧] ಹರ್ತಿಕೋಟೆಯ ಉರುಸಲಮ್ಮನ ಗುಡಿಯ ಹಿಂಭಾಗದಲ್ಲಿಯೇ ಇರುವ (ಪೂಜಾರಿ ತಿಪ್ಪಯ್ಯನ ಮಗ ಓರಗಲ್ಲಪ್ಪ ಅವರ ಹೊಲದಲ್ಲಿಯ) ವೀರಗಲ್ಲಿನಲ್ಲಿ[೫೨] ಈರ್ವರು ವೀರರನ್ನು ಚಿತ್ರಿಸಲಾಗಿದೆ. ಇವರೀರ್ವರೂ ಯಾವುದೋ ಕಾಳಗದಲ್ಲಿ ಮಡಿದಿರಬೇಕು. ಈ ವೀರಗಲ್ಲು ವಿಜಯನಗರ (ಕ್ರಿ.ಶ. ೧೫-೧೬ನೇ ಶತಮಾನ) ಕಾಲದ ವೀರಗಲ್ಲು ಶಿಲ್ಪವನ್ನು ಹೋಲುತ್ತದೆ. ಶಿಲ್ಪಿಯು ಈ ಈರ್ವರು ವ್ಯಕ್ತಿಗಳಲ್ಲಿ ವ್ಯತ್ಯಾಸ ತೋರಿಸಲು ಅವರ ಉಡುಪು, ಕೇಶಾಲಂಕಾರಗಳಲ್ಲಿ ಬದಲಾವಣೆ ಮಾಡಿದ್ದಾನೆ. ವೀರಗಲ್ಲಿನ ಬಲ ಭಾಗಕ್ಕಿರುವ ವ್ಯಕ್ತಿಯು ತನ್ನ ಕೈಯಲ್ಲಿ ಬುತ್ತಿಯ ಗಂಟನ್ನು ಹಿಡಿದಿರುವುದನ್ನು ಗಮನಿಸಿದರೆ ಈತನು ತನ್ನ ಬಲಭಾಗದಲ್ಲಿರುವ ವ್ಯಕ್ತಿಯ ಸೇವಕನಿದ್ದಿರಬಹುದು. ವೀರಗಲ್ಲಿನ ಎಡಭಾಗದಲ್ಲಿರುವ ವ್ಯಕ್ತಿಯ ವೈಶಿಷ್ಟ್ಯತೆಯನ್ನು ತೋರಿಸಲು ಶಿಲ್ಪಿಯು ದಪ್ಪನಾದ ಮಡಿಯನ್ನೂ ನೀಳವಾದ ಪಂಚೆಯನ್ನೂ ತೋರಿಸಿದ್ದಾನೆ. ಈ ವ್ಯಕ್ತಿಯ ಎರಡು ಕೈಗಳಲ್ಲಿಯೂ ಆಯುಧಗಳಿರುವಂತೆ ಚಿತ್ರಿಸಲಾಗಿದೆ. ಈ ವೀರಗಲ್ಲಿನ ಎತ್ತರ ೩.೬ ಅಡಿಗಳು, ಅಗಲ ೨.೩ ಅಡಿಗಳು.

ಹರ್ತಿಕೋಟೆಯ ಉರುಸಲಮ್ಮನ ಗುಡಿಯ ಪೂರ್ವದಿಕ್ಕಿಗೆ ಸುಮಾರು ೨೦೦ ಗಜಗಳ ದೂರದಲ್ಲಿ (ಕೆರೆತಿಪ್ಪಯ್ಯನವರ ಮಗ ಓರುಗಲ್ಲಪ್ಪನವರ ಹೊಲದ ಬದಿಯಲ್ಲಿ) ನಿಂತಿರುವ ವೀರಗಲ್ಲು[೫೩] ಸಹ ವಿಜಯನಗರ ಕಾಲಕ್ಕೆ ಸೇರಿದುದೇ. ಇದರ ಎತ್ತರ ೩ ಅಡಿ, ಅಗಲ ೨.೫ ಅಡಿಗಳು. ಇದೊಂದು ಅತ್ಯಂತ ಸುಂದರವಾದ ವೀರಗಲ್ಲು. ಇದರಲ್ಲಿ ವೀರನು ಆಲಿಢಾಸನದಲ್ಲಿ ನಿಂತು ಬಾಣ ಪ್ರಯೋಗ ಮಾಡುತ್ತಿದ್ದಾನೆ. ಬಿಲ್ಲಿನ ಹದೆಯನ್ನು ತನ್ನ ಕಿವಿಯವರೆಗೂ ಎಳೆದಿದ್ದಾನೆ. ಇದರಿಂದ ಬಿಲ್ಲು ತುಂಬಾ ಬಾಗಿದೆ. ವೀರನ ಹಿಂಭಾಗದಲ್ಲಿ ಆತನ ಹೆಂಡತಿಯು ತನ್ನ ಎಡಗೈಯಲ್ಲಿ ಕಳಶ - ಕನ್ನಡಿಗಳನ್ನಿಡಿದಿದ್ದು, ತನ್ನ ಬಲಗೈಯನ್ನು ಮೇಲೆತ್ತಿದ್ದಾಳೆ. ಕಲ್ಲಿನಲ್ಲಿ ಉಳಿದ ಜಾಗವನ್ನು ಖಾಲಿ ಬಿಡಬಾರದೆಂದೋ ಅಥವಾ ಸೌಂದರ್ಯವನ್ನು ನೀಡುವ ಸಲುವಾಗಿಯೋ ಶಿಲ್ಪಿಯು ಬಳ್ಳಿಯೊಂದನ್ನು ಚಿತ್ರಿಸಿದ್ದಾನೆ. ಇದು ವೀರಗಲ್ಲಿನ ಸೌಂದರ್ಯವನ್ನು ಹೆಚ್ಚಿಸಿದೆ.

ಹರ್ತಿಕೋಟೆಯ ಈಶಾನ್ಯ ದಿಕ್ಕಿನಲ್ಲಿ (ಊರಿನ ಹೊರಗಡೆ) ಸ್ಮಶಾನದಲ್ಲಿರುವ ಕಲ್ಲು ಆವರಣದಲ್ಲಿ ನಾಲ್ಕು ವೀರಗಲ್ಲುಗಳಿವೆ.[೫೪] ಇವೆಲ್ಲವೂ ಅಕ್ಕಪಕ್ಕದಲ್ಲಿರುವಂತೆ ಸಾಲಾಗಿ ಜೋಡಿಸಲ್ಪಟ್ಟಿವೆ. ಅವುಗಳ ವಿವರ ಕ್ರಮವಾಗಿ ಇಂತಿದೆ: ೧. ವೀರನೋರ್ವನು ಕುದುರೆಯ ಮೇಲೆ ಕುಳಿತು ಈಟಿಯನ್ನು ಎಸೆಯುತ್ತಿರುವಂತಿದೆ. ಅವನು ತನ್ನ ಕೊರಳಿನಲ್ಲಿ ಲಿಂಗವನ್ನು ಧರಿಸಿದ್ದಾನೆ. ಉಳಿದಂತೆ ಸಾಮಾನ್ಯ ಚಿತ್ರಣ; ೨. ವೀರನು ಬಲಗೈಯಲ್ಲಿ ಕಠಾರಿಯನ್ನಿಡಿದು,

ಸೊಂಟದಲ್ಲಿ ಕಿರುಗತ್ತಿಯನ್ನು ಧರಿಸಿಕೊಂಡಿದ್ದಾನೆ. ಅವನು ರಾಜಪ್ರತಿಷ್ಠನೆಂಬುದಕ್ಕೆ ಅವನ ಕುದುರೆಯ ಹಿಂಭಾಗದಲ್ಲಿ ಛತ್ರಿಯನ್ನಿಡಿದು ನಿಂತಿರುವ ವ್ಯಕ್ತಿಯೂ ಮುಂಭಾಗದಲ್ಲಿ ಚಾಮರವನ್ನಿಡಿದು ನಿಂತಿರುವ ವ್ಯಕ್ತಿಯೂ ಸಾಕ್ಷಿಯಾಗಿದ್ದಾರೆ; ೩. ವೀರ ಮತ್ತು ಅವನ ಹೆಂಡತಿ ಈರ್ವರೂ ಕುದುರೆಯ ಮೇಲೆ ಕೈಮುಗಿದುಕೊಂಡು ಕುಳಿತಿದ್ದಾರೆ. ವೀರನು ತನ್ನ ಕಂಕುಳಲ್ಲಿ ಕತ್ತಿಯನ್ನು ಇಟ್ಟುಕೊಂಡಿದ್ದಾನೆ. ಅವನು ಸಹ ಪ್ರತಿಷ್ಠಿತ ವ್ಯಕ್ತಿಯೆಂಬುದು ಛತ್ರಿ ಹಿಡಿದಿರುವ ಸೇವಕನಿಂದ ದೃಢವಾಗುತ್ತದೆ; ೪. ವೀರನು ತನ್ನ ಎಡಗೈಯಲ್ಲಿ ಬಿಲ್ಲನ್ನೂ ಬಲಗೈಯಲ್ಲಿ ಕಠಾರಿಯನ್ನೂ ಹಿಡಿದಿದ್ದಾನೆ. ಹೆಗಲಿಗೆ ಬತ್ತಳಿಕೆಯನ್ನು ಕಟ್ಟಿಕೊಂಡು ಅದರಲ್ಲಿ ಬಾಣಗಳನ್ನು ಶೇಖರಿಸಿಕೊಂಡಿದ್ದಾನೆ. ಈ ಮೇಲಿನ ನಾಲ್ಕು ವೀರಗಲ್ಲುಗಳನ್ನು ಒಬ್ಬನೇ ಶಿಲ್ಪಿ ಮಾಡಿರುವಂತೆ ತೋರುತ್ತದೆ. ಈ ನಾಲ್ಕು ವೀರಗಲ್ಲುಗಳನ್ನೂ ಕರಿಯ ಕಲ್ಲಿನ ಮೇಲೆ ಚಿತ್ರಿಸಲಾಗಿದ್ದು, ಜನರು ಸ್ಮಶಾನವೆಂದು ಈಗ ಗುರುತಿಸುವ ಪ್ರದೇಶದಲ್ಲಿದೆ. ಬಹುಶಃ ಇಲ್ಲಿಯೇ ಈ ವೀರರುಗಳ ಸಂಸ್ಕಾರ ಆಗಿದ್ದಿರಬೇಕು. ಈ ವೀರಗಲ್ಲುಗಳನ್ನು 'ಊರ ನಾಯಕರು' ಯುಗಾದಿಯ ಹಬ್ಬದಂದು ಪೂಜಿಸುತ್ತಾರೆ. ಇವೆಲ್ಲವೂ ಪಾಳೇಗಾರರ ಕಾಲದವು.

ಹರ್ತಿಕೋಟೆಯ ಈಶಾನ್ಯ ದಿಕ್ಕಿನಲ್ಲಿ ಕಲ್ಲು ಆವರಣದ ಹೊರಗಡೆ ಮತ್ತೊಂದು ವೀರಗಲ್ಲು[೫೫] ಇದ್ದು ಇದು ಭಿನ್ನವಾಗಿದೆ. ವೀರನು ಬಲಗಾಲಿನ ಮಂಡಿಯನ್ನೂರಿ ಬಾಣ ಪ್ರಯೋಗ ಮಾಡಲು ತನ್ನ ಬತ್ತಳಿಕೆಯಿಂದ ಬಾಣಗಳನ್ನು ತೆಗೆಯುತ್ತಿದ್ದಾನೆ. ಈತನ ಹಿಂಬದಿಯಲ್ಲಿ ಮತ್ತೊಬ್ಬ ವ್ಯಕ್ತಿಯು ಬಿಲ್ಲು-ಬಾಣಗಳನ್ನು ಹಿಡಿದು ನಿಂತಿದ್ದಾನೆ. ಆ ವ್ಯಕ್ತಿಯು ನಿಂತಿರುವ ಭಂಗಿ, ಆಯುಧಗಳನ್ನು ಹಿಡಿದಿರುವ ರೀತಿಯನ್ನು ನೋಡಿದರೆ ಅವನು ಬಹುಶಃ ವೀರನಿಗೆ ಆಯುಧಗಳನ್ನು ಸರಬರಾಜು ಮಾಡುವ ಸಹಾಯಕನಾಗಿದ್ದಿರಬೇಕು.

ಹರ್ತಿಕೋಟೆ ವೀರಭದ್ರಸ್ವಾಮಿ ದೇವಾಲಯದ ದ್ವಾರಮಂಟಪದ ಮುಂಭಾಗದಲ್ಲಿ. ಹಳೆಯ ಸಮಾಧಿಗಳಲ್ಲಿ 'ಧರ್ಮಪ್ರಭು ವೀರಪದ್ದಣ್ಣ ನಾಯಕ ಅಥವಾ ವೀರಪದ್ಮಣ್ಣ ನಾಯಕ'ನದು. ಇದು ಇಲ್ಲಿಯ ಮಹತ್ವದ ಸ್ಮಾರಕವೆನ್ನಬಹುದು. ಇದು ರಾಜಪುರುಷನೋರ್ವನ ಸಮಾಧಿಯೆನ್ನಲು, ಸಮಾಧಿಯ ಮೇಲೆ ನಿಲ್ಲಿಸಲಾಗಿರುವ ಐದು ಅಡಿ ಎತ್ತರದ ಕಪ್ಪುಶಿಲೆಯಲ್ಲಿ ಮೂಡಿಸಲಾದ ವೀರಯೋಧನ ಆಕೃತಿಯೇ ಸಾಕ್ಷಿ. ಈ ವೀರ ಪಶ್ಚಿಮಾಭಿಮುಖವಾಗಿದ್ದು, ಕೈ ಮುಗಿಯುತ್ತಿರುವ ಭಂಗಿಯಲ್ಲಿದ್ದಾನೆ. ಹುಲಿಗಳು ಮತ್ತು ಆನೆಗಳು ತಮ್ಮ ತಮ್ಮಲ್ಲಿ ಪರಸ್ಪರ ಕಾಳಗ ಮಾಡುತ್ತಿರುವ ಹಾಗೂ ಸಿಂಹಾಸನದ ಮೇಲೆ ಕುಳಿತ ವ್ಯಕ್ತಿಯನ್ನು ಇತರರು ಓಲೈಸುತ್ತಿರುವ ಶಿಲಾಕೆತ್ತನೆಗಳು ಇಲ್ಲಿವೆ. ಈ ಸಮಾಧಿಯ ಮೇಲೆ ಭದ್ರವಾದ ಮಂಟಪವನ್ನು ನಿರ್ಮಿಸುವುದರೊಂದಿಗೆ ಗ್ರಾಮಸ್ಥರು ಈ ಸಮಾಧಿಗೆ ಗೌರವ ಸೂಚಿಸಿರುವುದು ಅರ್ಥಪೂರ್ಣವಾಗಿದೆ.

ಐಮಂಗಲದ ಪಶ್ಚಿಮ ದಿಕ್ಕಿನಲ್ಲಿ ಕಲ್ಲುಂಟೇಶ್ವರಿ ದೇವಾಲಯದ ಕಲ್ಲುಕಟ್ಟಡ ಆವರಣದಲ್ಲಿ ಒಂಬತ್ತು ವೀರಗಲ್ಲುಗಳಿವೆ. ಇವೆಲ್ಲವೂ ಅಕ್ಕಪಕ್ಕದಲ್ಲಿರುವಂತೆ ಸಾಲಾಗಿ ಜೋಡಿಸಲ್ಪಟ್ಟಿವೆ. ಅವುಗಳ ವಿವರ ಕ್ರಮವಾಗಿ ಇಂತಿದೆ; ೧. ಕ್ರಿ.ಶ. ೧೬ನೇ ಶತಮಾನದ ವೀರಗಲ್ಲು ಒಂದು ಹಂತದ್ದಾಗಿದೆ. ವೀರಯೋಧ ಕುದುರೆಯ ಮೇಲೆ ಕುಳಿತಿದ್ದು, ಎಡಗೈನಲ್ಲಿ ಕುದುರೆಯ

ಜೀನನ್ನು, ಬಲಗೈಯಲ್ಲಿ ಉದ್ದನೆಯ ಭರ್ಜಿಯನ್ನು ಹಿಡಿದಿದ್ದಾನೆ. ಕುದುರೆಯ ಹಿಂಭಾಗದಲ್ಲಿ ಆತನ ಹೆಂಡತಿಯು ತನ್ನ ಕೈಗಳಲ್ಲಿ ಕಳಶ, ಕನ್ನಡಿಗಳನ್ನು ಹಿಡಿದಿದ್ದಾಳೆ. ಅಲಂಕೃತವಾದ ಕುದುರೆಯು ತನ್ನ ಮುಂದಿನ ಎರಡು ಕಾಲುಗಳನ್ನು ಮೇಲಕ್ಕೆ ಎತ್ತಿದೆ. ವೀರನು ಕೊರಳಲ್ಲಿ ಹಾರ, ತೋಳುಗಳಿಗೆ ತೋಳಬಂದಿ, ಕೈಗೆ ಬಳೆಯಾಕಾರದ ರಿಂಗನ್ನು ಹಾಕಿಕೊಂಡಿದ್ದಾನೆ. ಈ ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ-ಚಂದ್ರ ಉಬ್ಬು ಕೆತ್ತನೆಗಳಿವೆ. ಇದನ್ನು ಬಿಳಿಯ ಶಿಲೆಯಲ್ಲಿ ಖಂಡರಿಸಲಾಗಿದ್ದು, ಇವುಗಳಿಂದ ಇವನೊಬ್ಬ ಪ್ರಮುಖ ವೀರನಾಗಿರಬಹುದುದೆಂದು ತಿಳಿಯುತ್ತದೆ. ೨. ವೀರನು ತನ್ನ ಎಡಗೈಯಲ್ಲಿ ಬಿಲ್ಲನ್ನೂ ಬಲಗೈಯಲ್ಲಿ ಬಾಣವನ್ನೂ ಹಿಡಿದಿದ್ದಾನೆ. ಹೆಗಲಿಗೆ ಬತ್ತಳಿಕೆಯನ್ನು ಕಟ್ಟಿಕೊಂಡು ಅದರಲ್ಲಿ ಬಾಣಗಳನ್ನು ಶೇಖರಿಸಿಕೊಂಡಿದ್ದಾನೆ. ಈ ವೀರನ ಎಡಬಲದಲ್ಲಿ ಜಿಂಕೆಯ ಉಬ್ಬು ಕೆತ್ತನೆಗಳಿವೆ. ಈತನು ವೀರಗಾಸೆಯನ್ನು ತೊಟ್ಟಿದ್ದು ಇವನ್ನೊಬ್ಬ ಬೇಟೆಗಾರನಾಗಿದ್ದನೆಂದು ಹೇಳಬಹುದು. ೩. ವೀರನು ತನ್ನ ಕಂಕುಳಲ್ಲಿ ಭರ್ಜಿಯನ್ನು ಹಿಡಿದಿದ್ದು ಬಲಗೈಯನ್ನು ನೇರವಾಗಿ ಇಳಿ ಬಿಟ್ಟಿದ್ದಾನೆ. ಈತನು ಉದ್ದವಾದ ಜಡೆಯನ್ನು ಹೊಂದಿದ್ದು ದಪ್ಪನಾದ ಮುಡಿಯನ್ನೂ, ನೀಳವಾದ ಪಂಜೆಯನ್ನು ತೊಟ್ಟಿದ್ದಾನೆ. ವೀರನು ಕೊರಳಲ್ಲಿ ಹಾರ, ತೋಳುಗಳಿಗೆ ತೋಳುಬಂದಿ, ಕೈಗಳಲ್ಲಿ ಬಳೆಯಾಕಾರದ ರಿಂಗ್‌ನ್ನು ಹಾಕಿಕೊಂಡಿದ್ದಾನೆ. ತಲೆಯ ಬಳಿಯಲ್ಲಿ ಸೂರ್ಯ-ಚಂದ್ರ ಇದರ ನಡುವೆ ಲಿಂಗವನ್ನು ಕೆತ್ತಲಾಗಿದೆ. ೪. ವೀರಯೋಧನು ಕುದುರೆಯ ಮೇಲೆ ಕುಳಿತಿದ್ದು, ಎಡಗೈನಲ್ಲಿ ಕುದುರೆಯ ಜೀನನ್ನು, ಬಲಗೈಯಲ್ಲಿ ಉದ್ದನೆಯ ಈಟಿಯನ್ನು ಎಸೆಯುವಂತಿದೆ. ಸೊಂಟದಲ್ಲಿ ಕಿರುಗತ್ತಿಯನ್ನು ಧರಿಸಿದ್ದಾನೆ. ಕೊರಳಲ್ಲಿ ಹಾರ, ತೊಳಬಂಧಿ ಧರಿಸಿದ್ದು, ಅಲಂಕೃತವಾದ ಕುದುರೆಯು ತನ್ನ ಮುಂದಿನ ಬಲಗಾಲನ್ನು ಮೇಲಕ್ಕೆ ಎತ್ತಿದೆ. ಈ ವೀರನ ತಲೆಯ ಬಳಿಯಲ್ಲಿ ಸೂರ್ಯ, ಬಸವಣ್ಣ, ಚಂದ್ರ ಶಿಲ್ಪವನ್ನು ಬಿಡಿಸಲಾಗಿದೆ. ೫. ಮೂರು ಜನ ವೀರರು ಎಡಗೈನಲ್ಲಿ ಭರ್ಜಿ, ಬಲಗೈನಲ್ಲಿ ಉದ್ದನೆಯ ಕತ್ತಿ ಹಿಡಿದಿದ್ದಾರೆ. ನೀಳವಾದ ಪಂಜೆಯನ್ನು ತೊಟ್ಟಿದ್ದು ಕೊರಳಲ್ಲಿ ಹಾರ, ಕಿವಿಯಲ್ಲಿ ರುದ್ರಾಕ್ಷಿ ಓಲೆ, ತೋಳಬಂಧಿ ಕೈಕಡಗ, ಸೊಂಟದ ಮೇಲೆ ವೀರಗಚ್ಚೆಯನ್ನು ಕಟ್ಟಿಕೊಂಡು ಸಮಭಂಗಿಯಲ್ಲಿ ನಿಂತಿದ್ದಾರೆ. ಈ ಶಿಲ್ಪವನ್ನು ಗಮನಿಸಿದಾಗ ಇವರನ್ನು ಸಿದ್ಧಪುರುಷರೆಂದು ಊಹಿಸಬಹುದು. ತಲೆಯ ಮೇಲೆ ಸೂರ್ಯ, ಬಸವಣ್ಣ, ಲಿಂಗ ಮತ್ತು ಚಂದ್ರ ಉಬ್ಬು ಕೆತ್ತನೆಗಳಿವೆ. ಕಲ್ಲುಂಟೇಶ್ವರಿ ದೇವಾಲಯದ ಆವರಣದಲ್ಲಿ ನೆಲೆಗೊಂಡಿರುವ ಈ ಮೇಲಿನ ಸಾಲು ವೀರಗಲ್ಲುಗಳನ್ನು ಒಬ್ಬನೇ ಶಿಲ್ಪಿ ಮಾಡಿರುವಂತೆ ತೋರುತ್ತದೆ. ಬಿಳಿ ಶಿಲೆಯಲ್ಲಿ ಶಿಲ್ಪವನ್ನು ಕೆತ್ತಲಾಗಿದ್ದು ಬಹುಶಃ ಇವೆಲ್ಲವೂ ಪಾಳೇಗಾರರ ಕಾಲದ ಶಿಲ್ಪಗಳೆಂದು ಊಹಿಸಬಹುದು.

ವದ್ದೀಕೆರೆ ಸಿದ್ಧೇಶ್ವರ ದೇವಾಲಯದ ಆವರಣದಲ್ಲಿ ನಿಂತಿರುವ ವೀರಗಲ್ಲು ವಿಜಯನಗರ ಕಾಲಕ್ಕೆ ಸೇರಿದುದಾಗಿದೆ. ಇದರ ಎತ್ತರ ೩ ಅಡಿ, ಅಗಲ ೨.೫ ಅಡಿಗಳು. ಇದರಲ್ಲಿ ವೀರನು ಬಲಗೈಯಲ್ಲಿ ಖಡ್ಗ, ಎಡಗೈನಲ್ಲಿ ಚೂಪಾದ ಆಯುಧ ಹಿಡಿದು ನಿಂತಿದ್ದಾನೆ. ವೀರನು ಕಿವಿಯಲ್ಲಿ ರುದ್ರಾಕ್ಷಿಓಲೆ, ತೋಳಬಂಧಿ, ಕೈಕಡಗ, ಸೊಂಟದಲ್ಲಿ ಭರ್ಜಿ ಮತ್ತು ವೀರಗಚ್ಚೆಯನ್ನು ಕಟ್ಟಿಕೊಡಂತೆ ಬಿಳಿಯ ಶಿಲೆಯಲ್ಲಿ ಖಂಡರಿಸಲಾಗಿದೆ.

ತವಂದಿ ಕೆರೆಯ ಮೇಲೆ ನಿಂತಿರುವ ವೀರಗಲ್ಲು ವಿಜಯನಗರ ಕಾಲಕ್ಕೆ ಸೇರಿದುದೇ. ಇದರ ಎತ್ತರ ೨ ಅಡಿ, ಅಗಲ ೨ ಅಡಿಗಳು. ಇದರಲ್ಲಿ ವೀರನು ಕುದುರೆಯ ಮೇಲೆ ಕುಳಿತಿದ್ದು ಎಡಗೈನಲ್ಲಿ ಕುದುರೆಯ ಜೀನನ್ನು, ಬಲಗೈನಲ್ಲಿ ಉದ್ದವಾದ ಖಡ್ಗವನ್ನು ಹಿಡಿದಿದ್ದಾನೆ. ಕುದುರೆಯ ಹಿಂಭಾಗದಲ್ಲಿ ಆತನ ಪತ್ನಿಯು ಕೈಮುಗಿದು ನಿಂತಿದ್ದಾಳೆ. ಕುದುರೆಯ ಮುಂಭಾಗದಲ್ಲಿ ಕುದುರೆಯ ಜೀನಗನ್ನು ಹಿಡಿದು ಒಬ್ಬ ಸೇವಕನು ನಿಂತಿದ್ದಾನೆ. ಅಲಂಕೃತವಾದ ಕುದುರೆಯು ಸಮಭಂಗಿಯಲ್ಲಿ ನಿಂತಿದ್ದು. ವೀರನು ಕಿವಿಯಲ್ಲಿ ರುದ್ರಾಕ್ಷಿಓಲೆ, ಕೊರಳಲ್ಲಿ ಹಾರ, ತೋಳುಬಂಧಿ, ಕೈಕಡಗ, ಸೊಂಟದಲ್ಲಿ ವೀರಗಚ್ಚೆ ತೊಟ್ಟಿದ್ದಾನೆ. ಈ ಶಿಲ್ಪವನ್ನು ಬಿಳಿಯ ಕಲ್ಲಿನಲ್ಲಿ ಖಂಡರಿಸಲಾಗಿದೆ.

ಪ್ರಾಣಿ ಬೇಟೆ ವೀರಗಲ್ಲು ಶಿಲ್ಪ

ಪ್ರಾಚೀನ ಕರ್ನಾಟಕದಲ್ಲಿ ಪ್ರಚಲಿತವಿದ್ದ ಬೇಟೆಯ ವಿವರಗಳನ್ನು ತಿಳಿಯಲು ಇರುವ ಆಕಾರಗಳೆಂದರೆ ವೀರಗಲ್ಲುಗಳು. ಮಾನವನು ಬೇಟೆಯಾಡುವುದು ಬಹಳ ಪುರಾತನ ಕಾಲದಿಂದ ಬಂದ ಪದ್ಧತಿಯಾಗಿದೆ. ಪ್ರಾಣಿಗಳ ಮಾಂಸಕ್ಕಾಗಿ ಕೆಲವರು ಬೇಟೆಯಾಡಿದರೆ, ಮತ್ತೆ ಕೆಲವರು ಮೋಜಿಗಾಗಿ ಅಥವಾ ಕಾರ್ಯ ಪ್ರದರ್ಶನಕ್ಕಾಗಿ ಬೇಟೆಯಾಡುತ್ತಿದ್ದರು. ಕೆಲವು ಪ್ರಾಣಿಗಳು ಊರಿಗೆ ನುಗ್ಗಿ ಜನರಿಗೆ, ದನಗಳಿಗೆ ತೊಂದರೆ ಕೊಡುವುದಲ್ಲದೇ, ಬೆಳೆದ ಬೆಳೆಗಳನ್ನು ನಾಶ ಪಡಿಸುತ್ತಿದ್ದವು. ಇಂತಹ ಪ್ರಾಣಿಗಳ ಕಾಟವನ್ನು ತಡೆಯಲಾಗದೆ ಅದನ್ನು ಬೇಟೆಯಾಡಿ ಕೊಂದು ಹಾಕಲು ಹೋಗಿ ತಾವೇ ಮರಣವನ್ನಪ್ಪಿದ ಘಟನೆಗಳನ್ನು ತಿಳಿಸುವುದೇ ವೀರಗಲ್ಲುಗಳು.[೫೬] ಈ ರೀತಿಯ ವೀರಗಲ್ಲುಗಳು ಐಮಂಗಲದ ಕಲ್ಲುಂಟೇಶ್ವರಿ ದೇವಾಲಯದ ಆವರಣದಲ್ಲಿ ದೊರೆತಿವೆ. ವೀರನೊರ್ವನು ತನ್ನ ಬಲಗೈನಲ್ಲಿ ಕೊಡಲಿ. ಎಡಗೈನಲ್ಲಿ ಕತ್ತಿಯನ್ನು ಹಿಡಿದಿದ್ದು ತನ್ನ ಮೈ ಮೇಲೆ ಎರಗುತ್ತಿರುವ ಹುಲಿಯೊಂದನ್ನು ಕೊಲ್ಲುತ್ತಿರುವಂತೆ ಚಿತ್ರಿಸಲಾಗಿದೆ. ಈತನ ಅಕ್ಕಪಕ್ಕದಲ್ಲಿ ಜಿಂಕೆಗಳು ಸುತ್ತುವರೆದಿವೆ. ವೀರನು ತನ್ನ ತಲೆಗೆ ತುರುಬಾಗಿ ಕಟ್ಟಿಕೊಂಡಿದ್ದು ಕೊರಳಲ್ಲಿ ಹಾರ, ತೋಳುಬಂಧಿ, ಕೈಕಡಗ, ಸೊಂಟದಲ್ಲಿ ವೀರಗಚ್ಚೆ ಕಟ್ಟಿಕೊಂಡಿದ್ದಾನೆ.

ಈ ದೇವಾಲಯದ ಆವರಣದಲ್ಲಿ ಮತ್ತೊಂದು ವೀರಗಲ್ಲು ದೊರೆತಿದ್ದು. ವೀರನು ತನ್ನ ಎಡಗೈಯಲ್ಲಿ ಬಿಲ್ಲನ್ನೂ, ಬಲಗೈಯಲ್ಲಿ ಬಾಣವನ್ನು ಹಿಡಿದಿದ್ದಾನೆ. ಹೆಗಲಿಗೆ ಬತ್ತಳಿಕೆಯನ್ನು ಕಟ್ಟಿಕೊಂಡು ಅದರಲ್ಲಿ ಬಾಣಗಳನ್ನು ಶೇಖರಿಸಿಕೊಂಡಿದ್ದಾನೆ. ಈ ವೀರನ ಎಡ ಮತ್ತು ಬಲ ಭಾಗದಲ್ಲಿ ಜಿಂಕೆಯ ಉಬ್ಬು ಶಿಲ್ಪಗಳಿವೆ. ವೀರನು ಕೊರಳಲ್ಲಿ ಹಾರ, ತೋಳುಬಂಧಿ, ಕೈಕಡಗ, ಸೊಂಟದಲ್ಲಿ ವೀರಗಚ್ಚೆ ಕಟ್ಟಿಕೊಂಡಿದ್ದಾನೆ. ಈ ಶಿಲ್ಪವನ್ನು ಬಿಳಿಯ ಶಿಲೆಯಲ್ಲಿ ಖಂಡರಿಸಲಾಗಿದೆ. ಈ ಶಿಲ್ಪದ ಕಾಲಮಾನ ಕ್ರಿ.ಶ.ಸು. ೧೫-೧೬ನೇ ಶತಮಾನಗಳಿಗೆ ಸೇರಿದ ವೀರಗಲ್ಲು ಎನ್ನಬಹುದು.

ವೀರ ಮಾಸ್ತಿಗಲ್ಲು ಶಿಲ್ಪ

ತವಂದಿ ಗ್ರಾಮದ ವೀರ-ಮಾಸ್ತಿಗಳಲ್ಲೊಂದು[೫೭] ವಿಶಿಷ್ಟದ್ದಾಗಿದೆ. ಅಗಲವಾದ (ಆಯತಾಕಾರ) ಈ ಶಿಲ್ಪದಲ್ಲಿ ಮೂರು ಹಂತಗಳಿದ್ದು ಮೂರು ಸಾಲುಗಳುಳ್ಳ ಚಿತ್ರಗಳಿವೆ. ಮೊದಲನೆಯ ಹಂತದಲ್ಲಿ ಕುದುರೆ ಸವಾರಿ ಮಾಡುವ ವೀರನಿಗೆ ಸೇವಕ ಛತ್ರಿಯನ್ನು ಹಿಡಿದು ಅವನ ಹಿಂದೆ ಸಾಗುತ್ತಿರುವನು. ಸವಾರನು ಹಿಡಿದ ಉದ್ದವಾದ ಈಟಿಯನ್ನು ವೈರಿಗೆ ಇರಿಯಲು ರಭಸದಿಂದ ಕುದುರೆಯನ್ನು ಓಡಿಸುತ್ತಿರುವನು. ಕುದುರೆ ಇಳಿದು ಅವನು ಬಿಲ್ಲನ್ನು ಮುಂದಕ್ಕೆ

ಜಾತಿ ಬಾಣ ಪ್ರಯೋಗಿಸಲು ಓಡುತ್ತಿರುವನು. ಆತನ ಮುಂದೆ ಅವನ ಕುದುರೆ ನಿಂತುಕೊಂಡಿದೆ. ಅದಕ್ಕೆ ಝಲ್ಲು ಕಡಿವಾಣಗಳನ್ನು ಧರಿಸಲಾಗಿದೆ. ಕುದುರೆಯ ಮುಂದೆ ನಿಂತ ವೀರನು, ವೈರಿಯೂ ಸಹ ತನ್ನ ಕುದುರೆಯಿಂದ ಇಳಿದುಬಂದು ಕೈ ಕೈ ಹಿಡಿದು ಹೋರಾಡುತ್ತಿರುವರು. ಈ ಹೋರಾಟ ಇಬ್ಬರ ಕುದುರೆಗಳ ಮಧ್ಯೆ ನಡೆಯುತ್ತಿದೆ. ಎರಡನೇ ಹಂತದಲ್ಲಿ ಏಳು ಮಂದಿ ಸತಿಯರು ತಮ್ಮ ಎರಡೂ ಕೈಗಳನ್ನು ಮೇಲಕ್ಕೆತ್ತಿಕೊಂಡು ಕುದುರೆ ಮೇಲೆ ಕುಳಿತು ಹೋಗುತ್ತಿರುವರು. ನಂತರ ಈ ಸತಿಯರು ತಮ್ಮ ತಮ್ಮ ಕುದುರೆಗಳಿಂದ ಕೆಳಕ್ಕೆ ಇಳಿದು ಒಬ್ಬರಿಗೊಬ್ಬರು ಬೆನ್ನ ಮೇಲೆ ಕೈಯನ್ನು ಹಾಕಿಕೊಂಡು ಚಿತೆಯ ಕಡೆಗೆ ಹೋಗುತ್ತಿರುವರು. ಇಲ್ಲಿ ಮೊದಲಿಬ್ಬರು ತಮ್ಮ ತಮ್ಮ ಬಲಗೈಯನ್ನು ಮೇಲಕ್ಕೆತ್ತಿ ಹಿಡಿದಿದ್ದಾರೆ. ಮೊದಲನೆಯವಳು ಇನ್ನಿತರರಂತೆ ಯಾರ ಕೈಯನ್ನೂ ಹಿಡಿದಿಲ್ಲ. ಅವರ ಮುಂದೆ ಎತ್ತರವಾದ ವೇದಿಕೆ(ಕಟ್ಟೆ)ಯಿದ್ದು ಅದರ ಮುಂದೆ ಉರಿಯುವ ಚಿತೆಯಿದೆ. ಈ ಕಟ್ಟೆ ಮತ್ತು ಚಿತೆಯ ಎಡಕ್ಕೆ ಬಾಳೆಗಿಡಗಳನ್ನು ನಿಲ್ಲಿಸಿ ಅಲಂಕಾರ ಮಾಡಲಾಗಿದೆ. ಈ ಕಟ್ಟೆಯ ಮೇಲೆ ಒಬ್ಬ ಸತಿಯು ತನ್ನೆರಡೂ ಕೈಗಳನ್ನು ಎತ್ತಿ ನೃತ್ಯದಿಂದ ಚಿತೆಗೆ ಹಾರಲು ತಯಾರಾಗಿರುವುದು ಕಾಣುತ್ತದೆ. ಮೂರನೇ ಹಂತದ ಒಂದೇ ಸಾಲಿನಲ್ಲಿ ಈ ಏಳು ಮಂದಿ ಸತಿಯರೂ ಪದ್ಮಾಸನದಲ್ಲಿ ಕೈ ಮುಗಿದು ಸಾಲಾಗಿ ಕುಳಿತಿದ್ದಾರೆ. ಅವರ ಮುಂದೆ ಶಿವಲಿಂಗಕ್ಕೆ ಮುಖ ಮಾಡಿ ನಂದಿ ಕುಳಿತಿದೆ. ಮುಂದೆ ವೀರ ಕೈಮುಗಿದು ಈ ದೇವರ ಸಾನಿಧ್ಯದ ಕೊನೆಯಲ್ಲಿ ಕುಳಿತಿರುವನು. ಈ ವೀರ-ಸತಿಗಲ್ಲಿನ ಎತ್ತರ ೬ ಅಡಿಗಳು. ಅಗಲ ೯ ಅಡಿಗಳು. ಈ ಶಿಲ್ಪವನ್ನು ಕಪ್ಪು ಶಿಲೆಯಲ್ಲಿ ಕ್ರಿ.ಶ.ಸು. ೧೫-೧೬ನೇ ಶತಮಾನದಲ್ಲಿ ಖಂಡರಿಸಿರಬಹುದು.

ಮೇಟಿಕುರ್ಕೆ ಹಿಮರೆಡ್ಡಿ ಮಲ್ಲಮ್ಮ ದೇವಾಲಯದ ಆವರಣದಲ್ಲಿ ವೀರ-ಮಾಸ್ತಿಗಲ್ಲೊಂದು ದೊರೆತಿದ್ದು ಇದು ಐದು ಹಂತಗಳನ್ನು ಒಳಗೊಂಡಿದೆ. ಮೊದಲನೆಯ ಹಂತವು ಮಣ್ಣಿನಲ್ಲಿ ಹೂತಿದ್ದು ಅದರ ಭಾಗಗಳು ಗೋಚರಿಸುವುದಿಲ್ಲ. ಎರಡನೇ ಹಂತದಲ್ಲಿ ಮೂರು ಜನ ವೀರರು ವೈರಿಗಳ ಮೇಲೆ ಬಾಣ ಪ್ರಯೋಗ ಮಾಡುತ್ತಿದ್ದಾರೆ. ಎದುರಿನಲ್ಲಿರುವ ಮೂರು ಜನ ವೈರಿಗಳು ಕತ್ತಿ, ಗುರಾಣಿಗಳನ್ನು ಹಿಡಿದು ಹೊಡೆಯಲು ಮುಂದಾಗುತ್ತಿರುವಂತೆ ತೋರುತ್ತದೆ. ಮೂರನೇ ಹಂತದಲ್ಲಿ ವೀರನು ಭರ್ಚಿಯನ್ನು ಹಿಡಿದು ವೈರಿಯ ಜೊತೆ ಹೋರಾಡುತ್ತಿರುವಂತೆ ಚಿತ್ರಿಸಲಾಗಿದೆ. ವೀರನ ಹಿಂದೆ ಸೇವಕನಿದ್ದು ಛತ್ರಿ ಹಿಡಿದಿದ್ದಾನೆ. ಮತ್ತೊಬ್ಬ ವೀರನು ಭರ್ಚಿಯನ್ನು ಹಿಡಿದು ಪರಸ್ಪರ ಹೊಡೆದಾಡುತ್ತಿರುವಂತೆ ಚಿತ್ರಿಸಲಾಗಿದೆ. ಈತನ ಹಿಂದೆ ಛತ್ರಿ ಹಿಡಿದು ನಿಂತ ಸೇವಕನಿದ್ದಾನೆ. ನಾಲ್ಕನೇ ಹಂತದಲ್ಲಿ ಇಬ್ಬರು ಸತಿಯರನ್ನು ಪಲ್ಲಕ್ಕಿಯ ಮೇಲೆ ಹೊತ್ತು ತರುವಂತಿದೆ. ಆ ಇಬ್ಬರು ಸತಿಯರು ಕಳಶ-ಕನ್ನಡಿ ಹಿಡಿದು ನಿಂತಿದ್ದಾರೆ. ನಂತರ ಎತ್ತರವಾದ ಕಟ್ಟೆ(ವೇದಿಕೆ) ಮೇಲೆ ಇಬ್ಬರು ಸತಿಯರು ತಮ್ಮ ಬಲಗೈಯನ್ನು ಮೇಲೆ ಎತ್ತಿ ನಿಂತಿದ್ದಾರೆ. ಮುಂದೆ ಉರಿಯುವ ಚಿತೆಯಿದೆ. ಈ ಕಟ್ಟೆ ಮತ್ತು ಚಿತೆಯ ಎಡಕ್ಕೆ ಬಾಳೆಗಿಡಗಳನ್ನು ನಿಲ್ಲಿಸಿ ಅಲಂಕಾರ ಮಾಡಲಾಗಿದೆ. ಐದನೇ ಹಂತದಲ್ಲಿ ಇಬ್ಬರು ಸತಿಯರು ಕೈ ಮುಗಿದು ಪದ್ಮಾಸನದಲ್ಲಿ ಕುಳಿತಿದ್ದು, ಇವರ ಮುಂದೆ ವೀರನು ಕೈಮುಗಿದು ಮಂಡಿಯೂರಿ ಕುಳಿತಿದ್ದಾನೆ. ಇವರ ಮುಂದೆ ಮಲಗಿರುವ ಬಸವಣ್ಣವಿದೆ. ನಂತರ ಶಿವಲಿಂಗ ಇದ್ದು ಒಬ್ಬ ಯತಿಯು ಎಡಗೈನಲ್ಲಿ

ಗಂಟೆ. ಬಲಗೈನಲ್ಲಿ ಧೂಪದಾರತಿ ಹಿಡಿದು ಪೂಜೆ ಮಾಡುತ್ತಿರುವಂತೆ, ಈತನ ಹಿಂಭಾಗದಲ್ಲಿ ಎತ್ತರದ ಕಟ್ಟೆಯಲ್ಲಿ ವೀರನು ಕುಳಿತಿದ್ದಾನೆ. ಈ ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ-ಚಂದ್ರ ಉಬ್ಬು ಶಿಲ್ಪಗಳಿವೆ. ಈ ಶಿಲ್ಪವನ್ನು ಕಪ್ಪುಶಿಲೆಯಲ್ಲಿ ಖಂಡರಿಸಲಾಗಿದ್ದು, ಎತ್ತರ ೬ ಅಡಿಗಳು. ಅಗಲ ೩೧/೨ ಅಡಿಗಳು. ಈ ಶಿಲ್ಪದ ಕಾಲ ಸು.ಕ್ರಿ.ಶ. ೧೫-೧೬ನೇ ಶತಮಾನ.

ಪರ್ತಿಕೋಟೆಯ ಅಹೋಬಲ ನರಸಿಂಹನ ಗುಡಿಯ ಮುಂದಿರುವ ವೀರ-ಮಾಸ್ತಿಗಲ್ಲನ್ನು[೫೮] ಬಿಳಿಯ ಗ್ರಾನೈಟ್ ಶಿಲೆಯಲ್ಲಿ ಕೆತ್ತಲಾಗಿದ್ದು ೨.೬ ಅಡಿ ಉದ್ದಗಲದ ಈ ವೀರ-ಸತಿಗಲ್ಲು ಶಿಲ್ಪಕಲಾ ದೃಷ್ಟಿಯಿಂದ ವೈಶಿಷ್ಟ್ಯಪೂರ್ಣವಾದುದು. ಅಲಂಕೃತವಾದ ಕುದುರೆಯನ್ನೇರಿರುವ ವೀರನೊಬ್ಬನು ತನ್ನ ಎಡಗೈಯಲ್ಲಿ ಕುದುರೆಯ ಕಡಿವಾಣವನ್ನಿಡಿದು ಮೇಲೆತ್ತಿದ ಬಲಗೈಯಲ್ಲಿ ಉದ್ದನೆಯ ಈಟಿಯನ್ನು ಹಿಡಿದಿದ್ದಾನೆ. ಅವನ ಬೆನ್ನಿಗೆ ಅಂಟಿಕೊಂಡಂತೆ ಈರ್ವರು ಪತ್ನಿಯರು ಕುದುರೆಯನ್ನೇರಿ ಕುಳಿತಿದ್ದಾರೆ. ಅವರಿರ್ವರು ತಮ್ಮ ತಮ್ಮ ಬಲ ಅಸ್ತ್ರಗಳಲ್ಲಿ ಕನ್ನಡಿಗಳನ್ನು ಹಿಡಿದಿರುವರು. ಈ ಮೂರು ಮಂದಿಯು ಪ್ರತಿಷ್ಠಿತರೆಂಬುದನ್ನು ಸೂಚಿಸುವ ಸಲುವಾಗಿ ಶಿಲ್ಪಿಯು ಕುದುರೆಯ ಹಿಂಭಾಗದಲ್ಲಿ ಧ್ವಜವನ್ನು ಹಿಡಿದಿರುವ ವ್ಯಕ್ತಿಯನ್ನು, ಮುಂಭಾಗದಲ್ಲಿ ಚಾಮರಧಾರಿ ವ್ಯಕ್ತಿಯನ್ನು ಚಿತ್ರಿಸಿದ್ದಾನೆ. ಬಲ ಮುಂಗಾಲನ್ನೆತ್ತಿ, ಬಾಯ್ದೆರೆದು, ಮುಂದಕ್ಕೆ ಧಾವಿಸುತ್ತಿರುವಂತೆ ಚಿತ್ರಿತವಾಗಿರುವ ಕುದುರೆಯು ಆಭರಣಯುಕ್ತವಾಗಿದೆ. ಇದು ಕ್ರಿ.ಶ.ಸು. ೧೫-೧೬ನೇ ಶತಮಾನಗಳಿಗೆ ಸೇರಿದ ವೀರ-ಸತಿಗಲ್ಲು ಎಂದು ಹೇಳಬಹುದು. ಈ ಶಿಲ್ಪದ ಮೇಲ್ಭಾಗದಲ್ಲಿ ಕೆತ್ತಲಾಗಿರುವ ಬರಹವು ಕನ್ನಡ ಲಿಪಿ, ತೆಲಗು ಭಾಷೆಯಲ್ಲಿದೆ. ಈ ವೀರ-ಮಾಸ್ತಿಗಲ್ಲಿನಲ್ಲಿರುವ ಬರಹ ಇದು; "ಪೂ(ಚಿ)ಜಾರಿ ಬಿಕಯಕೊಮರುಡು ಬೀರೇದ". ಪೂಜಾರಿ ಬಿ(ಚಿ)ಕ್ಕಯನ ಮಗ ಬೀರೇದನೆಂಬವನ ನೆನಪನ್ನು ಈ ಶಾಸನ ಸಾರುತ್ತದೆ.[೫೯]

ವದ್ದೀಕೆರೆ ಸಿದ್ಧೇಶ್ವರ ದೇವಾಲಯದ ಆವರಣದಲ್ಲಿರುವ ವೀರ-ಮಾಸ್ತಿಗಲ್ಲು ದೊರೆತಿದ್ದು. ಇದರ ಎತ್ತರ ೫ ಅಡಿಗಳು, ಅಗಲ ೨.೫ ಅಡಿಗಳು. ವೀರನೊರ್ವನು ತನ್ನ ಕಂಕುಳಲ್ಲಿ ಕತ್ತಿಯನ್ನು ಇಟ್ಟುಕೊಂಡಿದ್ದು ಬಲಭಾಗದ ಕೈಯನ್ನು ನೇರವಾಗಿ ಇಳಿಬಿಟ್ಟಿದ್ದಾನೆ. ಕಿವಿಯಲ್ಲಿ ರುದ್ರಾಕ್ಷಿ ಓಲೆ, ಕೊರಳಹಾರ, ತೋಳಬಂಧಿ, ಕೈಕಡಗ, ಸೊಂಟದ ಮೇಲೆ ವೀರಗಚ್ಚೆಯನ್ನು ಕಟ್ಟಿಕೊಂಡಿದ್ದಾನೆ. ಎರಡು ಕಾಲುಗಳಿಗೂ ಕಡಗವನ್ನು ಹಾಕಿಕೊಂಡಿದ್ದಾನೆ. ಈ ವೀರನ ಎಡಭಾಗದಲ್ಲಿ ಸತಿಯು ಕನ್ನಡಿ, ನಿಂಬೆಹಣ್ಣು ಹಿಡಿದು ಬಲಗೈಯನ್ನು ಮೇಲಕ್ಕೆತ್ತಿ ನಿಂತಿದ್ದಾಳೆ. ಇವರಿರ್ವರ ತಲೆಗಳ ಬಳಿಯಲ್ಲಿ ಸೂರ್ಯ-ಚಂದ್ರವನ್ನು ಕೆತ್ತಲಾಗಿದೆ. ಈ ಶಿಲ್ಪವನ್ನು ಬಿಳಿ ಶಿಲೆಯಲ್ಲಿ ಕೆತ್ತಲಾಗಿದ್ದು, ಇದರ ಕಾಲ ಕ್ರಿ.ಶ.ಸು. ೧೫-೧೬ನೇ ಶತಮಾನಕ್ಕೆ ಸೇರಿದ ವೀರ-ಸತಿಗಲ್ಲು ಆಗಿರಬೇಕು.

ಮಹಾಸತಿಕಲ್ಲು ಶಿಲ್ಪ

ಪ್ರಾಚೀನ ಭಾರತೀಯ ಜನರಲ್ಲಿ ನಂಬಿಕೆ ಅಪಾರ ಪ್ರಮಾಣದಲ್ಲಿ ಬೇರೂರಿತ್ತು. ಪರಲೋಕದ ಕಲ್ಪನೆಯಲ್ಲಿ ನಂಬಿಕೆ ಇಟ್ಟ ಜನರು ಮರಣ ಹೊಂದಿದ ವ್ಯಕ್ತಿಯ ಜೊತೆಯಲ್ಲಿ ಅವನಿಗಿಷ್ಟವಾದ ಕೆಲವು ವಸ್ತುಗಳನ್ನು ಕಳುಹಿಸಿಕೊಡುವ ಸಂಪ್ರದಾಯವನ್ನು ರೂಢಿಸಿಕೊಂಡರು. ನಮ್ಮ ಪುರಾತನ

ಸಮಾಧಿಗಳನ್ನು ತೆರೆದಾಗ ಕುಡಿಕೆ, ಆಭರಣಗಳು ದೊರೆತಿವೆ. ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ವ್ಯಕ್ತಿ ಸತ್ತಾಗ ಅವನಿಗಿಷ್ಟವಾದ ವಸ್ತುಗಳನ್ನು ಸಮಾಧಿಯ ಮುಂದಿಟ್ಟು ಪೂಜಿಸುವುದನ್ನು ಕಾಣುತ್ತೇವೆ.[೬೦] ಈ ಭಾವನೆಯೇ ಮಾಸ್ತಿ ಪರಂಪರೆಗೆ ದಾರಿ ಮಾಡಿಕೊಟ್ಟಿರಬಹುದು. ಪುರುಷನ ಅತ್ಯಂತ ಪ್ರಿಯವಾದ ವಸ್ತುಗಳಲ್ಲಿ ಆತನ ಪತ್ನಿಯೂ ಒಬ್ಬಳು. ತಾನು ಮರಣ ಹೊಂದಿದ ನಂತರ ತನ್ನ ಪತ್ನಿ ತನ್ನಿಂದ ಅಗಲಿರಬಾರದೆಂಬ ಭ್ರಮೆಯಿಂದಲೋ ಅಥವಾ ಅವಳು ಮತ್ತೊಬ್ಬನ ವಶವರ್ತಿಯಾಗಿರಬಾರದೆಂಬ ಕಲ್ಪನೆಯಿಂದಲೋ ತಾನೂ ಹೋದಾಗ ತನ್ನೊಡನೆ ಅವಳನ್ನು ಕರೆದೊಯ್ಯುವಂತೆ ಮಾಡಿದ ವ್ಯವಸ್ಥೆ ಎಂದು ಹೇಳಬಹುದು.[೬೧]

ಈ ಪದ್ಧತಿಯ ಆರಂಭದ ಕಾಲವನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟಸಾಧ್ಯದ ಮಾತೇ ಸರಿ. ವಿದ್ವಾಂಸರಲ್ಲಿ ನಿಖರವಾದ ಅಭಿಪ್ರಾಯಗಳಿಲ್ಲ. ಇಂತಹ ಪದ್ಧತಿಯು ಕೇವಲ ಭಾರತದಲ್ಲಿ ಅಷ್ಟೇ ಅಲ್ಲದೇ ಪ್ರಪಂಚದ ನಾಗರೀಕತೆಗಳಾದ ಈಜಿಪ್ಟ್, ಸುಮೇರಿಯಾ, ಗ್ರೀಕ್, ಚೀನಿಯರಲ್ಲಿಯೂ ಆಚರಣೆಯಲ್ಲಿತ್ತು. ಮಹಾಭಾರತದಲ್ಲಿ ಸತಿಪದ್ಧತಿಯ ಉಲ್ಲೇಖವಿದೆ. ಪಾಂಡು ರಾಜನ ಮರಣದ ನಂತರ ಆತನ ಕಿರಿಯ ರಾಣಿ ಮಾದ್ರಿ, ಅಕ್ಕ ಕುಂತಿಗೆ ಈ ರೀತಿ ಹೇಳುತ್ತಾಳೆ. ಅಕ್ಕ ನಾನು ಪತಿಯೊಡನೆ ಚಿತೆಯೇರುತ್ತೇನೆ. 'ಐವರು ಮಕ್ಕಳ ಭಾರವು ನಿನ್ನದೇ' ಎಂದು ಹೇಳಿದಾಗ ಕುಂತಿಯು ಕರಳು ಕಿತ್ತು ಬರುವಂತೆ ರೋಧಿಸುತ್ತಾಳೆ. ವೈಧವ್ಯದ ಬಾಳು ಬಾಳೆ? ಏಕೆ ಈ ಬಾಳು ಎಂದು ಕುಂತಿ ಚಿಂತಿಸಿದಳು. ಮಕ್ಕಳ ಉಳುವಿಗಾಗಿ ಕಷ್ಟ, ನಿಷ್ಠುರಗಳನ್ನು ಸಹಿಸಿ ಮಕ್ಕಳ ಪೋಷಣೆಗೆ ನಿಂತರೆ ಮಾತ್ರ ಚಿತೆಯೇರಿ[೬೨] ಸತಿಸಾಧ್ವಿಯಾಗುತ್ತಾಳೆ.

ಸತಿ ಆಚರಿಸುವವಳು ಮೊದಲು ಎಣ್ಣೆ, ಅರಿಶಿಣ ಹಚ್ಚಿಕೊಂಡು ಪುಷ್ಪಾಲಂಕಾರಳಾಗಿ ಹಳದಿ ಸೀರೆಯನ್ನುಟ್ಟು ಕೈಯಲ್ಲಿ ನಿಂಬೆಯ ಹಣ್ಣನ್ನು ಹಿಡಿದು, ಉದಾರ ಮಹಾಜನರ ಸಮ್ಮುಖದಲ್ಲಿ ಮನೆ ಮನೆಗೆ ಕಾಲುನಡಿಗೆಯಿಂದ ಹೋಗಿ ಕೋರೊಟ ಮಾಡಿ ಅಗ್ನಿ ಪ್ರವೇಶಿಸುವ ಮೊದಲು ತನ್ನ ಬಲಗೈಯನ್ನು ಕಲ್ಲಿನ ಮೇಲೆ ಒತ್ತಿ, ಮೈಮೇಲಿನ ಆಭರಣಗಳನ್ನು ದಾನ ಮಾಡಿ, ಎಣ್ಣೆಯಲ್ಲಿ ಮುಖ ನೋಡಿ, ನೋಡುಗರತ್ತ ಕೈಬಿಸುತ್ತಾ ಮಂಗಳವಾದ್ಯಗಳು ಮೊಳಗುತ್ತಿದ್ದರೆ ಕರ್ಪೂರ ಕಟ್ಟಿಗೆಗಳಿಂದ ಬೆಂಕಿಯಲ್ಲಿ ಚಿತೆ ಏರುತ್ತಿದ್ದಳು. ಹೀಗೆ ಬೆಂಕಿಯಲ್ಲಿ ಬಿದ್ದು ಸಾಯುವ ಕ್ರಿಯೆ ಸತಿ ಆಚರಣೆಯಲ್ಲಿತ್ತು.[೬೩]

ಒಟ್ಟಿನಲ್ಲಿ ಗಂಡ ಸತ್ತ ಮೇಲೆ ಆತನ ಜೊತೆ ಪ್ರಾಣ ತ್ಯಾಗ ಮಾಡುವ ಸ್ತ್ರೀಯರನ್ನು 'ಮಹಾಸತಿ' ಅಥವಾ 'ಮಾಸ್ತಿ' ಎಂದು ಕರೆಯುತ್ತಿದ್ದರು. ಮಾಸ್ತಿ ಎಂಬುದು ಸಂಸ್ಕೃತ ಭಾಷೆಯ ಮಹಾಸತಿ ಎಂಬ ಪದದ ಸಂಕ್ಷಿಪ್ತ ರೂಪ ಸಹಗಮನವನ್ನು ಮಾಡಿ ಮಹಾಸತಿ ಆದವರ ಸ್ಮಾರಕವಾಗಿ ನಿಲ್ಲಿಸಿದ ಕಲ್ಲುಗಳೇ ಮಾಸ್ತಿಕಲ್ಲುಗಳು. ಇಂತಹ ಮಾಸ್ತಿಕಲ್ಲುಗಳು ಐಮಂಗಲ ಪರಿಸರದ ಮರಡಿಹಳ್ಳಿ, ತವಂದಿ, ಮರಡಿದೇವಿಗೆರೆ, ಮಲ್ಲಪ್ಪನಹಳ್ಳಿಯಲ್ಲಿ ದೊರೆತಿವೆ. ಅವುಗಳ ವಿವರಣೆ ಕೆಳಗಿನಂತಿದೆ.

ಮಲ್ಲಪ್ಪನಹಳ್ಳಿ ರಂಗನಾಥ ದೇವಾಲಯದ ಆವರಣದಲ್ಲಿ ದೊರೆತಿರುವ ಮಾಸ್ತಿಗಲ್ಲು ಕಪ್ಪು ಶಿಲೆಯಲ್ಲಿದೆ. ಸತಿಗಲ್ಲಿನ ಎತ್ತರ ೪ ಅಡಿಗಳು, ಅಗಲ ೨ ಅಡಿಗಳು, ಸತಿಯು ತನ್ನ

ಬಲಗೈಯನ್ನು ಮೇಲೆ ಎತ್ತಿದ್ದು ಎಡಗೈನಲ್ಲಿ ನಿಂಬೆಹಣ್ಣು ಹಿಡಿದು ಪದ್ಮಾಸನದಲ್ಲಿ ಕುಳಿತಿದ್ದಾಳೆ. ಈಕೆಯು ತಲೆಯ ಕೂದಲಿಗೆ ಅಲಂಕಾರಿಕ ಹೂವಿನ ತುರುಬಾಗಿ ಕಟ್ಟಿಕೊಂಡಿದ್ದಾಳೆ. ಕಿವಿಯಲ್ಲಿ ಅಗಲವಾದ ತಟ್ಟೆಯಾಕಾರದ ಓಲೆ, ಕೊರಳಹಾರ, ತೋಳಬಂಧಿ, ಕೈಕಡಗ, ಸೊಂಟದ ಮೇಲೆ ವೀರಗಚ್ಚೆಯನ್ನು ಕಟ್ಟಿಕೊಂಡಿದ್ದಾಳೆ. ಈ ಶಿಲ್ಪ ಕ್ರಿ.ಶ.ಸು. ೧೬-೧೭ನೇ ಶತಮಾನದ ಮಾಸ್ತಿಗಲ್ಲು ಆಗಿರಬಹುದು.

ಮರಡಿದೇವಿಗೆರೆ ಕೋಡಿಮಲ್ಲೇಶ್ವರ ದೇವಾಲಯದ ಆವರಣದಲ್ಲಿ ಕರಿ ಕಲ್ಲಿನಲ್ಲಿ ಖಂಡರಿಸಲಾದ ಸತಿಗಲ್ಲು ಇದೆ. ಇದು ೨ ಅಡಿ ಉದ್ದಗಲ ಹೊಂದಿದ್ದು, ಸತಿಯು ಬಲಗೈನಲ್ಲಿ ಗದೆ, ಎಡಗೈನಲ್ಲಿ ನಿಂಬೆಹಣ್ಣು ಹಿಡಿದು ಪದ್ಮಾಸನದಲ್ಲಿ ಕುಳಿತಿದ್ದಾಳೆ. ಉಳಿದಂತೆ ಸತಿಯು ತನ್ನ ಕೂದಲಿಗೆ ಹೂವಿನ ತುರುಬಾಗಿ ಕಟ್ಟಿಕೊಂಡಿದ್ದು, ಕೊರಳಲ್ಲಿ ಹಾರ, ತೋಳಬಂಧಿ, ಕೈಕಡಗ, ಸೊಂಟದಲ್ಲಿ ವೀರಗಚ್ಚೆ ತೊಟ್ಟಿದ್ದಾಳೆ. ಈ ಶಿಲ್ಪದ ಕಾಲ ಕ್ರಿ.ಶ.ಸು. ೧೬-೧೭ನೇ ಶತಮಾನದ ಶಿಲ್ಪ ಆಗಿರಬಹುದು.

೪.೪. ಲೌಕಿಕ ವಾಸ್ತುಶಿಲ್ಪ

ಐಮಂಗಲ ಪ್ರದೇಶವನ್ನಾಳಿದ ನೊಳಂಬರು ಮತ್ತು ಪಾಳೇಗಾರರ ಕಾಲದಲ್ಲಿ ಧಾರ್ಮಿಕ ಕಟ್ಟಡಗಳಂತೆ ಕೆಲವು ಲೌಕಿಕ ಸ್ಮಾರಕಗಳೂ ನಿರ್ಮಾಣವಾಗಿವೆ.[೬೪] ಅವುಗಳಲ್ಲಿ ಕೋಟೆಗಳು, ಅರಮನೆಗಳು, ಬಾವಿ, ಪುಷ್ಕರಣಿ, ಗರಡಿಮನೆ, ಬೊಂಬೆಚಾವಡಿ ಮುಂತಾದವು ಪ್ರಮುಖವಾಗಿವೆ. ಚಿತ್ರದುರ್ಗ ಪಾಳೆಗಾರರು ಚಿತ್ರದುರ್ಗ ಕೋಟೆ ಸಹಿತ ಮೊಳಕಾಲ್ಮೂರು ಕೋಟೆ, ಬ್ರಹ್ಮಗಿರಿ ಕೋಟೆ, ಐಮಂಗಲ ಕೋಟೆ,[೬೫] ಜಟಂಗರಾಮೇಶ್ವರ ಕೋಟೆ, ವೇಣುಕಲುಗುಡ್ಡ ಕೋಟೆ. ಹೊಸದುರ್ಗ ಕೋಟೆ ಮುಂತಾದ ಕೋಟೆಗಳನ್ನು ನಿರ್ಮಿಸಿದ್ದಾರೆ. ಈ ಕೋಟೆಗಳು ದಿಂಡುಗಲ್ಲಿನಿಂದ ನಿರ್ಮಿಸಿದ ಕೋಟೆಗಳು. ಬೃಹತ್ ಕಲ್ಲುಗಳಿಂದ, ಚಿಕ್ಕ ಚಿಕ್ಕ ಚಕ್ಕೆ ಕಲ್ಲುಗಳಿಂದ, ಒರಟು ಕಲ್ಲಿನಿಂದ ಹಾಗೂ ಮಣ್ಣಿನಿಂದ ನಿರ್ಮಿಸಿದ ಕೋಟೆಗಳಾಗಿವೆ. ಈ ಕೋಟೆಗಳಲ್ಲಿ ಚಿತ್ರದುರ್ಗ ಕೋಟೆ ಮಾತ್ರ ಅತ್ಯಂತ ವಿಸ್ತಾರವೂ, ಸುಭದ್ರವೂ ಹಾಗೂ ರಕ್ಷಣಾತ್ಮಕವಾಗಿ ಮಹತ್ವದ್ದಾಗಿದೆ. ಅದೇ ರೀತಿ ಐಮಂಗಲ ಕೋಟೆಯ ರಚನೆ, ಆಯಾಕಟ್ಟೆ ಗಮನಿಸಿದರೆ ರಕ್ಷಣಾ ವಾಸ್ತುಕಲೆಗೆ ಪಾಳೇಗಾರರು ಸಲ್ಲಿಸಿದ ವಿಶೇಷ ಕೊಡುಗೆಯಾಗಿದೆ ಎಂದು ಹೇಳಬಹುದು.

ಪಾಳೇಗಾರರು ನಿರ್ಮಿಸಿದ ಜಲಸಂಬಂಧಿ ಕಟ್ಟಡಗಳಲ್ಲಿ ಬಾವಿಗಳು, ಪುಷ್ಕರಣಿಗಳು ಪ್ರಮುಖವಾಗಿದ್ದು ತುಂಬಾ ಆಕರ್ಷಣೀಯವಾಗಿವೆ. ವಿರಳ ಮಳೆಯಿರುವ ಬಯಲು ಸೀಮೆಯ ಪ್ರದೇಶವಾಗರುವ ಐಮಂಗಲ ಪರಿಸರದಲ್ಲಿ ಇಂತಹ ಬಾವಿ, ಕೆರೆ ಹಾಗೂ ಪುಷ್ಕರಣಿಗಳ ನಿರ್ಮಾಣದ ಮೂಲಕ ಮಳೆ ನೀರು ಸಂಗ್ರಹಿಸುವ ಯೋಜನೆಯನ್ನು ರೂಪಿಸಿರುವುದು ಮಹತ್ವದ ಸಂಗತಿಯಾಗಿದೆ.[೬೬] ಇವುಗಳೇ ಪ್ರಧಾನ ಜಲಮೂಲಗಳಾಗಿರುವುದರಿಂದ ನೀರು ವ್ಯರ್ಥವಾಗಿ ಇಂಗದಂತೆ ಅವುಗಳ ತಳಸಹಿತ ಸುತ್ತಲೂ ಬಂಡೆಗಳಿಂದ ಕಟ್ಟಿ ನೀರು ಇಂಗಿ ಹೋಗದಂತೆ ಮಾಡಿರುವ ತಾಂತ್ರಿಕತೆ ಗಮನಾರ್ಹವೆನಿಸುತ್ತದೆ. ಈ ಬಾವಿ, ಕೆರೆ, ಪುಷ್ಕರಣಿ, ಹೊಂಡಗಳ ತಾಂತ್ರಿಕತೆಯ ಬಗೆಗೆ ಪ್ರತ್ಯೇಕ ಅಧ್ಯಯನದ ಅವಶ್ಯಕತೆಯಿದೆ ಎಂಬುದು ಬಿಂಬಿತವಾಗುತ್ತದೆ.

ಕೋಟೆಕೊತ್ತಲಗಳು

ಪ್ರಾಚೀನ ಕಾಲದ ಜನರು ರಾಜ್ಯ ಸಾಮ್ರಾಜ್ಯಗಳು ಉದಯವಾಗುವುದಕ್ಕಿಂತ ಮೊದಲು ಚಿಕ್ಕ ಚಿಕ್ಕ ಗುಂಪುಗಳಾಗಿ ವಾಸಿಸುತ್ತಿದ್ದರು. ಕಾಲಕ್ರಮೇಣ ಈ ಗುಂಪುಗಳಲ್ಲಿ ಜನಸಂಖ್ಯೆ ಹೆಚ್ಚಾಗಿ ಗುಂಪುಗಳು ಊರುಗಳಾದವು. ಊರುಗಳು ಬೆಳೆದು, ಹಲವಾರು ಊರುಗಳು ಒಟ್ಟುಗೂಡಿ ರಾಜ್ಯಗಳು ಸ್ಥಾಪನೆಯಾದ ಮೇಲೆ ಆಳುವ ಅರಸರು ತಮ್ಮ ರಾಜ್ಯ ಮತ್ತು ಪ್ರಜೆಗಳನ್ನು ದರೋಡೆ ಕೋರರಿಂದ, ಶತ್ರುಗಳಿಂದ, ಕಾಡು ಪ್ರಾಣಿಗಳಿಂದ ಸಂರಕ್ಷಿಸಿಕೊಳ್ಳಲು ರಾಜಧಾನಿ ಮತ್ತು ಗಡಿ ಪ್ರದೇಶಗಳಲ್ಲಿ ಬಲವಾದ ಕೋಟೆಗಳನ್ನು ಕಟ್ಟಿದರು.[೬೭] ಹೀಗಾಗಿ ಕೋಟೆ ಪ್ರಾಚೀನ ಕಾಲದ ಮಾನವನ ಸಂರಕ್ಷಣೆಯ ಕಾಲದಲ್ಲಿ ಮಹತ್ವದ್ದಾಗಿದೆ. ಕೋಟೆಯ ರಚನೆಯ ಕುರಿತು ಹರಿಹರನು ಗಿರಿಜಾಕಲ್ಯಾಣದಲ್ಲಿ ಹೀಗೆ ವರ್ಣಿಸಿದ್ದಾನೆ.

> "ಪಳಕಿನ ಕೊಂಟೆ ಬಟ್ಟದನೆ ಬೇವಿನದಂಡೆ ನಭಕ್ಕೆ ಮೀರುವ
> ಟ್ಟಳೆ ನಿರ್ಮಿರ್ದೇರು ಪಾರುವ ವಿರಾಜಿತ ಗೊಂಟು ಗೊಂಟಿನೊಳ್
> ಬಳಸಿದ ಕೊತ್ತಳಂ ಸೊಗಯಿ ಪಾಳ್ವೆರಿ ಡೆಂಕಣಿ ಸಾರಮೊರಿಯ
> ಗ್ಗಳಲಿಸುವ ಗೋಪರಂ ಪುಲಿಮೊಗಂ ಮೆರುಗು ಪರದೊಳು ನಿರಂತರ"

ಭಾರತ ದೇಶದಲ್ಲಿ ಕೋಟೆಗಳ ನಿರ್ಮಾಣ ಪರಂಪರೆ ಬಹುಪ್ರಾಚೀನವಾಗಿದೆ. ಕ್ರಿಪೂ.ಸು. ೩೦೦೦ರ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಹರಪ್ಪ ಸಂಸ್ಕೃತಿಯ ಬಹುತೇಕ ನಗರಗಳು ಕೋಟೆಗಳನ್ನು ಹೊಂದಿದ್ದವು. ಆದಿಚಾರಿತ್ರಿಕ ಕಾಲದ ಮೌರ್ಯ ಸಾಮ್ರಾಜ್ಯ ಸ್ಥಾಪನೆಗೆ ಕಾರಣನಾದ ಚಾಣುಕ್ಯನು ತನ್ನ ಅರ್ಥಶಾಸ್ತ್ರ ಗ್ರಂಥದಲ್ಲಿ ರಾಜ್ಯದ ಸಪ್ತಾಂಗಗಳಲ್ಲಿ ದುರ್ಗವು ಅತಿ ಮಹತ್ವದ್ದೆಂದು ಹೇಳಿದ್ದಾನೆ.

ಪ್ರಾಚೀನ, ಮಧ್ಯಯುಗ ಮತ್ತು ಆಧುನಿಕ ಯುಗಗಳಲ್ಲಿ ಯುದ್ಧ, ಕಲೆ ಹಾಗೂ ಯುದ್ಧೋಪಕರಣಗಳು ಬದಲಾದಂತೆ ಅವುಗಳ ವಿನ್ಯಾಸ ಹಾಗೂ ನಿರ್ಮಾಣ ಪದ್ಧತಿಯಲ್ಲೂ ಬದಲಾಗಿದೆ. ಕನ್ನಡಿಗರು ಶಕ್ತಿಯ ಆರಾಧಕರು ರಕ್ಷಣೆಗಾಗಿ 'ದುರ್ಗ'ಗಳನ್ನು ಕಟ್ಟಿ, ಅವುಗಳಿಗೆ ಶಕ್ತಿರೂಪಿಣಿ ದುರ್ಗಿಯ ಹೆಸರಿನಿಂದಲೇ 'ದುರ್ಗ' ಎಂದು ಕರೆದರು.[೬೮] ಒಟ್ಟಿನಲ್ಲಿ ರಾಜ್ಯದ ಸಂರಕ್ಷಣೆಯ ಸಲುವಾಗಿ ಅಂದಿನ ಯುದ್ಧ ಕೌಶಲ್ಯಕ್ಕೆ ಅನುಗುಣವಾಗಿ ಶತ್ರುಗಳನ್ನು ಪರಿಣಾಮಕಾರಿ ಯಾಗಿ ಪ್ರತಿರೋಧಿಸುವುದಕ್ಕಾಗಿ ಕೋಟೆಗಳು ನಿರ್ಮಾಣವಾದವು.

ಕ್ರಿ.ಶ. ೩ನೇ ಶತಮಾನದಲ್ಲಿ ಕರ್ನಾಟಕದ ಬಹುಭಾಗ ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತು. ಇವರ ಕಾಲದ ಕೋಟೆಯ ಅವಶೇಷಗಳು ಎಲ್ಲಿಯೂ ಕಂಡುಬಂದಿಲ್ಲ. ಮೌರ್ಯರ ನಂತರ ಶಾತವಾಹನರು ಆಳ್ವಿಕೆಯನ್ನಾರಂಭಿಸಿದರು. ಇವರ ಸಾಮಂತರಾದ ಚುಟು ಅರಸರು ಬನವಾಸಿ ಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಶಾತವಾಹನರ ಕಾಲದ ಶಾಸನಶಿಲ್ಪ ಮತ್ತಿತರ ಅವಶೇಷಗಳು ಸನ್ನತಿ ಮತ್ತು ಬನವಾಸಿಗಳಲ್ಲಿ ಕಂಡುಬಂದಿವೆ. ಈ ಎರಡು ಸ್ಥಳಗಳು ಆ ಕಾಲದ ಪ್ರಮುಖ ನಗರಗಳಾಗಿದ್ದವು. ಇಲ್ಲಿ ಕ್ರಿ.ಶ. ೧-೨ನೇ ಶತಮಾನಗಳಲ್ಲಿ ಕಟ್ಟಿದ ಇಟ್ಟಿಗೆಯ ಕೋಟೆಗಳಿವೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಈ ಕೋಟೆಗಳೇ ಪ್ರಥಮವೆನ್ನ ಬಹುದು.[೬೯]

ಚಿತ್ರದುರ್ಗ ಜಿಲ್ಲೆಯು ಐತಿಹಾಸಿಕವಾಗಿ ಪ್ರಸಿದ್ಧಿಯನ್ನು ಪಡೆದಿರುವುದರಿಂದ ಇಲ್ಲಿ ಅನೇಕ ಅರಸು ಮನೆತನಗಳು ಆಳ್ವಿಕೆ ನಡೆಸಿರುವುದನ್ನು ಕಾಣುತ್ತೇವೆ. ವಿಭಿನ್ನ ಕಾಲಘಟ್ಟದಲ್ಲಿ ಆಳ್ವಿಕೆ ನಡೆಸಿದ ಅರಸರುಗಳು ಈ ಭಾಗದಲ್ಲಿ ಅನೇಕ ಕೋಟೆಗಳನ್ನು ನಿರ್ಮಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ಚಿತ್ರದುರ್ಗ, ಹೊಸದುರ್ಗ, ಮೊಳಕಾಲ್ಮೂರು, ಐಮಂಗಲ[೨೦] ಇತ್ಯಾದಿಗಳು ಇಂದಿಗೂ ಸಹ ಉತ್ತಮ ಸ್ಥಿತಿಯಲ್ಲಿದ್ದು ಇಲ್ಲಿಯ ಐತಿಹಾಸಿಕ ಮಹತ್ವನ್ನು ಸಾರುತ್ತಿದೆ. ಅದೇ ರೀತಿಯಲ್ಲಿ ಐಮಂಗಲ ಹೋಬಳಿ ಸುತ್ತಮುತ್ತಲಿನ ಪರಿಸರದಲ್ಲಿ ಹಲವು ಕೋಟೆಗಳನ್ನು ಹಲವು ರಾಜಮನೆತನಗಳ ಕಾಲಾವಧಿಯಲ್ಲಿ ನಿರ್ಮಿಸಲಾಗಿವೆ. ಕೆಲವು ಗ್ರಾಮಗಳ ಸುತ್ತಮುತ್ತಲ ಕೋಟೆಗಳು ಶಿಥಿಲಗೊಂಡು ನಶಿಸಿ ಹೋಗಿದ್ದರೆ ಮತ್ತು ಕೆಲವು ಪ್ರದೇಶದಲ್ಲಿ ಐತಿಹಾಸಿಕತೆಯ ಮಹತ್ವ ಸಾರುತ್ತಾ ಕೋಟೆಗಳು ಉಳಿದುಕೊಂಡಿವೆ. ಅವುಗಳಲ್ಲಿ ಐಮಂಗಲ, ಪರ್ತಿಕೋಟೆ, ತವಂದಿ, ಕಂದಿಕೆರೆ ಪ್ರದೇಶದಲ್ಲಿ ಕಲ್ಲಿನಿಂದ ಹಾಗೂ ಮಣ್ಣಿನಿಂದ ನಿರ್ಮಿಸಲ್ಪಟ್ಟಿರುವ ಕೋಟೆಗಳು ಸಂಪೂರ್ಣ ನಶಿಸಿ ಹೋಗಿವೆ. ಕೆಲವು ಅಳಿದು ಉಳಿದುಕೊಂಡು ಬಂದಿವೆ. ಆದರೂ ಕೋಟೆ ಇದ್ದುದರ ಬಗ್ಗೆ ಕುರುಹುಗಳು ಕಂಡುಬರುತ್ತವೆ.

ಐಮಂಗಲ ಕೋಟೆ

ಐಮಂಗಲವು ಚಿತ್ರದುರ್ಗ-ಹಿರಿಯೂರು ನಾಲ್ಕರ ರಾಷ್ಟ್ರೀಯ ಹೆದ್ದಾರಿಯಲ್ಲಿದೆ. ನೊಳಂಬರ ಶಾಸನದಲ್ಲಿ ಐಮಂಗಲವನ್ನು 'ಐಯಪ್ಪಮಂಗಲ' ಎಂದು ಕರೆಯಲಾಗಿದೆ.[೨೧] ಈ ಅಯ್ಯಪ್ಪ ಮಂಗಲದಿಂದಲೇ ಐಮಂಗಲ ಎಂಬ ಹೆಸರು ಬಂದಿದೆ. ಚಿತ್ರದುರ್ಗ ಪಾಳೇಗಾರ ಹಿರೆಮದಕರಿ ನಾಯಕನಿಂದ ವೀರಶೈವ ಅಯ್ಯನಿಗಾಗಿ (ಅರ್ಚಕ) ಕೋಟೆಯೊಂದು ಕಟ್ಟಿದುದರಿಂದ ಈ ಹೆಸರು ಬಂದಿತೆಂದು ವಿವರಣೆಯಿದೆ. ದಾಸಯ್ಯನೊಬ್ಬ ತಾನು ಶಂಖವನ್ನೂದಿ ಗಂಟೆಯನ್ನು ಬಾರಿಸಿದಾಗ ಕೋಟೆಯನ್ನು ಕಟ್ಟಲು ಆಸ್ತಿಭಾರವನ್ನು ಹಾಕಿದರೆ ಕೋಟೆ ಅಜೇಯವಾಗಿ ಉಳಿಯುವುದಾಗಿಯೂ, ಆ ಪ್ರಕಾರ ಗ್ರಾಮಸ್ಥರು ಕಾಯುತ್ತಿರಲು ಬೇರೊಬ್ಬ ದಾಸಯ್ಯ ಆ ವೇಳೆಯಲ್ಲಿ ಸೂಚನೆ ನೀಡಲು ಕೋಟೆ ಕೆಲಸ ಪ್ರಾರಂಭವಾಯಿತು. ಈ ತಪ್ಪಿನಿಂದ ಕೋಟೆ ಅಭ್ಯುದಯ ಕಾಣಲಿಲ್ಲ ಎಂಬುದು ಐತಿಹ್ಯ.[೨೨]

ಶಾಸನೋಕ್ತವಾಗಿ ಈ ಊರಿನ ಚರಿತ್ರೆ ನೊಳಂಬರ ಕಾಲದಿಂದ ಪ್ರಾರಂಭವಾಗುತ್ತದೆ. ಕ್ರಿ.ಶ.ಸು. ೯೭೫ರ ಕಂಬದೇವನ ಗುಡಿಯ ಶಾಸನದಿಂದ ಈ ಪ್ರದೇಶ ನೊಳಂಬರಿಗೆ ಸೇರಿತ್ತೆನ್ನಬಹುದು.[೨೩] ಐಮಂಗಲಕ್ಕೆ ೩ ಕಿ.ಮೀ. ದೂರದಲ್ಲಿರುವ ನೊಣಬಿ ಪಟ್ಟಣವು (ಬೇಚರಾಕ್) ನೊಳಂಬರ ಆಳ್ವಿಕೆಯನ್ನು ಸಮರ್ಥಿಸುತ್ತದೆ.[೨೪] ಇವರ ತರುವಾಯ ಹರತಿವಂಶದ ಕೋಟೆಕೆರೆ ಅಬ್ಬೆನಾಯಕನ ಮಕ್ಕಳಾದ ಕಾಮಯ್ಯನಾಯ್ಕನ ಸಹೋದರ ಬೊಮ್ಮಯ್ಯನಾಯಕನು ಐಮಂಗಲದಲ್ಲಿ ಆಳ್ವಿಕೆ ನಡೆಸಿದ್ದಾರೆ.[೨೫] ಹರತಿ ಪಾಳೆಯಗಾರರು ತಮ್ಮನ್ನು ಹರತಿ ಐಮಂಗಲದ ನಾಯಕರೆಂದೇ ಶಾಸನಗಳಲ್ಲಿ ಕರೆದುಕೊಂಡಿದ್ದಾರೆ.[೨೬] ಇವರು ಚಿತ್ರದುರ್ಗ ಪಾಳೇಗಾರರಿಗೆ ಅಧೀನರಾಗಿ ಐಮಂಗಲದಲ್ಲಿ ಆಳ್ವಿಕೆ ನಡೆಸಿದ್ದಾರೆ.[೨೭] ಚಿತ್ರದುರ್ಗ ಪಾಳೆಯಗಾರ ಬಿಚ್ಚುಗತ್ತಿ ಭರಮಣ್ಣನಾಯಕರ ಪುತ್ರರಲ್ಲೊಬ್ಬರಾದ ಹುಚ್ಚುಲಿಂಗಣ್ಣನು ಪ್ರತಿದಿನ ಐಮಂಗಲಕ್ಕೆ ಭೇಟಿ ನೀಡಿ ಅಧಿಕಾರ

ನಡೆಸಿದ್ದನೆನ್ನಲಾಗಿದೆ.[೭೮] ಹೀಗೆ ಕ್ರಮೇಣ ಚಿತ್ರದುರ್ಗ ಪಾಳೆಯಗಾರರು ಐಮಂಗಲ ಕೋಟೆಯನ್ನು ತಮ್ಮ ತಮ್ಮ ರಾಜಕೀಯ ಹಾಗೂ ಸೈನಿಕ ನೆಲೆಯನ್ನಾಗಿ ಮಾಡಿಕೊಂಡರು. ಇವರ ತರುವಾಯ ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಈ ಪ್ರದೇಶವನ್ನು ವಶಪಡಿಸಿಕೊಂಡರು.

ಚಿತ್ರದುರ್ಗ ಜಿಲ್ಲೆಯಲ್ಲಿ ವ್ಯವಸ್ಥಿತವಾಗಿ ನಿರ್ಮಾಣಗೊಂಡಿರುವ ಸ್ಥಳ ದುರ್ಗಗಳಲ್ಲಿ ಐಮಂಗಲದ ಕೋಟೆಯೂ ಒಂದು. ಕೌಟಿಲ್ಯನು ಹೇಳುವಂತೆ ರಾಜರು ಯುದ್ಧ ತಂತ್ರಗಳಿಗೆ ಅನುಗುಣವಾಗಿ ಸಮರ್ಥ ರಕ್ಷಣೆ ನೀಡಬಲ್ಲ ಕೋಟೆಗಳನ್ನು ಹೊಂದಿರಬೇಕು. ಈ ನಿಟ್ಟಿನಲ್ಲಿ ಐಮಂಗಲ ಕೋಟೆಯು ಚಿತ್ರದುರ್ಗ ಪಾಳೇಗಾರರಿಗೆ ಒಂದು ಉತ್ತಮ ನೆಲೆಯಾಗಿತ್ತೆಂದು ಹೇಳಬಹುದು. ಏಕೆಂದರೆ ಕೋಟೆಯಲ್ಲಿ ಯಾವುದೇ ರೀತಿಯ ಸ್ಮಾರಕಗಳು ಇಲ್ಲದೇ ಒಂದು ರೀತಿ ಗರಡಿ ಮನೆಯಂತೆ(ಸೈನಿಕ ತರಬೇತಿ ಶಿಬಿರ) ಇದೆ. ಚಿತ್ರದುರ್ಗ ಪಾಳೆಯಗಾರರ ಅಧೀನಕ್ಕೆ ಒಳಪಟ್ಟಿದ್ದ ಪೂರ್ವದ ದೊಡ್ಡೇರಿ, ಸಾಣೀಕೆರೆ, ಆಗ್ನೇಯ ಭಾಗದ ಹರತಿ, ವೇಣಕಲ್ಲುಗುಡ್ಡ, ದಕ್ಷಿಣ ಭಾಗದ ಹಿರಿಯೂರು, ಭರಮಗಿರಿ ಕೋಟೆಗಳು ಚಿತ್ರದುರ್ಗಕ್ಕೆ ದೂರದಲ್ಲಿವೆ. ಮಧ್ಯಭಾಗದ ವಿಶಾಲವಾದ ಈ ಮೈದಾನ ಪ್ರದೇಶವು ಆಯಕಟ್ಟಿನ ಸ್ಥಳವೆಂದು ಯೋಚಿಸಿ, ಇಲ್ಲಿ ಕೋಟೆಯೊಂದನ್ನು ಕಟ್ಟಿ ಈ ಅಂತರವನ್ನು ಕಡಿಮೆ ಮಾಡಿರಬಹುದು. ಅಲ್ಲದೇ ಐಮಂಗಲ ಕೋಟೆಯಲ್ಲಿ ಯಾವಾಗಲೂ ಶಸ್ತ್ರಸಜ್ಜಿತ ಸೈನಿಕ ಪಡೆಯನ್ನು ಇಟ್ಟು, ತುರ್ತು ಸಮಯದಲ್ಲಿ ಪೂರ್ವ ಮತ್ತು ಪಶ್ಚಿಮ ಗಡಿ ಕೋಟೆಗಳಿಗೆ ಐಮಂಗಲದಿಂದಲೇ ಸೈನ್ಯವನ್ನು ಕಳುಹಿಸುವ ವ್ಯವಸ್ಥೆ ಮಾಡಿಕೊಂಡಿರಬಹುದು. ಇವೆಲ್ಲವುಗಳಿಗಿಂತ ಮುಖ್ಯವಾಗಿ ರಾಜಧಾನಿಗೆ ಯಾವುದೇ ಅಪಾಯವು ಬಾರದಂತೆ ಇಲ್ಲಿ ಕೋಟೆ ಕಟ್ಟಿ ಸೈನ್ಯವನ್ನು ನೆಲೆಗೊಳಿಸಿದ್ದರು. ಇಂದು ವ್ಯವಸ್ಥಿತವಾಗಿ ನಿಂತಿರುವ ಕೋಟೆಯನ್ನು ಇತ್ತೀಚೆಗೆ ಪೊಲೀಸ್ ಇಲಾಖೆಯವರು ತರಬೇತಿ ಶಾಲೆಯನ್ನಾಗಿ ಮಾಡಿಕೊಂಡಿದ್ದಾರೆ.[೭೯]

ಕೋಟೆಯು ಆಯಾತಾಕಾರವಾಗಿದ್ದು ೧೬೮೫ ಮೀಟರ್ ವಿಸ್ತೀರ್ಣದಲ್ಲಿದೆ. ಕೋಟೆಗೆ ಪೂರ್ವ, ಪಶ್ಚಿಮ ಮತ್ತು ಉತ್ತರದಲ್ಲಿ ಮುಖ್ಯದ್ವಾರಗಳಿದ್ದು, ನಾಲ್ಕು ಮೂಲೆಯಲ್ಲಿ ಎತ್ತರವಾದ ನಾಲ್ಕು ದುಂಡಾಕಾರದ ಕಾವಲು ಗೋಪುರಗಳಿವೆ. ಒಟ್ಟು ೨೨ ಬುರುಜುಗಳಿದ್ದು ಪೂರ್ವದಲ್ಲ ನಾಲ್ಕು, ಪಶ್ಚಿಮದಲ್ಲಿ ಮೂರು, ಉತ್ತರದಲ್ಲಿ ಒಂಬತ್ತು ಹಾಗೂ ದಕ್ಷಿಣದಲ್ಲಿ ಆರು ಚೌಕಾಕಾರದ ಬುರುಜುಗಳಿವೆ. ಕೋಟೆಯನ್ನು ನಾಲ್ಕು ಕಡೆಗಳಿಂದಲೂ ಕಂದಕ ಸುತ್ತುವರೆದಿದೆ. ಉತ್ತರದ ಕೋಟೆ ಗೋಡೆಯನ್ನು ಬಿಟ್ಟು ಉಳಿದ ಮೂರು ಕೋಟೆ ಗೋಡೆಗಳನ್ನು ಲಂಬಕೋನದಲ್ಲಿ ಕಟ್ಟಲಾಗಿದೆ. ಕೋಟೆಯ ಗೋಡೆ ಹಾಗೂ ಬುರುಜುಗಳು ಉದ್ದ, ಅಗಲ ಮತ್ತು ಎತ್ತರದಲ್ಲಿ ಸಮಾನ ಅಂತರವನ್ನು ಕಾಯ್ದುಕೊಂಡಿದೆ.[೮೦]

ಕೋಟೆ ಗೋಡೆಯನ್ನು ಕರಿಚಕ್ಕೆ ಕಲ್ಲುಗಳನ್ನು ಉಪಯೋಗಿಸಿ ಕಟ್ಟಿದ್ದಾರೆ. ಸ್ಥಳೀಯವಾಗಿ ದೊರೆತರೂ ಕಲ್ಲಿನ ಗುಣಮಟ್ಟ ಅಷ್ಟೇನೂ ಪರಿಣಾಮಕಾರಿಯಾಗಿಲ್ಲವಾದರೂ ಗೋಡೆಯು ಎಲ್ಲೂ ಓಂದು ಮುಂದಾಗದಂತೆ ಸಿಮೆಂಟ್ ಗೋಡೆಯ ರೀತಿ ಕಟ್ಟಿದ್ದಾರೆ. ಗೋಡೆಯ ಎತ್ತರ ೮–೧೦ ಮೀ. ಅಗಲ ೪.೫ ಮೀ. ಇದ್ದು ಕೋಟೆಯೊಳಗೆ ಚಲಿಸಲು ಮತ್ತು

ಶತ್ರುಗಳನ್ನು ವೀಕ್ಷಿಸಲು ಅನುಕೂಲವಾಗುವಂತೆ ೪ ಅಡಿ ಅಗಲದ ಅಟ್ಟಕಲವಿದೆ. ಸೈನಿಕರ ಗೋಡೆಯ ಹಿಂಭಾಗದಲ್ಲಿ ನಿಂತು ಬಂದೂಕು ಕಿಂಡಿಗಳ ಮುಖಾಂತರ ಶತ್ರುಗಳನ್ನು ವೀಕ್ಷಿಸಲು ಸ್ಥಳವಕಾಶವನ್ನು ಮಾಡಲಾಗಿದೆ. ಗೋಡೆಯ ಮೇಲೆ ಸೈನಿಕರು ನಡೆದಾಡುವುದಕ್ಕೆ ೪ ಅಡಿ ವಿಸ್ತಾರದ ವೇದಿಕೆಯಿದೆ. ಗೋಡೆಗಳಿಗೆ ಉಪಯೋಗಿಸಿದ ಕಲ್ಲುಗಳು ಗುಣಮಟ್ಟವಿಲ್ಲದ ಕಾರಣ ಗೋಡೆಯ ದಪ್ಪವನ್ನು ಗಾತ್ರದಲ್ಲಿ ಚಿಕ್ಕದಾಗಿ ಮಾಡಿದ್ದಾರೆ. ಒಳ ಮತ್ತು ಹೊರ ಕೋಟೆಯ ಮಧ್ಯ ಕೆಸರು ಮಣ್ಣನ್ನು ತುಂಬಲಾಗಿದೆ. ಕೋಟೆಯ ಒಳಭಾಗದಲ್ಲಿ ಗೋಡೆಯ ಎತ್ತರಕ್ಕೆ ತಕ್ಕಂತೆ ೧೨ ಮೀ. ಅಗಲದ ಇಳಿವೋರೆ ಉಪಯೋಗಿಸಿದ್ದಾರೆ. ಕಾರಣ ಗೋಡೆಗೆ ಅಪಾಯ ಆಗದಂತೆ ನೋಡಿಕೊಳ್ಳುವ ಉದ್ದೇಶವಿರಬಹುದು. ಕೋಟೆಗೆ ಸ್ಥಳೀಯವಾಗಿ ಮತ್ತು ಪಕ್ಕದ ಹಳ್ಳಿಯಾದ ಕಲ್ಲಟ್ಟಿ(ಕಲ್ಲುಹಟ್ಟಿ)ಯಿಂದಲೂ ಕಲ್ಲುಗಳನ್ನು ತರುತ್ತಿದ್ದರೆಂದು ಸ್ಥಳೀಯರು ಹೇಳುವುದುಂಟು.[೮೧]

ಬುರುಜುಗಳು ಕೋಟೆಯ ನಾಲ್ಕು ಮೂಲೆಯಲ್ಲಿರುವುದು ವಿಶೇಷ. ಇವುಗಳ ವಿನ್ಯಾಸ ಗೋಡೆಯಿಂದ ೧೩ ಮೀಟರ್ ಮುಂದಕ್ಕೆ ಚಾಚಿಕೊಂಡಿರುವ ಬುರುಜುಗಳು ೧೦ ಮೀಟರ್ ಎತ್ತರವಾಗಿದೆ. ಚಚ್ಚೌಕವಾಗಿರುವ ಬುರುಜುಗಳು ಮುಂಚಾಚಿದ್ದು ೭ ಮೀಟರ್ ಅಂತರದ ಕೋಟೆ ಕಿಂಡಿಗಳಿವೆ. ಇದರ ಮಧ್ಯಭಾಗದಲ್ಲಿ ದುಂಡಾಕಾರದ ಕಾವಲು ಗೋಪುರಗಳಿವೆ. ಉಳಿದಂತೆ ಕೋಟೆಯಲ್ಲಿರುವ ೨೨ ಬುರುಜುಗಳಿಗೂ ಒಂದು ಬುರುಜಿನಿಂದ ಮತ್ತೊಂದು ಬುರುಜಿಗೆ ೬೦ ಮೀ.ನಷ್ಟು ಸಮಾನಾಂತರವನ್ನು ಕಾಯ್ದುಕೊಳ್ಳಲಾಗಿದೆ. ಕಂದಕವೂ ಇವುಗಳಿಗೆ ಅನುಗುಣವಾಗಿದೆ.[೮೨]

ಗೋಡೆಯ ಪಶ್ಚಿಮ ಗೋಡೆಯ ಮಧ್ಯಭಾಗದಲ್ಲಿ ಮುಖ್ಯ ದ್ವಾರವಿದೆ. ಗೋಡೆಯಿಂದ ಪಶ್ಚಿಮಕ್ಕೆ ೩೫ ಮೀಟರ್ ಉದ್ದ, ೧೦ ಮೀಟರ್ ಅಗಲದ ವಿಸ್ತೀರ್ಣದಲ್ಲಿ ಕಟ್ಟಿದ್ದಾರೆ. ಪುನಃ ಉತ್ತರಕ್ಕೆ ೩೦ ಮೀಟರ್‌ವರೆಗೂ ವಿಸ್ತರಿಸಲಾಗಿದೆ. ಪುನಃ ಉತ್ತರಕ್ಕೆ ೧೦ ಮೀಟರ್ ಗೋಡೆಯನ್ನು ಪೂರ್ವದ ಕಡೆ ತಂದು ಉತ್ತರದಿಂದ ಕೋಟೆಯ ಪ್ರವೇಶ ಕಲ್ಪಿಸಿದ್ದಾರೆ. ಈ ಬಾಗಿಲು ಕಾಣದಂತೆ ಕೋಟೆ ಗೋಡೆಯ ಹಾಗೆ ಕಟ್ಟಿದ್ದಾರೆ. ಉತ್ತರದ ಕೆರೆಯ ಏರಿಯ ಪಕ್ಕ ಇರುವ ಬಾಗಿಲು ೧೫ ಮೀಟರ್ ಅಗಲ, ೧೫ ಮೀಟರ್ ಉದ್ದವಿದ್ದು ಅದೇ ತಂತ್ರವನ್ನು ಉಪಯೋಗಿಸಿದ್ದಾರೆ.[೮೩] ಪೂರ್ವದ ದ್ವಾರಬಾಗಿಲು ಕೋಟೆಗೆ ನೇರವಾಗಿ ಬಂದು ದಕ್ಷಿಣಕ್ಕೆ ತಿರುಗಿ ಮತ್ತೆ ಕೋಟೆಯೊಳಗೆ ಉತ್ತರ ಪ್ರವೇಶ ಮಾಡುವ ರೀತಿಯಲ್ಲಿ ನಿರ್ಮಾಣಗೊಂಡಿದೆ.

ಹರ್ತಿಕೋಟೆ

ಹಿರಿಯೂರು - ಚಳ್ಳಕೆರೆಗಳ ಮಧ್ಯೆ ಸಿಕ್ಕುವ (ಹಿರಿಯೂರಿನಿಂದ ಸುಮಾರು ಹತ್ತು ಕಿ.ಮೀ. ದೂರದಲ್ಲಿರುವ) ಹರ್ತಿಕೋಟೆ ಗ್ರಾಮವು ತನ್ನ ಹಿಂದಿನ ಐತಿಹಾಸಿಕ ಮಹತ್ವದ ಸಂಕೇತವಾಗಿ ಇಂದಿಗೂ ಉಳಿದುಕೊಂಡು ಬಂದಿದೆ. ಹೆಸರೇ ಹೇಳುವಂತೆ, ಈ ಗ್ರಾಮವು ಒಂದು ಕಾಲದಲ್ಲಿ ಕೋಟೆಯಿಂದಾವೃತವಾಗಿದ್ದಿತು.[೮೪] ಇಂದು ಒಂದೆರಡು ಕಡೆ ಕೋಟೆಯ ತರ ಕಂಡುಬರುವುದನ್ನುಳಿದು ಕೋಟೆಯ ಇನ್ನು ಯಾವ ಅವಶೇಷವೂ ಇಲ್ಲಿ ಉಳಿದಿಲ್ಲ. ಹಿಂದೆ

ಇಲ್ಲಿದ್ದ ಕೋಟೆಯ ಕಲ್ಪನೆ ಮೂಡುವುದು ಕೂಡ ಈಗ ಅಸಾಧ್ಯ. ವಿಶಾಲವಾದ ಹಾಗೂ ಸ್ಥೂಲ ದುಂಡಾಕಾರದ ಕೋಟೆಯು ಇಂದಿನ ಹರತಿ ಗ್ರಾಮದ ಅರ್ಧಭಾಗದಷ್ಟನ್ನು ಆವರಿಸಿದ್ದಿತೆಂದು ಈ ಗ್ರಾಮದ ವಯೋವೃದ್ಧರು ಹೇಳುತ್ತಾರೆ. ಕೇವಲ ಕೆಲವೇ ವರ್ಷಗಳ ಹಿಂದೆ ತಲೆಯೆತ್ತಿ ನಿಂತಿದ್ದ ಕೋಟೆಯ ಒಂದು ಬುರುಜು ಕ್ರಮೇಣ ಹೇಳ ಹೆಸರಿಲ್ಲದಂತೆ ನಾಶವಾಯಿತೆಂದು ಅದನ್ನು ಕಣ್ಣಾರೆ ಕಂಡವರು ವರ್ಣಿಸುತ್ತಾರೆ. ಕೋಟೆಯ ಸುತ್ತಲೂ ಇದ್ದ ಕಂದಕವನ್ನು ಇಂದು ಪತ್ತೆ ಹಚ್ಚುವುದೂ ದುಸ್ತರ. ಅಲ್ಲಿ ಇಲ್ಲಿ ಕಾಣಬಹುದಾದ ಸಣ್ಣಪುಟ್ಟ ತಗ್ಗುಗಳನ್ನು ಕಂದಕದ ಸ್ಥಳಗಳೆಂದು ತೋರಿಸುತ್ತಾರೆ. ಕೋಟೆಯನ್ನು ಪುಡಿಕಲ್ಲುಗಳಿಂದ ನಿರ್ಮಿಸಿದ್ದರೆಂದು ಕಂಡುಬರುವುದರಿಂದ, ಬಹುಶಃ ಆ ಕಲ್ಲುಗಳೆಲ್ಲವೂ ಇಂದಿನ ಆಧುನಿಕ ಗ್ರಾಮ ನಿರ್ಮಾಣಕ್ಕೆ ಬಳಕೆಗೊಂಡಿರುವುದರಲ್ಲಿ ಅನುಮಾನವಿಲ್ಲ. ಒಟ್ಟಿನಲ್ಲಿ ಐತಿಹಾಸಿಕ ಮಹತ್ವದ ಕುರುಹಾದ ಕೋಟೆಯನ್ನು ಕಳೆದುಕೊಂಡೇ ಬೆಳೆಯುತ್ತಿದೆ. ಇಂದಿನ ಹರ್ತಿಕೋಟೆ ಗ್ರಾಮ.

ಕೋಟೆಯಿದ್ದ ಕಾಲಕ್ಕೆ ಊರನ್ನು ಪೂರ್ವದಿಕ್ಕಿಗಿದ್ದ ಹೆಬ್ಬಾಗಿಲು ಮೂಲಕ ಪ್ರವೇಶಿಸಬೇಕಾಗಿದ್ದಿತಂತೆ. ಒಳಗಡೆ ಪ್ರವೇಶಿಸುತ್ತಿದ್ದಂತೆಯೇ ಬಲಭಾಗದಲ್ಲಿ ಬೃಹದಾಕಾರದ ಆಂಜನೇಯನ ಭವ್ಯ ಆಕೃತಿ ದರ್ಶನವಾಗುತ್ತಿದ್ದಿತು. ಕೋಟೆಯು ಆವೃತಗೊಂಡಿದ್ದ ಪ್ರದೇಶದೊಳಗೆ ಬಹುಮಟ್ಟಿಗೆ ಎಲ್ಲ ದೇವಸ್ಥಾನಗಳೂ ನೆಲೆಗೊಂಡಿವೆ. ಇಂದು ಉಳಿದುಬಂದಿರುವ ಗತಕಾಲದ ಅವಶೇಷಗಳಾದರೂ ಇಲ್ಲಿಯ ದೇವಸ್ಥಾನಗಳೇ. ಉಳಿದಂತೆ ಕಲ್ಲುಬಾವಿ ಮತ್ತು ದೀಪಸ್ತಂಭಗಳು, ಉಯ್ಯಾಲೆಮಂಟಪ, ಕೆಲವು ಶಾಸನಗಳು, ವೀರಗಲ್ಲುಗಳನ್ನು ಉಲ್ಲೇಖಿಸಬಹುದು. ಇವುಗಳನ್ನುಳಿದು ಇತಿಹಾಸ ಮಹತ್ವದ ವಸ್ತುಗಳಾಗಲೀ ವೈಚಿತ್ರ್ಯಗಳಾಗಲೀ ಅಷ್ಟಾಗಿ ಇಲ್ಲವೆನ್ನಲು ಅಡ್ಡಿಯಿಲ್ಲ. ಒತ್ತಾಗಿ ಬೆಳೆದಿರುವ ಗ್ರಾಮವು ಇಲ್ಲಿ ಉಳಿದಿದ್ದಿರಬಹುದಾದ ಕೆಲವು ಐತಿಹಾಸಿಕ ಸ್ಮಾರಕಗಳನ್ನು ಮುಚ್ಚಿರಬಹುದು ಅಥವಾ ನಾಶಪಡಿಸಿರಬಹುದೆಂದು ಭಾವಿಸಬಹುದಾಗಿದೆ.

ಇವತ್ತಿನ ಹರ್ತಿಕೋಟೆ ಗ್ರಾಮವನ್ನು ನಾವು ಪ್ರವೇಶಿಸುವುದು. ಕೋಟೆಯ ಹಿಂಬದಿಯ ಸ್ಥಳವೆಂದು ಗುರುತಿಸುವ ಪ್ರದೇಶದಲ್ಲಿ ನಿರ್ಮಿತವಾಗಿರುವ ಆಧುನಿಕ ರಸ್ತೆಯ ಮೂಲಕ. ಅದಕ್ಕೆ ಅನುಕೂಲಕರವಾಗಿ ಗ್ರಾಮವೂ ಪುನರ್‌ರಚಿಸಲ್ಪಟ್ಟಿದೆ. ಹೆದ್ದಾರಿಯಲ್ಲಿಳಿದು ಗ್ರಾಮವನ್ನು ಪ್ರವೇಶಿಸುವ ಮುನ್ನ ಇರುವ ವಿಶಾಲ ಬಯಲು ಹಲವು ಕುತೂಹಲಗಳ ತಾಣವೆಂದರೂ ಸರಿಯೇ.

ಕಲ್ಲೇದೇವರ ಬಯಲಿನಲ್ಲೇ ಬಹಳ ಹಿಂದೆ ಕೋಟೆಯೊಂದು ನಿರ್ಮಿತಗೊಂಡಿದ್ದು, ಅದನ್ನು ಕಸ್ತೂರಿ ರಂಗಪ್ಪನಾಯಕನ ಕೋಟೆಯೆಂದು ಕರೆಯುತ್ತಿದ್ದರೆಂಬುದನ್ನು ಒಪ್ಪುವುದು ಕಷ್ಟವೆನಿಸುತ್ತದೆ. ಚಿತ್ರದುರ್ಗ ಪಾಳೇಗಾರರಲ್ಲಿ ಬರುವ(ಒಂದನೆಯ ಅಥವಾ ಎರಡನೆಯ) ಕಸ್ತೂರಿ ರಂಗಪ್ಪ ನಾಯಕನು ಚಿತ್ರದುರ್ಗದಿಂದ ನಿಡುಗಲ್ಲಿಗೆ ಪ್ರಯಾಣ ಮಾಡುವಾಗಲೆಲ್ಲ ಇಲ್ಲಿಯ ಕೋಟೆಯಲ್ಲಿ ತಂಗುತ್ತಿದ್ದು, ನಂತರ ತನ್ನ ಪ್ರಯಾಣವನ್ನು ಮುಂದುವರೆಸುತ್ತಿದ್ದನಂತೆ. ಆದರೆ ಈ ವೃತ್ತಾಂತಗಳಿಗೆ ಲಿಖಿತ ಆಧಾರಗಳಾಗಲಿ, ಸ್ಮಾರಕಗಳಾಗಲಿ ಇನ್ನೂ ಗಮನಕ್ಕೆ ಬಂದಿಲ್ಲವಾದ್ದರಿಂದ ಸ್ಥಳೀಯರು ಹೇಳುವ ಕತೆಗಳನ್ನಷ್ಟೇ ಇಲ್ಲಿ ಗಮನಿಸಬೇಕಾಗುತ್ತದೆ. ಈ

ಪ್ರದೇಶದಲ್ಲಿ ಈಗಲೂ ದೊರಕುವ ಇಟ್ಟಿಗೆಗಳು ಇಲ್ಲಿ ಜನವಸತಿಯಿದ್ದ ಕುರುಹುಗಳಾಗಿವೆ. ಇದು ಖಂಡಿತವಾಗಿಯೂ ಪ್ರಾಚೀನ ನಿವೇಶನವೆನ್ನುವುದರಲ್ಲಿ ಅನುಮಾನ ತೋರುವುದಿಲ್ಲ. ಈ ಬಯಲಿನಲ್ಲಿ ಹುದುಗಿರುವ ಹಲವಾರು ನಿಗೂಢ ವಸ್ತುಗಳನ್ನು, ಸಂಗತಿಗಳನ್ನು ಬೆಳಕಿಗೆ ತಂದು ಈ ಸ್ಥಳದ ಪ್ರಾಚೀನ ಚರಿತ್ರೆಗೆ ತಕ್ಕ ಮಾಹಿತಿಗಳನ್ನು ದೊರಕಿಸಿಕೊಡಲು ಭೂಶೋಧನೆಯ ಪ್ರಯತ್ನ ಮಾಡಬೇಕಾಗಿದೆ.

ಐಮಂಗಲದಿಂದ ೧೬ ಕಿ.ಮೀ. ದೂರದಲ್ಲಿ ತವಂದಿ ಗ್ರಾಮವಿದೆ. ಈ ಗ್ರಾಮ ಒಂದು ಸಂಸ್ಥಾನವಾಗಿತ್ತು. ಮೊದಲು ಇಲ್ಲಿ ಗಂಗರು ಆಡಳಿತ ನಡೆಸಿದರು ಎಂಬುದಕ್ಕೆ ಗಂಗರ ತಾಮ್ರಶಾಸನದಲ್ಲಿ ಉಲ್ಲೇಖಿತವಾಗಿರುವ ಶ್ರೀ ವಿಕ್ರಮರಾಜ ಅರಸ ಬ್ರಾಹ್ಮಣರಿಗೆ 'ತಡಸೂರರ ಕೆರೆ'ಯನ್ನು ದಾನವಾಗಿ ನೀಡಿದನು. ಇವತ್ತಿನ ತವಂದಿ ಅಥವಾ ತವನಿಧಿಕೆರೆ ಗಂಗರ ಕಾಲದಲ್ಲಿ ತಡಸೂರರ ಕೆರೆ ಎಂದು ಕರೆದಿರಬಹುದು.[೬೫] ನಂತರ ಈ ಸಂಸ್ಥಾನವು ನೊಳಂಬರಿಗೆ ಹಾಗೂ ಪಾಳೇಗಾರರ ಆಳ್ವಿಕೆಗೆ ಒಳಪಟ್ಟಿತು. ಇಲ್ಲಿ ಸಾಕಷ್ಟು ಬೆಳ್ಳಿ, ಬಂಗಾರ ಮುತ್ತುರತ್ನಗಳ ನಿಧಿ-ನಿಕ್ಷೇಪಗಳೇ ಅಡಗಿರುವುದರಿಂದ ಇದನ್ನು ತವನಿಧಿ ಎಂದು ಹೇಳುವುದುಂಟು. ತಿಪ್ಪೇಸ್ವಾಮಿಯವರ ತೋಟದಲ್ಲಿ ವೀರಭದ್ರ ಗುಡಿಯ ಶಾಸನದಿಂದ ತವಂದಿಯಗೌಡ ತಿಮ್ಮಪ್ಪನ ಮಗ ಜೋಗಣ್ಣನು ದೇವರ ಮೆರವಣಿಗೆ ಸೇವೆ ಮಾಡಿಸಿದ ವಿಚಾರ ತಿಳಿಯುತ್ತದೆ. ಹಿರಿಯೂರಿನ ೮೮ನೇ ಶಾಸನದಿಂದ ಕ್ರಿ.ಶ. ೧೫೮೦ರಲ್ಲಿ ತವಂದಿಗೆ ಹನ್ನೆರಡು ಗ್ರಾಮಗಳು ಸೇರಿದ್ದವೆಂದು ತಿಳಿಯುತ್ತದೆ. ಈ ಗ್ರಾಮದಲ್ಲಿ ೧೦೧ ವಿಗ್ರಹಗಳಿವೆಯೆಂದು ಅಲ್ಲಿಯ ವಯೋವೃದ್ಧರು ಹೇಳುತ್ತಾರೆ.

ಇಂದಿನ ತವಂದಿ ಗ್ರಾಮದ ಸುತ್ತಲೂ ಕೋಟೆ ಇತ್ತು. ಈ ಕೋಟೆಯು ಸುಮಾರು ೪ ಮೈಲು ವ್ಯಾಪ್ತಿಯನ್ನು ಹೊಂದಿತ್ತು. ಈಗ ಸಂಪೂರ್ಣ ಹಾಳಾಗಿದೆ. ಇಲ್ಲಿ ಮೊದಲು ಆಯಾತಾಕಾರದ ಕೋಟೆ, ಪೂರ್ವ ದಿಕ್ಕಿನಲ್ಲಿ ಬಾಗಿಲು, ಮೂಲೆಗಳಲ್ಲಿ ವೃತ್ತಾಕಾರದ ಕಾವಲು ಗೋಪುರಗಳಿದ್ದವು ಎಂದು ತವಂದಿಯ ವಯೋವೃದ್ಧರು ಹೇಳುತ್ತಾರೆ. ಆದರೆ ಇದರ ಯಾವ ಅವಶೇಷಗಳು ದೊರಕುವುದಿಲ್ಲ. ಈ ಕೋಟೆಯನ್ನು ಚಿಕ್ಕ ಮತ್ತು ಮಧ್ಯಮ ಗಾತ್ರದ ಕಲ್ಲುನ್ನು ಬಳಸಿ ಮಣ್ಣಿನಿಂದ ಕಟ್ಟಿರಬಹುದು. ಬಹುಶಃ ಆ ಕಲ್ಲುಗಳೆಲ್ಲವೂ ಇಂದಿನ ಆಧುನಿಕ ಗ್ರಾಮ ನಿರ್ಮಾಣಕ್ಕೆ ಬಳಕೆಗೊಂಡಿರುವುದರಲ್ಲಿ ಅನುಮಾನವಿಲ್ಲ. ಐತಿಹಾಸಿಕ ಮಹತ್ವದ ಕುರುಹಾದ ಕೋಟೆಯನ್ನು ಕಳೆದುಕೊಂಡೇ ಬೆಳೆಯುತ್ತಿದೆ ಇಂದಿನ ತವಂದಿ ಗ್ರಾಮ.

ಇದೇ ತೆರನಾದ ಕಂದೀಕೆರೆ ಗ್ರಾಮದ ಕಂದೀಕೆರೆ ರಂಗಪ್ಪ ಕುಮಾರಸ್ವಾಮಿಯವರ ಜಮೀನಿನ ಪಕ್ಕದಲ್ಲಿ ಒಂದು ಬೃಹತ್ತಾದ ಪ್ರಾಚೀನಕಾಲದ ಮಣ್ಣಿನಿಂದ ನಿರ್ಮಿತವಾದ ಕೋಟೆಯಿದ್ದು, ಇಲ್ಲಿಯೂ ಸಹ ಜನರ ವಾಸವಿದ್ದುದಕ್ಕೆ ಕುರುಹುಗಳಿವೆ. ಸುತ್ತಲೂ ಎತ್ತರವಾಗಿ ಮಣ್ಣಿನ ದಿಬ್ಬವನ್ನು ಹಾಕಿ, ಆಳವಾದ ಕಂದಕವನ್ನು ಮಾಡಿದ್ದಾರೆ. ಈಗ ಈ ಪ್ರದೇಶದಲ್ಲಿ ಜನವಸತಿ ಇಲ್ಲದೇ ಪಾಳುಬಿದ್ದು ಮನೆಗಳು ನಶಿಸಿಹೋಗಿ ತಳಪಾಯಗಳು ಮಾತ್ರ ಉಳಿದು ಕೊಂಡಿವೆ.

ಜಲ ಮೂಲಗಳು

ಭೂಮಿಯ ಮೇಲೆ ವಾಸಿಸುತ್ತಿರುವ ಜೀವಿಗಳಿಗೆ ಉಸಿರಾಡಲು ಗಾಳಿ ಎಷ್ಟು ಮುಖ್ಯವೋ ನೀರು ಅಷ್ಟೇ ಮುಖ್ಯವಾದುದಾಗಿದೆ. ಪುರಾಣದ ಪ್ರಕಾರ ಭಗೀರಥ, ಗಂಗೆಯನ್ನು ಭೂಮಿಗೆ ಕರೆತಂದ ನಂತರ ಗಂಗೆ ಅನೇಕ ನದಿಗಳಾಗಿ ರಾಜ್ಯದ ಉದ್ದಗಲಕ್ಕೂ ಹರಿದಳು. ನೈಸರ್ಗಿಕವಾಗಿ ದೈನಂದಿನ ಅವಶ್ಯಕತೆಗಳನ್ನು ಪೂರೈಸುತ್ತಿದ್ದಾಳೆ. ಮಹಾಭಾರತದ ಪ್ರಕಾರ, ಯಾವ ವ್ಯಕ್ತಿಯು ಕಟ್ಟಿಸಿದ ಕೆರೆ-ಬಾವಿಯಲ್ಲಿ ಹಸುಗಳು, ಪ್ರಾಣಿಗಳು, ಪಕ್ಷಿಗಳು ಮತ್ತು ಮನುಷ್ಯರು ನೀರನ್ನು ಕುಡಿದು ತೃಪ್ತರಾಗುವರೋ ಅವನು ಅಶ್ವಮೇಧಯಾಗದ ಫಲವನ್ನು ಪಡೆಯುತ್ತಾನೆ.[೮೭] ದಾನಗಳಲ್ಲಿ ಅನ್ನದಾನ, ವಸ್ತ್ರದಾನದಷ್ಟೆ ಜಲದಾನವು ಶ್ರೇಷ್ಠವಾದುದೆಂದು ತಿಳಿದ ಅನೇಕ ಅರಸರು, ಅಧಿಕಾರಿಗಳು, ಶ್ರೀಮಂತರು ಮತ್ತು ಸಾಮಾನ್ಯ ಜನರು ಪ್ರಾಚೀನ ಕಾಲದಿಂದ ಕೆರೆ-ಬಾವಿಗಳನ್ನು ಕಟ್ಟಿಸುವ ಕಾರ್ಯಕೈಗೊಂಡಿದ್ದಾರೆ.

ಹಂಪೆಯ ಕ್ರಿ.ಶ. ೧೪೧೧ರ ವಿಜಯನಗರ ಪ್ರೌಢ ಪ್ರತಾಪ ದೇವರಾಯನ ಮಂತ್ರಿ ಲಕ್ಷ್ಮೀಧರಾಮಾತ್ಯನು ಬರೆಯಿಸಿದ ಶಾಸನದಲ್ಲಿ ಲಕ್ಷ್ಮೀಧರನು ಮಗುವಾಗಿದ್ದಾಗ ಅವನ ತಾಯಿ ಹಾಲೆರೆಯುತ್ತಾ ಅದರೊಂದಿಗೆ ಉದಾತ್ತ ವಿಚಾರದ ಸಂಸ್ಕೃತಿಯನ್ನು ರಕ್ತಗತವಾಗುವಂತೆ ಎರೆದಳೆಂಬುದನ್ನು ಶಾಸನದ ಕವಿ ಹೀಗೆ ಹೇಳಿದ್ದಾನೆ.

"ಕೆರೆಯಂ ಕಟ್ಟಿಸು ಬಾವಿಯಂ ಸವೆಸು
ದೇವಾಗಾರಮಂ ಮಾಡಿಸ
ಜ್ಜೆರೆಯೊಳ್ ಸಿಲ್ಕಿದನಾಥರಂ ಬಿಡಿಸು
ಮಿತ್ರರ್ಗಿಂಬುಕೆಯ ನಂಬಿದ
ರ್ಗೆರೆವಟ್ಟಾಗಿರು ಶಿಷ್ಯರಂ ಪೊರೆ ಎನ್ನುತ್ತಿಂ
ತೆಲ್ಲಮಂ ಪಿಂತೆತಾ
ನೆರೆದಳ್ ಪಾಲೆರೆವಂದು ತೊಟ್ಟು ಕಿವಿಯೊಳ್
ಲಕ್ಷ್ಮೀಧರಾಮಾತ್ಯನಾ."

ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯಗಳನ್ನು ನಿರ್ಮಿಸು, ಬಂಧನಕ್ಕೆ ಸಿಕ್ಕ ಅನಾಥರನ್ನು ಬಿಡಿಸು, ಸ್ನೇಹಿತರಿಗೆ ಸಹಾಯಕವಾಗು, ನಂಬಿದವರಿಗೆ ಆಶ್ರಯದಾತನಾಗು, ಸತ್ಪುರುಷರನ್ನು ರಕ್ಷಿಸು ಎಂದು ಮುಂತಾಗಿ ಅವನ ಕಿವಿಯಲ್ಲಿ ಹೇಳುತ್ತಾ ಒಂದೊಂದು ತೊಟ್ಟು ಹಾಲನ್ನು ಬಾಯಿಯಲ್ಲಿ ಹಾಕಿದಳಂತೆ ಅವನ ತಾಯಿ. ಎಂಥ ಅರ್ಥವತ್ತಾದ ಕಲ್ಪನೆ ಕವಿಯದು. ಲಕ್ಷ್ಮೀಧರಾಮಾತ್ಯನ ಎಲ್ಲಾ ಸತ್ಕಾರ್ಯಗಳ ಹಿಂದೆ ಆ ಮಹಾತಾಯಿಯ ಮಹಾದಾಶಯದ ಆರ್ಶೀವಾದ ಅಮೃತ ರೂಪದಲ್ಲಿ ರಕ್ತಗತವಾಗಿ ನಿಂತಿರಬೇಕೆಂದು ಹೇಳಿದ ಕವಿ ನಮ್ಮ ಸಂಸ್ಕೃತಿಯ ತಿರುಳನ್ನೇ ಮುಂದಿಟ್ಟಿದ್ದಾರೆ.

ಈ ಕಾರ್ಯ ಒಂದು ಸಾಮಾಜಿಕ ಹೊಣೆಯಾಗಿದ್ದಷ್ಟು ಅಲ್ಲದೇ ಜನರ ಪ್ರೀತಿಗಳಿಸುವ ಮಾರ್ಗವು ಆಗಿತ್ತು. ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕಾದರೆ ಬೆಳೆಗಳು ಸಮೃದ್ಧವಾಗಿ

ಬೆಳೆಯಬೇಕು. ನೀರಾವರಿ ವ್ಯವಸ್ಥೆ ಕಲ್ಪಿಸಿದರೆ ಮಾತ್ರ ಇದು ಸಾಧ್ಯ. ಈ ಅನಿವಾರ್ಯತೆಯನ್ನರಿತ ಅರಸರು, ಅಧಿಕಾರಿಗಳು ಮತ್ತು ಶ್ರೀಮಂತರು ಅನೇಕ ಕೆರೆ-ಬಾವಿಗಳ ನಿರ್ಮಾಣ ಪ್ರಾರಂಭಿಸಿದರು.

ಎ. ಕೆರೆಗಳು

ಭಾರತದಲ್ಲಿ ಕೆರೆಗಳು ಸುಮಾರು ಎರಡು ಸಾವಿರ ವರ್ಷಗಳಿಂದಲೂ ಕಂಡುಬಂದಿವೆಯಾದರೂ, ಕರ್ನಾಟಕದಲ್ಲಿ ಕೆರೆಗಳ ನಿರ್ಮಾಣ ಕಾರ್ಯವು ಅಷ್ಟೇನು ಭರದಿಂದ ಸಾಗಿರಲಿಲ್ಲ. ಕರ್ನಾಟಕದ ಪ್ರಮುಖ ಅರಸು ಮನೆತನಗಳಲ್ಲೊಂದಾದ ಕಲ್ಯಾಣ ಚಾಲುಕ್ಯರ ಕಾಲದಿಂದ ಕೆರೆಗಳ ನಿರ್ಮಾಣ ಕಾರ್ಯವು ಹೊಸತೊಂದು ಚೈತನ್ಯವನ್ನು ಪಡೆಯಿತು. ಈ ಕಾಲವನ್ನು ಕೆರೆಗಳ ಸುವರ್ಣಯುಗವೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.[೮೭] ಕೆರೆ ಕಟ್ಟಿಸುವುದು, ಬೇಸಾಯಕ್ಕೆ ನೀರಾವರಿ ಸೌಲಭ್ಯಗಳನ್ನೊದಗಿಸುವುದು, ಬಾವಿಗಳನ್ನು ತೋಡಿಸುವ ಕಾರ್ಯಗಳು ಇಹ ಮತ್ತು ಪರಲೋಕಗಳಲ್ಲಿ ಒಳ್ಳೆಯ ಸದ್ಗತಿಯು ದೊರಕುವುದೆಂಬ ಜನರ ಬಲವಾದ ನಂಬಿಕೆಯೇ ಕರ್ನಾಟಕವನ್ನಾಳಿದ ಅನೇಕ ಅರಸು ಮನೆತನಗಳ ಅರಸರುಗಳು ಈ ಕೆಲಸವನ್ನು ನಿರಂತರವಾಗಿ ಕೈಗೊಂಡಿರುವುದು ಕಂಡುಬರುತ್ತದೆ. ಕೆರೆಗಳು ವ್ಯವಸಾಯಕ್ಕೆ ಮಾತ್ರವಲ್ಲದೇ ಅನೇಕ ಇನ್ನಿತರ ಕೆಲಸಗಳಿಗೆ ಅವಶ್ಯಕವಾಗಿರುವುದನ್ನು ಎಲ್ಲರೂ ಬಲ್ಲರಷ್ಟೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಹೆಸರಿಸಬಹುದು. ಕೆರೆಯ ನೀರನ್ನು ಕುಡಿಯುವುದಕ್ಕೆ, ನೀರಿನಲ್ಲಿ ಮೀನು ಸಾಕಲು, ಹೊಲಗದ್ದೆಗಳಿಗೆ ಹಾಯಿಸಲು ಮುಂತಾದ ಅತ್ಯವಶ್ಯಕ ಕಾರ್ಯಗಳಲ್ಲಿ ಬಳಸಿಕೊಳ್ಳುತ್ತಿದ್ದರೆಂದು ನಮಗೆ ಅನೇಕ ಶಿಲಾಶಾಸನಗಳಿಂದ ತಿಳಿದುಬರುತ್ತದೆ.

ಐಮಂಗಲ ಹೋಬಳಿಯಲ್ಲಿ ಕಂಡುಬರುವಂತಹ ಅನೇಕ ಕೆರೆಗಳು ಮಳೆಯನ್ನೇ ಆಶ್ರಯಿಸಿವೆ. ಕೆಲವು ಕೆರೆಗಳನ್ನು ಜೀವಂತವಾಗಿರಿಸುವ ಸಲುವಾಗಿ ಸರ್ಕಾರದ ಲೋಕಪಯೋಗಿ ಮತ್ತು ನೀರಾವರಿ ಇಲಾಖೆಯವರು ಕೆಲವು ಮಳೆ ಆಶ್ರಿತ ಕೆರೆಗಳನ್ನಾಗಿಸದ್ದಾರೆ. ಹರ್ತಿಕೋಟೆ ಕೆರೆ, ಐಮಂಗಲ ಕೆರೆ, ತವಂದಿಕೆರೆ, ಭರಮಗಿರಿ ಇತ್ಯಾದಿ ಕೆರೆಗಳು ಇಂದಿಗೂ ಮಳೆಯನ್ನೇ ಆಶ್ರಯಿಸಿವೆ. ಪಾಳೆಯಗಾರರ ಕಾಲದಲ್ಲಿ ಐಮಂಗಲ ಹೋಬಳಿಯ ಮಳೆಯ ವೈಪರಿತ್ಯ ಸ್ವಭಾವಗಳನ್ನು ಪರಿಗಣಿಸಿ ಕೆರೆಗಳನ್ನು ನಿರ್ಮಿಸುವಾಗ ಕೇವಲ ಒಂದು ಕೆರೆಯನ್ನು ನಿರ್ಮಿಸದೇ, ಎರಡು ಅಥವಾ ಮೂರು ಕೆರೆಗಳ ಶೃಂಖಲೆಯನ್ನು ನಿರ್ಮಿಸಿರುವುದು ಗಮನಾರ್ಹ. ನಿಸರ್ಗದ ಭೌಗೋಳಿಕ ಲಕ್ಷಣ, ಮಳೆಯ ಅತೀವೃಷ್ಟಿ ಮತ್ತು ಅನಾವೃಷ್ಟಿಯ ಸ್ವಭಾವವನ್ನರಿತು ಕೆರೆಗಳನ್ನು ವಿವಿಧ ಭೂಮಟ್ಟದಲ್ಲಿ ಒಂದಕ್ಕೊಂದು ಹೊಂದಿಕೊಂಡಿರುವಂತೆ ನಿರ್ಮಿಸಿರುತ್ತಾರೆ. ಇದರಿಂದಾಗಿ ಮೊದಲ ಕೆರೆಯ ಮೇಲ್ಮಟ್ಟದಲ್ಲಿದ್ದು, ಮಳೆಯ ನೀರು ಅದರಲ್ಲಿ ಸಂಗ್ರಹಗೊಳ್ಳುತ್ತದೆ. ಹೆಚ್ಚುವರಿ ನೀರು ಬಂದಲ್ಲಿ ಆ ನೀರು ಕೋಡಿಯ ಮೂಲಕ ಹರಿದು ಬಂದಾಗ ಎರಡನೆಯ ಕೆರೆಯಲ್ಲಿ ಸಂಗ್ರಹವಾಗುತ್ತದೆ. ಈ ವಿಶಿಷ್ಟ ಪದ್ಧತಿಯಿಂದ, ಒಮ್ಮೆ ಹೆಚ್ಚುವರಿ ನೀರು ಮೊದಲ ಕೆರೆಗೆ ಬಂದರೂ, ಕೆರೆಯು ಒಡೆಯದಂತೆ ಇರುತ್ತದೆ ಹಾಗೂ ನೀರು ಪೋಲಾಗುವುದನ್ನು ಸಹ ಎರಡನೆಯ ಕೆರೆಯ ತಪ್ಪಿಸುತ್ತದೆ. ಇಂತಹ ಕೆರೆಗಳ ಸಮೂಹವನ್ನು ಹರ್ತಿಕೋಟೆ ಗ್ರಾಮದಲ್ಲಿ ನೋಡಬಹುದು.

ಹರ್ತಿಕೋಟೆ ಕೆರೆ (ದೊಡ್ಡಕೆರೆ)

ಹರ್ತಿಕೋಟೆ ಕೆರೆಯು ಪಾಳೇಗಾರರ ಕಾಲದ ಕೆರೆಗಳಲ್ಲಿ ಒಂದಾಗಿದೆ. ಹರ್ತಿಕೋಟೆ ಗ್ರಾಮವು ಐಮಂಗಲದಷ್ಟೆ ಪ್ರಾಚೀನ ಗ್ರಾಮ. ಹರತಿ ಪಾಳೆಯಗಾರರ ಶಾಸನಗಳಲ್ಲಿ ಈ ಗ್ರಾಮಕ್ಕೆ ಹರತಿಸೀಮೆ ಮತ್ತು ಹರ್ತಿಕೋಟೆ ಸೀಮೆ ಎಂಬ ಎರಡು ಹೆಸರುಗಳನ್ನು ಬಳಸಲಾಗಿದೆ. ಕೆರೆಯು ಹರ್ತಿಕೋಟೆ ಗ್ರಾಮದ ಪೂರ್ವಕ್ಕೆ ಇದೆ. ಈ ಕೆರೆಯು ಪಾಳೆಯಗಾರರ ಪೂರ್ವ ಕಾಲದಲ್ಲಿ ಸಣ್ಣಕೆರೆಯಾಗಿದ್ದಿರಬೇಕು. ಕಾಲಕ್ರಮದಲ್ಲಿ ಈ ಪ್ರದೇಶವು ಪಾಳೆಯಗಾರರ ಆಳ್ವಿಕೆಗೆ ಒಳಪಟ್ಟನಂತರ ಕೆರೆಯನ್ನು ದೊಡ್ಡ ಪ್ರಮಾಣದಲ್ಲಿ ವಿಸ್ತರಿಸಿರಬೇಕು. ಈ ಕೆರೆಯನ್ನು ಯಾರು ನಿರ್ಮಾಣ ಮಾಡಿದರೆಂಬುದರ ವಿವರಗಳು ದೊರೆಯದ ಕಾರಣವಾಗಿ ಮೇಲೆ ಉಲ್ಲೇಖಿಸಿದ ತೀರ್ಮಾನಕ್ಕೆ ಬರಬೇಕಾಗಿದೆ. ಈ ಕೆರೆಗೆ ಹುಲ್ಲಪ್ಪನಹಳ್ಳಿಯಿಂದ ಬರುವ ದೊಡ್ಡ ಹಳ್ಳ, ಕರಿ ಓಬೇನಹಳ್ಳಿಯಿಂದ ಬರುವ ಹಳ್ಳಗಳ ಮೂಲಕ ನೀರು ಶೇಖರಣೆಗೊಳ್ಳುತ್ತದೆ. ಕಾಲುವೆಗಳ ರಚನಾತ್ಮಕ ಶೈಲಿಯು ಪಾಳೆಗಾರರ ಶೈಲಿಯನ್ನು ಹೋಲುತ್ತದೆ. ಈ ಕೆರೆಗೆ ಎರಡು ತೂಬುಗಳು ಇದ್ದು, ಅವುಗಳಲ್ಲಿ ಒಂದಕ್ಕೆ ಮರದ ತುಂಡುಗಳನ್ನು ಅಳವಡಿಸಿದ್ದರೆ, ಇನ್ನೊಂದಕ್ಕೆ ಕಬ್ಬಿಣದ ಬಾಗಿಲುಗಳನ್ನು (Shutter) ಅಳವಡಿಸಲಾಗಿದೆ. ಈ ಎರಡೂ ತೂಬುಗಳು ವಿವಿಧ ಎತ್ತರಗಳಲ್ಲಿದ್ದು ಅವುಗಳಿಗೆ ಅನುಗುಣವಾಗಿ ಕಾಲುವೆಗಳು ಸಹ ವಿವಿಧ ಎತ್ತರಗಳಲ್ಲಿ ಇರುವುದನ್ನು ಗಮನಿಸಬಹುದು. ಕೆರೆಯ ಗರಿಷ್ಟಮಟ್ಟ ಹಾಗೂ ಕೋಡಿಯ ಮಟ್ಟವನ್ನು ಪರಿಗಣಿಸಿ ಕೆರೆಯು ತುಂಬಾ ದೊಡ್ಡದಾಗಿರುವುದರಿಂದ ಎರಡು ಕೋಡಿಗಳನ್ನು ನೋಡಬಹುದು. ಇದರ ಕೋಡಿಗಳನ್ನು ರತ್ನಗಿರಿ ಪಾಳೇಗಾರರು[೮೮] ನಿರ್ಮಿಸಿದರೆಂದು ಇಲ್ಲಿಯ ಸ್ಥಳೀಯರು ಹೇಳುವುದುಂಟು. ಈ ಕೆರೆಯ ಜಲಾಯನ ಪ್ರದೇಶವು ೮೭.೫೨ ಮೈಲಿಗಳು ಮತ್ತು ಅಚ್ಚುಕಟ್ಟು ಪ್ರದೇಶವು ೧೪೫೫ ಎಕರೆಗಳು. ಈ ಕೆರೆ ಪ್ರದೇಶದ ಮೇಲ್ಭಾಗದಲ್ಲಿ ಸಾಕಷ್ಟು ಕೆರೆಗಳು ಇದ್ದು ಅವುಗಳ ಹೆಚ್ಚುವರಿ ನೀರು ಕೆರೆಯಲ್ಲಿ ಸಂಗ್ರಹಗೊಳ್ಳುತ್ತದೆ. ಈ ಕೆರೆಯ ಏರಿಯ ಉದ್ದ ೨೦.೨೫ ಮೀಟರ್, ಎತ್ತರ ೬.೯೬ ಮೀ. ಮತ್ತು ಏರಿಯ ಮೇಲ್ಭಾಗದ ಅಗಲ ೭.೯೬ ಮೀ. ಇದರ ಮೇಲೆ ಒಂದು ಎತ್ತಿನಗಾಡಿ ಹೋಗಬಹುದು. ಕೆರೆಯ ಆಯಕಟ್ಟು ಪ್ರದೇಶದಲ್ಲಿ ಭತ್ತ, ರಾಗಿ, ಜೋಳ, ತೆಂಗು, ಹತ್ತಿ, ಸೂರ್ಯಕಾಂತಿ ಮುಂತಾದವುಗಳನ್ನು ಸರ್ವಕಾಲದಲ್ಲಿಯೂ ಬೆಳೆಯುತ್ತಾರೆ.

ಐಮಂಗಲ ಕೆರೆ

ಐಮಂಗಲ ಕೆರೆಯು ಕಲ್ಕುಂಟೇಶ್ವರಿ ದೇವಾಲಯದ ಹಿಂಭಾಗದಲ್ಲಿದೆ. ಇದು ಮಳೆಯಾಶ್ರಿತ ಕೆರೆಯಾಗಿದೆ. ಐಮಂಗಲ ಊರಿನಿಂದ ಸುಮಾರು ಮೂರು ಕಿ.ಮೀ. ದೂರದಲ್ಲಿ ಇದ್ದು ಐಮಂಗಲ ಮತ್ತು ಬುರುಜಿನರೊಪ್ಪ ಗ್ರಾಮದವರು ಇದರ ಪ್ರಯೋಜನವನ್ನು ಹೊಂದುತ್ತಿದ್ದಾರೆ. ಈ ಕೆರೆಗೆ ಭರಮಗಿರಿ, ಮರಡಿದೇವಿಗೆರೆಯಿಂದ ಬರುವ ಹಳ್ಳಗಳ ನೀರು ಬಂದು ಶೇಖರಣೆಗೊಳ್ಳುತ್ತದೆ. ಐಮಂಗಲ ಕೆರೆಯು ಸಹ ನೀರಾವರಿ ಇಲಾಖೆಯವರ ಅಧೀನದಲ್ಲಿಯೇ ಇದೆ. ಸಾಕಷ್ಟು ಆಧಾರಗಳು ದೊರೆಯದ ಕಾರಣ ಈ ಕೆರೆಯ ನಿರ್ಮಾತೃ ಯಾರೆಂಬುದನ್ನು ಖಚಿತತೆಯಿಂದ ಹೇಳಲು ಸಾಧ್ಯವಿಲ್ಲ. ಈ ಕೆರೆಗೆ ಒಂದು ತೂಬು ಇದ್ದು ಅದಕ್ಕೆ ಕಬ್ಬಿಣದ ಬಾಗಿಲುಗಳನ್ನು ಅಳವಡಿಸಲಾಗಿದೆ. ಈ ಕೆರೆಯ ಜಲಾನಯನ ಪ್ರದೇಶವು ೮೫ ಮೈಲಿಗಳು

ಮತ್ತು ಅಚ್ಚುಕಟ್ಟು ಪ್ರದೇಶವು ಹಾಳುಬಿದ್ದಿದೆ. ಈ ಕೆರೆಯ ಏರಿಯ ಉದ್ದ ೧೫.೨೫ ಮೀಟರ್, ಎತ್ತರ ೭.೬೧ ಮೀ. ಏರಿಯ ಮೇಲ್ಭಾಗದ ಅಗಲ ೭.೯೨ ಮೀ. ಮೊದಲು ಪಾಳೆಯಗಾರರ ಕಾಲದಲ್ಲಿ ಈ ಕೆರೆಯ ನೀರು ಕಾಲುವೆ ಮುಖಾಂತರ ಕೋಟೆಯ ಕಂದಕಗಳಲ್ಲಿ ನೀರು ಹರಿಸಲಾಗುತ್ತಿತ್ತಂತೆ ಎಂದು ಸ್ಥಳೀಯರು ಹೇಳುತ್ತಾರೆ.

ತವಂದಿ ಕೆರೆ

ಐಮಂಗಲದಿಂದ ೧೫ ಕಿ.ಮೀ. ಅಂತರದಲ್ಲಿ ಕಂಡುಬರುವ ಗ್ರಾಮ. ಈ ಗ್ರಾಮದಲ್ಲಿ ಪ್ರಾಚೀನ ಕಾಲದ ಕೆರೆ ಇದೆ. ತಾಮ್ರಶಾಸನದಲ್ಲಿ ಉಲ್ಲೇಖಿತವಾಗಿರುವ ಗಂಗರಾಜರ ಶ್ರೀ ವಿಕ್ರಮರಾಜ ಅರಸ ಬ್ರಾಹ್ಮಣರಿಗೆ ತಡಸೂರರ ಕೆರೆಯನ್ನು ದಾನ ಮಾಡಿದ ಅಂಶ ತಿಳಿಯುತ್ತದೆ. ಅಂದಿನ ತಡಸೂರರ ಕೆರೆ ಇಂದು ತವಂದಿ ಕೆರೆ, ತವನಿಧಿ, ತವಂಧಿಯಾಗಿ ಹೆಸರು ಬದಲಾಗಿರಬಹುದು.[೮೯] ಕೆರೆಯು ಗ್ರಾಮದ ಉತ್ತರಕ್ಕೆ ಇದೆ. ಐಮಂಗಲಕ್ಕೆ ಈ ಕೆರೆ ಏರಿಯ ಮೇಲಿರುವ ರಸ್ತೆಯ ಮೂಲಕ ಹಾದು ಹೋಗಬಹುದು. ಈ ಕೆರೆಯ ಏರಿಯು ಸುಮಾರು ಮೂರು ಕಿ.ಮೀ.ಗಳಷ್ಟು ಇದ್ದು ನೀರಾವರಿ ಇಲಾಖೆಯವರು ಕೆರೆಯ ರಕ್ಷಣೆಯನ್ನು ಮಾಡುತ್ತಿದ್ದಾರೆ. ಈ ಕೆರೆಯ ನಿರ್ಮಾತೃ ಯಾರೆಂಬುದನ್ನು ಖಚಿತತೆಯಿಂದ ಹೇಳಲು ಸಾಧ್ಯವಿಲ್ಲ. ಈ ಕೆರೆಗೆ ಮಾರಿಕಣಿವೆಯಿಂದ ಬರುವ ಹಳ್ಳಗಳ ಮೂಲಕ ನೀರು ಬಂದು ಶೇಖರಣೆಗೊಳ್ಳುತ್ತವೆ. ಈ ಕೆರೆಗೆ ಒಂದು ತೂಬು ಇದ್ದು ಅದಕ್ಕೆ ಕಬ್ಬಿಣದ ಬಾಗಿಲುಗಳನ್ನು ಅಳವಡಿಸಲಾಗಿದೆ. ಈ ಕೆರೆಯ ಜಲಾನಯನ ಪ್ರದೇಶ ೧೧೪ ಮೈಲಿಗಳು ಮತ್ತು ಅಚ್ಚುಕಟ್ಟು ಪ್ರದೇಶವು ೪೫.೯೫ ಎಕರೆಗಳು ಈ ಕೆರೆ ಪ್ರದೇಶದ ಮೇಲ್ಭಾಗದಲ್ಲಿ ಸಾಕಷ್ಟು ಕೆರೆಗಳಿದ್ದು ಅವುಗಳ ಹೆಚ್ಚುವರಿ ನೀರು ಕೆರೆಯಲ್ಲಿ ಸಂಗ್ರಹಗೊಳ್ಳುತ್ತದೆ. ಈ ಕೆರೆ ಏರಿಯ ಉದ್ದ ೧೫.೨೫ ಮೀಟರ್, ಎತ್ತರ ೯.೨೫ ಮೀ. ಮತ್ತು ಏರಿಯ ಮೇಲ್ಭಾಗದ ಅಗಲ ೬.೯೬ ಮೀ. ಇದರ ಮೇಲೆ ಒಂದು ಎತ್ತಿನಗಾಡಿ ಹೋಗಬಹುದು. ಕೆರೆಯ ಆಯಕಟ್ಟು ಪ್ರದೇಶದಲ್ಲಿ ಭತ್ತ, ರಾಗಿ, ಜೋಳ, ತೆಂಗು, ಅಡಿಕೆ, ಬಾಳೆ ಮುಂತಾದವುಗಳನ್ನು ಬೆಳೆಯುತ್ತಾರೆ.

ಬಿ. ಬಾವಿಗಳು

ಕೆರೆಗಳಂತೆ ಬಾವಿಗಳು ಪ್ರಾಚೀನ ಕರ್ನಾಟಕದ ನೀರಾವರಿ ಸಾಧನಗಳಲ್ಲಿ ಅತ್ಯಂತ ಪ್ರಮುಖವಾದವು. ಇವುಗಳ ನಿರ್ಮಾಣ ಕಾರ್ಯ ಪುರಾತನ ಕಾಲದಿಂದ ಆರಂಭಗೊಂಡಿದೆ. ತೋಟ-ಗದ್ದೆಗಳಲ್ಲಿ ಬಾವಿಗಳಿರುತ್ತಿದ್ದವು. ದೇವಾಲಯಗಳಿಗೆ ಹೊಂದಿಕೊಂಡಂತೆ ಬಾವಿಗಳನ್ನು ನಿರ್ಮಿಸಿರುವುದು ಸಾಮಾನ್ಯವಾಗಿ ಕಂಡುಬರುತ್ತವೆ. ಬಾವಿಗಳ ನಿರ್ಮಾಣ ಕಾರ್ಯದ ಜೊತೆಗೆ ಅದರ ಸಂರಕ್ಷಣೆಗೆ ಪ್ರಾಮುಖ್ಯತೆ ನೀಡಲಾಯಿತು. ಬಾವಿಗಳು ಆಕರ್ಷಕವಾಗಿ ಕಾಣಲೆಂದು ಅಂದಿನ ದೇಶದ ಮೂಲೆ ಮೂಲೆಯಲ್ಲಿರುವ ಕಲ್ಕುಟಕರನ್ನು ಬರಮಾಡಿಕೊಂಡು ಕಟ್ಟಲಾಗುತ್ತಿತ್ತು. ನಮ್ಮ ಸಂಸ್ಕೃತಿಯ ಕುರುಹುಗಳಾದ ರಾಮಾಯಣ, ಮಹಾಭಾರತ, ಪಂಚತಂತ್ರ ಕಥೆಗಳು, ಶಿವ, ವಿಷ್ಣು, ಬ್ರಹ್ಮ, ಗಣೇಶ, ಪಾರ್ವತಿ ಮುಂತಾದ ದೇವತೆಗಳ ಉಬ್ಬುಶಿಲ್ಪಗಳನ್ನು ಬಾವಿ ಕಟ್ಟಲಿಕೆ ಬಳಸುತ್ತಿದ್ದ ಕಲ್ಲುಗಳ ಮೇಲೆ ಕೆತ್ತಿ ನಮ್ಮ ಸಂಸ್ಕೃತಿ ಜನರ ಮನಸ್ಸಿನಲ್ಲಿ ಸದಾ ಅಚ್ಚಳಿಯದಂತೆ ಉಳಿಯಲು ಸಹಕರಿಸಿದ್ದಾರೆ.[೯೦]

ಹಿರಿಯೂರು ತಾಲೂಕಿನ ಶಾಸನಗಳಲ್ಲಿ ಬಾವಿಗಳ ಪ್ರಸ್ತಾಪ ಎಲ್ಲಿಯೂ ಕಂಡುಬಂದಿಲ್ಲ. ಆದರೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹರ್ತಿಕೋಟೆ, ಕಂದಿಕೆರೆ, ಹೆಮದಲ, ವದ್ದೀಕೆರೆಗಳಲ್ಲಿ ಪುರಾತನ ಬಾವಿಗಳಿವೆ. ಐಮಂಗಲ ಪ್ರದೇಶದ ಜನರು ಪುರಾತನ ಕಾಲದಿಂದ ಬಾವಿಯ ನೀರನ್ನು ಕುಡಿಯಲಿಕ್ಕೆ ಬಳಸುತ್ತಿದ್ದರು. ಕಾಲಾನಂತರ ಅಂತರ್‌ಜಲಮಟ್ಟ ಕಡಿಮೆಯಾದಾಗ ಜನರು ಬೋರ್‌ವೆಲ್‌ಗಳನ್ನು ಹಾಕಿಸಲಿಕ್ಕೆ ಪ್ರಾರಂಭಿಸಿದರು. ಭೂಮಿಯ ಆಳಕ್ಕೆ ಹೋದಂತೆ ಮಣ್ಣಿನಲ್ಲಿರುವ ಸುಣ್ಣದ ಅಂಶ ನೀರಿನೊಂದಿಗೆ ಬೆರೆತಿದೆ. ಈ ನೀರನ್ನು ನಿರಂತರವಾಗಿ ಕುಡಿಯುವ ಜನರು ಎಲುಬುಗಳ ಸವೆತ, ಮಂಡಿನೋವುಗಳಂಥ ರೋಗದಿಂದ ಬಳಲುತ್ತಿದ್ದಾರೆ. ಈಗ ಬಹುತೇಕ ಬಾವಿಗಳಲ್ಲಿ ನೀರು ಬರಿದಾಗಿವೆ. ಈ ಭಾಗದಲ್ಲಿರುವ ಪುರಾತನ ಬಾವಿಗಳ ಬಗ್ಗೆ ವಿವರಿಸಿದ್ದೇನೆ.

ಹರ್ತಿಕೋಟೆ (ಕಲ್ಲುಬಾವಿ)

ಹರ್ತಿಕೋಟೆಯ ಜನರಿಗೆ ಈಗಲೂ ಕುಡಿಯುವ ನೀರನ್ನು ಒದಗಿಸುತ್ತಿರುವ ಊರಿನ ಮಧ್ಯದಲ್ಲಿರುವ ಈ ಕಲ್ಲುಬಾವಿಯು[೧೧] ಸರ್ವರನ್ನೂ ವಿಸ್ಮಯಗೊಳಿಸುತ್ತದೆ. ಉತ್ತರಾಭಿಮುಖವಾಗಿ ನಿಂತಿರುವ ೭ ಅಡಿ ಎತ್ತರದ ಬಾಗಿಲುವಾಡವನ್ನು ದಾಟಿ ಹನ್ನೆರಡು ಮೆಟ್ಟಿಲುಗಳನ್ನಿಳಿದು ಒಳಗೆ ಪ್ರವೇಶಿಸಿತ್ತಿದ್ದಂತೆ ಮಾರ್ಗವು ಎಡಕ್ಕೆ(ಪೂರ್ವಾಭಿಮುಖವಾಗಿ) ತಿರುಗಿ ಅಲ್ಲಿಂದ ೭೫ ಕಲ್ಲು ಪಾವಟಿಕೆಗಳಷ್ಟು ಆಳಕ್ಕೆ ಇಳಿಯುತ್ತದೆ. ತಳದಲ್ಲಿ ಚೌಕಾಕಾರದಲ್ಲಿ ಸುತ್ತಲೂ ೩ ಅಡಿಗಳಷ್ಟು ಅಗಲ ಸ್ಥಳವಿದ್ದು, ನಾಲ್ಕು ದಿಕ್ಕಿಗೂ ಓಡಾಡಲು ಬರುವಷ್ಟು ಸ್ಥಳಾವಕಾಶವಿರುವಂತೆ ರಚಿಸಲ್ಪಟ್ಟಿದೆ. ಈ ಚೌಕಾಕಾರದ ಒಳಭಾಗದ ಅಳತೆಯು ಪೂರ್ವ-ಪಶ್ಚಿಮ ೯ ಮತ್ತು ಉತ್ತರ-ದಕ್ಷಿಣ ೮.೨ ಅಡಿಗಳಷ್ಟಿದೆ. ಈ ತಳದಲ್ಲಿ ನಿಂತು ಮೇಲುಗಡೆ ದೃಷ್ಟಿ ಹಾಯಿಸಿದರೆ ಆಕಾಶದತ್ತ ಚಾಚಿರುವಂತೆ ತೋರುವ, ಸುತ್ತಲೂ ಆವರಿಸಿರುವ ಕಲ್ಲು ಪ್ರಕಾರಗಳ ರೋಮಾಂಚಕ ನೋಟವು ನೋಡುಗನನ್ನು ಪುಳಕಿತನನ್ನಾಗಿಸುತ್ತದೆ. ಈ ತಳಭಾಗದಿಂದ ಮೇಲಿನ ಭೂಮಟ್ಟದವರೆಗೆ ಎತ್ತರ ೩೨.೭ ಅಡಿಗಳು. ಬಾವಿಯ ಒಳಮೈಯನ್ನು ಒಂದು ಅಡಿಯಿಂದ ಮೂರು ಅಡಿಗಳವರೆಗೆ ಮೆಟ್ಟಿಲುಗಳ ರೂಪದಲ್ಲಿ ವಿಂಗಡಿಸಿರುವ ಅಂತಸ್ತುಗಳಲ್ಲಿ ನಿರ್ಮಿಸಲಾಗಿದೆ. ಬಾವಿಯ ತಳದಲ್ಲಿ ಪೂರ್ವ-ಪಶ್ಚಿಮ ೬ ಮತ್ತು ಉತ್ತರ-ದಕ್ಷಿಣ ೫.೨ ಅಡಿಗಳ ಅಗಲದ ಒಳಬಾವಿಯೊಂದಿದ್ದು ಅದರ ಆಳ ೧೩ ಅಡಿಗಳಷ್ಟಿದೆ. ಈ ತಳಬಾವಿಯ ಮೇಲೆ ಭಾರಿ ಪ್ರಮಾಣದ ಅಡ್ಡಗಲ್ಲೊಂದನ್ನು ಹಾಕಿದ್ದಾರೆ. ಈ ಒಳಬಾವಿಯ ತಳದಲ್ಲಿ ಬೃಹತ್ ಬಂಡೆಯೊಂದು ಅಡ್ಡ ಮಲಗಿದಂತೆ ಕಾಣುತ್ತಿದ್ದು, ಪಶ್ಚಿಮ ಮತ್ತು ದಕ್ಷಿಣ ಭಾಗಗಳಿಂದ ನೀರಿನ ಸೆಲೆ ಗೋಚರಿಸುತ್ತದೆ. ಮಳೆಗಾಲದಲ್ಲಿ ಮಾತ್ರ ಸ್ವಲ್ಪಮಟ್ಟಿಗೆ ಜಲಾವೃತವಾಗುವ ಈ ಬಾವಿಯು ಬೇಸುಗೆಯಲ್ಲಿ ತನ್ನೆಲ್ಲ ಹೊರ-ಒಳ ಮೈಯನ್ನು ಪ್ರದರ್ಶಿಸುತ್ತದೆ.

ಬಾವಿಯೊಳಗಿಳಿಯುವ ಮೆಟ್ಟಿಲುಗಳ ಮಾರ್ಗವು ತಳದಲ್ಲಿ ನಾಲ್ಕು ಅಡಿಗಳಷ್ಟು ಅಗಲವಿದ್ದು, ಇಕ್ಕೆಲಗಳಲ್ಲಿ ಎರಡು ಗೋಡೆಗಳೂ ಮೇಲಕ್ಕೆ ಹೋದಂತೆ ನೆಲದ ಮಟ್ಟದಲ್ಲಿ ೧೨ ಅಡಿಗಳಷ್ಟು ಅಗಲವಾಗಿ ಚಾಚಿದೆ. ಮೆಟ್ಟಿಲುಗಳ ಮಾರ್ಗವು ಅಂತ್ಯಗೊಂಡು ಚೌಕಾಕಾರವಾದ ಬಾವಿಯನ್ನು

ಸಂಧಿಸುವ ಸ್ಥಳದಲ್ಲಿ ಇಕ್ಕೆಲಗಳಲ್ಲಿ ಚಾಚಿರುವ ಗೋಡೆಗಳಿಗೆ ಮೂರು ಹಂತಗಳಲ್ಲಿ ಅಂದರೆ ತಳದಿಂದ ಮೇಲಕ್ಕೆ ಹೋದಂತೆ ೧೪ ಅಡಿ, ೧೦.೪ ಅಡಿ ಹಾಗೂ ೧೦ ಅಡಿಗಳ ಅಂತರದಲ್ಲಿ ಉದ್ದದ ಹಾಗೂ ದಪ್ಪವಾದ ಕಲ್ಲುತೊಲೆಗಳನ್ನು ಅಳವಡಿಸಲಾಗಿದೆ. ಬಹುಶಃ ಗೋಡೆಗಳ ಭದ್ರತೆ ದೃಷ್ಟಿಯಿಂದ ಇವುಗಳನ್ನು ಅಳವಡಿಸಿದ್ದಿರಬಹುದು.

ಕಂದಿಕೆರೆ (ಕಲ್ಲುಬಾವಿ)

ಕಂದಿಕೆರೆ ರಂಗನಾಥ ದೇವಾಲಯದ ಮುಂಭಾಗದಲ್ಲಿ ಪ್ರಾಚೀನ ಕಾಲದ ಕಲ್ಲುಬಾವಿಯು ನೋಡುಗರನ್ನು ಮೂಕ ವಿಸ್ಮಯಗೊಳಿಸುತ್ತದೆ. ದಕ್ಷಿಣಾಭಿಮುಖವಾಗಿರುವ ಕಲ್ಲುಬಾವಿ ೪೫ ಕಲ್ಲು ಪಾವಟಿಕೆಗಳಷ್ಟು ಆಳಕ್ಕೆ ಇಳಿಯುತ್ತದೆ. ತಳದಲ್ಲಿ ಚೌಕಾಕಾರದಲ್ಲಿ ೩ ಅಡಿಗಳಷ್ಟು ಅಗಲ ಸ್ಥಳವಿದ್ದು ನಾಲ್ಕು ದಿಕ್ಕಿಗೂ ಓಡಾಡಲು ಬರುವಷ್ಟು ಸ್ಥಳವಕಾಶವಿರುವಂತೆ ರಚಿಸಲ್ಪಟ್ಟಿದೆ. ಈ ಚೌಕಾಕಾರದ ಒಳಭಾಗದ ಅಳತೆಯು ಪೂರ್ವ-ಪಶ್ಚಿಮ ೯೦ ಮತ್ತು ಉತ್ತರ-ದಕ್ಷಿಣ ೮೦.೨ ಅಡಿಗಳಷ್ಟಿದೆ. ಈ ತಳದಲ್ಲಿ ನಿಂತು ಮೇಲೆ ದೃಷ್ಟಿ ಹಾಯಿಸಿದರೆ ಸುತ್ತಲೂ ಆವರಿಸಿರುವ ಕಲ್ಲು ಪ್ರಕಾರಗಳು ನೋಡುಗರನ್ನು ಮುಖ ವಿಸ್ಮಯಗೊಳಿಸುತ್ತದೆ. ಈ ತಳಭಾಗದಿಂದ ಮೇಲಿನ ಭೂಮಟ್ಟದವರೆಗಿನ ಎತ್ತರ ೨೨.೭ ಅಡಿಗಳು ಬಾವಿಯ ಒಳಮೈಯನ್ನು ಒಂದು ಅಡಿಯಿಂದ ೨೧/೨ ಅಡಿಗಳವರೆಗೆ ಮೆಟ್ಟಿಲುಗಳ ರೂಪದಲ್ಲಿ ವಿಂಗಡಿಸಿರುವ ಅಂತಸ್ತುಗಳಲ್ಲಿ ನಿರ್ಮಿಸಲಾಗಿದೆ. ಬಾವಿಯ ತಳದಲ್ಲಿ ಪೂರ್ವ-ಪಶ್ಚಿಮ ೮ ಮತ್ತು ಉತ್ತರ-ದಕ್ಷಿಣ ೭.೫ ಅಡಿಗಳ ಅಗಲದ ಒಳಬಾವಿಯೊಂದಿದ್ದು ಅದರ ಆಳ ೧೫ ಅಡಿಗಳಷ್ಟಿದೆ. ಈ ಒಳಬಾವಿಯ ತಳದಲ್ಲಿ ಬಂಡೆಗಳನ್ನು ಹೊದಿಸಲಾಗಿದೆ. ಮಳೆಗಾಲದಲ್ಲಿ ಸ್ವಲ್ಪಮಟ್ಟಿಗೆ ನೀರು ಇದ್ದು, ಬೇಸುಗೆಯಲ್ಲಿ ಹೊರ-ಒಳಮೈಯನ್ನು ಪ್ರದರ್ಶಿಸುತ್ತದೆ. ಬಾವಿಯಲ್ಲಿ ಇಳಿಯುವ ಮೆಟ್ಟಿಲುಗಳ ಮಾರ್ಗವು ತಳದಲ್ಲಿ ೮ ಅಡಿಗಳಷ್ಟು ಅಗಲವಿದ್ದು, ನಂತರ ಎರಡು ಗೋಡೆ ಮೇಲಕ್ಕೆ ಹೋದಂತೆ ಮೇಲೆ ನೆಲದ ಮಟ್ಟದಲ್ಲಿ ೧೫ ಅಡಿಗಳಷ್ಟು ಅಗಲವಾಗಿ ಚಾಚಿದೆ.

ವದ್ದೀಕೆರೆ (ಮಜ್ಜನಬಾವಿ)

ವದ್ದೀಕೆರೆ ಸಿದ್ಧೇಶ್ವರ ಅಥವಾ ಕಾಲಭೈರವ ದೇವಾಲಯದ ಆವರಣದಲ್ಲಿ ಪುರಾತನ ಬಾವಿಯಿದ್ದು, ಈ ಬಾವಿಯನ್ನು ಮಜ್ಜನಬಾವಿ[೧೨] ಎಂದು ಕರೆಯುತ್ತಾರೆ. ಈ ಬಾವಿಯು ಹೊರಮೈ ಚೌಕಾಕಾರವಾಗಿದ್ದು, ಒಳಮೈ ವೃತ್ತಾಕಾರವಾಗಿ ಆಳಕ್ಕೆ ಇಳಿಯುತ್ತದೆ. ಚೌಕಾಕಾರದ ಭಾಗದಲ್ಲಿ ಅಗಲವಾದ ಚಪ್ಪಡಿ ಕಲ್ಲನ್ನು ಹೊದಿಸಲಾಗಿದೆ. ವೃತ್ತಾಕಾರದ ಭಾಗದಲ್ಲಿ ಸುಮಾರು ೨೦ ಅಡಿಗಳಷ್ಟು ಆಳ ಹೊಂದಿದ್ದು ಕರಿಚಕ್ಕೆ ಕಲ್ಲುಗಳನ್ನು ಹೊದಿಸಲಾಗಿದೆ. ಬಾವಿಯ ಮೇಲ್ಭಾಗದಲ್ಲಿ ಉದ್ದದ ಹಾಗೂ ದಪ್ಪನಾದ ಕಲ್ಲುತೊಲೆಗಳನ್ನು ಅಳವಡಿಸಿದ್ದು ಬಾವಿಯಿಂದ ನೀರನ್ನು ಹೊರ ತೆಗೆಯಲು ಕಬ್ಬಿಣದ ಗಾಲಿಗಳನ್ನು ಅಳಡಿಸಲಾಗಿದೆ. ಇಲ್ಲಿಯ ಬಾವಿಯ ನೀರು ಸರ್ವರೋಗ ನಿವಾರಣೆ ಮಾಡುವ ಶಕ್ತಿ ಹೊಂದಿದೆ. ಪ್ರತಿವರ್ಷ ನಡೆಯುವ ಸಿದ್ಧೇಶ್ವರಸ್ವಾಮಿ ಜಾತ್ರೆಯಲ್ಲಿ 'ಸಿದ್ಧಭುಕ್ತಿ' ಎಂಬ ಆಚರಣೆ ಇದೆ. ಆ ದಿವಸ ಪ್ರಾಣಿಬಲಿ ಕೊಡುವುದರಿಂದಲೋ ಏನೋ ಇಲ್ಲಿಯ ಬಾವಿಯಲ್ಲಿ ಒಂದೇ ಒಂದು ಹನಿ ನೀರೂ

ಇಲ್ಲಿವೇ ಬತ್ತಿ ಹೋಗುತ್ತದೆ. ಮರುದಿನ ಗಂಗಾದೇವತೆಗೆ ಪೂಜೆ ಮಾಡಿದ ಮೇಲೆ ಊರಿನ ವರೆಲ್ಲರಿಗೂ, ಜಾತ್ರೆಗೆ ಬಂದಿರುವ ಎಲ್ಲರಿಗೂ ಸಾಕಾಗುವಷ್ಟು ನೀರು ಬಂದಿರುತ್ತದೆ. ಇದೊಂದು ಇಲ್ಲಿಯ ಸಿದ್ಧೇಶ್ವರಸ್ವಾಮಿಯ ಪವಾಡ ಎಂದು ಹೇಳಬಹುದು.

ಅಡಿಟಿಪ್ಪಣಿಗಳು

೧. ಅನಂತ ರಂಗಾಚಾರ್ ಎನ್., **ಭಾರತೀಯ ಶಿಲ್ಪಶಾಸ್ತ್ರದ ಸಂಕ್ಷಿಪ್ತ ಪರಿಚಯ**, ಪು. ೩೦೪.

೨. ಬಾಲಸುಬ್ರಮಣ್ಯಂ (ಸಂ), ೨೦೦೮, **ಕುರುಗೋಡು**, ಪು. ೮೮.

೩. ಪ್ರಭಾಕರ್ ಎಸ್., ೧೯೯೯, **ದೇವಾಲಯಗಳ ವಾಸ್ತುಚಂದ್ರಿಕೆ**, ಪು. ೨೭.

೪. ದೇವರಕೊಂಡಾರೆಡ್ಡಿ (ಕನ್ನಡ ಅನುವಾದ), **ಭಾರತೀಯ ವಾಸ್ತುವಿದ್ಯೆ**, ಪು. ೮.

೫. ಅದೇ, ಪು. ೩-೫.

೬. ಅದೇ, ಪು. ೬.

೭. ರಾಮಚಂದ್ರರಾವ್ ಎಸ್.ಕೆ., ೧೯೯೪, **ಭಾರತದ ದೇವಾಲಯಗಳು ನೆಲೆ-ಹಿನ್ನೆಲೆ**, ಪು. ೧.

೮. ರಾಮಚಂದ್ರರಾವ್ ಎಸ್.ಕೆ., **ಕೆಲವು ಧಾರ್ಮಿಕ ಕರ್ತವ್ಯಗಳು**, ಪು. ೮೦.

೯. ಅದೇ. ಪು. ೭೭.

೧೦. ಸುರೇಶ್ ಬಿ., ೨೦೦೮, **ಚಿತ್ರದುರ್ಗ-ದಾವಣಗೆರೆ ಜಿಲ್ಲೆಗಳ ದೇವಾಲಯಗಳು**, ಪು. ೪.

೧೧. ಜ್ಞಾನನಂದ ಜಿ., ೨೦೦೩, **ಶಿಲ್ಪಾದರ್ಶಿ**, **ಸಂ.** ೨, ಕನ್ನಡ ವಿಶ್ವವಿದ್ಯಾಲಯ, ಪು. ೧೬.

೧೨. Brown Percy, **Indian Architecture**, Page No.- 140.

೧೩. ಶ್ಯಾಮಲಾ ಸಿ.ಆರ್., ೨೦೦೮, **ಪೂರ್ವ ಕರ್ನಾಟಕದ ಪಾಳೆಗಾರರು**, ಪು. ೧೯೧-೧೯೨.

೧೪. ತಿಪ್ಪೇಸ್ವಾಮಿ ಹೆಚ್., ೨೦೦೦, **ದಾವಣಗೆರೆ ಜಿಲ್ಲೆಯ ದೇವಾಲಯಗಳು** (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಪು. ೯೭.

೧೫. ಭರಂಪುರ ಕಣುಮಪ್ಪ, ೨೦೧೦, **ಬೇಚಿರಾಕ್ ಗ್ರಾಮ ಕುಂಬಾರಗಟ್ಟೆ ಸಂಸ್ಕೃತಿ**, ಪು. ೩.

೧೬. **ಎ.ಕ. ಸಂಪುಟ-೧೧, ಹಿರಿಯೂರು, ಶಾಸನ ಸಂಖ್ಯೆ**-೧೭, ಪು. ೨೯೪.

೧೭. ತಿಪ್ಪಣ್ಣ ಮರಿಕುಂಟೆ, **ಹರ್ತಿಕೋಟೆ ಸ್ಮಾರಕಗಳು**, ಲಕ್ಷ್ಮಣ್ ತೆಲಗಾವಿ(ಪ್ರಸಂ.), 'ಹರತಿಸಿರಿ' (ಸಂ), ಪು. ೫೧೩.

೧೮. **ಎ.ಕ. ಸಂ.** ೧೧, ಹಿರಿಯೂರು, ಶಾಸನ ಸಂಖ್ಯೆ-೫, ಪು. ೨೮೯.

೧೯. ಅದೇ, ಪು. ೨೮೮.

೨೦. ಮೂರ್ತಿಶಾಸ್ತ್ರ ಗ್ರಂಥದಲ್ಲಿ ಸಾಧಾರಣವಾಗಿ ಸಿಗುವ ಶಬ್ದ 'ಪ್ರತಿಮಾ', ಹೋಲುವಂತದ್ದು, ಅನುಸರಿಸುವಂತದ್ದು, ಪಡಿಯಚ್ಚು ಎಂಬ ಅರ್ಥ ಬರುತ್ತದೆ. ಪ್ರತಿ ಕೃತಿ, ಪ್ರತಿ+ಕೃತಿ, ಒಂದಕ್ಕೆ ಪ್ರತಿಯಾಗಿ ಮತ್ತೊಂದನ್ನು ಮಾಡಿದ್ದು ಎಂಬ ಅರ್ಥವನ್ನು ಕೊಡುತ್ತದೆ. ವಿಗ್ರಹ, ವಿ+ಗ್ರಹ, ಪ್ರತ್ಯೇಕಿಸಿದ ಆಕಾರ ಎಂಬರ್ಥವನ್ನು ಕೊಡುತ್ತದೆ.

೨೧. ರಾಜರಾಂ ಹೆಗಡೆ. **ಭಾರತೀಯ ಮೂರ್ತಿಶಾಸ್ತ್ರ, ಧರ್ಮ, ದೇವತಾರಾಧನೆ ಹಾಗೂ ಸಾಂಸ್ಕೃತಿಕ ರಾಜಕೀಯದ ಐತಿಹಾಸಿಕ ವಿಶ್ಲೇಷಣೆ, ಅರಿವು ಬರಹ,** ೧೯೯೨. ಸಂ. ೩, ಭಾಗ-೧. ಪು. ೩೫-೩೬.

೨೨. ಅದೇ, ಪು. ೩೭.

೨೩. ಚಿರಾಂಡ್‌ದ ಉತ್ಖನನದ ನೂತನ ಶಿಲಾಯುಗ ಸ್ತರಗಳಲ್ಲಿ ಕ್ರಿಪೂ. ೧೮೦೦-೧೪೦೦ ಅವಧಿಯ ಹಾವು ಹಾಗೂ ಪಕ್ಷಿಗಳ ಮೃಣ್ಮೂರ್ತಿಗಳು ದೊರೆತಿವೆ.

೨೪. ಆಲ್ಚಿನ್ ಎಫ್.ಆರ್. **ದ ರೈಸ್ ಅಂಡ್ ಬರ್ತ್ ಆಫ್ ಇಂಡಿಯನ್ ಸಿವಿಲೆಜೇಷನ್,** ೧೯೬೮. ಪು. ೧೭೭.

೨೫. ಈ ನೆಲೆಗಳ ತಾಮ್ರಶಿಲಾಯುಗದ ಸ್ತರಗಳಲ್ಲಿ ಕ್ರಿಪೂ. ೧೭೦೦-೧೯೦೦ರ ಅವಧಿಯ ಮಾತೃದೇವತೆಯ ಹಾಗೂ ಪ್ರಾಣಿಗಳ ಮೂರ್ತಿಗಳು ದೊರೆತಿವೆ.

೨೬. ಈ ನೆಲೆಗಳ ತಾಮ್ರಶಿಲಾಯುಗದ ಸ್ತರಗಳಲ್ಲಿ ಕ್ರಿಪೂ. ೧೪೦೦-೯೦೦ರ ಅವಧಿಯ ಮಾತೃದೇವತೆಯ ಹಾಗೂ ಪ್ರಾಣಿಗಳ ಮೂರ್ತಿಗಳು ದೊರೆತಿವೆ.

೨೭. ರಾಮಚಂದ್ರರಾವ್ ಎಸ್.ಕೆ., ೧೯೯೨, **ಪ್ರತಿಮಾ ಕೋಶ, ವ್ಯಾಲ್ಯೂಂ-VI,** ಪು. ೨೧೩.

೨೮. ಸುಂದರ ಅ., ಪ್ರಾಗಿತಿಹಾಸ ಕಾಲದ ನಿರ್ಮಿತಿ ಮತ್ತು ಚಿತ್ರಕಲೆ, ಪ್ರೊ. ಷೇಕ್‌ಅಲಿ, ಸುಂದರ ಅ-ಸಂ.), ಕರ್ನಾಟಕ ಚರಿತ್ರೆ, ಸಂ. ೧, ೧೯೯೮, ಪು. ೨೪೧-೨೪೨.

೨೯. ಇವುಗಳಲ್ಲಿ ಕೋತಿ, ಮಸುಳೆ, ಅಳಿಲು, ಗೂಳಿ, ಎಮ್ಮೆ, ಖಡ್ಗಮೃಗ, ನಾಯಿ ಪ್ರಮುಖವಾಗಿವೆ.

೩೦. ಉಮೇಶ್ ಎಸ್. ಹಿರೇಮಠ, **ಮೂರ್ತಿಶಿಲ್ಪಕಲೆ**(ಅಪ್ರಕಟಿತ ಪಿ.ಎಚ್.ಡಿ. ಪ್ರಬಂಧ). ಪು. ೫೩

೩೧. 'ಶಿಶ್ನದೇವಾ' ಲಿಂಗಪೂಜಕರು 'ಮೂಢದೇವಾ' ಮೂಡವಸ್ತುಗಳನ್ನು ಪೂಜಿಸುವವರು ಎಂಬ ಉಲ್ಲೇಖ ಆ ಸಾಹಿತ್ಯದಲ್ಲಿದೆ.

೩೨. ರಾಜರಾಂ ಹೆಗಡೆ, ೧೯೯೨, **ಪೂರ್ವೋಕ್ತ.**

೩೩. ಇದಕ್ಕೂ ಮೊದಲೇ ಅಂದರೆ ಕ್ರಿಪೂ.ದಲ್ಲಿ ಜಿನಮೂರ್ತಿಗಳು ದೊರೆತಿವೆ. ಬಿಹಾರದ ಲೂನಿಪುರದಲ್ಲಿ ಸಿಕ್ಕ ಒಂದು ನಗ್ನಮೂರ್ತಿಯ ದೇಹದ ಭಾಗವನ್ನು ತೀರ್ಥಂಕರ ಮೂರ್ತಿಯನ್ನಲಾಗಿದೆ. ಇದರ ನುಣುಪಿನ ಆಧಾರದ ಮೆಲೆ ಇದನ್ನು ಮೌರ್ಯ ಕಾಲಕ್ಕೆ ಸೇರಿದೆಯೆಂದು ಹೇಳಲಾಗುತ್ತದೆ.

೩೪. ಮಧುಸೂದನ್‌ರಾವ್, **ದಿ ಹಿಸ್ಟರಿ ಆಫ್ ಜೈನ್ ಆರ್ಟ್ ಆ್ಯಂಡ್ ಆರ್ಕಿಟೆಕ್ಚರ್**(ದಿನಾಂಕ ೮.೩.೧೯೭೭ರ ದಿ ಹಿಂದೂ ದಿನಪತ್ರಿಕೆ), ಪು. ೧೬.

೩೫. ರಾಮಚಂದ್ರರಾವ್ ಎಸ್.ಕೆ., ೧೯೮೨, **ಪ್ರತಿಮಾಕೋಶ,** ಪು. ೨೧೩.

೩೬. ಸ್ವಾಮಿ ಹರ್ಷಾನಂದ, ೧೯೮೨, **ಹಿಂದು ಗಾಡ್ಸ್ ಅಂಡ್ ಗಾಡೆಸೆಸ್,** ಪು. ೮೨.

೩೭. ರಾಮಚಂದ್ರರಾವ್ ಎಸ್.ಕೆ., ೧೯೭೫, **ಪೂರ್ವೋಕ್ತ,** ಪು. ೧೨೦-೧೪೦.

೩೮. ಅದೇ, ಪು. ೨೭೬.

೩೯. ಅದೇ, ಪು. ೧೬೨.

೪೦. ಗೋಪಿನಾಥರಾವ್ ಟಿ.ಎ., ೧೯೮೫, **ಪೂರ್ವೋಕ್ತ**, ಪು. ೯೪
ರಾಮಚಂದ್ರರಾವ್ ಎಸ್.ಕೆ., ೧೯೭೫, **ಪೂರ್ವೋಕ್ತ**, ಪು. ೧೬೩.

೪೧. ಸ್ವಾಮಿ ಹರ್ಷಾನಂದ, ೧೯೮೨, **ಪೂರ್ವೋಕ್ತ**, ಪು. ೯೮.

೪೨. ಶಿವರಾಮ ಕಾರಂತ, ಭಾರತೀಯ ಶಿಲ್ಪ, ಪು. ೧.

೪೩. ಪರಮಶಿವಮೂರ್ತಿ ಡಿ.ವಿ., ೧೯೯೯, **ಕನ್ನಡ ಶಾಸನ ಶಿಲ್ಪ**, ಪು. ೭.

೪೪. ಅದೇ, ಪು. ೧೭.

೪೫. ಶೇಷಶಾಸ್ತ್ರೀ ಆರ್., **ಕರ್ನಾಟಕದ ವೀರಗಲ್ಲುಗಳು**, ಪು. ೧೭೯.

೪೬. ಅದೇ, ಪು. ೧೮೦.

೪೭. ಪಂಪ **'ವಿಕ್ರಮಾರ್ಜುನ ವಿಜಯಂ'**.

೪೮. ಶೇಷಶಾಸ್ತ್ರಿ ಆರ್., **ಕರ್ನಾಟಕದ ವೀರಗಲ್ಲುಗಳು**, ಪು. ೨೫.

೪೯. ಅದೇ, ಪು. ೨೯.

೫೦. ಅದೇ, ಪು. ೩೧೧.

೫೧. ತಿಪ್ಪಣ್ಣ ಮರಕುಂಟೆ, **ಹರ್ತಿಕೋಟೆಯ ಸ್ಮಾರಕಗಳು**, ಲಕ್ಷ್ಮಣ್ ತೆಲಗಾವಿ, ಹರತಿಸಿರಿ(ಸಂ), ಪು. ೫೧೩.

೫೨. ಅದೇ, ಪು. ೫೧೪.

೫೩. ಅದೇ, ಪು. ೫೧೪.

೫೪. ಅದೇ, ಪು. ೫೧೫.

೫೫. ಅದೇ, ಪು. ೫೧೫.

೫೬. ಶೇಷಶಾಸ್ತ್ರಿ ಆರ್., **ಕರ್ನಾಟಕದ ವೀರಗಲ್ಲುಗಳು**, ಪು. ೧೨೮.

೫೭. ಗೋಪಾಲ್ ಆರ್., **ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ(ಸಂಪಾದನ ಗ್ರಂಥ)**, ಪು. ೨೩೯-೨೪೦.

೫೮. ತಿಪ್ಪಣ್ಣ ಮರಕುಂಟೆ, **ಹರ್ತಿಕೋಟೆಯ ಸ್ಮಾರಕಗಳು**, ಲಕ್ಷ್ಮಣ್ ತೆಲಗಾವಿ, ಹರತಿಸಿರಿ(ಸಂ), ಪು. ೫೧೩.

೫೯. ಲಕ್ಷ್ಮಣ್ ತೆಲಗಾವಿ, **ಇತಿಹಾಸಕಾರ ಎಚ್.ವಿ. ವೀರನಾಯಕ, ಹರತಿ**, ಪು. ೧೩.

೬೦. ಕಲಬುರ್ಗಿ ಎಂ.ಎಂ., **ಪೂರ್ವೋಕ್ತ**, ಪು. ೧೦.

೬೧. ಅದೇ, ಪು. ೧೧.

೬೨. ಕನವಳ್ಳಿ ಸದಾನಂದ ಮತ್ತು ಶೆಟ್ಟರ್ ಎಸ್.(ಅನು), ೨೦೦೪, **ಸಾವಿಗೆ ಆಹ್ವಾನ**, ಪು. ೯೮.

೬೩. ಅದೇ, ಪು. ೧೦೧.

೬೪. ಮುಕುಂದರೆಡ್ಡಿ ಮಾ.ನಾ., ೧೯೮೭, **ಹಿರಿಯೂರು ತಾಲೂಕು ದರ್ಶನ**, ಪು. ೪೫.

೬೫. ಗೋಪಾಲ್. **ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**(ಸಂಪಾದನ ಗಂಥ). ಪು. ೨೨೧.

೬೬. ಪಾಟೀಲ್ ಸಿ.ಎಸ್., **ಕರ್ನಾಟಕದ ಕೋಟೆಗಳು,** ಪು. ೧.

೬೭. ಹನುಮಾಕ್ಷಿ ಗೂಗಿ, ರಾಠೋಡ ಪಿ.ಕೆ., ಡಂಬಳ ಸಾಂಸ್ಕೃತಿಕ ಅಧ್ಯಯನ, ಪು. ೬೯.

೬೮. ಪಾಟೀಲ್ ಸಿ.ಎಸ್., **ಕರ್ನಾಟಕದ ಕೋಟೆಗಳು,** ಪು. ೫.

೬೯. ಗೋಪಾಲ್ ಆರ್., **ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ** (ಸಂಪಾದನ ಗ್ರಂಥ). ಪು. ೨೨೧.

೭೦. **ಎ.ಕ.ಸಂ.-೧೧, ಹಿರಿಯೂರು,** ಪು. ೨೮೮.

೭೧. ಅದೇ, ಪು. ೨೯೨.

೭೨. ತಿಪ್ಪೇಸ್ವಾಮಿ ಎಸ್., ೨೦೦೪, **ರಕ್ಷಣಾ ವಾಸ್ತುಶಿಲ್ಪ-ಚಿತ್ರದುರ್ಗ ಜಿಲ್ಲೆ(ಪಿಎಚ್.ಡಿ. ಅಪ್ರಕಟಿತ ಮಹಾಪ್ರಬಂಧ),** ಪು. ೬೭.

೭೩. **ಎ.ಕ.ಸಂ.-೧೧, ಹಿರಿಯೂರು**-೧.

೭೪. ಭರಂಪುರ ಕಣುಮಪ್ಪ, ೨೦೧೦, **ಬೇಚಿರಾಕ್ ಗ್ರಾಮ ಕುಂಬಾರಗಟ್ಟೆ ಸಂಸ್ಕೃತಿ,** ಪು. ೯.

೭೫. ಚಿತ್ರಲಿಂಗಯ್ಯ ಎಂ.ವಿ., ೧೯೮೭, **ಹರತಿ ಪಾಳೆಯಗಾರರ ಮೂಲ ವಂಶಾವಳಿ, ಹರತಿಸಿರಿ,** ಲಕ್ಷ್ಮಣ್ ತೆಲಗಾವಿ (ಸಂ), ಪು. ೨೯೨.

೭೬. **ಎ.ಕ.ಸಂ.-೧೧, ಹಿರಿಯೂರು,** ಪು. ೩೬-೩೯.

೭೭. ಲಕ್ಷ್ಮಣ್ ತೆಲಗಾವಿ(ಸಂ), **ಹರತಿಸಿರಿ,** ಪು. ೨೭೬.

೭೮. ಗಿರಿಜಾ ಟಿ., ೧೯೯೧, **ಚಿತ್ರದುರ್ಗ ಜಿಲ್ಲಾದರ್ಶಿನಿ,** ಪು. ೧೫೦.

೭೯. ತಿಪ್ಪೇಸ್ವಾಮಿ ಎಸ್., ೨೦೦೪, **ರಕ್ಷಣಾ ವಾಸ್ತುಶಿಲ್ಪ-ಚಿತ್ರದುರ್ಗ ಜಿಲ್ಲೆ(ಪಿಎಚ್.ಡಿ. ಅಪ್ರಕಟಿತ ಮಹಾಪ್ರಬಂಧ),** ಪು. ೬೭.

೮೦. ಅದೇ, ಪು. ೬೮.

೮೧. ಅದೇ, ಪು. ೬೯.

೮೨. ಅದೇ, ಪು. ೭೦.

೮೩. ಅದೇ, ಪು. ೭೦.

೮೪. ತಿಪ್ಪಣ್ಣ ಮರಕುಂಟೆ, **ಹರ್ತಿಕೋಟೆಯ ಸ್ಮಾರಕಗಳು,** ಲಕ್ಷ್ಮಣ್ ತೆಲಗಾವಿ, ಹರತಿಸಿರಿ(ಸಂ), ಪು. ೫೦೦.

೮೫. ಭರಂಪುರ ಕಣುಮಪ್ಪ, **ಬೇಚಿರಾಕ್ ಗ್ರಾಮ ಕುಂಬಾರಗಟ್ಟೆ ಸಂಸ್ಕೃತಿ,** ಪು. ೩೪.

೮೬. ಚಿದಾನಂದಮೂರ್ತಿ ಎಂ., **ಕರ್ನಾಟಕದ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಪು. ೪೪೯.

೮೭. ವಾಸುದೇವನ್ ಸಿ.ಎಸ್., ೨೦೦೧, **ಹಂಪಿ ಪರಿಸರದ ಕೆರೆಗಳು,** ಪು. ೬.

೮೮. ತಿಪ್ಪಣ್ಣ ಮರಕುಂಟೆ, ಹರ್ತಿಕೋಟೆಯ ಸ್ಮಾರಕಗಳು, ಲಕ್ಷ್ಮಣ್ ತೆಲಗಾವಿ, ಹರತಿಸಿರಿ(ಸಂ). ಪ್ರ. [illegible]

೮೯. ಭರಂಪುರ ಕಣುಮಪ್ಪ, ಬೇಚಿರಾಕ್ ಗ್ರಾಮ ಕುಂಬಾರಗಟ್ಟಿ ಸಂಸ್ಕೃತಿ, ಪ್ರ. ೬೪.

೯೦. ಯಶೋದಾ ಪಾಟೀಲ, ಕರ್ನಾಟಕದ ಪ್ರಾಚೀನ ಬಾವಿಗಳು, ಪ್ರ. ೨೩.

೯೧. ತಿಪ್ಪಣ್ಣ ಮರಕುಂಟೆ, ಹರ್ತಿಕೋಟೆಯ ಸ್ಮಾರಕಗಳು, ಲಕ್ಷ್ಮಣ್ ತೆಲಗಾವಿ, ಹರತಿಸಿರಿ(ಸಂ). ಪ್ರ. ೩೦೯.

೯೨. ಭರಂಪುರ ಕಣುಮಪ್ಪ, ಬೇಚಿರಾಕ್ ಗ್ರಾಮ ಕುಂಬಾರಗಟ್ಟಿ ಸಂಸ್ಕೃತಿ, ಪ್ರ. ೩.

□□□

ಅಧ್ಯಾಯ : ಐದು

ಮೌಖಿಕ ಮತ್ತು ಸಾಂಸ್ಕೃತಿಕ ಪರಂಪರೆ

೫.೧. ಐತಿಹ್ಯ

೫.೨. ನಂಬಿಕೆ ಮತ್ತು ಆಚರಣೆಗಳು

೫.೩. ಜಾತ್ರೆ - ಉತ್ಸವ

ಅಧ್ಯಾಯ : ಐದು

ಮೌಖಿಕ ಮತ್ತು ಸಾಂಸ್ಕೃತಿಕ ಪರಂಪರೆ

ನಮ್ಮ ಸಂಸ್ಕೃತಿಯ ಬೆನ್ನೆಲುಬು ಧರ್ಮ. ವ್ಯಕ್ತಿಯ ಅಥವಾ ಮಾನವ ಸಮಾಜದ ಎಲ್ಲಾ ಆಚಾರ-ವಿಚಾರ, ವ್ಯವಹಾರ, ಚಲನವಲನಗಳಲ್ಲಿ ಇದು ಹರಡಿಕೊಂಡಿದೆ. ಇಹಪರಹಗಳೆರಡರ ಸಮನ್ವಯ ಸಿದ್ಧಾಂತವಾಗಿ ಜನಜೀವನದಲ್ಲಿ ಧರ್ಮ ಬೆರತುಹೋಗಿದೆ. ಹಬ್ಬಗಳು ಮತ್ತು ರಥೋತ್ಸವಗಳು ನಮ್ಮ ಜನರ ಧಾರ್ಮಿಕ ಜೀವನವನ್ನು ರೂಪಿಸುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಹಬ್ಬಗಳು ನಡೆದುಬಂದ ದಾರಿ, ನಮ್ಮ ಪೂರ್ವಿಕರು ಅನುಸರಿಸಿಕೊಂಡು ಬಂದ ಮಾರ್ಗ ಮುಂದಿನ ಜನಾಂಗಕ್ಕೆ ನೀಡಿದ ಕೊಡುಗೆ ಎನ್ನಬಹುದು.[೧] ಈ ಪರಂಪರೆಗೆ ಮೂಲ ಪ್ರೇರಣೆ ಧಾರ್ಮಿಕ ಶ್ರದ್ಧೆ. ಇದು ನಮ್ಮ ಗ್ರಾಮೀಣ ಜನರ ಬಾಳಿದ ಆಧಾರ ಮತ್ತು ಜೀವನದ ಊರುಗೋಲು. ನಮ್ಮ ಜೀವನದಲ್ಲಿ ಬರುವ ಎಲ್ಲ ಕಷ್ಟ-ಸುಖ ಒಳಿತು-ಕೆಡಕುಗಳಿಗೆ ಮೂಲಭೂತವಾದ ಕಾರಣಶಕ್ತಿಯೊಂದಿದೆ. ಅದರ ಇಚ್ಛೆಯಂತೆ ಇವೆಲ್ಲಾ ನಡೆಯುತ್ತಾ ಇರುತ್ತದೆ. ಆ ಶಕ್ತಿಯ ವಿರುದ್ಧ ಹೋಗುವುದು ಸಾಧ್ಯವಿಲ್ಲ. ಕಂಡದ್ದನ್ನೆಲ್ಲ ದೇವರನ್ನಾಗಿ ರೂಪಿಸಿಕೊಂಡು ಅನೇಕ ರೂಪಗಳಲ್ಲಿ ದೇವರ ಸಾನಿಧ್ಯವನ್ನು ಕಲ್ಪಿಸಿಕೊಡುವ ಶಕ್ತಿ ಗ್ರಾಮೀಣ ಪ್ರದೇಶದ ಜನರಲ್ಲಿದೆ. ಈ ಕಾರಣದಿಂದಾಗಿಯೇ ನಮ್ಮಲ್ಲಿ ಬಹುದೇವತೋಪಾಸನೆ ಅಸ್ತಿತ್ವಕ್ಕೆ ಬಂದಿತು.[೨] ನಮ್ಮ ಪ್ರಕೃತಿಯಲ್ಲಿನ ಒಂದೊಂದು ವಸ್ತುವೂ ಜನರಿಗೆ ಪ್ರಾಚೀನ ಕಾಲದಿಂದಲೂ, ದೈವಶಕ್ತಿಯ ಸಂಕೇತವಾಗಿ ಮೂಡಿಬಂದಿದೆ. ವ್ಯಕ್ತಿ ತಾನು ನಿತ್ಯ ಬಳಸುವ ಪ್ರತಿಯೊಂದು ಉಪಕರಣಗಳಲ್ಲೂ, ಅಂಶಗಳಲ್ಲೂ ದೈವತ್ವವನ್ನು ಕಾಣುವ ಭಾವುಕ ಶಕ್ತಿಯನ್ನು ಕಾಣಬಹುದು. ಮೋಕ್ಷ ಸಂಪಾದನೆಗಾಗಿ ಮತ್ತು ಹಿಡಿದ ಕಾರ್ಯ ಸಾಧನೆಗಾಗಿ ಮತ್ತು ಆಗಾಗ್ಗೆ ಮನುಷ್ಯನನ್ನು ಪೀಡಿಸುವ ರೋಗಗಳನ್ನು ನಿವಾರಿಸಿಕೊಳ್ಳಲು ದೈವದ ಪೂಜೆಯನ್ನು ಕೈಗೊಳ್ಳುವರು. ಆದರೆ ಮುಂದೆ ಈ ಮನೋಧರ್ಮವೇ ಒಂದು ದೊಡ್ಡ ದೌರ್ಬಲ್ಯವಾಗಿ ಪರಿಣಮಿಸಿತೆಂದು ಹೇಳಬಹುದು. ಈ ನಂಬಿಕೆಯ ತಳಹದಿಯ ಮೇಲೆ ರೂಪಿತವಾದ ಹಬ್ಬ ಹರಿದಿನ, ಜಾತ್ರೆ ಆಚರಣೆಯ ರೂಪದಲ್ಲಿ ಮೂಡಿಬಂದಿದೆ.

೫.೧. ಐತಿಹ್ಯ

ಒಂದು ಪ್ರದೇಶದ ಸಮಗ್ರ ಅಧ್ಯಯನ ಕೈಗೊಳ್ಳುವುದರ ಮೂಲಕ ಆ ಪ್ರದೇಶದ ಚರಿತ್ರೆಯನ್ನು ಕಟ್ಟಲು ಸಾಧ್ಯವಿದೆ. ಆದರೆ ಇಲ್ಲಿಯವರೆಗೆ ಇತಿಹಾಸ ರಚನೆಕಾರರು ಲಿಖಿತ

ಪರಂಪರೆಯನ್ನು ಅವಲಂಬಿಸಿ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ. ಇದರಿಂದಾಗಿ ಬಹುಸಂಖ್ಯಾತ ಜನಸಮುದಾಯಗಳ ಮನದಲ್ಲಿರುವ ಅಲಿಖಿತ ರೂಪದ ಚರಿತ್ರೆಯ ಆಯಾಮಗಳನ್ನು ಕಡೆಗಣಿಸಿದ್ದಾರೆ. ಸಾಂಸ್ಕೃತಿಕ ಚರಿತ್ರೆಯ ರಚನೆಯಲ್ಲಿ ಇತ್ತೀಚೆಗೆ ಮೌಖಿಕ ಪರಂಪರೆಯನ್ನು ಆಧಾರವಾಗಿ ಬಳಸಿಕೊಳ್ಳಲಾಗುತ್ತಿದೆ. ಮೌಖಿಕ ಆಧಾರಗಳು ಜೀವಂತವಾಗಿ ಜನಸಮುದಾಯದ ಬದುಕಿನ ಭಾವನೆಗಳಲ್ಲಿ ಬೆರೆತು ಹೋಗಿರುತ್ತವೆ.

ಈ ಹಿನ್ನೆಲೆಯಲ್ಲಿ ಸ್ಥಳೀಯವಾಗಿ ಮೌಖಿಕ ಪರಂಪರೆಯಲ್ಲಿರುವ ಐತಿಹ್ಯಗಳ ಅಧ್ಯಯನಕ್ಕೆ ತೊಡಗಿದಾಗ ಅಲ್ಲಿಂದ ಚರಿತ್ರೆಯ ಇನ್ನೊಂದು ಮುಖದ ಪರಿಚಯವಾಗುತ್ತದೆ. ಹೀಗೆ ಕಂಠಪಾಠದ ಪರಂಪರೆಯ ಕವಲುಗಳಾದ ಐತಿಹ್ಯಗಳನ್ನು ಬಳಸಿಕೊಳ್ಳುವುದರ ಮೂಲಕ ಇತಿಹಾಸವನ್ನು ಸತ್ಯದ ದಿಕ್ಕಿನಡೆಗೆ ಕೊಂಡಯ್ಯಲು ಸಾಧ್ಯವಾಗುತ್ತದೆ. ಐತಿಹ್ಯಗಳು ಮಾನವನ ಸಾಮಾಜಿಕ ಜೀವನಕ್ಕೆ ಹತ್ತಿರವಾದ ಹಾಗೂ ನಡೆಯಬಹುದಾದ ಘಟನೆಗಳನ್ನು ಆಧಾರ ಸಹಿತವಾಗಿ ಹಾಗೂ ವಾಸ್ತವಕ್ಕೆ ಹತ್ತಿರವಾದ ವಿಚಾರಗಳನ್ನು ಬಿಂಬಿಸುವ ಘಟನೆಗಳೆಂಬಂತೆ ಕಂಡುಬರುತ್ತವೆ.

ಈ ಐತಿಹ್ಯಗಳು ಚಾರಿತ್ರಿಕ ಘಟನೆಗಳೆಂಬಂತೆ ತೋರಿಬರುತ್ತಿದೆ. ಹಾಗೆಯೇ ಚಾರಿತ್ರಿಕ, ಪೌರಾಣಿಕ ಹಾಗೂ ಕಾಲ್ಪನಿಕ ಅಂಶಗಳಿಂದ ಕೂಡಿ ಆಕರ್ಷಿತವಾಗಿರುತ್ತವೆ. ಅವುಗಳಲ್ಲಿಯ ಚಾರಿತ್ರಿಕ ಹಾಗೂ ಕಲ್ಪಿತ ಅಂಶಗಳನ್ನು ಸೂಕ್ಷ್ಮವಾಗಿ ಬೇರ್ಪಡಿಸಿ ಚಾರಿತ್ರಿಕ ಸತ್ಯವನ್ನು ಮಾತ್ರ ಗುರುತಿಸಬೇಕಾಗುತ್ತದೆ. ಪುರಾತತ್ವ ಆಕರಗಳ ಜೊತೆ ಜೊತೆಗೆ ಈ ಮೌಖಿಕ ಆಕರಗಳ ಪ್ರಭೇದಗಳಾದ ಐತಿಹ್ಯಗಳನ್ನು ಬಳಸಿಕೊಳ್ಳುವುದು ಮುಖ್ಯವಾಗಿದೆ. ಈ ಐತಿಹ್ಯಗಳು ವ್ಯಕ್ತಿಗಳ, ಸ್ಥಳಗಳ ಅಥವಾ ಘಟನೆಗಳ ವಾಸ್ತವ ಅಥವಾ ತೋರಿಕೆಯ ನಂಬಿಕೆಗಳನ್ನೊಳಗೊಂಡ ಕಥನಗಳಾಗಿವೆ. 'ಲೆಜೆಂಡ್'ಗಳೆಂದು ಕರೆಯಲ್ಪಡುವ ಐತಿಹ್ಯಗಳು ಪ್ರಪಂಚದ ವಿವಿಧ ರಾಷ್ಟ್ರಗಳಲ್ಲಿ ಅಸ್ತಿತ್ವದಲ್ಲಿದೆ.

ಐತಿಹ್ಯದ ಅರ್ಥವನ್ನು ತಿಳಿಯಲು ಹೊರಟರೆ ಇದು ಇತಿಹಿ ಎನ್ನುವ ಸಂಸ್ಕೃತ ರೂಪದಿಂದ ನಿಷ್ಪನ್ನವಾಗಿದೆ. ಈ ಶಬ್ದ ರೂಪಗಳಿಗೆ ಹೀಗೆ, ಹೀಗಿತ್ತು, ಹೀಗೆ ನಡೆದದ್ದು, ಹೀಗಿರಬೇಕು[8] ಎಂಬ ಮುಂತಾದ ಅರ್ಥಗಳಿವೆ. ಇಂದು ನಾವು ಯಾವುದನ್ನು ಐತಿಹ್ಯ ಎಂದು ಗುರುತಿಸುತ್ತೇವೆಯೋ ಅದು ಒಂದು ಕಾಲದಲ್ಲಿ ನಿಜವಾಗಿ ನಡೆದ ಘಟನೆಯೊಂದರ ನಿರೂಪಣೆ ಎಂಬ ವಿಶ್ವಾಸ ಅದರಲ್ಲಿರುತ್ತದೆ. ಐತಿಹ್ಯವೆಂದರೆ ಜನಪದರು ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಪೌರಾಣಿಕ ಅಥವಾ ಇತಿಹಾಸದ ಘಟನೆಗಳನ್ನು ತಮ್ಮದೇ ಶೈಲಿಯಲ್ಲಿ ನಿರೂಪಿಸುವುದಕ್ಕೆ, ಗುರುತಿಸುವುದಕ್ಕೆ ಐತಿಹ್ಯ[9] ಎನ್ನುವರು. ಪರಂಪರೆಯಿಂದ ಬಂದ ಕೆಲವು ಐತಿಹ್ಯಗಳು ವರ್ತಮಾನಕ್ಕೆ, ಭವಿಷ್ಯತ್ತಿಗೆ ಮುಂದುವರೆಯುತ್ತವೆ. ಐತಿಹ್ಯಗಳು ಜನಪದರ ದೃಷ್ಟಿಯಿಂದ ಅಭಿವ್ಯಕ್ತಗೊಂಡಿರುತ್ತವೆಯಲ್ಲದೆ, ಚಿಂತನೆಯ ಪ್ರಭಾವವಿರುತ್ತದೆ.

ಐತಿಹ್ಯವೆಂದರೆ ಮೌಖಿಕ ಸಂಪ್ರದಾಯದಲ್ಲಿ ಉಳಿದುಕೊಂಡು ಬಂದಿರುವ ಹಿಂದೆ ವಾಸ್ತವವಾಗಿ ನಡೆದದ್ದೇ ಎಂಬುದಾಗಿ ಅದರ ಪ್ರಸಾರಕರಿಗೆ ವಿಶ್ವಾಸವಿರುವ ಘಟನೆಗಳ

ಗದ್ಯರೂಪದ ನಿರೂಪಣೆ ಒಂದು ದೃಷ್ಟಿಯಿಂದ ಇದು ಜನಪದ ಇತಿಹಾಸ ಇಲ್ಲಿ ಲಿಖಿತಗಳೇನೂ ಇರುವುದಿಲ್ಲ. ಇತರ ಲಿಖಿತ ದಾಖಲೆಗಳಿಗೂ ಐತಿಹ್ಯದಲ್ಲಿ ಹೇಳಲಾಗುವ ವಿಚಾರಗಳಿಗೂ ಕೆಲವೊಮ್ಮೆ ಸಾಮ್ಯ - ಸಂಬಂಧ ಕಂಡುಬರುವುದು. ಇನ್ನೂ ಕೆಲವು ಬಾರಿ ಇವೆರಡೂ ತೀರಾ ವ್ಯಾತ್ಯಾಸವೇ ಆಗಿದ್ದು ಕಾಣಬರುತ್ತದೆ. ಕೆಲವು ಐತಿಹ್ಯಗಳಲ್ಲಿ ನೈಜ ಘಟನೆಯ ಸಣ್ಣ ಎಳೆಯೊಂದು ಮಾತ್ರವಿದ್ದು, ಅದರ ಸುತ್ತ ಕಲ್ಪಿತಾಂಶಗಳು ಹೆಚ್ಚಿಕೊಂಡಿರುತ್ತವೆ. ಒಂದು ದೃಷ್ಟಿಯಿಂದ ನೋಡಿದರೆ ಇತಿಹಾಸ ಮತ್ತು ಸಾಹಿತ್ಯ ಇವೆರಡರ ಅಂಶಗಳೂ ಇದರಲ್ಲಿವೆ. ಹಿಂದೆ ನಡೆದ, ನಡೆದಿರಬಹುದಾದ, ಕೇಳಿದ ಘಟನೆಯೊಂದರ ಪುನರ್‌ಸೃಷ್ಟಿ ಇದಾಗಿದ್ದರೂ ಇಂದು ಐತಿಹ್ಯಕ್ಕೂ ಇತಿಹಾಸ ರಚನೆಗೆ ಒಂದು ಆಕರವಾಗಿ ಬಳಕೆಯಾಗುವ ಸ್ಥಾನ ದೊರೆತಿದೆ.[೫]

ಪ್ರಾಚೀನ ಸಂಸ್ಕೃತಿಯ ಅಧ್ಯಾಯದಲ್ಲೂ ಐತಿಹ್ಯಗಳು ಬಹುಮುಖ್ಯವಾದ ಪಾತ್ರವಹಿಸುತ್ತವೆ. ರಾಜ-ರಾಣಿಯರ ಕಥೆಗಳಲ್ಲಿ ಪ್ರಾಚೀನ ಅರಸರಿಗೆ ಸಂಬಂಧಿಸಿದ ಐತಿಹ್ಯಗಳೆನಿಸಿವೆ. ಇಂದು ಕಾಣುವ ಕೋಟೆ-ಕೊತ್ತಲು, ದುರ್ಗ ಹೀಗೆ ಅದರ ಕುರಿತು ಹೇರಳ ಐತಿಹ್ಯ ನಮ್ಮ ಪುಷ್ಟಿಯಲ್ಲಿ ಇದ್ದೇ ಇವೆ. ಇವು ಆ ಕಾಲದ ವ್ಯಕ್ತಿಯ ಸಮಾಜದ ಒಂದು ಚರಿತ್ರೆಯನ್ನೇ ಒದಗಿಸುತ್ತದೆ. ಇಲ್ಲಿರುವ ಒಂದೊಂದು ಕಲ್ಲಿನ ದಿಣ್ಣೆಗೂ ಒಂದೊಂದು ಐತಿಹ್ಯವಿದೆ.

ಒಂದು ಸಾಂಸ್ಕೃತಿಕ ಚರಿತ್ರೆಯನ್ನು ದೇವಾಲಯ, ಸ್ಮಾರಕ, ಶಾಸನ, ನಾಣ್ಯ, ಶಿಲ್ಪ, ಕೆರೆ-ಬಾವಿ, ಚಿತ್ರ ಮುಂತಾದ ಗೋಚರ ರೂಪದ ಆಕರಗಳಂತೆ ಮೌಖಿಕ ರೂಪದಲ್ಲಿ ಉಳಿದುಕೊಂಡು ಬಂದಿರುವ ಜನಪದ ಸಾಹಿತ್ಯದ ರೂಪಗಳಾದ ಐತಿಹ್ಯಗಳು, ಗಾದೆಗಳು, ಹಾಡು, ಕಥೆ ಮುಂತಾದವುಗಳ ಸಹಾಯದಿಂದಲೂ ಕಟ್ಟಬಹುದಾಗಿದೆ.[೬] ಅಂದರೆ ಇತಿಹಾಸದ ರಚನೆಗೆ ಆಕರಗಳಾದ ಶಾಸನ, ಸ್ಮಾರಕ, ನಾಣ್ಯ, ಹಸ್ತಪ್ರತಿ, ಮಾಸ್ತಿಕಲ್ಲು, ಶಿಲ್ಪಗಳು ಇತ್ಯಾದಿ ನೆರವಾದರೆ, ಆ ಆಕಾರಗಳ ಹುಟ್ಟಿನ ಇತಿಹಾಸವನ್ನು ಐತಿಹ್ಯಗಳು ಬಿಚ್ಚಿಡುತ್ತವೆ. ಹೀಗಾಗಿ ಐತಿಹ್ಯಗಳು ಇತಿಹಾಸದ ಆಕರಗಳು ಹೌದು, ಆಕರಗಳ ಇತಿಹಾಸವೂ ಹೌದು.

ಐಮಂಗಲ ಕೋಟೆಯ ಐತಿಹ್ಯ

ಐಮಂಗಲವು ಚಿತ್ರದುರ್ಗ - ಹಿರಿಯೂರು ಮಧ್ಯ ರಾಷ್ಟ್ರೀಯ ಹೆದ್ದಾರಿ ನಂ.೪ರಲ್ಲಿದೆ. ನೊಳಂಬರ ಶಾಸನದಲ್ಲಿ ಐಮಂಗಲವನ್ನು 'ಐಯಪ್ಪಮಂಗಲ' ಎಂದು ಕರೆಯಲಾಗಿದೆ. ಈ ಅಯ್ಯಪ ಮಂಗಲದಿಂದಲೇ ಐಮಂಗಲ ಎಂಬ ಹೆಸರು ಬಂದಿದೆ. ಚಿತ್ರದುರ್ಗ ಪಾಳೆಯಗಾರ ಹಿರೇಮದಕರಿನಾಯಕನಿಂದ ವೀರಶೈವ ಅಯ್ಯನಿಗೆ (ಅರ್ಚಕ) ಕೋಟೆಯೊಂದು ಕಟ್ಟಿದ್ದರಿಂದ ಈ ಹೆಸರು ಬಂದಿತೆಂದು ವಿವರಣೆಯಿಂದ ದಾಸಯ್ಯನೊಬ್ಬ ತಾನು ಶಂಖವನ್ನೂದಿ ಗಂಟೆಯನ್ನು ಬಾರಿಸಿದಾಗ ಕೋಟೆಯನ್ನು ಕಟ್ಟಲು ಆಸ್ತಿಭಾರವನ್ನು ಹಾಕಿದರೆ ಕೋಟೆ ಅಜೇಯವಾಗಿ ಉಳಿಯುವುದಾಗಿಯೂ - ಆ ಪ್ರಕಾರ ಗ್ರಾಮಸ್ಥರು ಕಾಯುತ್ತಿರಲು ಬೇರೊಬ್ಬ ದಾಸಯ್ಯ ಆ ವೇಳೆಯಲ್ಲಿ ಸೂಚನೆ ನೀಡಲು ಕೋಟೆ ಕೆಲಸ ಪ್ರಾರಂಭವಾಯಿತು. ಈ ತಪ್ಪಿನಿಂದಾಗಿ ಕೋಟೆ ಅಭ್ಯುದಯ ಕಾಣಲಿಲ್ಲ ಎಂಬುದು ಐತಿಹ್ಯ.[೭]

ಹರ್ತಿಕೋಟೆ ನಿರ್ಮಿಸಿದ ಪಾಳೇಯಗಾರ ತಿಪ್ಪಣ್ಣನಾಯಕನ ಐತಿಹ್ಯ

ತಿಪ್ಪಣ್ಣನಾಯಕನು ಹರತಿ, ನಿಡುಗಲ್ಲು ಪಾಳೇಗಾರರ ಮೂಲ ಪುರುಷ. ಇವನು ಬಿಜಾಪುರದ(ವಿಜಯಪುರ) ಪ್ರಾಂತ್ಯದವನು. ಇವನು ಕ್ಷತ್ರಿಯ ಕುಲಕ್ಕೆ ಸೇರಿದವನು. ಇವನ

ಜಾಲ್ಯದ ಪರಿತಂತೆ ಈತನು ಸೂರ್ಯದೇವನಿಂದ ತಿಮ್ಮರಾಜನ ಪತ್ನಿಯರಲ್ಲಿ ಜನಿಸಿದನೆಂದು ಪ್ರತೀತಿಯಿದೆ. ಈತನು ದೊಡ್ಡವನಾದ ಮೇಲೆ ಶ್ರೀ ಕೃಷ್ಣದೇವರಾಯನಲ್ಲಿ ಕೆಲಸಕ್ಕೆ ಸೇರಿದನಂತೆ. ಆಗ ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯನ ಆಸ್ಥಾನದಲ್ಲಿ ಹುಲಿಗಳ ಕುಸ್ತಿ ನಡೆಯುತ್ತಿತಂತೆ. ಆ ಗುಂಪಿನಿಂದ ತಪ್ಪಿಸಿಕೊಂಡ ಹುಲಿಯೊಂದು ದನಕರುಗಳ ನಡುವೆ ನುಗ್ಗಲು, ತಿಪ್ಪಣ್ಣನಾಯಕನು ತನ್ನ ಕೊಡಲಿಯಿಂದ ಅದನ್ನು ಹೊಡೆದುಕೊಂದನು. ಮತ್ತೊಂದು ಸಂದರ್ಭದಲ್ಲಿ ಪ್ರಸಿದ್ಧವಾದ ಜಟ್ಟಿಯನ್ನು ಸೋಲಿಸಿ ಕೊಂದನು. ಇದರಿಂದ ಇವನು ಕೃಷ್ಣದೇವರಾಯನ ಪ್ರೀತಿಗೆ ಪಾತ್ರನಾದನು. ಆದ್ದರಿಂದ ರಾಯನು ಇವನ ಶೌರ್ಯಕ್ಕೆ ಮೆಚ್ಚಿ ಈತನಿಗೆ ತಿಪ್ಪಣ್ಣನಾಯಕ ಎಂಬ ಹೆಸರನ್ನು ಮತ್ತು ಚಿತ್ರದುರ್ಗದ ಪೂರ್ವ ಭಾಗದ ಹೊಸ ರಾಜ್ಯವನ್ನು ವಹಿಸಿದನು.

ಇದರಂತೆ ಮಾಚಿಸಮುದ್ರ, ಗೋಸಿಕೆರೆ, ಚಳ್ಳಕೆರೆ ಪ್ರಾಂತ್ಯಗಳು ಒಳಗೊಂಡಂತೆ ಇವೆಲ್ಲಾ ಇವನ ರಾಜ್ಯವಾದವು. ಹರತಿ, ದೊಡ್ಡೇರಿ ಮುಂತಾದ ಊರುಗಳನ್ನು ತನ್ನ ಪೂರ್ವಿಕರ ನೆನಪಿಗಾಗಿ ಕಟ್ಟಿಸಿದನು. ಚಿತ್ರದುರ್ಗದಿಂದ ಪಾವಗಡ, ಮೊಳಕಾಲ್ಮೂರಿನಿಂದ ಶಿರಾದವರೆಗೆ ಇವನ ರಾಜ್ಯ ವಿಸ್ತರಿಸಿದ್ದಿತು.[೮] ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಯಾವುದೇ ಮನೆತನದ ಮೂಲ ಪುರುಷನ ಮೂಲವನ್ನು ಕುರಿತು ಸೂರ್ಯದೇವನಿಂದ ಜನಿಸಿದನು ಎಂದು ಹೇಳಲಾಗಿದೆ. ಅದೇ ರೀತಿ ಅವನು ಪರಾಕ್ರಮಿ ಎಂದು ತೋರಿಸಲು ಹುಲಿಯನ್ನು ಕೊಂದ ಉದಾಹರಣೆಯನ್ನು ಕೂಡಾ ಇಲ್ಲಿ ನೀಡಲಾಗಿದೆ. ಹಾಗೆಯೇ ಈ ಐತಿಹ್ಯವು ಐತಿಹಾಸಿಕ ಸತ್ಯವನ್ನು ಒಳಗೊಂಡಿದೆ ಎಂಬುದಕ್ಕೆ ಈ ವಿಷಯದ ಕುರಿತು ಆಧಾರಗಳು ದೊರೆಯುತ್ತವೆ.

ಹರ್ತಿಕೋಟೆಯ ಐತಿಹ್ಯ

ಹರ್ತಿಕೋಟೆಯಲ್ಲಿ ಕಸ್ತೂರಿ ರಂಗಪ್ಪನಾಯಕನ ಆಳ್ವಿಕೆ ಕಾಲದಲ್ಲಿ ಆತನು ಕೋಟೆ ಕಟ್ಟಿಸುವಾಗ ಪ್ರತಿದಿನ ಕೋಟೆ ನಿಲ್ಲದೆ ಕರಗಿ ಬಿದ್ದು ಹೋಗುತಿತ್ತು. ಆಗ ಕೋರುಮಗ (ಸಣ್ಣ ಹುಡುಗ) ಬಾಯಿಂದ ಈ ಕೋಟೆಗೆ ನರಬಲಿಕೊಟ್ಟರೆ ನಿಲ್ಲುವುದಾಗಿ ಕೂಗಿ ಹೇಳಿದ್ದರಿಂದ ಆ ಊರಿನ ಮಣೆಗಾರ ಬಸವಕುಲದ ವಂಶಸ್ಥನು ತನ್ನ ಏಳು ಮಕ್ಕಳಲ್ಲಿ ಹಿರಿಯ ಮಗನನ್ನು ಬಲಿ ಕೊಡುವುದಾಗಿ ಒಪ್ಪಿಕೊಂಡು, ಮನೆಯಲ್ಲಿ ತನ್ನ ಮಡದಿಯ ಮತ್ತು ಮಕ್ಕಳಲ್ಲಿ ಬಲಿ ಕೊಡುವ ವಿಷಯ ತಿಳಿಸಿದನಂತೆ. ಆಗ ಆತನ ಮಡದಿ ಒಪ್ಪಲಿಲ್ಲವಾದರೂ ಊರಿನಲ್ಲಿ ನಾಯಕರು ಕೋಟೆ ಕಟ್ಟಿಸುವುದು ಊರಿನ ಒಳಿತಿಗಾಗಿ, ಊರಿನ ಒಳಿತು ನಮ್ಮ ಒಳಿತೆ. ಅಂತಹ ಶ್ರೇಷ್ಠ ಕೆಲಸಕ್ಕೆ ಒಪ್ಪಬೇಕು ಎಂದು ಸಮಾಧಾನಪಡಿಸಿ, ಪಾಳೇಗಾರರಿಗೆ ಕೊಟ್ಟ ಮಾತಿನಂತೆ ತನ್ನ ಹಿರಿಯ ಮಗನನ್ನು ಬಲಿ ಕೊಟ್ಟಿದ್ದರಿಂದ ಕಟ್ಟಿದ ಕೋಟೆ ನಿಂತುಕೊಂಡಿತು. ಅಂದಿನಿಂದ ಬಸವನ ಕುಲದ ಮಣೆಗಾರನಿಗೆ ಹೊಸಬಟ್ಟೆ ಉಡುಗೊರೆಯಾಗಿ ಕೊಟ್ಟು ಹರತಿ ನಾಯಕರು ಮತ್ತು ಬಸವ ಕುಲದ ಮಣೆಗಾರರು ಅಣ್ಣ ತಮ್ಮಂದಿರಾಗಿ ನಡವಳಿಕೆ ಇಟ್ಟುಕೊಂಡಿರುತ್ತಾರೆ ಎಂಬುದು ಐತಿಹ್ಯ.[೯]

ಬ್ರಹ್ಮಲಿಂಗ ದೇವರ ಐತಿಹ್ಯ

ಕುಂಬಾರಗಟ್ಟೆಯು ಪಾಳೆಯಗಾರರ ಪಾಳೇಪಟ್ಟಾಗಿತ್ತು ಎಂಬುದಕ್ಕೆ ಅಲ್ಲಿದ್ದ ನಾಯಕ ಜನಾಂಗದವರ ಮೂಲ ದೇವರಾದ ಬ್ರಹ್ಮಲಿಂಗೇಶ್ವರ ದೇವರನ್ನು ಆರಾಧಿಸಿಕೊಂಡು

ಇಲ್ಲಿಯವರೆಗೂ ಮನೆ ದೇವರನ್ನಾಗಿ ಪೂಜಿಸುತ್ತಿದ್ದರು. ಕುಂಬಾರಗಟ್ಟೆಯ ಬಳಿ ಸಾಲುಗಟ್ಟಿರುವ ಗುಡ್ಡದಲ್ಲಿ ಬ್ರಹ್ಮಲಿಂಗೇಶ್ವರನ ಗುಹೆಯೊಂದಿದೆ. ಅದನ್ನು 'ಬೊಮ್ಮದೇವರ ಗುಹೆ', 'ಬ್ರಹ್ಮದೇವರ ಗುಡ್ಡ' ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಮೊದಲಿಗೆ ಈ ಗುಹೆಯಲ್ಲಿ ಋಷಿಗಳು. ಸಿದ್ಧರು ನೆಲಸಿ ತಪಸ್ಸು ಮಾಡುತ್ತಿದ್ದರೆಂಬ ಪ್ರತೀತಿ ಇದೆ. ಈ ಗುಹೆಯ ವಿಶೇಷತೆ ಏನೆಂದರೆ ಗುಹೆಯೊಳಗೆ ಹೋಗುವಾಗ ಬಗ್ಗಿ ಬಾಗಿ ಪ್ರವೇಶಿಸಬೇಕು. ಸ್ವಲ್ಪ ದೂರ ಕ್ರಮಿಸಿದ ನಂತರ ಎದ್ದು ನಿಂತು ಹೋಗಬೇಕು. ಮುಂದೆ ಹೋಗಲು ಭಯಂಕರವಾದ ಕಾರ್ಗತ್ತಲು ಮತ್ತು ಮುಂದೆ ಹೋಗಬೇಕಾದರೆ ತೆವಳಿಕೊಂಡು ಹೋಗಬೇಕು. ಅಗಮ್ಯವಾದ ಅಂತಹ ಸಾಹಸಕ್ಕೆ ಕೈಹಾಕಿ ಹೋದವರು ಹಿಂತಿರುಗಿ ಬಂದಿಲ್ಲವೆಂದು ಹೇಳಲಾಗುತ್ತದೆ. ಇಂದಿಗೂ ಬ್ರಹ್ಮಲಿಂಗದೇವರು ಆ ಗುಹೆಯೊಳಗೆ ದೀಪ ಹಚ್ಚಿಕೊಂಡು ಶಿವನನ್ನು ಪೂಜಿಸುತ್ತಾ ತಪಸ್ಸು ಕೈಗೊಂಡಿದ್ದಾನೆ ಎಂದು ಇಲ್ಲಿಯ ಜನರು ಹೇಳುವುದುಂಟು. ಹನ್ನೆರಡು ವರ್ಷಗಳಿಗೊಮ್ಮೆ ಬ್ರಹ್ಮದೇವರ ಜಾತ್ರೆ ನಡೆಯುತ್ತಿದ್ದು ಆ ಸಂದರ್ಭದಲ್ಲಿ ಬ್ರಹ್ಮದೇವರನ್ನು ಮಲ್ಲಜ್ಜನ ಬಾವಿಯಲ್ಲಿ ಲಿಂಗಪೂಜೆ ಮಾಡಿ, ಗುಹೆಗೆ ಹೋಗಿ, ಅಲ್ಲಿಂದ ಪಕ್ಕದಲ್ಲೇ ಇರುವ ಪೂಜಾರಿ ಗುಡ್ಡೆಗೆ ಪೂಜೆ ಮಾಡಿ ಅಲ್ಲಿ ನಾಯಕರು-ಮಣೆಗಾರರು-ಛಲವಾದಿಗಳು ಈ ಮೂರು ಜಾತಿಯ ಜನರು ಅಣ್ಣ-ತಮ್ಮಂದಿರಂತೆ ತೆರೆಕಟ್ಟಿಕೊಂಡು ಸಹಪಂಕ್ತಿ ಭೋಜನ ಮಾಡುವ ಪದ್ಧತಿ ಇಂದಿಗೂ ಆಚರಣೆಯಲ್ಲಿರುವುದು ವಿಶೇಷ ಸಂಗತಿಯಾಗಿದೆ. ಈ ದೇವರ ಜಾತ್ರೆಯಲ್ಲಿ ಹೊರಟು ಮಲ್ಲಮಜ್ಜನ ಬಾವಿ, ಈಗ ಮಲ್ಲಬಸವನ ಬಾವಿ ಎಂದು ಕರೆಯುತ್ತಾರೆ. ಗುಹೆ, ಪೂಜಾರಿಗುಡ್ಡೆಗೆ ನಡೆದಂತೆ ಹೆಜ್ಜೆಗೊಂದು ತೆಂಗಿನಕಾಯಿ, ನಿಂಬೆಕಾಯಿ, ಓಕುಳಿ ಹಾಕಬೇಕೆನ್ನುವ ಸಂಪ್ರದಾಯ ವಿದ್ದುದರಿಂದ ದುಬಾರಿ ಎನಿಸಿ ಹನ್ನೆರಡು ವರ್ಷಗಳಿಗೊಮ್ಮೆ ಜಾತ್ರೆ ಇಟ್ಟುಕೊಂಡಿದ್ದರಂತೆ ಎಂಬುದು ಐತಿಹ್ಯ.[೧೦]

ಮಾನಚಾರಿ ವಾಮಚಾರಿಯಾಗಿ

ಭರಮಪುರ ಐತಿಹ್ಯದ ಮತ್ತೊಂದು ಮುಖವೆಂದರೆ ಮಾನಚಾರಿ. ಈತ ವಾಮಚಾರಿಯಾಗಿ ಅನೇಕ ಚಮತ್ಕಾರಗಳನ್ನು ಮಾಡಿದ್ದುಂಟಂತೆ. ಕುರಿಯನ್ನು ಹುಲಿಯನ್ನಾಗಿ ಮಾಡುವುದು. ಹಾಳುಬಿದ್ದ ಮನೆಯ ಮೋಟು ಗೋಡೆಗಳನ್ನು ಮಂತ್ರಿಸಿ ಚಲಿಸುವಂತೆ ಮಾಡಿಕೊಂಡು ಅವುಗಳ ಮೇಲೇರಿ ನೆರೆಹೊರೆ ಊರುಗಳಲ್ಲಿ ನಡೆಯುತ್ತಿದ್ದ ನಾಟಕಗಳನ್ನು, ಉತ್ಸವಗಳನ್ನು ಮತ್ತು ಮೋಡಿ ಮಾಡುವುದನ್ನು ನೋಡಲು ಹೋಗುತ್ತಿದ್ದಾಗಿ ತಿಳಿದುಬರುತ್ತದೆ. ಊರೊಳಗೆ ಪೀಡೆ-ಪಿಶಾಚಿ, ರಾಹು-ಕೇತು, ಭೂತಪ್ರೇತ-ಭೇತಾಳ ಮುಂತಾದವುಗಳು ನುಸುಳದಂತೆ ಕಟ್ಟು ಕರಾರು ಮಾಡುವಾತ. ಮಾಟ ಮಾಡಿದ್ದನ್ನು ಬಿಡುಗಡೆ ಮಾಡುವ ಪ್ರವೀಣನಾಗಿದ್ದನಂತೆ. ಮೋಡಿ ಮಾಡುವುದರಲ್ಲಿ ರಣಮೋಡಿ ಹಾಕುವುದರಲ್ಲಿ ಮತ್ತು ಮೋಡಿ ಕೇಳುವುದರಲ್ಲಿ ಅಪ್ರತಿಮ ಪಾಂಡಿತ್ಯ ಸಾಧಿಸಿದ್ದಾಗಿ ತಿಳಿದುಬರುತ್ತದೆ. ಆ ಕಾಲದಲ್ಲಿ ಮಾನಚಾರಿ ಹಾಕಿದ್ದ ಮೋಡಿಯನ್ನು ಇನ್ನೂ ಕಿತ್ತಿಲ್ಲವೆಂದು ಇಲ್ಲಿಯ ಜನರು ಹೇಳುತ್ತಾರೆ.

ಒಮ್ಮೆ ಈ ಊರಿಗೆ ಮೂಡಲಸೀಮೆಯಿಂದ ಮೋಡಿ ಮಾಡಲೆಂದು ಮೋಡಿಗೊಲ್ಲರು ಬಂದಿದ್ದರಂತೆ. ಈಗಿರುವ ಗೌಡರ ಕೆರೆಯ ಅಂಗಳದಲ್ಲಿ ಬಿಡಾರ ಹಾಕಿಕೊಂಡು ಊರಿನ

ಪ್ರಮುಖರೊಂದಿಗೆ ಚರ್ಚಿಸಿ ಊರಲ್ಲಿ ಮೋಡಿ ಮಾಡಲು ತೀರ್ಮಾನಿಸಿ, ತೇರು ಬೀದಿಯ ಬಯಲಿನಲ್ಲಿ ಮಂಡಲ ಬರೆದು, ರಂಗ ಹಾಕಿ ಉಗ್ರರೂಪದ ಹೆಣ್ಣು ವಿಗ್ರಹ ನಿಲ್ಲಿಸಿ ಅದರ ಬಾಯಿಯೊಳಗೆ ಗಾಡಿಯ ಚಕ್ರವೊಂದನ್ನು ಇರಿಸಿ, ರಾಶಿಗಟ್ಟಲೆ ಬೇವಿನಸೊಪ್ಪು ಸುರಿದು ಮಂಡಲವೊಂದಕ್ಕೆ ಕೋಳಿ, ಕುರಿಮರಿ, ನಿಂಬೆಕಾಯಿ, ತೆಂಗಿನಕಾಯಿ ಮುಂತಾದವುಗಳನ್ನು ಇರಿಸಿ, ಮೋಡಿಯ ರಣರಂಗವನ್ನು ಸಜ್ಜು ಮಾಡಿದರಂತೆ. ಊರೊಳಗೆ ಮಾನಚಾರಿಯಷ್ಟೇ ಪಾಂಡಿತ್ಯ ಹೊಂದಿದ್ದ ಮತ್ತೊಬ್ಬ ವ್ಯಕ್ತಿ ಛಲವಾದಿ ಜನಾಂಗದ ದಾಸೀರಪ್ಪನಂತೆ. ಮೋಡಿ ಪ್ರಾರಂಭಿಸಲು ಮೊದಲಿಗೆ ಇದೇ ದಾಸೀರಪ್ಪನ ಮನೆಗೆ ಬಂದ ಮೋಡಿ ಗೊಲ್ಲರ ಹೆಂಗಸರು ಕಚ್ಚೆ ಹಾಕಿಕೊಂಡು, ಕಾಲಿಗೆ ಗೆಜ್ಜೆ ಕಟ್ಟಿಕೊಂಡು, ಎರಡು ಕೈಗಳಲ್ಲಿ ಬೇವಿನಸೊಪ್ಪು ಹಿಡಿದು ಕುಣಿಯುತ್ತಾ, ಬೈಯುತ್ತಾ ಅವಮಾನ ಮಾಡುತ್ತಾ, ಉದ್ರೇಕದ ಮಾತುಗಳೊಂದಿಗೆ ರೇಗಿಸಿ ಮನೆ ಮುಂದೆ ಇದ್ದ ದೊಡ್ಡ ಕಲ್ಲು ಬಂಡೆಯ ಮೇಲೆ ನಿಂತರಂತೆ. ಈಗ ದಾಸೀರಪ್ಪ ಮನೆಯೊಳಗೆ ಚರಕದಲ್ಲಿ ಖಾದಿ ಬಟ್ಟೆಯ ನೂಲು ತೆಗೆಯುತ್ತಾ ಕುಳಿತಿದ್ದನ್ನು ಕಂಡು ಮೋಡಿ ಗೊಲ್ಲರ ಹೆಂಗಸರಿಗೆ ರೇಗಿ ಹೋಯಿತು. ಕೆಟ್ಟ ಕೆಟ್ಟದ್ದಾಗಿ ಬೈಯುತ್ತಿರುವಾಗ, ಆತ ಅಲ್ಲಿಂದ ಎದ್ದು ಬಂದು ತನ್ನ ಕೈಯಲ್ಲಿದ್ದ ನೂಲಿನ ದಾರವನ್ನು ಮೇಲಕ್ಕೆ ಎಸೆದನಂತೆ. ತಕ್ಷಣ ಮೋಡಿ ಗೊಲ್ಲರು ನಿಂತಿದ್ದ ಕಲ್ಲು ಬಂಡೆಯು ಮೇಲಕ್ಕೆ ಹೋಗಿ ತಲೆಕೆಳಗಾಗಿ ನಿಂತುಕೊಂಡಿತಂತೆ. ಆಗ ಬಾಯಿ ಬಡಿದುಕೊಂಡ ಮೋಡಿ ಗೊಲ್ಲರ ಗಂಡಸರು ದಾಸೀರಪ್ಪನಿಗೆ ವಂದಿಸಿ ತಮ್ಮ ಸಣ್ಣ ಮಗುವನ್ನು ತುಂಡು ತುಂಡು ಮಾಡಿ ಗುಡ್ಡೆ ಹಾಕಿ ಮಾನಚಾರಿಗೆ ತಮ್ಮ ಅದ್ಭುತ ಚಮತ್ಕಾರ ನೋಡುವಂತೆ ಸವಾಲು ಹಾಕಿದರಂತೆ. ಆಗ ಮಾನಚಾರಿ ಮೂರು ಕಲ್ಲು ಮಂತ್ರಿಸಿ ಒಂದನ್ನು ಮೇಲಕ್ಕೆ ಎಸೆಯಲಾಗಿ ಹದ್ದೊಂದು ಹಾರಿ ಬಂದು ಮಗುವಿನ ಮಾಂಸದ ತುಂಡನ್ನು ಕಚ್ಚಿಕೊಂಡು ಹೋಯಿತಂತೆ. ಆಗ ಹೌಹಾರಿದ ಮೋಡಿಗೊಲ್ಲರು ಮಾನಚಾರಿಯ ಕಾಲಿಗೆ ಬಿದ್ದು ಇನ್ನೆಂದೂ ಈ ಊರಿಗೆ ಮೋಡಿ ಮಾಡಲು ಬರುವುದಿಲ್ಲ ಎಂದು ಪ್ರಮಾಣ ಮಾಡಿದರಂತೆ. ಆಗ ಮಾನಚಾರಿ ಎರಡನೇ ಕಲ್ಲನ್ನು ಮೇಲಕ್ಕೆ ಎಸೆಯಲಾಗಿ ಅದೇ ಹದ್ದು ಹಾರಿ ಬಂದು ಮಾಂಸದ ತುಂಡನ್ನು ಬಿಟ್ಟು ಹೋಯಿತಂತೆ. ಉಳಿದ ಮೂರನೆ ಕಲ್ಲನ್ನು ಮಂತ್ರಿಸಿ ಮಾಂಸದ ಗುಡ್ಡೆ ಇದ್ದಲ್ಲಿಗೆ ಎಸೆಯಲಾಗಿ ಮಗು ಬದುಕಿಕೊಂಡಿತಂತೆ. ಆಗಿಂದಾಗ್ಗೆ ಗಂಟುಮೂಟೆ ಕಟ್ಟಿಕೊಂಡು ಮೋಡಿಗೊಲ್ಲರು ಹೋದಾಗಿನಿಂದ ಈ ಊರಲ್ಲಿ ಮೋಡಿ ಕಿತ್ತಿಲ್ಲವೆಂದು ಸ್ಥಳೀಯರು ಹೇಳುತ್ತಾರೆ.[೧೧]

೫.೨. ನಂಬಿಕೆ ಮತ್ತು ಆಚರಣೆಗಳು

ಪ್ರಾಚೀನಕಾಲದಿಂದಲೂ ಮಾನವ ತನ್ನ ಬದುಕಿನ ಉನ್ನತ ಶ್ರೇಯಸ್ಸಿಗಾಗಿ ಅಥವಾ ರೋಗ ನಿವಾರಣೆಗಾಗಿ ಇಲ್ಲವೇ ತನ್ನ ದಿನನಿತ್ಯದ ಕಾರ್ಯಚಟುವಟಿಕೆಗಳು ಸುಗಮವಾಗಿ ನಡೆಯುವಂತೆ ತನಗೆ ಸಂಬಂಧಿಸಿದ ಅಗೋಚರ ಶಕ್ತಿ ಆರಾಧನೆಯಲ್ಲಿ ಪೂಜಾ ವಿಧಿ-ವಿಧಾನಗಳು, ಜಾತ್ರೆ-ಉತ್ಸವಗಳು, ನಂಬಿಕೆ ಮತ್ತು ಆಚರಣೆಗಳ ಆಧಾರದ ಮೇಲೆ ಮಾಡುತ್ತಾ ಬಂದಿದ್ದಾರೆ. ನಂಬಿಕೆ ಮತ್ತು ಆಚರಣೆಗಳು ಮಾನವನ ಆರೋಗ್ಯವನ್ನು ಕಾಪಾಡುವುದಲ್ಲದೇ ಅವುಗಳ ಪ್ರತಿಯೊಂದು ಗುಂಪು ತನ್ನ ಹತೋಟಿಯಲ್ಲಿ ಇಟ್ಟುಕೊಂಡು ಕೊಂಡೊಯ್ಯುತ್ತದೆ.

ನಂಬಿಕೆ-ಆಚರಣೆ ಕುಲದೇವರ ಆರಾಧನೆಗಳ ಮೇಲೆ ರೂಪುಗೊಂಡಂತವುಗಳಾಗಿವೆ. ಮನುಷ್ಯನ ದಿನನಿತ್ಯದ ಬದುಕಿನ ಎರಡು ಮುಖಗಳು ನಂಬಿಕೆ. ಮಾತಿನ ಮೂಲಕ ವ್ಯಕ್ತಿಗೆ ಸ್ಫೂರ್ತಿ ನೀಡಿದೆ. ಆಚರಣೆಗಳು ಕ್ರಿಯೆಯ ಮೂಲಕ ವಿಶಿಷ್ಟ ಸ್ಥಾನವನ್ನು ಪಡೆದುಕೊಳ್ಳುತ್ತದೆ.[೧೨] ಈ ರೀತಿಯಾಗಿ ರೂಪಿತವಾದ ಸಂಸ್ಕೃತಿಯನ್ನು ಗಮನಿಸಿದಾಗ ಹಾ.ಮಾ. ನಾಯಕರ ಮಾತು ನೆನಪಿಗೆ ತರುತ್ತದೆ. "ಮನುಷ್ಯ ಕಾಲದ ನಡುವೆ ಸಿಕ್ಕು ಬಾಳುತ್ತಾನೆ[೧೩] ಮತ್ತು ದೇಶದ ನಡುವೆ ಸಿಕ್ಕು ಬಾಳುತ್ತಾನೆ".

ಮಾನವನು ನಿತ್ಯ ಜೀವನಕ್ಕೆ ಪ್ರಕೃತಿ ನೀಡುವ ಬೆಳಕು, ಗಾಳಿ, ನೀರು, ಆಹಾರ, ಬಟ್ಟೆ ಬರೆಗಳು ಎಷ್ಟು ಅವಶ್ಯವೋ, ನಂಬಿಕೆಗಳು ಕೂಡ ಅಷ್ಟೇ ಪ್ರಮುಖ ಪಾತ್ರವಹಿಸುತ್ತವೆ. ಜನಪದರಲ್ಲಿ ನಂಬಿಕೆಗಳು ಬಹಳ ಪ್ರಾಚೀನ ಕಾಲದಿಂದ ಇರುವುದನ್ನು ಕಾಣಬಹುದು. ಮಾನವನು ವಿಕಾಸಗೊಂಡಂತೆ ಆತನ ಜೀವನದಲ್ಲಿ ಭಾಷೆ-ಭಾವನೆಗಳ ಉಗಮದೊಂದಿಗೆ ನಂಬಿಕೆಗಳೂ ಕೂಡ ಅದರೊಂದಿಗೆ ಪರ್ಯಾಯವಾಗಿ ಬೆಳೆದು ದಿನನಿತ್ಯದ ಕ್ರಮಗಳನ್ನು ಬೆಳೆಸುವಷ್ಟರಮಟ್ಟಿಗೆ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. "ನಂಬಿಕೆ ಒಂದು ಮಾನಸಿಕ ಸ್ಥಿತಿ ಪರಂಪರಾಗತವಾಗಿ ಸ್ವೀಕೃತವಾದ ಒಂದು ಭಾವ ರೂಪ ಪುನರಾವೃತ್ತೀತ ಮತ್ತು ಸಂಪ್ರದಾಯಿಕ ಅಭಿಪ್ರಾಯೋಕ್ತಿ ವಸ್ತುಸ್ಥಿತಿಯೊಡನೆ ಅಸಂಬದ್ಧವೂ, ಅವೈಜ್ಞಾನಿಕವಾದ ಸಂಬಂಧವಾದ ಹೇಳಿಕೆ".[೧೪] ಇದನ್ನು ಗಮನಿಸಿದಾಗ ಶುಭ-ಅಶುಭ, ಫಲ-ವಿಫಲ, ಭಯ-ಅಭಯಗಳ ಕುರಿತು ಪ್ರಕಟಪಡಿಸುವ ಕ್ರಿಯೆಯೇ ನಂಬಿಕೆ. ನಂಬಿಕೆಗಳು ಜನಪದರಲ್ಲಿ ನಿತ್ಯ ಜೀವನದ ಒಂದು ಮಹತ್ವದ ಅಂಗಗಳಾಗಿವೆ. ಇದಲ್ಲದೇ ಐತಿಹ್ಯದ ಹಿನ್ನೆಲೆಯುಳ್ಳ ನಂಬಿಕೆಗಳು ನಮ್ಮ ಜನಪದರಲ್ಲಿ ಕಾಣಬಹುದು. ಜಗತ್ತಿನಲ್ಲಿ ಪ್ರಬುದ್ಧವಾದ ಧರ್ಮಗಳು ಹುಟ್ಟಿಕೊಂಡು ಬೆಳಕು ಪಡೆಯುವುದಕ್ಕಿಂತ ಮುಂಚೆ ಮೊದಲು ನೈಸರ್ಗಿಕ ಧರ್ಮಗಳು ನಂಬಿಕೆಗಳನ್ನು ಅತಿಮಾನುಷ, ಶಕ್ತಿಯ ಭಯದ ಹಿನ್ನೆಲೆಯಲ್ಲಿ ಸ್ವೀಕರಿಸಿದ್ದಾಗಿದೆ. ಈ ದಿಶೆಯಲ್ಲಿ ಆರಾಧಿಸುವ ದೇವರ ದೈವದ ಕುರಿತು ಹಲವಾರು ನಂಬಿಕೆಗಳು ಉಗಮಗೊಂಡು ಜಾತ್ರೆ-ಉತ್ಸವಗಳು ಮಾಡುವಂತೆ ಪ್ರೇರಣೆಯನ್ನುಂಟುಮಾಡಿವೆ. ಇಂತಹ ನಂಬಿಕೆಗಳಲ್ಲಿ ದೇವರ ಬಗ್ಗೆ ಇರುವ ಭಯ ಮತ್ತು ಆ ದೇವರು ತೋರಿಸಿದ ಪವಾಡ ನಿಗೂಢ ಸತ್ಯತೆಗಳು ಕೆಲವೊಮ್ಮೆ ರೋಗ-ರುಜಿನೆಗಳಿಂದ ಜನರನ್ನು ರಕ್ಷಿಸಿದ್ದು ಕ್ಷಾಮ, ಬರಗಾಲಗಳಿಂದ ಉಳಿಸಿದ್ದು, ಸಂತಾನ, ಮುತ್ತೈದಿತನ ನೀಡಿದ್ದು, ಬಾಧೆಗಳಿಂದ ಬೆಳೆ ಉಳಿಸಿದ್ದು, ಬಾವಿಗಳಲ್ಲಿ ನೀರು ಬರುವಂತೆ ಮಾಡಿದ್ದು ಇತ್ಯಾದಿಗಳಾಗಿವೆ. ಈ ನಂಬಿಕೆಗಳು ಒಂದಿಲ್ಲೊಂದು ಆಧಾರದ ಮೇಲೆ ಐಮಂಗಲ ಪ್ರದೇಶದಲ್ಲಿ ಜಾತ್ರೆ-ಉರುಸು ಉತ್ಸವಗಳು ಇಂದಿಗೂ ಜರುಗುವುದಕ್ಕೆ ಆ ದೇವರ ಪವಾಡ ಮತ್ತು ಭಕ್ತಿಯೇ ಇದಕ್ಕೆ ಕಾರಣವಾಗಿದೆ.

ಹಬ್ಬಗಳು ಮತ್ತು ಆಚರಣೆಗಳಲ್ಲಿ ಸಾರುವುದು

ಗ್ರಾಮದ ದೇವರುಗಳಿಗೆ ಉತ್ಸವವನ್ನು ಮಾಡಲು ಸಿದ್ಧರಾಗಲು ತಯಾರಿ ಮಾಡುವ ಕ್ರಮವೇ ಸಾರುವುದು. ದೇವರು ಅಥವಾ ದೇವತೆಯ ಹಬ್ಬವನ್ನು ಮಾಡಲು ಜನರನ್ನು

ಆರ್ಥಿಕವಾಗಿ ಮತ್ತು ಮಾನಸಿಕವಾಗಿ ತಯಾರಿಗೊಳಿಸುವ ಪ್ರಾರಂಭದ ಆಚರಣೆಯೇ ಸಾರುವುದು. ಹಬ್ಬಕ್ಕೆ ಸೂಚನೆ ಕೊಡುವ ಮತ್ತು ಪಾಲಿಸುವ ನಿಯಮಗಳನ್ನು ತಮಟೆ ಬಾರಿಸುತ್ತ ಬೀದಿ ಬೀದಿಗಳಲ್ಲಿ ಹೇಳುವುದೇ ಸಾರುವುದು ಎಂದಾಗುತ್ತದೆ. ಇದರಿಂದಾಗಿ ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಯನ್ನು ಅರಿತು ಕಾರ್ಯಗಳನ್ನು ನಡೆಸಲು ಸುಲಭವಾಗುವುದು. ಗ್ರಾಮದ ಮುಖ್ಯಸ್ಥರು ಮತ್ತು ಪೂಜಾರಿಯವರು ದೇವಾಲಯದಲ್ಲಿ ಸಭೆ ಸೇರಿ ಈ ಹೊತ್ತಿಗೆ ಇಪ್ಪತ್ತು ದಿನಕ್ಕೆ ಹಬ್ಬ ಮಾಡಬಹುದೇ ಎಂದು ದೇವರನ್ನು ಕೇಳುವರು. ಆಗ ದೇವತೆಯ ವಿಗ್ರಹದ ಬಲಭಾಗದಲ್ಲಿ ಹೂ ಬೀಳಬೇಕು. ಹಾಗೆ ಬಿದ್ದರೆ ದೇವತೆಯ ಒಪ್ಪಿಗೆ ದೊರೆತಿದೆಯೆಂದು ತಿಳಿದು ಸಾರುವವರನ್ನು ಕರೆಸುವರು ತಮ್ಮ ಅನುಕೂಲಕ್ಕೆ ತಕ್ಕಂತೆ ಎಂಟೋ, ಹತ್ತೋ ದಿನಗಳಲ್ಲಿ ಜಾತ್ರೆಯ ದಿನಾಂಕವನ್ನು ನಿಗದಿಪಡಿಸಿ ಸಾರುವರು. ಈ ಸಾರುವ ವ್ಯಕ್ತಿಯನ್ನು ಸಾರುವಯ್ಯ, ಗುರಿಕಾರ ಎಂಬ ಹೆಸರುಗಳಿಂದ ಕರೆಯುವರು. ಸಾರುವ ವ್ಯಕ್ತಿ ಕೆಳವರ್ಗಕ್ಕೆ ಸೇರಿದವನಾಗಿರುತ್ತಾನೆ. ಸಾರುವವನಿಗೆ ಪ್ರತಿಫಲವಾಗಿ ಹಣವನ್ನು ಅಥವಾ ಕಾಳನ್ನು ಕೊಡುವ ಪದ್ಧತಿ ಇದೆ. ಆ ವ್ಯಕ್ತಿ ಸಾರಿದ ದಿನದಿಂದ ಹಬ್ಬ ಮುಗಿಯುವ ತನಕ ಮಡಿಯಿಂದ ಇರಬೇಕು. ತನ್ನ ಮನೆಯವರಿಂದ ಪ್ರತ್ಯೇಕವಾಗಿರಬೇಕು. ಪ್ರತಿನಿತ್ಯ ಸ್ನಾನ ಮಾಡಿ ಶುಭ್ರವಾದ ವಸ್ತ್ರಗಳನ್ನು ಧರಿಸಿರಬೇಕು. ಮಾಂಸಾಹಾರ ಮತ್ತು ಪಾನವನ್ನು ತ್ಯಜಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ಸಾರುವವನಿಗೆ ಸಮಾಜದಲ್ಲಿ ಉನ್ನತ ಅಂತಸ್ತು ಲಭಿಸದಂತಾಗುತ್ತದೆ.[೫]

ಹೊಳೆಗೆ ಹೋಗುವುದು

ದೇವರು ತರುವುದು, ಜಲ್ದಿ ಪೂಜೆ ಎಂಬ ಹೆಸರುಗಳಿಂದ ಕರೆಯುವ ಈ ಆಚರಣೆಯು ದೇವರಿಗೆ ಗಂಗೆಯಿಂದ ಸ್ನಾನ ಮಾಡಿಸುವುದು ಇಲ್ಲಿಯ ವಿಶೇಷ ಆಚರಣೆ. ಹೊಳೆ ಅಥವಾ ಕೆರೆ, ಕಲ್ಯಾಣಿ ಬಾವಿಯ ಬಳಿ ದೇವರನ್ನು ತೆಗೆದುಕೊಂಡು ಹೋಗಿ, ಅಲ್ಲಿ ದೇವರ ವಿಗ್ರಹಗಳನ್ನು ಶುಚಿಗೊಳಿಸಿ ಹೋಮ ಮಾಡುವರು ಅಥವಾ ಗಂಗಾಸ್ನಾನ ಮಾಡಿಸುವರು. ಇದನ್ನು ಪುಣ್ಯೋಜನ, ಪುಣ್ಯಾಹ ಎಂಬ ಹೆಸರುಗಳಿಂದ ಈಗಲೂ ಕರೆಯುವರು.

ಐಮಂಗಲದ ಗ್ರಾಮದೇವತೆಯಾದ ಕಲ್ಕುಂಟೇಶ್ವರಿಯನ್ನು ಹೊಳೆಗೆ ಕರೆದುಕೊಂಡು ಹೋಗುತ್ತಾರೆ. ಆಗ ದೇವತೆಯನ್ನು ನಾಲ್ಕು ಜನ ಹೊತ್ತಿರುತ್ತಾರೆ. ಪೂಜಾರಿಯು ಮಂಗಳಾರತಿ ತಟ್ಟೆ ಮತ್ತು ಗಂಟೆಯನ್ನು ಹಿಡಿದು ಮುಂದೆ ಹೋಗುತ್ತಿರುತ್ತಾರೆ. ದೇವತೆಗೆ ಹೊಳೆಯ ಬಳಿ ಎಡೆಯನ್ನು ಹಾಕಿ ಪೂಜಿಸಲಾಗುವುದು. ನೀರಿನ ಬಳಿಯಲ್ಲಿ ಹೋಮವನ್ನು ಮಾಡುವರು. ಈ ಹೋಮವನ್ನು ಪುರೋಹಿತನು ನೆರವೇರಿಸುವನು. ಪೂಜಾ ಕಾರ್ಯಗಳು ಮುಗಿದ ನಂತರ ದೇವರನ್ನು ದೇವಾಲಯಕ್ಕೆ ಹಿಂದಿರುಗುವಾಗ ಮಡಿವಾಳ ಜನಾಂಗದವರು ಒಗೆದ ಪಂಜೆಯನ್ನು ಹಾಸುತ್ತಾರೆ. ಅದರ ಮೇಲೆ ದೇವರು ಹೊತ್ತವರು ನಡೆದು ಬರುತ್ತಾರೆ. ಇದನ್ನು ನಡೆಮುಡಿ ಎಂಬ ಹೆಸರಿನಿಂದ ಕರೆಯುವರು. ಮಡಿವಾಳ ಜನಾಂಗದ ಇಬ್ಬರು ವ್ಯಕ್ತಿಗಳು ಎರಡು ಪಂಜುಗಳನ್ನು ಹಿಡಿದು ಅದರ ಬೆಳಕಿನಲ್ಲಿ ದೇವತೆಯನ್ನು ಗುಡಿಗೆ ತಂದು ಕೂಡಿಸುವರು. ಈ ರೀತಿಯ ಆಚರಣೆ ಹೋಬಳಿಯಾದ್ಯಂತ ಹಲವಾರು ದೇವಾಲಯಗಳಲ್ಲಿ ಕಂಡುಬರುತ್ತದೆ.

ಪಲ್ಲಕ್ಕಿ ವೈಶಿಷ್ಟ್ಯ

ಐಮಂಗಲ ಹೋಬಳಿ ಪರಿಸರದಲ್ಲಿ ಜಾತ್ರೆಯ ಸಂದರ್ಭದಲ್ಲಿ ಪ್ರಾರಂಭದಿಂದ ಕೊನೆಯವರೆಗೂ ಪಲ್ಲಕ್ಕಿ ಉತ್ಸವ ಜರುಗುವುದು ಒಂದು ವಿಶಿಷ್ಟತೆಯನ್ನು ಪಡೆದಿದೆ.

ಪಲ್ಲಕ್ಕಿಯು ತೊಟ್ಟಿಲು ಆಕಾರದಲ್ಲಿ ಹೊಂದಿದ್ದು. ಇದಕ್ಕೆ ನಾಲ್ಕು ಕಿರುಗಾಲುಗಳ ಕಾಮನಬಿಲ್ಲಿನ ಆಕಾರದ ಕಟ್ಟಿಗೆಯಿಂದ ಮಾಡಿದ ಕಮಾನು ಮತ್ತು ಇದಕ್ಕೆ ಉದ್ದನೆಯ ಹಗಲು ಕಂಬ ಹೊಂದಿರುತ್ತದೆ. ಇಂತಹ ವೈಶಿಷ್ಟ್ಯ ರಚನೆಗೆ 'ಪಾಲಕಿ' ಎನ್ನುತ್ತಾರೆ. ಆಯಾ ದೇವರ ಐತಿಹಾಸಿಕ ಹಿನ್ನಲೆ ಆಧಾರದ ಮೇಲೆ ಪಲ್ಲಕ್ಕಿಯು ತೊಟ್ಟಿಲದ ಮೇಲೆ ಕೆತ್ತನೆಯ ಕೆಲಸವನ್ನು ಮಾಡಿರುತ್ತಾರೆ ಮತ್ತು ಪಲ್ಲಕ್ಕಿಗೆ ಕುತನಿಬಟ್ಟೆ(ಮಿಂಚುವ ಬಣ್ಣ)ಯಿಂದ ಹೊದಿಸಿ, ಪಲ್ಲಕ್ಕಿಯ ಮೇಲೊಂದು ಚಿಕ್ಕ ಕಳಸವನ್ನು ಇಟ್ಟಿರುತ್ತಾರೆ. ಈ ರೀತಿಯಾಗಿ ಅಲಂಕರಿಸಿ ಪಲ್ಲಕ್ಕಿಯಲ್ಲಿ ದೇವರ ಉತ್ಸವಮೂರ್ತಿಯನ್ನಿಟ್ಟು ಮೆರವಣಿಗೆಯನ್ನು ಮಾಡುತ್ತಾರೆ. ಈ ಸಂದರ್ಭದಲ್ಲಿ ಪಲ್ಲಕ್ಕಿಯ ಮುಂದೆ ವಾದ್ಯಮೇಳದವರು, ಡೊಳ್ಳನ್ನು ಬಾರಿಸುವರು. ವೀರಗಾಸೆ ಕುಣಿತದವರು, ಛತ್ರಿ ಚಾಮರವನ್ನು ಹಿಡಿದವರು ಮತ್ತು ಪಲ್ಲಕ್ಕಿಯ ಹಿಂದೆ ಆರತಿಯನ್ನು ಹಿಡಿದ ಮುತ್ತೈದೆಯರಿರುತ್ತಾರೆ. ಈ ಮೆರವಣಿಗೆಯು ಪ್ರಮುಖ ಓಣಿಗಳಲ್ಲಿ ಸಾಗುತ್ತಿರುವಾಗ ಅವರವರ ಮನೆಯ ಮುಂದೆ ಭಕ್ತರು ತುಂಬಿದ ಕೊಡಗಳಿಂದ ಪಲ್ಲಕ್ಕಿಯನ್ನು ಹೊತ್ತ ಪೂಜಾರಿಯ ಪಾದಗಳಿಗೆ ನೀರನ್ನು ಸುರಿದು ನೈವೇದ್ಯವನ್ನು ಸಲ್ಲಿಸಿ, ಅವರ ಪಾದಕ್ಕೆ ನಮಸ್ಕರಿಸಿ ಆಶೀರ್ವಾದವನ್ನು ಪಡೆಯುತ್ತಾರೆ.

ಈ ಮೆರವಣಿಗೆಯು ಗ್ರಾಮದಲ್ಲಿರುವಂತಹ ಹಲವಾರು ಮನೆಗಳಿಗೆಲ್ಲಾ ಸಂಚರಿಸಿ, ಮರಳಿ ತನ್ನ ದೇವಾಲಯಕ್ಕೆ ಬಂದು ದೇವಾಲಯವನ್ನು ಪ್ರದಕ್ಷಿಣೆ ಹಾಕಿದ ನಂತರ ತೇರಿನ ಸ್ಥಳಕ್ಕೆ ಬರುವುದಕ್ಕೂ ಮುಂಚೆ, ತೇರನ್ನು ಅಲಂಕರಿಸಿರುತ್ತಾರೆ. ಅಲ್ಲಿಗೆ ಬಂದ ಪಲ್ಲಕ್ಕಿಯು ತೇರನ್ನು ಪ್ರದಕ್ಷಿಣೆ ಹಾಕಿ ಮುಂದೆ ಮುಂದೆ ಸಾಗುತ್ತದೆ. ಇದರ ಹಿಂದೆ ತೇರನ್ನು ಎಳೆಯುತ್ತಾರೆ. ಈ ರೀತಿಯಾಗಿ ಪಲ್ಲಕ್ಕಿಯು ಜಾತ್ರೆಗಳ ಕಾಲದಲ್ಲಿ ಒಂದು ಪ್ರಮುಖವಾದ ವಿಶೇಷತೆಯನ್ನು ಹೊಂದಿದೆ.[೯] ಕೊನೆಗೆ ಜಾತ್ರೆ ಮುಗಿದ ನಂತರ ಪಲ್ಲಕ್ಕಿಯನ್ನು ದೇವಸ್ಥಾನದ ಪಡಸಾಲೆಯಲ್ಲಿ ಬಿಚ್ಚಿ ಇಡುತ್ತಾರೆ.

ತೇರಿನ ವೈಶಿಷ್ಟ್ಯ

ಯಾವುದೋ ಶಿಲ್ಪಿ ಎಷ್ಟೋ ಕಾಲಗಳ ಹಿಂದೆ ನಿರ್ಮಿಸಿದ ತೇರು ವರ್ಷವಿಡೀ ಸ್ಥಾವರಶಿಲ್ಪವಾಗಿ ದೇವಾಲಯದ ತೇರಿನ ಮನೆಯಲ್ಲಿ ನಿಂತಿರುತ್ತದೆ. ಉತ್ಸವದ ಕೆಲದಿನ ಮುನ್ನ ಈ ಸ್ಥಾಯಿ ಸ್ವರೂಪದ ತೇರನ್ನು ಹೊರತೆಗೆದು ಸ್ವಚ್ಛವಾಗಿ ತೊಳೆದು ಅದರ ಹೊರಮೈಗೆಲ್ಲ ಪಾರದರ್ಶಕ ಎಣ್ಣೆಯನ್ನು ಹಚ್ಚುತ್ತಾರೆ. ಈ ಸ್ಥಾಯಿ ಸ್ವರೂಪದ ಗಡ್ಡಿಯ ತೇರಿನ ಮೇಲ್ಭಾಗದಲ್ಲಿ ಅಂತಸ್ಥುಗಳೊಂದಿಗೆ ಭವ್ಯ ಗೋಪುರವು ನಿರ್ಮಾಣವಾಗುತ್ತದೆ.

ರಥೋತ್ಸವದ ದಿವಸ ಈ ತೇರಿಗೆ ತೆಂಗಿನಗರಿ, ಬಾಳಿಯಗಿಡ, ಕಬ್ಬು, ಹಲವಾರು ಬಗೆಯ ಹೂಮಾಲೆಗಳಿಂದ ಅಡಿಯಿಂದ ಮುಡಿಯವರೆಗೂ ಸಾಲಂಕೃತ ವಧುವಿನಂತೆ ಸಿಂಗರಿಸುತ್ತಾರೆ. ನಮ್ಮ ಜನರಿಗೆ ತೇರನ್ನು ಎಷ್ಟು ಬಗೆಯಿಂದ ಸಿಂಗರಿಸಿದರೂ ತೃಪ್ತಿ ಇಲ್ಲ.

ಕೊನೆ ಇಲ್ಲ. ರಥೋತ್ಸವದ ಸಮಯದಲ್ಲಿ ತೇರು ಮತ್ತೆ ಸಿಂಗಾರಗೊಳ್ಳುತ್ತಲೇ ಇರುತ್ತದೆ. ಜನರು ಹೆಚ್ಚಾಗಿ ನೋಡುವುದು ತೇರನ್ನೇ ಹೊರತು ದೇವರನಲ್ಲ. ಆದರೆ ಜನರ ಆಸೆಯೆಂದರೆ ನಿರುದ್ದಿಶ್ಯವಾದ ಆನಂದವನ್ನು ಪಡೆಯುವುದು.

ರಥೋತ್ಸವಗಳು ಎಷ್ಟೊಂದು ವೈಭವಯುತವಾಗಿ ಜರುಗುತ್ತವೆ ಎಂಬುದನ್ನು ಕಣ್ಣಾರೆ ಕಂಡು ಅನುಭವಿಸಿದವರಿಗೆ ಅದರ ಆನಂದದ ಅರಿವಾಗುತ್ತದೆ. ದೈನಂದಿನ ಜೀವನದ ಸಾಮಾನ್ಯ ನೋಟದಲ್ಲಿ ಸೌಂದರ್ಯವನ್ನು ಕಾಣಬಲ್ಲ ರಸಿಕನಿದ್ದರೆ ರಥೋತ್ಸವ ನೇತ್ರಾನಂದಕರವೇ ಎನಿಸುತ್ತದೆ. ರಥಬೀದಿಯಲ್ಲಿ ರಥೋತ್ಸವು ಅಸಂಖ್ಯ ಭಕ್ತರ ಸಮ್ಮುಖದಲ್ಲಿ ಗಡಚಿಕ್ಕುವ ಹರ್ಷೋದ್ಗಾರಗಳಿಂದ ಆರಂಭವಾಗುತ್ತದೆ. ರಥದ ಮಿಣಿಗಳನ್ನು ಹಿಡಿದು ಎಳೆಯಲು ನಾ ಮುಂದು, ತಾ ಮುಂದು ನೂಕು ನುಗ್ಗಾಟ; ಜನರ ಗದ್ದಲದಲ್ಲಿ ವರ್ಗಗಳ ತಾರತಮ್ಯ ಅಳಿಸಿ ಹೋಗಿ ಧರ್ಮದ ದೃಷ್ಟಿಯಲ್ಲಿ ಈ ತಾರತಮ್ಯ ಇರಬಾರದೆಂಬ ತತ್ವವನ್ನು ರಥೋತ್ಸವ ಸಾರುತ್ತದೆ.[೧೭]

ರಥದ ಮುಂಚೂಣಿಯಲ್ಲಿ ವಾದ್ಯಗಳ ಸಮ್ಮಿಲನ, ಸುಹಾಸಿನಿಯರ ಸಲ್ಲಾಪ, ಚಿಕ್ಕಮಕ್ಕಳ ಕಲರವ, ಅರ್ಚಕರ ಅಡ್ಡಾಟ, ವೃದ್ಧನಾರಿಯರು ಭಕ್ತಿ ಪರವಶರಾಗಿ ತದೇಕಚಿತ್ತದಿಂದ ನಮಸ್ಕರಿಸುವುದು. ಎಲ್ಲರೂ ತಮ್ಮ ತಮ್ಮ ಮನೆಯ ಮುಂದೆ ರಂಗೋಲಿಗಳನ್ನು ಹಾಕಿ ಶುಭ್ರವಾದ ಬಟ್ಟೆಯನ್ನು ಉಟ್ಟುಕೊಂಡು ತೆಂಗಿನಕಾಯಿ, ಬಾಳೆಯ ಹಣ್ಣು ನೀಲಾಂಜನಾದಿಗಳಿಂದ ಕೂಡಿದ ಹರಿವಾಣವನ್ನು ಕೈಯಲ್ಲಿ ಹಿಡಿದುಕೊಂಡು ರಥಾರೂಢನಾದ ಸ್ವಾಮಿಯ ದರ್ಶನಕ್ಕಾಗಿ ಕಾಯುವುದು. ದೇವಸ್ಥಾನದ ಎದುರು ಸಾಲಂಕೃತವಾಗಿ ನಿಂತ ರಥದಲ್ಲಿ ದೇವಿಯ ಅಸಂಖ್ಯ ಭಕ್ತರ ಸಮ್ಮುಖದಲ್ಲಿ ಜಯ ಜಯಕಾರ ಹಾಗೂ ಹರ್ಷೋದ್ಗಾರಗಳೊಂದಿಗೆ ಏರುತ್ತಾಳೆ. ರಥೋತ್ಸವ ನಿರ್ವಿಘ್ನವಾಗಿ ನೆರವೇರಲಿ ಎಂದು ಬಾಬುದಾರರ ಹಾಗೂ ಪ್ರಮುಖ ಕಾರ್ಯಕರ್ತರ ಹೆಸರಿನಲ್ಲಿ ರಥಕ್ಕೆ ತೆಂಗಿನಕಾಯಿಯನ್ನು ಒಡೆಸುತ್ತಾರೆ. ಜನದಟ್ಟಣೆಯ ಮಧ್ಯದಲ್ಲಿಯೂ ದೇವಿಯ ರಥ ವಿರಾಜಮಾನವಾಗಿ ಮೆಲ್ಲಮೆಲ್ಲನೆ ಮುಂದೆ ಮುಂದೆ ಚಲಿಸುತ್ತದೆ. ಭಾವುಕ ಭಕ್ತರು ರಥದತ್ತ ಬಾಳೆಹಣ್ಣು ಎಸೆಯುವುದು. ಕೋಳಿಯ ಮರಿಯನ್ನು ತೂರುವುದು. ಜಡೆ ಬಿಚ್ಚಿಕೊಂಡು ಎಲ್ಲಮ್ಮನ ಜೋಗಮ್ಮಗಳು ಕುಣಿಯುತ್ತಿರುವುದು. ರಥೋತ್ಸವದ ಕಾಲದಲ್ಲಿ ಜರುಗುವ ನೋಟಗಳಾಗಿವೆ. ಇದು ರಥೋತ್ಸವವೇ ಎಂದು ಕೇಳಿದರೆ ಉತ್ತರಿಸುವುದು ಸ್ವಲ್ಪ ಕಷ್ಟವಾದೀತು. ರಥೋತ್ಸವಕ್ಕೆ ತನ್ನದೇ ಆದ ಗೊತ್ತು ಗುರಿಗಳಿವೆ. ಆ ದಿನ ಭಗವಂತ ತನ್ನ ಭಕ್ತರಿದ್ದ ತಾಣಕ್ಕೆ ಒಂದು ದರ್ಶನ ಕಲ್ಪಿಸಿಕೊಡುತ್ತಾನೆ. ಇಂತಹ ರಥೋತ್ಸವದ ವೈಭವವನ್ನು ಐಮಂಗಲ ಹೋಬಳಿಯಾದ್ಯಂತ ಪ್ರಮುಖ ದೇವಾಲಯಗಳಲ್ಲಿ ನಾವು ನೋಡಬಹುದು.

ಕೊಂಡ ಹಾಯುವುದು

ಕೊಂಡ ಹಾಯುವ ಆಚರಣೆಯನ್ನು, ಕೆಂಡ ಹಾಯುವುದು, ಅಗ್ನಿಕೊಂಡ ಹಾಯುವುದು ಎಂಬ ಹೆಸರುಗಳು ಉಂಟು. ಹರಕೆ ಹೊತ್ತ ಭಕ್ತರು ಪೂಜಾರಿಯ ಪಂಗಡ ಬೆಂಕಿಯ ಮೇಲೆ ಓಡುವ ಪದ್ಧತಿ ಕೆಲವು ಊರುಗಳಲ್ಲಿ ಈಗಲೂ ಬಳಕೆಯಲ್ಲಿದೆ. ಕೆಲವು ಕಡೆ ಪೂಜಾರಿ ಮಾತ್ರ ಕೆಂಡ ತುಳಿಯುವ ಸಂಪ್ರದಾಯಗಳೂ ಇವೆ. ರಾಮಾಯಣ ಮತ್ತು

ತಮಿಳುನಾಡಿನ ಶಿವಭಕ್ತನಾದ ನಂದನಾರ್‌ನ ಕಥೆಗಳಲ್ಲಿ ಅಗ್ನಿ ಪರೀಕ್ಷೆಯ ಸಂದರ್ಭಗಳು ಬರುವುದನ್ನು ಗಮನಿಸಿದ್ದೇವೆ. ಆದರೆ ಇಲ್ಲಿ ಭಕ್ತರು ಉರಿಯುವ ಕೆಂಡವನ್ನು ತುಳಿದುಕೊಂಡು ಓಡುತ್ತಾರೆ. ಕೆಂಡ ತುಳಿಯುವ ಭಕ್ತರು ಉಪವಾಸವಿದ್ದು, ಸ್ನಾನ ಮಾಡಿ ಮಡಿಬಟ್ಟೆಯನ್ನು ಧರಿಸಿ ಬಂದಿರುತ್ತಾರೆ.

ವದ್ದೀಕೆರೆ ಸಿದ್ಧೇಶ್ವರ ದೇವಾಲಯದಲ್ಲಿ ಕೊಂಡ ಹಾಯುವ ಸಂಪ್ರದಾಯ ಆಚರಣೆಯು ಪ್ರತೀತವಾಗಿದೆ. ಇಲ್ಲಿ ಕೊಂಡಕ್ಕೆ ಒಂದು ವರ್ಗದ ಜಾತಿಗೆ ಸೇರದೆ, ಯಾರು ಬೇಕಾದರೂ ಸೌದೆಯನ್ನು ತಂದು ಹಾಕಬಹುದು. ಪ್ರಾರಂಭದಲ್ಲಿ ಆರತಿ ಹೊತ್ತವರು. ಕೊಂಡದಲ್ಲಿ ನಡೆದು ಗುಡಿಯನ್ನು ಮೂರು ಸುತ್ತು ಪ್ರದಕ್ಷಿಣೆ ಹಾಕಿ ಬರುವರು. ನಂತರದಲ್ಲಿ ಬಾಯಿಬೀಗದವರು ನಡೆಯುತ್ತಾರೆ. ಕೆಂಡ ಹಾಯುವುದು ಬಹುತೇಕ ರಾತ್ರಿ ವೇಳೆ ನಡೆಯುತ್ತದೆ. ಸಂಜೆ ದೇವರ ಉತ್ಸವದೊಂದಿಗೆ ಮನೆಮನೆ ಹತ್ತಿರ ಆರತಿ ಹೊರಡಿಸಿಕೊಂಡು ಬರುತ್ತಾರೆ. ಹಿತ್ತಾಳೆ ಪಾತ್ರೆಯಲ್ಲಿ ಮಡಿಯಿಂದ ಹೊಸ ಭತ್ತವನ್ನು ಕುಟ್ಟಿ, ಅಕ್ಕಿಯನ್ನು ವಿಂಗಡಿಸಿ, ಬೆಲ್ಲದ ಪಾಕ ತೆಗೆದು ಕಲಸಿ. ಬೆನಕನಾಕಾರವಾಗಿ ತಂಬಿಟ್ಟು ಮಾಡಿ, ಮೇಲೆ ತುಪ್ಪದ ದೀಪವನ್ನು ಹಚ್ಚಿ, ಹೊಂಬಾಳೆ ಇಟ್ಟು ಪೂಜಿಸಿ ಹೆಣ್ಣುಮಕ್ಕಳು ಹೊತ್ತುಕೊಂಡು ಬರುತ್ತಾರೆ. ಮುಂದೆ ವಾದ್ಯದವರು, ಪತ್ತಿನವರು, ವೀರಗಾಸೆ ಕುಣಿತದವರು. ನಂತರ ದೇವರು, ದೇವರ ಹಿಂದೆ ಆರತಿ ಹೊತ್ತ ಹೆಣ್ಣು ಮಕ್ಕಳು ಬರುತ್ತಾರೆ. ಅಗ್ನಿಕೊಂಡ ಸುತ್ತ ಮೂರು ಸುತ್ತು ಪ್ರದಕ್ಷಿಣೆ ಮಾಡಿಸಿ, ಕೊಂಡದ ಮೇಲೆ ಹಾದು ಹೋಗುತ್ತಾರೆ. ಅವರ ಹಿಂದೆ ಆರತಿ ಹೊತ್ತವರು ಹಾದು ಹೋಗುವರು. ನಂತರ ಊರಿನವರು ಹಾಯುತ್ತಾರೆ. ಈ ಸಂದರ್ಭದಲ್ಲಿ ಅವರಿಗೆ ಕಾಲು ಸುಡುವುದಿಲ್ಲ ಎಂದು ಹೇಳುತ್ತಾರೆ. ಬಹುಶಃ ಹೀಗಾಗುವುದಕ್ಕೆ ಕಾರಣ ಅವರು ದೇವರ ಮೇಲೆ ಇಟ್ಟಿರುವ ನಂಬಿಕೆ ಹಾಗೂ ಸಿದ್ಧೇಶ್ವರಸ್ವಾಮಿಯ ಪವಾಡದಿಂದ ಕಾಲು ಸುಡುವುದಿಲ್ಲ ಎಂಬ "ಮಾನಸಿಕ ಸ್ಥೈರ್ಯ"ದಿಂದ ಈ ಆಚರಣೆ ಅಸ್ತಿತ್ವದಲ್ಲಿ ಉಳಿಯಲು ಸಾಧ್ಯವಾಯಿತೆನ್ನಬಹುದು.[೧೮]

ಸಿಡಿಯಾಡುವ ಪದ್ಧತಿ

ಗ್ರಾಮದೇವತೆಗಳ ಜಾತ್ರೆಯಲ್ಲಿ ಫಲವಂತಿಕೆ ಆಚರಣೆಗಳಲ್ಲಿ ಸಿಡಿ ಆಚರಣೆ ಮಾನವನ ರಕ್ತ ಭೂದೇವಿಗೆ ಸಮರ್ಪಣೆಯಾಗದೇ ಬೆಳೆ ಹುಲುಸಾಗುವುದಿಲ್ಲ ಎಂಬ ನಂಬಿಕೆ ಹಿನ್ನೆಲೆಯಲ್ಲಿ ಸಿಡಿಯಾಡುವ ಸಂಪ್ರದಾಯ ಬೆಳೆದುಬಂದಿದೆ.[೧೯] ಈ ಪದ್ಧತಿ ಶಾಕ್ತೇಯರಿಂದ ಬಂದಂತಿದೆ ಸಿಡಿಯಾಡುವ ಪದ್ಧತಿ. ಆಚರಣೆ ಪ್ರಾದೇಶಿಕ ಭಿನ್ನತೆಗಳಿಂದ ಕೂಡಿದ್ದು ಆಯಾ ಗ್ರಾಮದೇವತೆಯ ಸಂತುಷ್ಟಕ್ಕಾಗಿ, ನಿಗದಿತ ಅವಧಿಯಲ್ಲಿ ನಿಯಮಾನುಸಾರವಾಗಿ ಆಚರಿಸುತ್ತಾರೆ.

ಐಮಂಗಲ ಹೋಬಳಿಯ ಯರಬಳ್ಳಿ ಮಾರಮ್ಮನ ದೇವಾಲಯದಲ್ಲಿ ಸಿಡಿಯಾಡುವುದು ಈಗಲೂ ಜಾರಿಯಲ್ಲಿದೆ. ಈ ಆಚರಣೆಯು ಮೇ ತಿಂಗಳ ಶ್ರಾವಣ ಮಾಸದಲ್ಲಿ ಪ್ರತಿ ಶುಕ್ರವಾರ ಅತೀ ವಿಜಂಭೃಣೆಯಿಂದ ಜರುಗುತ್ತದೆ.

ಸಿಡಿಬಂಡೆಯ ಸಿದ್ಧತೆ

ಶ್ರಾವಣ ಮಾಸದ ದಿವಸ ಬೆಳಗ್ಗೆ ನವಬಂಡಿಯ ಸಾಮಗ್ರಿಗಳನ್ನು ದೇವಸ್ಥಾನದಿಂದ ಹೊರಗೆ ತೆಗೆದು ಸ್ವಚ್ಛಗೊಳಿಸಿ, ಬಿಡಿ ಬಿಡಿಯಾಗಿದ್ದ ನೊಗ, ಈಸು, ಗಾಲಿ ಇತ್ಯಾದಿಗಳನ್ನು

ಜೋಡಿಸಿ ಸಿಡಿ ಬಂಡೆಯನ್ನು ಸಿದ್ಧಗೊಳಿಸುತ್ತಾರೆ. ಇದಕ್ಕೆ 'ನವಬಂಡೆ' ಎನ್ನುವರು. ನಂತರ ನವಬಂಡಿಯ ಮೆರವಣಿಗೆಯು ಊರಿನ ಪ್ರಮುಖ ಬೀದಿಗಳಲ್ಲಿ ಸಾಗುವಾಗ ಬಂಡಿಯ ಹಿಂದೆ ಮುತ್ತೈದೆಯರು ಆರತಿಯನ್ನು ಹಿಡಿದುಕೊಂಡು ಮಹಿಳೆಯರು ಕುಂಭ ಹೊತ್ತುಕೊಂಡು ಸಾಗುತ್ತಾರೆ. ಮೆರವಣಿಗೆಯು ಬೀದಿಗಳಿಂದ ಸಾಗಿ ಮರಳಿ ಗುಡಿಗೆ ಬರುತ್ತದೆ.

ಬಂಡಿಯ ಅಲಂಕಾರ

ಸಿಡಿ ಬಂಡೆಯನ್ನು ವಿಶಿಷ್ಟವಾಗಿ ಅಲಂಕಾರ ಮಾಡಲಾಗುತ್ತದೆ. ಸುಮಾರು ೪೦ ಅಡಿ ಉದ್ದವಿರುವ ಈಸಿಗೆ ಹಸಿರು ಸೀರೆಯನ್ನು ಸುತ್ತುತ್ತಾರೆ. ಬಂಡಿಯ ಎಡಬಲ ಬದಿಗೆ ಬಾಳೆದಿಂಡು, ಕಬ್ಬು, ತೆಂಗಿನ ಗರಿಗಳನ್ನು ಮತ್ತು ಕಾವಿ ಬಣ್ಣದ ಧ್ವಜವನ್ನು ಕಟ್ಟಿ ಶೃಂಗಾರಿಸುತ್ತಾರೆ. ಮೇಲಿನ ನೊಗಕ್ಕೆ ಹಸಿರು ಸೀರೆಯನ್ನು ಸುತ್ತಿ ತೆಂಗಿನಕಾಯಿ, ಸೀರೆಗಳು, ತರಗ, ಲಿಂಬಿಹಣ್ಣಿನ ಸರ, ಮಾವಿನ ತೋರಣಗಳಿಂದ ಅಲಂಕರಿಸುತ್ತಾರೆ. ಸಿಡಿಬಂಡೆಯಲ್ಲಿ ಸಿಂಹಾಸನವಿದ್ದು ಇದರ ಕೆಳಗೆ ಹುಲಿಯ ಮೂರ್ತಿ ಇದೆ. ಈ ಸಿಂಹಾಸನದ ಮೇಲೆ ಮಾರಮ್ಮನ ಮೂರ್ತಿಯನ್ನು ಪ್ರತಿಷ್ಠಾಪಿಸಿರುತ್ತಾರೆ. ಈ ರೀತಿ ಅಲಂಕೃತಗೊಂಡ ಬಂಡಿಯು-ಸಿಡಿಯಾಡುವ ಭಕ್ತರಿಗಾಗಿ ಸಿದ್ಧಗೊಳಿಸಲಾಗುತ್ತದೆ.

ಪ್ರತಿ ಶುಕ್ರವಾರ ನಡೆಯುವ ಈ ಆಚರಣೆ ಹಿಂದಿನ ದಿವಸ ಹರಕೆ ಹೊತ್ತ ಭಕ್ತರು ದೇವಿಗೆ ಶೃಂಗಾರ ಮಾಡುವ ಪದ್ಧತಿ ಇದೆ. ಇದರ ಹಿನ್ನೆಲೆಯಾಗಿ ಭಕ್ತರು 'ಉಡಿಕೆ' ಸಾಮಾನು 'ಸೀದಾ', ಕಡ್ಲಿಬೇಳೆ, ಬೆಲ್ಲ, ಅಕ್ಕಿ ಇತ್ಯಾದಿ ಒಣ ಪದಾರ್ಥಗಳು ಎಲ್ಲವನ್ನು ಗುಡಿಯ ಪೂಜಾರಿಗೆ ಕೊಡುತ್ತಾರೆ. ಪದ್ಧತಿಯಂತೆ ಹರಕೆ ಹೊತ್ತವರು ಉಪವಾಸ ವ್ರತ ಮಾಡಬೇಕು. ಇವರ ಪರಿವಾರದವರು ಉಪವಾಸ ವ್ರತ ಕೈಗೊಳ್ಳುವರು.

ಹರಕೆ ಹೊತ್ತವರು ಆರತಿ ಹಿಡಿಯುವರು. ಪೂಜಾರಿ, ಸಿಡಿಕೊಂಡಿ ಚುಚ್ಚುವವ ಈ ಎಲ್ಲರೂ ಮಡಿಯಿಂದ ಇರುತ್ತಾರೆ. ಹರಕೆ ಹೊತ್ತವರಲ್ಲಿ ಗಂಡೆಯಾಗಲೀ, ಹೆಣ್ಣಿಯಾಗಲಿ ಹಸಿರು ರೇಷ್ಮೆಯ ಸೀರೆಯ ವಿಶಿಷ್ಟ ಉಡುಪು ಧರಿಸುವುದು ಒಂದು ವೈಶಿಷ್ಟ. ಈ ಎಲ್ಲಾ ಸಿದ್ಧತೆಯಾದ ನಂತರ ವಾದ್ಯಗಳೊಂದಿಗೆ ಊರಿನ ಪ್ರಮುಖರು ಪೂಜಾರಿಯೊಂದಿಗೆ, ಗೌಡರ ಮನೆಗೆ ಹೋಗಿ ಎರಡು ಅಡಿ ಎತ್ತರವಿರುವ ಬೆಳ್ಳಿಯ ಮಾರಮ್ಮನ ಮೂರ್ತಿಯನ್ನು ಪಲ್ಲಕ್ಕಿಯ ಮೆರವಣಿಗೆಯೊಂದಿಗೆ ಪ್ರಮುಖರು ಸೇರಿ ವಂಶಪಾರಂಪರೆಯಾಗಿ, ಕಳಸ, ತಂಬಿಗೆ ಹೊತ್ತು ಬಂದಿರುವ ಕಳಸಗಿತ್ತಿಯನ್ನು ಕರೆತರುತ್ತಾರೆ. ಕಳಸಗಿತ್ತಿಯರು ಸಹ ಹಸಿರು ಸೀರೆ, ಹಸಿರು ಬಳಿ, ಕುಬಸ, ತಲೆಗೆ ಹೂವಿನ ದಂಡೆಯಿಂದ ಶೃಂಗರಿಸಿಕೊಂಡಿರುತ್ತಾರೆ. ಇವರೆಲ್ಲರೂ ಸೇರಿ ಸಿಡಿಕೊಂಡಿ ಚುಚ್ಚುವವನನ್ನು ಕರೆತರುತ್ತಾರೆ. ಕೊಂಡಿ ಚುಚ್ಚುವವ ಮಡಿಪಂಚೆಯ ಮೇಲೆ ಇದ್ದು ಕೊರಳಲ್ಲಿ ಕೊಂಡಿಗಳ ಸರ, ತಲೆಯ ಮೇಲೆ ರುಮಾಲು ಸುತ್ತಿಕೊಂಡಿರುತ್ತಾನೆ. ಇದೆಲ್ಲ ಮುಗಿದ ನಂತರ ನೀರಿನಲ್ಲಿ ಮಿಂದು ಸಿಡಿಯಾಡಲು ಸಿದ್ಧವಾಗಿ ಕುಳಿತಿರಲು ಹರಕೆಯ ಭಕ್ತರನ್ನು ಇವರೆಲ್ಲರೂ ಸೇರಿ ಗುಡಿಗೆ ಕರೆತರುತ್ತಾರೆ.

ಈ ಮೆರವಣಿಗೆ ಜೊತೆ ಹರಕೆ ಹೊತ್ತ ಭಕ್ತರು ಗುಡಿಗೆ ಬರುವ ಸಮಯದಲ್ಲಿ ತಲೆಯ ಮೇಲೆ 'ಆರತಿ' ಹೊತ್ತುಕೊಂಡಿರುತ್ತಾರೆ. ಗುಡಿಗೆ ಬಂದ ನಂತರ ಎರಡು ಸಲ ಗುಡಿಗೆ

ಪ್ರದಕ್ಷಿಣೆ ಹಾಕಿದ ನಂತರ, ಅವರ ತಲೆಯ ಮೇಲಿನ ಆರತಿಯನ್ನು ಅವರ ಜೊತೆಗಿದ್ದವರು ಹೊತ್ತು ತರುತ್ತಾರೆ. ಹರಕೆ ಹೊತ್ತವರನ್ನು ದೇವಾಲಯಕ್ಕೆ ಕರೆದುಕೊಂಡು ಹೋಗಿ ಹಸಿರು ರೇಷ್ಮೆ ಸೀರೆ, ಹಸಿರು ಕುಪ್ಪಸ, ಕೈಗೆ ಹಸಿರು ಬಳೆ, ತಲೆಗೆ ಹೂವಿನ ದಂಡೆ, ಮೂಗಿನಲ್ಲಿ ದೇವಿಯ ಮೂಗುತಿ, ಟೊಂಕಕ್ಕೆ ಡಾಬ, ಕಾಲಿಗೆ ಕುಳಿಯಿಂದ ಶೃಂಗಾರ ಮಾಡಿ ಅರಿಶಿಣ ಇಟ್ಟು ಗುಡಿಯ ಆವರಣದಲ್ಲಿ ವಾದ್ಯಗಳೊಂದಿಗೆ ಮೆರವಣಿಗೆ ಮಾಡುತ್ತ, ಗುಡಿಯ ಪೂರ್ವದಿಕ್ಕಿನಲ್ಲಿರುವ ಸಿಡಿಕಟ್ಟೆಗೆ ತಲುಪುವ ಮುಂಚೆಯೇ ಊರ ಪ್ರಮುಖರೆಲ್ಲರೂ ನಂತರ ಹರಕೆ ಹೊತ್ತವರನ್ನು ಬಾಗಿ ನಿಲ್ಲುವಂತೆ ಸೂಚಿಸುತ್ತಾರೆ. ನಂತರ ಕೊಂಡಿ ಚುಚ್ಚುವವ ಅವರ ಹೊತ್ತ ಹರಕೆಯನ್ನು ಬಹಿರಂಗವಾಗಿ ಹೇಳುವಂತೆ ಕೇಳುತ್ತಾನೆ. ಈ ಸಂದರ್ಭದಲ್ಲಿ ಅವರು ನಿಜವಾಗಿ ಹೇಳದಿದ್ದರೆ, ಸಿಡಿಕೊಂಡಿ ಅವರ ಬೆನ್ನಿಗೆ ಚುಚ್ಚುವುದಿಲ್ಲ. ಹರಕೆಗಳ ನಾನಾ ರೀತಿಯಾಗಿರುತ್ತವೆ. ಈ ಕಾರಣದಿಂದಾಗಿ ಹರಕೆ ಹೊತ್ತವರು ಕೆಲವೊಮ್ಮೆ ಬಹಿರಂಗಪಡಿಸಲು ಮುಜುಗರಪಡುತ್ತಾರೆ.

೧. ನನಗೆ ಗಂಡು ಮಕ್ಕಳಾಗಬೇಕು.

೨. ನನ್ನಲ್ಲಿರುವ ಬಹಳ ದಿನದ ಕಾಯಿಲೆ ನಿವಾರಣೆಯಾಗಬೇಕು.

೩. ಅಣ್ಣ-ತಮ್ಮಂದಿರು ವ್ಯಾಜ್ಯದಿಂದ (ಜಗಳ) ಮುಕ್ತರಾಗಬೇಕು.

೪. ಮಕ್ಕಳು ಮೂಕರಾಗಿದ್ದಲ್ಲಿ ಮಾತು ಬರಲೆಂದು.

೫. ವ್ಯಾಪಾರದಲ್ಲಿ ಲಾಭ ಗಳಿಸಲು.

ಜನರು ತಮ್ಮ ಹರಕೆ ಹೇಳಿದ ನಂತರ ಕೊಂಡಿ ಚುಚ್ಚುವವನು ಅವರ ಬೆನ್ನಿಗೆ ಭಂಡಾರ ಉಗ್ಗಿ, ಕೊಂಡಿ ಚುಚ್ಚಿದ ನಂತರ ಸಿಡಿ ಬಂಡೆಯ ಈಸಿನ ತುದಿಯಲ್ಲಿ ನಿರ್ಮಿತವಾಗಿರುವ ಮಣೆಯ ಮೇಲೆ ನಿಲ್ಲಿಸಿ ಕಾಲಿಗೆ ಹಗ್ಗ ಕಟ್ಟಿ ಈ ಹಗ್ಗವನ್ನು ಮೇಲಿನ ನೊಗಕ್ಕೆ ನಾಲ್ಕೈದು ಸುತ್ತು ಹಾಕಿ ನಂತರ ಕೆಳಗೆ ಸಿಡಿ ಬಂಡಿಗೆ ಕಟ್ಟಿದ ಮೇಲೆ ಸಿಡಿಬಂಡೆಯು ಈಸನ್ನು ಮೇಲಕ್ಕೆ ಎತ್ತಿ ಬಂಡಿಯನ್ನು ಮುಂದೆ ಎಳೆಯುತ್ತಾ ಹೋಗುತ್ತಾರೆ. ಹರಕೆ ಹೊತ್ತವರು ಮೇಲಿನಿಂದ ಊಡೆಚೀಲದಲ್ಲಿರುವ 'ಫಳಾರ'ವನ್ನು ಎಸೆದರೆ, ಆ ಸಂದರ್ಭದಲ್ಲಿ ನೆರೆದ ಜನಸ್ತೋಮ ಬಾಳೆಹಣ್ಣು, ಚುರಿಮುರಿ ಇತ್ಯಾದಿಗಳನ್ನು ಭಕ್ತಿಪೂರ್ವಕವಾಗಿ ಎಸೆಯುತ್ತಾರೆ. ಮುಂದೆ ಪೂಜಾರಿಯ ದೇವಿಯ ಪ್ರಸಾದವನ್ನು ತೆಗೆದುಕೊಂಡು ಲಿಂಬೆ ಹಣ್ಣುಗಳನ್ನು ಎಡಕ್ಕೆ ಬಲಕ್ಕೆ ಎಸೆಯುತ್ತಾ ಮೆರವಣಿಗೆಯೊಂದಿಗೆ ಬರುತ್ತಾರೆ.

ಈ ಒಂದು ರೌದ್ರಮಯವಾದಂತಹ ದೃಶ್ಯ ಹಾಗೂ ಇದರ ಹಿನ್ನೆಲೆಯಾಗಿ ಹೊತ್ತ ಹರಕೆಯನ್ನು ಈಡೇರಿಸಿದಾಗ ನೆರವೇರಿಸುವಂತಹ ಆಚರಣೆ ಜನರನ್ನು ಮೂಕವಿಸ್ಮಿತನನ್ನಾಗಿ ಮಾಡುವುದಲ್ಲದೇ, ಈ ಆಚರಣೆ ಈಗಲೂ ಮಾಡುತ್ತಾ ಬರುವ ಹಲವಾರು ಭಕ್ತಾದಿಗಳನ್ನು ಈ ಸಂದರ್ಭದಲ್ಲಿ ಕಾಣಬಹುದು.

ಆರತಿ ಬೆಳಗುವುದು

ಮೆರವಣಿಗೆಯಲ್ಲಿ ಬರುವ ಹೆಣ್ಣು ಮಕ್ಕಳು ಬಟ್ಟಲು ಅಥವಾ ತಟ್ಟೆಯಲ್ಲಿ ತಂಬಿಟ್ಟನ್ನು ಮಾಡಿಟ್ಟುಕೊಂಡು ಅದರ ಮೇಲೆ ದೀಪವನ್ನು ಹಚ್ಚಿ ತಲೆಯ ಮೇಲೆ ಹೊತ್ತು ಸಾಗುವರು.

ತಂಬಿಟ್ಟಿದ್ದರೆ ಇದನ್ನು ತಂಬಿಟ್ಟಿನಾರತಿ ಎಂದೂ, ಬೆಲ್ಲ ಇದ್ದರೆ ಬೆಲ್ಲದಾರತಿ ಎಂದೂ, ದೀಪಗಳು ಮಾತ್ರ ಇದ್ದರೆ ದೀಪದಾರತಿ ಎಂದು ಕರೆಯುವರು. ಆರತಿಯ ತಟ್ಟೆಯಲ್ಲಿ ಹೊಂಬಾಳೆ, ಹೂವು, ವೀಳ್ಯದ ಎಲೆ, ಬೇವಿನಸೊಪ್ಪು ಇರುತ್ತದೆ. ಆರತಿಗಳನ್ನು ಮೆರವಣಿಗೆಯಲ್ಲಿ ತಂದು ದೇವರಿಗೆ ಬೆಳಗಿ ಹಿಂದಕ್ಕೆ ತೆಗೆದುಕೊಂಡು ಹೋಗುವರು. ದೇವರಿಗೆ ಆರತಿ ತರುವಾಗ ಮೊದಲು ಗ್ರಾಮದ ಮುಖಂಡನ ಮನೆಯ ಆರತಿಗಳು, ಮೇಲ್ವರ್ಗ, ಮಧ್ಯಮವರ್ಗದವರ ಆರತಿಗಳು, ನಂತರ ಕೆಳವರ್ಗದ ಆರತಿಗಳು ಬರುತ್ತವೆ. ಇದು ನಮ್ಮ ಸಮಾಜದಲ್ಲಿನ ಸಾಮಾಜಿಕ ಅಂತಸ್ತಿನ ಪರಿಪಾಲನೆ ಎಂದು ಹೇಳಬಹುದು.

ಬಾಯಿಬೀಗ

ಹರಕೆ ಹೊತ್ತವರು ತಾಮ್ರದ ತಂತಿಯಿಂದ ಎರಡು ಕೆನ್ನೆಯನ್ನು ತೂತು ಮಾಡಿಸಿಕೊಂಡು ಬಾಯಿಗೆ ಬೀಗ ಹಾಕಿಸಿಕೊಳ್ಳುವರು. ಸಾಮಾನ್ಯವಾಗಿ ಮಾರಮ್ಮನ ಹಬ್ಬಗಳಲ್ಲಿ ಬೆಳ್ಳಿಯ ತಂತಿಯನ್ನು ಹಾಕಿಸಿಕೊಳ್ಳುವರು. ಬಾಯಿ ಬೀಗ ಹಾಕಿಸಿಕೊಂಡಾಗ ಮಾತನಾಡಲು ಸಾಧ್ಯವಿಲ್ಲ. ಬಾಯಿಬೀಗ ಹಾಕಿ ತೆಗೆಯುವ ಕೆಲಸವನ್ನು ನಿಗದಿತ ಕುಟುಂಬಗಳಿಂದಲೇ ಆಗಬೇಕು. ಇದಕ್ಕೆ ಅನೇಕ ರೀತಿಯ ಕಾಣಿಕೆಯನ್ನು ನೀಡುತ್ತಾರೆ.

ಉರುಳುಸೇವೆ

ಹರಕೆ ಹೊತ್ತವರು ಸ್ನಾನಮಾಡಿ, ಮಡಿಬಟ್ಟೆ ಉಟ್ಟು ದೇವರು ಬರುವಾಗ ಅಡ್ಡವಾಗಿ ಮಲಗುವರು. ಆಗ ದೇವರನ್ನು ಹೊತ್ತ ಪೂಜಾರಿ ಉರುಳು ಸೇವೆ ಮಾಡುವವರನ್ನು ದಾಟುವರು. ಇನ್ನು ಕೆಲವರು ದೇವಾಲಯದ ಸುತ್ತ ಉರುಳುವರು. ಉರುಳು ಸೇವೆ ಆದ ನಂತರ ದೇವರಿಗೆ ಪೂಜೆ ಮಾಡಿಸುವ ಸಂಪ್ರದಾಯವನ್ನು ಕಾಣಬಹುದು.

ಬಲಿ ಆಚರಣೆ

ದೇವರಿಗೆ ಅಥವಾ ದೇವತೆಗಳಿಗೆ ಬಲಿ ಕೊಡುವುದು ನಮ್ಮ ಹೋಬಳಿಯ ಒಂದು ಪ್ರಧಾನವಾದ ಆಚರಣೆಯಾಗಿದೆ. ಇಲ್ಲಿ ಪ್ರಾಣಿಗಳನ್ನು ಮೆರವಣಿಗೆಯಲ್ಲಿ ತಂದು ಪೂಜೆ ಮಾಡಿಸಿ ಬಲಿ ಕೊಡುವುದು. ಕೊಂಡ ಹಾಯುವುದಕ್ಕೆ ಮುಂಚಿತವಾಗಿ ಕುರಿ, ಮೇಕೆ, ಕೋಳಿಗಳನ್ನು ಬಲಿ ಕೊಡುವ ಸಂಪ್ರದಾಯ ಸಾಮಾನ್ಯವಾಗಿದೆ. ಹಿಂದೆ ಕೋಣವನ್ನು ಬಲಿ ಕೊಡುವುದು ಪ್ರಧಾನವಾದ ಆಚರಣೆಯಾಗಿತ್ತು. ಆದರೆ ಇತ್ತೀಚಿಗೆ ಕೋಣವನ್ನು ಬಲಿ ಕೊಡುವುದು ಕಡಿಮೆಯಾಗಿದೆ. ಬಲಿ ಕೊಡುವ ಪ್ರಾಣಿಗಳ ಕೊರಳಿಗೆ ಹೂವಿನಹಾರವನ್ನು ಹಾಕಿ ಅರಿಶಿಣ, ಕುಂಕುಮ ಇಟ್ಟು ತಲೆಯ ಮೇಲೆ ನೀರನ್ನು ಚುಮುಕಿಸುತ್ತಾರೆ. ಬಲಿಪಶು ತಲೆ ನಂತರ ದೈವ ಅಪ್ಪಣೆ ನೀಡಿತು ಎಂದು ಭಾವಿಸಿ, ನಂತರ ಕಡಿಯುತ್ತಾರೆ. ಐಮಂಗಲದ ಯರಬಳ್ಳಿ ಗ್ರಾಮದಲ್ಲಿ ಕೋಣವನ್ನು ಬಲಿ ಕೊಡುವ ಸಂಪ್ರದಾಯವನ್ನು ಇಂದಿಗೂ ಕಾಣಬಹುದು. ಬಾಲೇನಹಳ್ಳಿಯ ಗೊಲ್ಲಾಲೇಶ್ವರಿ ದೇವಿಗೂ ಕೋಣವನ್ನು ಬಲಿ ಕೊಡುತ್ತಾರೆ. ಬಲಿಯನ್ನು ಕಡಿಯುವ ವ್ಯಕ್ತಿ ಕೆಳವರ್ಗಕ್ಕೆ ಸೇರಿದವನಾಗಿರುತ್ತಾನೆ. ಆ ವ್ಯಕ್ತಿಯನ್ನು 'ಬೇಡರ ಕನ್ನಯ್ಯ' ಎಂಬ ಹೆಸರಿನಿಂದ ಕರೆಯುವರು. ಕೋಣವನ್ನು ಕಡಿದು ಅದರ ಬಾಯಿಗೆ ಬಲಗಾಲನ್ನು ಇಡುವರು. ನಂತರ

ತಲೆಯ ಮೇಲೆ ಅದರ ಕೊಬ್ಬಿನಿಂದ ದೀಪ ಹಚ್ಚುತ್ತಾರೆ. ನಂತರ ಕುರಿ, ಕೋಳಿಗಳ ಬಲಿ ಆಗುತ್ತವೆ.

ನಾಗರೀಕತೆ ಮತ್ತು ಸಂಸ್ಕೃತೀಕರಣದ ಪ್ರಭಾವದಿಂದಾಗಿ ಬಲಿ ಕಡಿಮೆ ಆಗುತ್ತದೆ ಎನ್ನಬಹುದು. ಆದರೆ ಕೆಲವು ಕಡೆ ವ್ಯಕ್ತಿಗಳ ಅಭಿರುಚಿಗೆ ತಕ್ಕಂತೆ ಇನ್ನೂ ಈ ಆಚರಣೆ ಅಸ್ತಿತ್ವದಲ್ಲಿದೆ.[೨೦]

ದಾಸೋಹ ಮತ್ತು ಅನ್ನಸಂತರ್ಪಣೆ

ಜಾತ್ರೆಗಳ ಸಮಯದಲ್ಲಿ ಆಯಾ ಊರಿನ ಪ್ರಮುಖರು ದೇಣಿಗೆ ಪಡೆಯುವುದಾಗಲೀ ಅಥವಾ ದೇವರ ಹೆಸರಿನಲ್ಲಿರುವ ಭೂಮಿ ಇತ್ಯಾದಿಗಳಿಂದಾಗಲಿ. ಇಲ್ಲವೇ ಭಕ್ತರು ಕೊಟ್ಟ ಕಾಳುಕಡಿಯಿಂದಾಗಲೀ ಜಾತ್ರೆಗೆ ಬಂದಂತಹ ಎಲ್ಲ ಧರ್ಮದ ಭಕ್ತರಿಗೆ ಬಡಿಸುವುದು ಅಥವಾ ಅನ್ನಸಂತರ್ಪಣೆ[೨೧] ಮಾಡಿ ದೇವರ ಭಕ್ತಿಗೆ ಪಾತ್ರರಾಗುತ್ತಾರೆ. ಇಂತಹ ಸೇವೆಗೆ 'ಅನ್ನಸಂತರ್ಪಣೆ' ಎಂದು ಕರೆಯುತ್ತಾರೆ.

ಹೋಬಳಿಯ ಕೆಲವೊಂದು ಜಾತ್ರೆಯ ಸಂದರ್ಭದಲ್ಲಿ 'ದಾಸೋಹ' ಪದ್ಧತಿ ಇದೆ. ಕಲ್ಕುಂಟೇಶ್ವರಿ, ಮಾರಮ್ಮ, ಸಿದ್ಧೇಶ್ವರ, ರಂಗನಾಥ, ವೀರಭದ್ರ ಈ ಜಾತ್ರೆಗಳಲ್ಲಿ ಒಂದು ದಿವಸದ ಅನ್ನಸಂತರ್ಪಣೆಯು ಸಜ್ಜಕ, ಅನ್ನಸಾರು ಮಾಡಿ ಸುಮಾರು ೭-೮ ಸಾವಿರಗಟ್ಟಲೇ ಭಕ್ತರು ಈ ಪ್ರಸಾದವನ್ನು ಪಡೆಯುತ್ತಾರೆ.

ಹೀಗೆ ಎಲ್ಲಾ ದಾನಗಳಲ್ಲಿ 'ಅನ್ನದಾನ' ಶ್ರೇಷ್ಠ ಎನ್ನುವಂತೆ ಈ ದಾಸೋಹ ಮತ್ತು ಅನ್ನಸಂತರ್ಪಣೆ ಪದ್ಧತಿಯು ದೇವಾಲಯಗಳಲ್ಲಿ ಇಂದಿಗೂ ಜಾರಿಯಲ್ಲಿರುವುದು. ಇದು ಭಾವೈಕ್ಯತೆ ಮತ್ತು ಸಾಮಾಜಿಕ, ಆರ್ಥಿಕ ಸಮಾನತೆಯ ಸಂಕೇತವೇ ಆಗಿದೆ. ನಮ್ಮ ಪೂರ್ವಜರು ಹಾಕಿದಂತಹ ಸಂಪ್ರದಾಯದಂತೆಯೇ ಇಂದಿಗೂ ಈ ಹೋಬಳಿಯಲ್ಲಿ ಅನ್ನಸಂತಾನಾಚರಣೆಯು ಆಚರಣೆಗೊಳ್ಳುತ್ತಿರುವುದರಿಂದ ಸಕಾಲಕ್ಕೆ ಮಳೆ, ಬೆಳೆಯನ್ನು ಆ ದೇವರು ದಯಪಾಲಿಸುತ್ತಾನೆ ಎಂಬ ನಂಬಿಕೆ ಮತ್ತು ಆಯಾ ದೇವಾಲಯಗಳ ಹಿರಿಮೆಗೆ ನಿದರ್ಶನವಾಗಿದೆ. ಭಕ್ತರು ಒಲುಮೆಯಿಂದ ಪ್ರಸಾದವನ್ನು ಸ್ವೀಕರಿಸಿ ಧನ್ಯರಾಗುತ್ತಾರೆ.

೫.೩. ಜಾತ್ರೆ - ಉತ್ಸವಗಳು

ಜಾತ್ರೆಗಳು ಜಾನಪದ ಸಂಸ್ಕೃತಿಯ ವಿಶಿಷ್ಟ ಪ್ರಕಾರಗಳಲ್ಲಿ ಒಂದು. ಜಾತ್ರೆಯನ್ನು ಪರಿಷೆ, ತೇರು, ರಥೋತ್ಸವ, ಉಚ್ಚಾಯ ಪಲ್ಲಕ್ಕಿ, ಬಂಡಿ ಇತ್ಯಾದಿ ಹೆಸರಿನಲ್ಲಿ ಕರೆಯುತ್ತಾರೆ.[೨೨] 'ಯಾನೀನತ್ರಾಯತ ಇತಿ ಯಾತ್ರಾ ಅಂದರೆ ಪುಣ್ಯಕ್ಷೇತ್ರ ದರ್ಶನಕ್ಕೆ ಹೋಗುವವರು ರಕ್ಷೆಯೇ ಯಾತ್ರೆ, ಈ ಯಾತ್ರೆಯೂ ಸಂಸ್ಕೃತ ಪದ ಇದರ ತದ್ಭವ ರೂಪವೇ ಜಾತ್ರೆ.[೨೩] ಜಾತ್ರೆ ಎಂಬುದು ವರ್ಷಕ್ಕೆ ನಿಗದಿಯಾದ ಇನ್ನಿತರ ಅವಧಿಗೂ ಗೊತ್ತಾದ ಸ್ಥಳದಲ್ಲಿ ಒಂದು ದಿನವೋ ಅಥವಾ ಇನ್ನೂ ಹೆಚ್ಚಿನ ದಿನಗಳವರೆಗೆ ಜನ ಸೇರಿ ನಡೆಯುವ ಉತ್ಸವ.[೨೪] ಅಲ್ಲದೆ ಜಾತಿ ವರ್ಗಗಳ, ಮೇಲು-ಕೀಳು, ಮಡಿಮೈಲಿಗೆಯನ್ನು ಮೀರಿ ಜನ ಸಮುದಾಯ ಮತೀಯ ವಿಧಿಯಾಚರಣೆಯ ನೆಪದಲ್ಲಿ ದೈವವೊಂದರ ಸುತ್ತ ನಿರ್ದಿಷ್ಟ ದಿನಗಳಂದು ನಡೆಯುವುದನ್ನು

ಜಾತ್ರೆ ಎನ್ನುವರು. ಪ್ರಸ್ತುತ ಐಮಂಗಲ ಹೋಬಳಿ ಪರಿಸರದಲ್ಲಿ ನಡೆಯುವ ಜಾತ್ರೆಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಯರಬಳ್ಳಿ ಮಾರಮ್ಮನ ಜಾತ್ರೆ

ಮಾರಮ್ಮ ಜಾನಪದ ದೇವತೆ. ಕ್ಷುದ್ರ ದೇವತೆಯಾದ ಈಕೆ ನಾಡಿನಾದ್ಯಂತ ಜನಮನ ಹೃದಯ ಗೆದ್ದವಳು. ಹಾಗಾಗಿ ಹೋಬಳಿಯಲ್ಲೂ ಜಾತಿಮತ ಬೇಧವಿಲ್ಲದೇ ಎಲ್ಲಾ ವರ್ಗದ ಭಕ್ತಾಗ್ರಣಿಯಾಗಿದ್ದಾಳೆ. ನೂರಾರು ಊರು, ನಗರ ಪಟ್ಟಣಗಳಿಂದ ಮತಬೇಧವಿಲ್ಲದೇ ಭಕ್ತಸ್ತೋಮವನ್ನು ಆಕರ್ಷಿಸುವಳು. ಹಿರಿಯೂರಿನಿಂದ ಚಳ್ಳಕೆರೆಗೆ ಹೋಗುವ ಮಾರ್ಗದ ಮಧ್ಯದಲ್ಲಿ ಯರಬಳ್ಳಿ ಗ್ರಾಮವಿದೆ. ಈ ಗ್ರಾಮದ ಪೂರ್ವಕ್ಕೆ ದೇವಾಲಯವಿದೆ. ಈ ದೇವಾಲಯದ ಗರ್ಭಗುಡಿಯಲ್ಲಿ ದುಂಡಾದ ಕಲ್ಲು ಇರುವುದೇ ಮಾರಮ್ಮ(ಇದನ್ನು ಸ್ಥಳೀಯರು ಉದ್ಭವ ಮೂರ್ತಿ ಎಂದು ಕರೆಯುತ್ತಾರೆ).

ಐಮಂಗಲ ಹೋಬಳಿ ಬಹಳ ಏರುತಗ್ಗುಗಳಿಂದ ಕೂಡಿದ್ದು, ಸುಂದರ ಬನಸಿರಿಯ ಬೀಡು, ಶೀರಾ ಬರಗಾಲವಿದ್ದು ಹಿಂದುಳಿದ ಪ್ರದೇಶ. ಇವರ ಮುಖ್ಯ ಕಸುಬು ವ್ಯವಸಾಯ. ಕುರಿ, ಮೇಕೆ, ಹಸುಗಳನ್ನು ಮೇಯಿಸುವ ಕಾಯಕ ಇಲ್ಲಿಯ ಜನರದ್ದು. ನಗರ ಜೀವನಕ್ಕೆ ಬಹಳ ದೂರವಿದೆ. ಇಲ್ಲಿಯ ಜನರ ಮುಗ್ಧ ನಂಬಿಕೆಗಳು ಹೇಗಿವೆಯೆಂದರೆ, ಹಸು ಹಾಲು ಕರೆಸದೆ ಒದೆಯುತ್ತದೆ. ಬೆಳೆಗಳಿಗೆ ರೋಗ ಬಂದರೆ, ನಮ್ಮ ಮನಸ್ಸಿನಲ್ಲಿ ಅಂದುಕೊಂಡ ಕೆಲಸ ಆಗದಿದ್ದರೆ, ತೋಡುವ ಬಾವಿಯಲ್ಲಿ ನೀರು ಬೀಳಬೇಕಾದರೆ ಮಾರಮ್ಮ ದೇವತೆಯ ಮೊರೆ ಹೋಗುವರು. ನಂಬಿಕೆಯಿಂದ ಇಂಬು ಪಡೆದು ಬಾಳನ್ನು ಸವೆಸುತ್ತಿದ್ದ ಜನತೆಯ ಬದುಕಿಗೆ ಮಾರಮ್ಮ ದೇವತೆ ಶ್ರೀರಕ್ಷೆಯಿದ್ದಂತೆ. ಈ ರೀತಿಯಿಂದ ನಂಬಿಕೆಗಳು ಗಟ್ಟಿಯಾಗಿ ಬೇರೂರಿ, ಈಕೆಯನ್ನು ಬಿಟ್ಟು ಹೋಗಲಾರವು. ಈಕೆಯನ್ನು ಹೂಗಳಿಂದಲೇ ಪೂಜಿಸಬೇಕೆಂದಿಲ್ಲ. ಬೇವಿನಸೊಪ್ಪು, ಸೀರೆ ಈಕೆಯ ಉಡುಗೆ, ಮಾರಮ್ಮನೆಂದು ಪ್ರಸಿದ್ಧಳಾದ ಈಕೆಗೆ ಪ್ರಾಣಿಬಲಿ ಆಗಬೇಕೆಂದೇನಿಲ್ಲ. ಹಾಲು ಹಣ್ಣು ಕೊಟ್ಟರೂ ನಡೆಯುತ್ತದೆ.

ಈ ದೇವಾಲಯಕ್ಕೆ ಒಂದು ಜನಾಂಗಕ್ಕೆ ಸೇರಿದ ಪೂಜಾರಿಗಳೇ ಆಗಬೇಕೆಂಬ ನಿಯಮವಿಲ್ಲ. ಆಚಾರ್ಯ ಇಲ್ಲಿ ಪೂಜಾರಿಗಳಾಗಿದ್ದಾರೆ. ಪೂಜಾರಿ ಇಲ್ಲದ ದಿನ ಪೂಜಾರಿ ಹೆಂಡತಿ ಪೂಜೆ ಮಾಡುತ್ತಾಳೆ. ಹರಕೆಗಳನ್ನು ಹೊತ್ತ ಮಹಿಳೆಯರು, ಪುರುಷರು, ತಪ್ಪದೇ ಬಂದು ಹರಕೆಗಳನ್ನು ನೀಡುತ್ತಾರೆ. ಈ ದೇವತೆಗೆ ಮಂಗಳವಾರ ಮತ್ತು ಶುಕ್ರವಾರ ಶ್ರೇಷ್ಠವಾದ ದಿನಗಳಾಗಿವೆಯಂತೆ. ಈ ವಾರಗಳಂದು ಕುರಿ, ಮೇಕೆ, ಕೋಳಿಗಳನ್ನು ಬಲಿ ನೀಡಿ ತಮ್ಮ ಹರಕೆಗಳನ್ನು ತೀರಿಸುತ್ತಾರೆ.

ಈ ದೇವತೆಗೆ ಪ್ರತಿವರ್ಷ ಮೇ ತಿಂಗಳ ಶ್ರಾವಣ ಮಾಸದಲ್ಲಿ ಐದು ದಿನಗಳ ಕಾಲ ಜಾತ್ರೆ ನಡೆಯುತ್ತದೆ. ಗಂಗಾಪೂಜೆ, ಬೇವಿನ ಸೀರೆ, ಆರತಿ, ಸಿಡಿ ಮತ್ತು ಗಾವು, ಅನ್ನಸಂತರ್ಪಣೆ ಈ ರೀತಿಯಾಗಿ ಜಾತ್ರೆ ಆರಂಭವಾಗುತ್ತದೆ. ಚಿತ್ರದುರ್ಗ, ಹಿರಿಯೂರು, ಹೊಸದುರ್ಗ, ಚಳ್ಳಕೆರೆ, ಮೊಳಕಾಲ್ಮೂರು, ಶಿರಾ ಮುಂತಾದ ಸ್ಥಳಗಳಿಂದ ಭಕ್ತರು ಬರುತ್ತಾರೆ. ಬರುವಾಗ ಧಾನ್ಯ-ದವಸ, ಬಟ್ಟೆ ತಂದು ದೇವಿಗೆ ಅರ್ಪಿಸುತ್ತಾರೆ. ಬಹುಶಃ ಇದೆಲ್ಲಾ ಪೂಜಾರಿಗೆ ಸೇರುತ್ತದೆ.

ಯಿರಬಳ್ಳಿ ಗ್ರಾಮಸ್ಥರು ಮತ್ತು ಪೂಜಾರಿಗಳು ಒಂದು ತಿಂಗಳ ಮುಂಚೆಗೆ ಸಭೆ ಸೇರಿ ದಿನಾಂಕವನ್ನು ನಿಗದಿಪಡಿಸಿ, ಮನೆಗಿಂತಿಷ್ಟು ಹಣವನ್ನು ಸಂಗ್ರಹಿಸುತ್ತಾರೆ. ತಳವಾರ ಮನೆ ಮನೆ ಸಾರುತ್ತಾನೆ. ಪೂಜಾರಿ ಜೇಡಿಮಣ್ಣನ್ನು ತಂದು ನೆರಳಲ್ಲಿ ಹಾಕಿ ಹದ ಮಾಡಿ ದೇವತೆಯನ್ನು ಮಾಡಿ ಮುಖಕ್ಕೆ ಕೆಂಪು ಬಣ್ಣವನ್ನು ಲೇಪಿಸುತ್ತಾನೆ.

ಆರಾಧನೆಯ ದಿನ ಗ್ರಾಮದ ಭಕ್ತರು ಊರೆಲ್ಲಾ ಶೃಂಗಾರ ಮಾಡಿ ತಂಬಿಟ್ಟಿನ ಆರತಿಗಳನ್ನು ಮಾಡಿ ಬೆಳಗುತ್ತಾರೆ. ಮಂಗಳವಾರದ ದಿನ ಬೆಳಗ್ಗೆ ಹನ್ನೆರಡು ಗಂಟೆಯ ವೇಳೆಗೆ. ಊರ ಬಳಿ ಸಿದ್ಧವಾದ ಮಾರಮ್ಮ ಮೂರ್ತಿಯನ್ನು ಬೇವಿನ ಮರದ ಸೊಪ್ಪಿನಿಂದ ಶೃಂಗಾರ ಮಾಡುತ್ತಾರೆ. ಶುಕ್ರವಾರದ ದಿನದಂದು ಸಂಜೆ ೪ ಗಂಟೆ ಸುಮಾರಿಗೆ ಸಿಡಿ ಆಡುವುದನ್ನು ಪ್ರಾರಂಭಿಸುತ್ತಾರೆ. ಜನರು ಉದೋ, ಉದೋ ಎಂದು ಹೇಳುತ್ತಾ ಹರ್ಷಿಸುತ್ತಾರೆ. ಆಗ ಪ್ರಾಣಿಗಳನ್ನು ಬಲಿ ಕೊಡುತ್ತಾರೆ. ಬಲಿಗೆ ನೀಡಿದ ಪ್ರಾಣಿಗಳನ್ನು ಕೈವಾಡದವರು ಹೊತ್ತುಕೊಂಡು ಹೋಗುತ್ತಾರೆ. ತಳವಾರ ಮನೆಗೆ ಎಂಟು ಸೇರು ರಾಗಿಯನ್ನು ಭತ್ಯ ಪಡೆಯುತ್ತಾನೆ. ಭಕ್ತಾದಿಗಳು ನೀಡುವ ಸೀರೆ, ಬಟ್ಟೆ ಮತ್ತು ಧಾನ್ಯವನ್ನು ಪೂಜಾರಿ ಪಡೆಯುತ್ತಾನೆ. ಈ ಕಾರ್ಯವಾದ ಮೇಲೆ ಮೂರ್ತಿಯನ್ನು ಊರ ಪೂರ್ವ ದಿಕ್ಕಿಗೆ ಒಂದು ಕಿ.ಮೀ. ದೂರದ ಗಡಿಯಲ್ಲಿ ತಂದಿದ್ದ ಬಲಿಗಳನ್ನು ಕೊಡುತ್ತಾರೆ. ಬಲಿಯಾದ ಸ್ಥಳ ರಕ್ತದೋಕುಳಿಯಾಗಿರುತ್ತದೆ. ಬಹಳ ಹಿಂದೆ ಊರಿಗೊಂದು ಮಾರಮ್ಮ ಇದ್ದು ಕುರಿ, ಕೋಳಿ, ಕೋಣ ಬಲಿ ಕೊಡುತ್ತಿದ್ದರು. ಆದರೆ ಈಗ ಮನೆಗೊಂದರಂತೆ ಬಲಿ ಕೊಡುವುದನ್ನು ರೂಢಿ ಮಾಡಿಕೊಂಡಿದ್ದಾರೆ. ಈ ರೀತಿಯ ಧಾರ್ಮಿಕ ಆಚರಣೆಗಳು ಇಂದಿಗೂ ನಡೆಯುತ್ತವೆ. ಒಂದಂತೂ ಸತ್ಯದ ಮಾತು ಇತ್ತೀಚೀಗೆ ಬಲಿ ಪದ್ಧತಿಯಲ್ಲಿ ಕೆಲವು ಕಡೆ ಕಡಿಮೆಯಾಗತೊಡಗಿದೆ. ಎಲ್ಲಾ ವರ್ಗದ ಭಕ್ತರು ಈಕೆಯನ್ನು ಆರಾಧಿಸುವುದು ಇಲ್ಲಿಯ ಒಂದು ವಿಶೇಷ.

ವದ್ದೀಕೆರೆ ಸಿದ್ಧೇಶ್ವರಸ್ವಾಮಿ ಜಾತ್ರೆ

ವದ್ದೀಕೆರೆ ಐಮಂಗಲ ಹೋಬಳಿಯ ಪ್ರಸಿದ್ಧ ಯಾತ್ರಾ ಕೇಂದ್ರ, ತಾಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿರುವ ಇಲ್ಲಿ ಪ್ರಾಚೀನ ಕಾಲದ ಸಿದ್ಧೇಶ್ವರ ದೇವಾಲಯವಿದೆ. ಎತ್ತರ ಪೀಠದ ಮೇಲಿರುವ ಸಿದ್ಧೇಶ್ವರ(ಕಾಲಭೈರವ) ಆಕರ್ಷಕ ಮೂರ್ತಿಯು ಐಮಂಗಲ ಹೋಬಳಿಯಲ್ಲಿಯೇ ಪ್ರಸಿದ್ಧ. ಈ ದೇವಾಲಯವು ಅಪಾರ ಭಕ್ತಸ್ತೋಮವನ್ನು ಹೊಂದಿದೆ.

ಪ್ರತಿ ವರ್ಷ ರಾಮನವಮಿ ನಂತರ ಬರುವ ಶುಕ್ರವಾರದಿಂದ ಸಿದ್ಧೇಶ್ವರಸ್ವಾಮಿಯ ಜಾತ್ರೆ ಪ್ರಾರಂಭವಾಗುತ್ತದೆ. ಜಾತ್ರೆಯ ಕಾರ್ಯ ಕಲಾಪಗಳು ಇಂತಿವೆ. ಶುಕ್ರವಾರ ಶ್ರೀ ಸಿದ್ಧೇಶ್ವರಸ್ವಾಮಿಯ ಕಂಕಣಧಾರಣೆ, ಶನಿವಾರ ಅಗ್ನಿಕುಂಡ, ಭಾನುವಾರ ಚಿಕ್ಕರಥೋತ್ಸವ ಸೋಮವಾರ ಹೂವಿನ ಪಲ್ಲಕ್ಕಿ ಮತ್ತು ಬ್ರಹ್ಮರಥೋತ್ಸವ, ಮಂಗಳವಾರ ಉಂಡೆ (ಉರುಳುಸೇವೆ) ಮಂಡೆ, ಸಿದ್ಧಭುಕ್ತಿ, ಬುಧವಾರ ಓಕಳಿ ಮತ್ತು ಕಂಕಣ ವಿಸರ್ಜನೆ. ಈ ರೀತಿಯಾಗಿ ಜಾತ್ರೆಯು ಒಂದು ವಾರಗಳ ಕಾಲ ನಡೆಯುತ್ತದೆ.

ಜಾತ್ರೆಯ ಒಂದು ವಾರಗಳ ಕಾಲ ವಿಜೃಂಭಣೆಯಿಂದ ನಡೆಯುವ ಸಿದ್ಧೇಶ್ವರನ ಜಾತ್ರೆ ಯುಗಾದಿ ಹಬ್ಬದ ಮೊದಲು ೯ ದಿನಕ್ಕೆ ಮುಂಚೆ ಸಾರುವಿನೊಂದಿಗೆ ಜಾತ್ರೆಯ ವಿಧಿ-ವಿಧಾನಗಳು ಆರಂಭವಾಗುತ್ತವೆ. ಇಲ್ಲಿ ತಳವಾರ ಜಾತ್ರೆಯ ಸುದ್ದಿಯನ್ನು ಸಾರುತ್ತಾನೆ.

ಬ್ರಹ್ಮರಥೋತ್ಸವದಂದು ಪೂಜಿಸಿ ಪಲ್ಲಕ್ಕಿಯಲ್ಲಿ ಶ್ರೀ ಸಿದ್ದೇಶ್ವರ ಸ್ವಾಮಿಯ ಉತ್ಸವ ಮೂರ್ತಿಯನ್ನು ಕುಳ್ಳಿರಿಸಿ. ವಾದ್ಯ-ವೈಭವಗಳೊಂದಿಗೆ ಬ್ರಹ್ಮರಥದ ಒಳಗೆ ಕರೆತರುತ್ತಾರೆ. ಈ ಸಂದರ್ಭ ಬಹಳ ವೈಭವಯುತವಾಗಿರುತ್ತದೆ. ವಿವಿಧ ವಾದ್ಯಗಳ ಧ್ವನಿಯನ್ನು ಕೇಳಬಹುದು. ನಂದಿಧ್ವಜ, ವೀರಗಾಸೆ, ಡೊಳ್ಳುಕುಣಿತ ಮುಂತಾದ ಕುಣಿತವನ್ನು ನೋಡಬಹುದು. ತಳಿರುತೋರಣ ಗಳಿಂದ ಅಲಂಕೃತವಾದ ದಿವ್ಯವಾದ ರಥದಲ್ಲಿ 'ಶ್ರೀಸಿದ್ಧೇಶ್ವರಸ್ವಾಮಿಯ ಉತ್ಸವಮೂರ್ತಿ ವಿರಾಜವಾದ ಮೇಲೆ ವಾದ್ಯ ವೈಭವಗಳೊಂದಿಗೆ ರಥ ಸಾಗುತ್ತದೆ. ಭಕ್ತರು ರಥದ ಹಗ್ಗಕ್ಕೆ ಕೈ ಕಚ್ಚಿ ಐದು ಹೆಜ್ಜೆ ಕ್ರಮಿಸಿದರೆ, ತಾವು ಕೃತ್ನ-ಕೃತಾರ್ಥರಾದವರೆಂದು ತಿಳಿದು ರಥವನ್ನು ಎಳೆಯುತ್ತಾರೆ. ರಥೋತ್ಸವ ನಡೆಯುವ ಕಾಲ ಸುಮಾರು ನಾಲ್ಕು ಗಂಟೆಯಿಂದ, ಐದು ಗಂಟೆಯವರೆಗೆ ಸಹಸ್ರಾರು ಭಕ್ತ ಜನರು ರಥೋತ್ಸವದಲ್ಲಿ ಪಾಲ್ಗೊಳ್ಳುತ್ತಾರೆ.

ಸಿದ್ದಭುಕ್ತಿ

ಸಿದ್ದಭುಕ್ತಿ ಎಂಬುದು ಶ್ರೀ ಸಿದ್ಧೇಶ್ವರಸ್ವಾಮಿಗೆ ಪ್ರಾಣಿ ಬಲಿ ಕೊಡುವ ಪದ್ಧತಿಯಾಗಿದೆ. 'ಸಿದ್ದಭುಕ್ತಿ ಇದು ಶ್ರೀ ಸಿದ್ಧೇಶ್ವರಸ್ವಾಮಿ'ಗೆ 'ಹರಕೆ' ಹೊತ್ತ ಭಕ್ತರು ನೆರವೇರಿಸುವ ಒಂದು ವೈಶಿಷ್ಟ್ಯಪೂರ್ಣವಾದ ಕಾರ್ಯವಾಗಿರುತ್ತದೆ. ಜೋಗಪ್ಪನಿಲ್ಲದೆ, ಈ ಕಾರ್ಯ ನಡೆಯುವಂತಿಲ್ಲ. ಜೋಗಪ್ಪನನ್ನು "ಗುರುವಿನಯ್ಯ" ಎಂತಲೂ ಕರೆಯುತ್ತಾರೆ. ಜೋಗಪ್ಪ ಕಾಳಾಮುಖ ಶೈವಪಂಥ ಅಥವಾ ಬ್ರಹ್ಮಕಪಾಲಿ ಪಂಥದವನಾಗಿರುತ್ತಾನೆ. ಹರಕೆ ನೆರವೇರಿಸುವ ಭಕ್ತರು 'ಸಿದ್ದಭುಕ್ತಿ' ಮಾಡುವ ಸ್ಥಳಕ್ಕೆ ಜೋಗಪ್ಪನನ್ನು ಕರೆದುಕೊಂಡು ಬರುತ್ತಾರೆ. ಕರಿಗಂಬಳಿಯ ಗದ್ದುಗೆಯನ್ನು ಮಾಡಿ, ಗದ್ದುಗೆಯ ಮೇಲೆ ಬಿಲ್ವಪತ್ರೆ, ಪುಷ್ಪ, ಅಕ್ಷತೆಕಾಳು, ಗಂಧ, ಹೊಸ ವಸ್ತ್ರ ಇಡುತ್ತಾರೆ. ಎಲೆ, ಅಡಿಕೆ ಇಟ್ಟು ಅದರಲ್ಲಿ ದಕ್ಷಣೆ ಇಡುತ್ತಾರೆ. ನಂತರ ಜೋಗಪ್ಪ ತಾನು ತಂದ ಪಾತ್ರೆ ತ್ರಿಶೂಲವನ್ನು ಗದ್ದುಗೆಯ ಮೇಲೆ ಇಟ್ಟು ದೀಪ ಬೆಳಗಿಸುತ್ತಾನೆ. ಶ್ರೀ ಸಿದ್ಧೇಶ್ವರಸ್ವಾಮಿಯ ದೇವಸ್ಥಾನದಿಂದ ತಂದ ತೀರ್ಥದ ಕಾಯಿ ಒಡೆದು ಪೂಜೆ ಮಾಡುತ್ತಾನೆ. ಪೂಜೆಯಾದ ನಂತರ ಹರಕೆ ತೀರಿಸುವ ಭಕ್ತರು ಗದ್ದುಗೆಯ ಮುಂದೆ ತಾವು ತಂದ ಮರಿ(ಹೋತ, ಟಗರು, ಕುರಿ, ಮೇಕೆ ತಲೆಯನ್ನು) ಇಡುವರು. ಮರಿಯ ಶರೀರದ ಮಾಂಸದಿಂದ ಮಾಡಿದ ಅಡುಗೆಯ ಸ್ವಲ್ಪವನ್ನು ಗದ್ದುಗೆಯ ಮೇಲಿರುವ ಜೋಗಪ್ಪನ ಪಾತ್ರೆಗೆ ಎಡೆ ಹಾಕುತ್ತಾರೆ. ಜೋಗಪ್ಪ ಪಾತ್ರೆಗೆ ಪೂಜೆ ಮಾಡುತ್ತಾನೆ. ಊಟ ಮಾಡಿದ ಮೇಲೆ ಜೋಗಪ್ಪ ಪಾತ್ರೆಯನ್ನು ಮರಿಯ ತಲೆಯನ್ನು ತೆಗೆದುಕೊಂಡು ಹೋಗುತ್ತಾನೆ. ಈ ಮೇಲ್ಕಂಡ ಕ್ರಮದಲ್ಲಿ ಭಕ್ತಾದಿಗಳು ಸಿದ್ದಭುಕ್ತಿ ಕಾರ್ಯವನ್ನು ನೆರವೇರಿಸಿದಾಗ ಅದು ಶ್ರೀ ಸಿದ್ಧೇಶ್ವರಸ್ವಾಮಿಗೆ ಅರ್ಪಿತವಾಗುತ್ತದೆ. ಕಾಳಾಮುಖ ಶೈವ ಪಂಥದ ಜೋಗಪ್ಪನಿಂದ ದೀಕ್ಷೆ ಹೊಂದಿದ ಬೇರೆ ಯಾವುದೇ ಜಾತಿಯ ಜೋಗಪ್ಪನಾದರೂ ಸಿದ್ದಭುಕ್ತಿ ಕಾರ್ಯವನ್ನು ನೆರವೇರಿಸಿಕೊಡಬಹುದಾಗಿದೆ. ಸಿದ್ದಭುಕ್ತಿ ಎಂದರೆ ಸಿದ್ದರಿಗೆ ಉಣಿಸುವುದು ಎಂದಾಗುತ್ತದೆ.

ಕಂದಿಕೆರೆ ಶ್ರೀ ರಂಗನಾಥಸ್ವಾಮಿ ಜಾತ್ರೆ

ಕಂದಿಕೆರೆಯ ರಂಗನಾಥಸ್ವಾಮಿ ರಥೋತ್ಸವ ಪ್ರತಿವರ್ಷ ಫೆಬ್ರವರಿ ತಿಂಗಳ ನಂದನನಾಮ ಸಂವತ್ಸರ ಮಾಘ ಶುದ್ಧ ಚತುರ್ಥ ಸೋಮವಾರದಂದು ನಡೆಯುತ್ತದೆ. ಹೋಬಳಿಯಲ್ಲಿ

ನಡೆಯುವ ಹಲವಾರು ರಥೋತ್ಸವ ಕಾರ್ಯಕ್ರಮಗಳಲ್ಲಿಯೇ ರಂಗನಾಥಸ್ವಾಮಿ ರಥ ಎತ್ತರವಾಗಿದೆ. ರಥೋತ್ಸವ ಜಾತ್ರೆ ಮೂರು ದಿನ ಬಹಳ ವಿಜಂಭೃಣೆಯಿಂದ ನಡೆಯುತ್ತದೆ. ಜಾತ್ರೆಯ ಕಾರ್ಯಕ್ರಮಗಳು ಇಂತಿವೆ. ಭಾನುವಾರ ಗಂಗಾಪೂಜೆ, ಧ್ವಜಾರೋಹಣ, ಆನೆ ಅಂಬಾರಿ ಉತ್ಸವ, ಸೋಮವಾರ ಉಚಿತ ಸಾಮೂಹಿಕ ವಿವಾಹ ಸಮಾರಂಭ, ಕಲ್ಲುಗಾಲಿ ರಥೋತ್ಸವ. ಮಂಗಳಾರತಿ, ಮಂಗಳವಾರ ಮಹಾಮಂಗಳಾರತಿ, ಓಕಳಿ ಈ ರೀತಿಯಾಗಿ ಜಾತ್ರೆ ನಡೆಯುತ್ತದೆ. ಸಾವಿರಗಟ್ಟಲೆ ಭಕ್ತರು ಸೇರುತ್ತಾರೆ.

ಕಲ್ಲುಗಾಲಿ ರಥೋತ್ಸವ

ರಂಗನಾಥಸ್ವಾಮಿ ದೇವಸ್ಥಾನಕ್ಕೆ ಸೇರಿದ ನಾಲ್ಕು ಕಲ್ಲು ಗಾಲಿಯ ರಥವಿದೆ. ಗ್ರಾಮಗಳಲ್ಲಿ ಅಂದು ಬೇಸಾಯಕ್ಕೆ ನೊಗವನ್ನು ಎತ್ತಿನ ಮೇಲೆ ಹೂಡುವುದಿಲ್ಲ. ದನಗಳ ಮೈತೊಳೆದು ಕೋಡುಗಳಿಗೆ ಸುನಾರಿ ಕಟ್ಟಿ, ನೀಲಿ ಬಳಿದು, ಟೇಪು ಹಾಕಿ ಅಲಂಕಾರಗೊಳಿಸುತ್ತಾರೆ. ಅವಲಕ್ಕಿ ಬಾಳೆಹಣ್ಣಿನ ಎಡೆಯನ್ನು ದನಗಳಿಗೆ ನೀಡಲಾಗುವುದು.

ಮಧ್ಯಾಹ್ನ ಎರಡು ಗಂಟೆಗೆ ರಥವನ್ನು ವಿಶೇಷವಾಗಿ ಅಲಂಕರಿಸಲಾಗುವುದು. ಮಡಿವಾಳ ಮಡಿ ಬಟ್ಟೆಯಾಗಿ ಬಿಳಿಯ ಬಟ್ಟೆಗೆ ಅರಿಶಿಣ ಮಾಡಿ ತರುತ್ತಾನೆ. ಆ ಬಟ್ಟೆಯಿಂದ ರಥವನ್ನು ಅಲಂಕಾರಗೊಳಿಸಲಾಗುತ್ತದೆ. ತೆಂಗಿನಕಾಯಿಯ ಗೊನೆ, ಬಾಳೆಗೊನೆ, ಟೇಪು, ಬಲೂನು, ಕಬ್ಬು, ಮಾವಿನಸೊಪ್ಪುಗಳಿಂದ ಅಲಂಕಾರಗೊಳಿಸುತ್ತಾರೆ. ನಂತರ ಪಲ್ಲಕ್ಕಿಯ ಮೇಲೆ ಶ್ರೀರಂಗನಾಥಸ್ವಾಮಿಯನ್ನು ತಂದು ಪಲ್ಲಕ್ಕಿಯ ಸಮೇತ ತೇರಿನ ಮೇಲೆ ಇಡಲಾಗುವುದು. ನಂತರ ಮಹಾಮಂಗಳಾರತಿ ನಡೆಯುತ್ತದೆ. ರಂಗನಾಥಸ್ವಾಮಿಯ ಮೂಲ ಗುಡಿಗೆ ಅಭಿಷೇಕ ನಡೆಯುತ್ತದೆ. ನಂತರ ರಥದ ಗಾಲಿಗೆ ಅರಿಶಿಣ ಹಾಕಿ ತಯಾರಿಸಿದ; ಅನ್ನವನ್ನು ನೈವೇದ್ಯವಾಗಿ ಎಡೆ ಹಾಕಲಾಗುತ್ತದೆ. ಇಲ್ಲಿಯು ಮಹಾಮಂಗಳಾರತಿ ನಡೆಯುತ್ತದೆ. ನಂತರ ರಂಗನಾಥಸ್ವಾಮಿ ಪಾದಾರವಿಂದ ಗೋವಿಂದ ಗೋವಿಂದ ಎಂಬ ಜೈಕಾರದೊಂದಿಗೆ ತೇರಿನ ಹಗ್ಗಕ್ಕೆ ಕೈ ಹಾಕಿ ಉತ್ಸಾಹದಿಂದ ತೇರು ಎಳೆಯಲಾಗುತ್ತದೆ. ವಿಶಾಲವಾದ ರಸ್ತೆ, ಮರಗಳ ತೋಪಿನ ಮಧ್ಯೆ ಅರ್ಧ ಫರ್ಲಾಂಗ್ ದೂರ ತೇರು ಎಳೆಯಲಾಗುತ್ತದೆ. ತೇರಿನ ಪೂರ್ಣ ಜವಾಬ್ದಾರಿ ಗುಡಿಗೌಡ್ರ ಮಕ್ಕಳದು. ದೇವಸ್ಥಾನದ ಅರ್ಚಕರ ಮಕ್ಕಳದ್ದು. ಈ ಇಬ್ಬರೂ ವೀರಶೈವ ವರ್ಗಕ್ಕೆ ಸೇರಿದವರು. ಜಾತ್ರೆಯಲ್ಲಿ ಪ್ರಮುಖ ಪಾತ್ರ ವೀರಶೈವ ವರ್ಗದವರದ್ದು, ನೇಮದಂತೆ ತಳವಾರ, ಮಡಿವಾಳ, ತೋಟಿ, ಕೋಲುಕಾರ ಇವರೆಲ್ಲರಿಗೂ ಸಮಾನ ಜವಾಬ್ದಾರಿ ನೀಡಲಾಗಿದೆ.

ಐಮಂಗಲ ಶ್ರೀ ಕಲ್ಕುಂಟೇಶ್ವರಿ ಜಾತ್ರೆ

ಐಮಂಗಲ ಗ್ರಾಮದ ಗ್ರಾಮದೇವತೆ ಎಂದೇ ಪ್ರಸಿದ್ಧಿಯಾದ ಕಲ್ಕುಂಟೇಶ್ವರಿ ಅಮ್ಮನವರ ಜಾತ್ರೆಯನ್ನು ವರ್ಷಕ್ಕೊಮ್ಮೆ ಏಪ್ರಿಲ್ ತಿಂಗಳಿನಲ್ಲಿ ಅದ್ದೂರಿಯಾಗಿ ನಡೆಸುವರು. ಸ್ಥಳೀಯರು ಸುಮಾರು ೫೦೦ ವರ್ಷಗಳ ಹಿಂದೆ ಈ ದೇವತೆಯು ಉದ್ಭವವಾಗಿತ್ತೆಂದು ಹೇಳುವರು. ಈ ಕಲ್ಕುಂಟೇಶ್ವರಿ ಜಾತ್ರೆ ಪ್ರಾರಂಭವಾಗುವುದಕ್ಕೆ ೧೫ ದಿನಗಳ ಮುಂಚಿತವಾಗಿ ಮಂಗಳವಾರ ಆರತಿ, ಬುಧವಾರ ಜಾತ್ರೆ ಎಂಬುದಾಗಿ ಸಾರುತ್ತಾರೆ. ಮಂಗಳವಾರ ಬೆಳಗ್ಗೆಯಿಂದ ರಾತ್ರಿಯವರೆಗೂ ಆರತಿ ಪೂಜೆಗಳು ನಡೆದು ದೇವಸ್ಥಾನದಲ್ಲಿ ಅಭಿಷೇಕವಾಗುತ್ತದೆ.

ದೇವಾಲಯದ ಆವರಣದಲ್ಲಿ ಉತ್ಸವ ಜರುಗುತ್ತದೆ ನಂತರ ಮಧ್ಯಾಹ್ನದ ವೇಳೆಗೆ ಹಳೆ ಊರು ಮತ್ತು ಹೊಸ ಊರು ಎಂಬ ಊರುಗಳಿದ್ದು ಹಳೆಯ ಊರಿನ ಗ್ರಾಮಸ್ಥರು ದೇವತೆಯನ್ನು ಮಂಗಳಾರತಿಯೊಂದಿಗೆ ತಮ್ಮ ಮನೆಗಳಿಗೆ ಹೊತ್ತುಕೊಂಡು ಹೋಗಿ ಅಲ್ಲಿ ಪೂಜೆಯನ್ನು ಸಲ್ಲಿಸುವುದು. ನಂತರ ಪಲ್ಲಕ್ಕಿಯ ಮೇಲೆ ತಂದು ದೇವಾಲಯಕ್ಕೆ ಬಿಡುವ ಪದ್ಧತಿ ಇದೆ. ಬುಧವಾರದಂದು ದೇವತೆಗೆ ಸ್ನಾನಾಭಿಷೇಕ ಮಾಡಿಸಿ. ಪಲ್ಲಕ್ಕಿ ಅಲಂಕಾರದಿಂದ ದೇವತೆಯನ್ನು ದೇವಸ್ಥಾನದಲ್ಲಿ ಕೂರಿಸಿ ಪೂಜೆ ಮಾಡುತ್ತಾರೆ. ಇಂದಿಗೂ ಐಮಂಗಲ ಗ್ರಾಮದಲ್ಲಿ ಸಿಡುಬು, ಕಾಲರಾ, ಇನ್ನು ಇತರೆ ರೋಗಗಳು ಕಾಣಿಸಿಕೊಂಡಾಗ ರೋಗಗಳು ಬಂದ ಗ್ರಾಮದಲ್ಲಿ ಮೂರು ಅಥವಾ ಐದು ದಿನ ಕೂರಿಸಿ ಪೂಜೆ ಸಲ್ಲಿಸಿ, ನಂತರ ಮೂಲ ಸ್ಥಳಕ್ಕೆ ಕಳುಹಿಸುವರು. ಸುಮಾರು ವರ್ಷಗಳಿಂದ ಕೋಳಿ, ಕುರಿ, ಮೇಕೆಗಳನ್ನು ಬಲಿ ಕೊಡುತ್ತಿದ್ದಾರೆ. ಹರಕೆ ಹೊತ್ತವರು ಅಗ್ನಿಕೊಂಡದಲ್ಲಿ ಕೆಂಡ ತುಳಿಯುವ ಸಂಪ್ರದಾಯವನ್ನು ಪಾಲಿಸುತ್ತಾರೆ. ಜಾತ್ರೆಯಲ್ಲಿ ರಣವಾದ್ಯಗಳು ಮತ್ತು ಮಂಗಳಾ ವಾದ್ಯಗಳನ್ನು ಉಪಯೋಗಿಸುತ್ತಾರೆ. ರಣವಾದ್ಯಗಳಾದ ತಮಟೆ, ತಾಸ, ರಂಡೋಲುಗಳು, ಮಂಗಳವಾದ್ಯಗಳಾದ ತಾಳ, ಓಲಗ, ಡೋಲುಗಳು ಜಾತ್ರೆಯಲ್ಲಿ ಮೊಳಗುತ್ತವೆ.

ಹೆಮದಳ ಶ್ರೀ ವೀರಾಂಜನೆಯಸ್ವಾಮಿ ಜಾತ್ರೆ

ಐಮಂಗಲ ಗ್ರಾಮದ ಹೊರವಲಯದಲ್ಲಿನ ಹೇಮದಳ ಗ್ರಾಮದಲ್ಲಿ ವೀರಾಂಜನೆಯ ಸ್ವಾಮಿ ಜಾತ್ರೆಯು ಯುಗಾದಿ ಕಳೆದ ಒಂಬತ್ತು ದಿನಗಳಿಗೆ ಶ್ರೀರಾಮನವಮಿಯಂದು ಒಂಬತ್ತು ದಿನಗಳ ಕಾಲ ಜಾತ್ರೆ ನಡೆಯುತ್ತದೆ. ಜಾತ್ರೆಯ ಕಾರ್ಯಕ್ರಮಗಳು ಇಂತಿವೆ. ಭಾನುವಾರ ಕಂಕಣ, ಸೋಮವಾರ ಹೇಗಲಸ್ಥುವ, ಮಂಗಳವಾರ ದೊಡ್ಡ ಉಚ್ಛಾಯ, ಬುಧವಾರ ಮಡಿತೇರು, ಗುರುವಾರ ದೊಡ್ಡ ಎಡೆ, ಶುಕ್ರವಾರ ಗಂಗಾಸ್ನಾನ, ಶನಿವಾರ ಓಕಳಿ ಈ ರೀತಿಯಾಗಿ ಜಾತ್ರೆ ನಡೆಯುತ್ತದೆ.

ಅಂದು ಮುಂಜಾನೆ ದೇವಾಲಯದ ಸುತ್ತಲೂ ಬಲಿ ಅನ್ನವನ್ನು ಇಡುತ್ತಾರೆ. ಪೂಜಾರಿ ಕಂಕಣವನ್ನು ಕಟ್ಟಿಕೊಂಡು ಹೋಮದ ಪೂಜೆ ಮಾಡುತ್ತಾರೆ. ಸಂಜೆಯ ವೇಳೆಗೆ ರಥದ ಮುಂಭಾಗದಲ್ಲಿ ಹೋಮವನ್ನು ಮಾಡುತ್ತಾರೆ. ಬಲಿ ಪೂಜೆಯನ್ನು ಮಾಡಿ ನಂತರ ಊರಿನಕೇರಿಯವರು ಮತ್ತು ಸಾರ್ವಜನಿಕರು ಸೇರಿ ತೇರಿನ ಧ್ವಜಕ್ಕೆ ಸವಾಲು ಹಾಕುವ ಕಾರ್ಯ ನಡೆಸಿ, ನಂತರ ಭಕ್ತಾದಿಗಳ ಸಮ್ಮುಖದಲ್ಲಿ ರಥವನ್ನು ಪ್ರಮುಖ ಬೀದಿಗಳಲ್ಲಿ ಎಳೆಯುತ್ತಾರೆ. ಅಂದು ಭಕ್ತಾದಿಗಳೆಲ್ಲರೂ ಬೆಲ್ಲ, ಬಾಳೆಹಣ್ಣು, ಹೂಗಳನ್ನು ರಥಕ್ಕೆ ಎಸೆಯುತ್ತಾರೆ. ನಂತರ ಉತ್ಸವಮೂರ್ತಿಯನ್ನು ಯಥಾಸ್ಥಾನಕ್ಕೆ ತಂದು ಪೂಜಿಸಿ ರಾತ್ರಿ ಬಲಿ ಅನ್ನವನ್ನು ಹಾಕುತ್ತಾರೆ. ವೀರಾಂಜನೇಯಸ್ವಾಮಿ ಹೇಮದಲ ಸಮುದಾಯದ ಆರಾಧ್ಯ ದೈವ ಆದಕಾರಣ ರಥೋತ್ಸವದ ಪ್ರಾರಂಭದಿಂದ ಮುಕ್ತಾಯದವರೆಗೆ ಎಲ್ಲಾ ಕಾರ್ಯಕ್ರಮಗಳು ಇವರ ಸಮ್ಮುಖದಲ್ಲಿಯೇ ನಡೆಯುತ್ತದೆ.

ಹರ್ತಿಕೋಟೆ ವೀರಭದ್ರೇಶ್ವರ ಜಾತ್ರೆ

ಹಿರಿಯೂರು ಮತ್ತು ಚಳ್ಳಕೆರೆಗೆ ಹೋಗುವ ಮಾರ್ಗ ಮಧ್ಯದಲ್ಲಿ ಹರ್ತಿಕೋಟೆ ಗ್ರಾಮವಿದೆ. ಇಲ್ಲಿ ಹರತಿ ಪಾಳೆಯಗಾರರು ಆಳ್ವಿಕೆ ನಡೆಸಿ ಅವರು ಬಳಸಿ ಬಿಟ್ಟು ಹೋದ ಅನೇಕ

ದೇವಾಲಯ, ಶಾಸನ, ಕೆರೆ, ಬಾವಿಗಳು ಇಂದಿಗೂ ಕಾಣಬಹುದು. ಹರ್ತಿಕೋಟೆ ಧಾರ್ಮಿಕವಾಗಿ ಭವ್ಯ ಪರಂಪರೆಯನ್ನು ಹೊಂದಿದ ಗ್ರಾಮವಾಗಿದೆ. ಪ್ರತಿವರ್ಷ ಮಾರ್ಚ್ ಅಥವಾ ಏಪ್ರಿಲ್ ಮೊದಲ ವಾರದಲ್ಲಿ ದನಗಳ ಭಾರಿ ಜಾತ್ರೆ ನಡೆಯುತ್ತದೆ. 'ದನಗಳ ಜಾತ್ರೆ' ಸರಾಸರಿ ಹದಿನೈದು ದಿನಗಳ ಕಾಲ ವಿಜೃಂಭಣೆಯಿಂದ ನಡೆಯುತ್ತದೆ. ಜಾತ್ರೆಗೆ ಹಿರಿಯೂರು, ಮಡಕಸಿರಾ, ಹೊಸದುರ್ಗ, ಮೊಳಕಾಲ್ಮೂರು, ಚಿತ್ರದುರ್ಗ, ಚಳ್ಳಕೆರೆ ಈ ಭಾಗಗಳ ದನಗಳು ಬಂದು ಸೇರುತ್ತವೆ. ಮಾರುವ, ಕೊಳ್ಳುವ ಅಪಾರ ಜನ ಹರ್ತಿಕೋಟೆಯಲ್ಲಿ ಸೇರುತ್ತಾರೆ. ಇಪ್ಪತ್ತನಾಲ್ಕು ಎಕರೆ ವಿಶಾಲ ವಿಸ್ತೀರ್ಣ ಹೊಂದಿದ ಜಾಗದಲ್ಲಿ ಜಾತ್ರೆ ನಡೆಯುತ್ತದೆ. ಬೆಳೆದು ನಿಂತ ಹುಣಸೆ, ಹೊಂಗೆ, ಬೇವಿನ ಮರಗಳು, ದನಗಳ ಜಾತ್ರೆಗೆ ಪ್ರಾಕೃತಿಕ ಕೊಡುಗೆಗಳು, ಉತ್ತಮ ನೆರಳು ನೀರಿನ ಸೌಕರ್ಯವಿರುವುದರಿಂದ ದನಗಳ ವಿನಿಮಯಕ್ಕೆ ಹೇಳಿ ಮಾಡಿಸಿದಂತಹ ವಾತಾವರಣವಿದೆ.

ಹರ್ತಿಕೋಟೆ ವೀರಭದ್ರೇಶ್ವರ ಜಾತ್ರೆಯು ಒಂದು ವಾರಗಳ ಕಾಲ ವಿಜೃಂಭಣೆಯಿಂದ ನಡೆಯುವ ಜಾತ್ರೆಯು ಯುಗಾದಿ ಹಬ್ಬದ ಮೊದಲು ಒಂಬತ್ತು ದಿನಕ್ಕೆ ಮುಂಚೆ ಸಾರುವಿನೊಂದಿಗೆ ಜಾತ್ರೆಯ ವಿಧಿ-ವಿಧಾನಗಳು ಆರಂಭವಾಗುತ್ತವೆ. ಇಲ್ಲಿ ತಳವಾರ ಜಾತ್ರೆಯ ಸುದ್ದಿಯನ್ನು ಸಾರುತ್ತಾನೆ. ಜಾತ್ರೆಯ ಕಾರ್ಯಕಲಾಪಗಳು ಇಂತಿವೆ. ಸೋಮವಾರ ಕಂಕಣಧಾರಣೆ ಮತ್ತು ರುದ್ರಾಭಿಷೇಕ, ಮಂಗಳವಾರ ಧ್ವಜರೋಹಣ ಮತ್ತು ಪಲ್ಲಕ್ಕಿ ಉತ್ಸವ, ಬುಧವಾರ ಅಗ್ನಿಕೊಂಡ ಮತ್ತು ದುಗ್ಗಳ (ಕೆಂಡ), ಗುರುವಾರ ಬೆಳ್ಳಿ ಕವಚನಧಾರಣೆ, ಶುಕ್ರವಾರ ಸಣ್ಣತೇರು, ಶನಿವಾರ ದೊಡ್ಡತೇರು, ಭಾನುವಾರ ಕಂಕಣ ವಿಸರ್ಜನೆ ಮತ್ತು ಓಕುಳಿ ಈ ರೀತಿಯಾಗಿ ಜಾತ್ರೆ ನಡೆಯುತ್ತದೆ. ಸಾವಿರಗಟ್ಟಲೆ ಜನ ಭಕ್ತರು ಸೇರುತ್ತಾರೆ.

ಒಟ್ಟಿನಲ್ಲಿ ಈ ಜಾತ್ರೆ - ಉತ್ಸವಗಳು ಪ್ರಾದೇಶಿಕ ವೈವಿಧ್ಯತೆಯಿಂದ ಕೂಡಿದ್ದರೂ ಮುಖ್ಯವಾಗಿ ಜನಸಮೂಹದ ಕಲ್ಯಾಣಕ್ಕಾಗಿ ಮತ್ತು ಸಾಂಸ್ಕೃತಿಕ, ವಾಣಿಜ್ಯ ವಾಹಿವಾಟುಗಳ ಕೊಂಡು-ಕೊಳ್ಳುವಿಕೆಯಲ್ಲಿ ಸಾರ್ವಜನಿಕ ಸಂಭ್ರಮದಲ್ಲಿ ಸೇರುವ ವೇದಿಕೆಗಳಾಗಿವೆ. ಯಾವುದೇ ಮತ ಧರ್ಮದ ಜಾತ್ರೆಯಿರಲಿ ಎಲ್ಲಾ ಜಾತಿ-ಜನಾಂಗದವರು ಸೇರಿ ಜಾತ್ರೆ ನೆರವೇರಿಸುತ್ತಾರೆ. ಇವು ಐಕ್ಯತೆಯ ಭಾವನೆಯನ್ನು ಪುಷ್ಟೀಕರಿಸಿ ಬೆಳೆಯುವ ಸಾಧನಗಳಾಗಿವೆ. ಜಾತ್ರೆ-ಉತ್ಸವಗಳು ಜನಪದರಿಗೆಲ್ಲಾ ಸಮಷ್ಠಿಯ ಸಂಪತ್ತಾಗಿ, ಪುಣ್ಯ ಪ್ರಸಂಗದ ಪರ್ವಕಾಲವಾಗಿದೆ. ಧಾರ್ಮಿಕ ಹಿನ್ನೆಲೆಯಲ್ಲಿ ಹುಟ್ಟಿಕೊಂಡು ಬಂದ ಯಾವುದೇ ಜಾತ್ರೆ-ಉತ್ಸವಗಳು, ಹೆಣ್ಣು- ಗಂಡು, ಬಡವ-ಬಲ್ಲಿದ, ಊರು-ಕೇರಿ, ಜಾತಿ, ಭೇದ-ಭಾವವಿಲ್ಲದೇ ಜನರು ನೆರೆಯುವುದರಿಂದ ಜಾತ್ರೆಗಳು ಸಾಮಾಜಿಕ ಭಾವೈಕ್ಯತೆಯ ಸಂಕೇತವಾಗಿ ಪ್ರತಿಬಿಂಬಿಸುತ್ತಲಿವೆ.

ಬುರುಜಿನರೊಪ್ಪ ಶುಕ್ಲಾಂಭದೇವಿ ಜಾತ್ರೆ

ಐಮಂಗಲದಿಂದ ಆಗ್ನೇಯಕ್ಕೆ ೫ ಕಿ.ಮೀ. ದೂರದಲ್ಲಿ ಬುರುಜಿನರೊಪ್ಪ ಗ್ರಾಮವಿದೆ. ಪ್ರತಿವರ್ಷ ನವರಾತ್ರಿ (ಮೈಸೂರು ದಸರಾ) ಹಬ್ಬದ ದಿನದಂದು ಒಟ್ಟು ಒಂಬತ್ತು ದಿನಗಳ ಕಾಲ ಜಾತ್ರೆ ನಡೆಯುತ್ತದೆ. ಜಾತ್ರೆಯ ಪೂರ್ವದಲ್ಲಿ ಗ್ರಾಮದ ಹಿರಿಯರು ಹಾಗೂ ದೇವಾಲಯದ ಬಾಬ್ತುದಾರರು ಅದೇ ಊರಿನ ದೇವಿಯ ತವರು ಮನೆಯಾದ ಕಾಮರದ್ದೆ ರುದ್ರಣ್ಣನ

ಮನೆಯಲ್ಲಿ ಮಡಿಲು ಅಕ್ಕಿ ತುಂಬಿಕೊಂಡು ನಂತರ ಗುಡಿಗೆ ಬರುತ್ತಾಳೆ. ಗ್ರಾಮದ ಎಲ್ಲ ಜನರು ಕೂಡಿಕೊಂಡು ದೇವಿಯ ಅಪ್ಪಣೆಯನ್ನು ಪಡೆದು ಜಾತ್ರೆಯ ದಿನಾಂಕವನ್ನು ನಿಶ್ಚಯಿಸುತ್ತಾರೆ. ಜಾತ್ರೆಯು ಸಾರುವ ಮೂಲಕ ಪ್ರಾರಂಭವಾಗುತ್ತದೆ. ಮೊದಲನೆ ದಿವಸ ಗಂಗಾ ಪೂಜೆ, ಎರಡನೆಯ ದಿವಸ ಕಂಕಣಧಾರಣೆ, ಮೂರನೆಯ ದಿವಸ ಅರಿಶಿಣ ಪೂಜೆ, ಭಂಡಾರ ಓಕಳಿ ಮುಂತಾದ ಕಾರ್ಯಕ್ರಮಗಳು ನಡೆಯುತ್ತವೆ. ಜಾತ್ರೆಯಲ್ಲಿ ವಿಶೇಷವಾಗಿ ಸುತ್ತಮುತ್ತಲಿನ ಗ್ರಾಮಸ್ಥರು ಕೂಡಿಕೊಂಡು ಡೊಳ್ಳಿನ ಸ್ಪರ್ಧೆ, ಭಜನಾ ಸ್ಪರ್ಧೆ ಹೀಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ವಿಜೃಂಭಣೆಯಿಂದ ಈ ಜಾತ್ರೆ ನಡೆಯುತ್ತದೆ.

ಶ್ರೀ ಕೋಡಿಮಲ್ಲೇಶ್ವರ ಜಾತ್ರೆ

ಶ್ರೀ ಕ್ಷೇತ್ರವು ಐಮಂಗಲದಿಂದ ಪಶ್ಚಿಮಕ್ಕೆ ೪ ಕಿ.ಮೀ. ದೂರದಲ್ಲಿ ಇದೆ. ಪ್ರತಿವರ್ಷ ಈ ಜಾತ್ರೆಯು ಬಸವ ಜಯಂತಿ ದಿನದಂದು ಈ ಜಾತ್ರೆ ನಡೆಯುತ್ತದೆ. ಈ ಜಾತ್ರೆಯು ೪ ದಿವಸ ಕ್ರಮವಾಗಿ ಮೊದಲನೇ ದಿವಸ ಕಂಕಣ, ಎರಡನೇ ದಿವಸ ಹುಸಿ ಬಿಡುವುದು, ಮೂರನೆಯ ದಿವಸ ಸಣ್ಣ ತೇರು ನಡೆಯುತ್ತದೆ. ಕೊನೆಯ ದಿವಸ ದೊಡ್ಡ ತೇರು ಹಾಗೂ ಅಗ್ನಿಕುಂಡ ಕಾರ್ಯಕ್ರಮ ನಡೆಸುತ್ತಾರೆ ಮತ್ತು ನಾಟಕ, ಡೊಳ್ಳು ಕುಣಿತ ಪಲ್ಲಕ್ಕಿ ಉತ್ಸವ ಹೀಗೆ ಕ್ರಮವಾಗಿ ಜರುಗುತ್ತವೆ.

ಒಟ್ಟಿನಲ್ಲಿ ಈ ಪರಿಸರದ ಜಾತ್ರೆ-ಉತ್ಸವಗಳು ಪ್ರಾದೇಶಿಕ ವೈವಿಧ್ಯತೆಯಿಂದ ಕೂಡಿದ್ದರೂ ಮುಖ್ಯವಾಗಿ ಜನಸಮೂಹದ ಕಲ್ಯಾಣಕ್ಕಾಗಿ ಮತ್ತು ಸಾಂಸ್ಕೃತಿಕ, ವಾಣಿಜ್ಯ ವಹಿವಾಟುಗಳ ಕೊಂಡು-ಕೊಳ್ಳುವಿಕೆಯಲ್ಲಿ, ಸಾರ್ವಜನಿಕ ಸಂಭ್ರಮದಲ್ಲಿ, ಸೇರುವ ವೇದಿಕೆಗಳಾಗಿವೆ. ಯಾವುದೇ ಮತ ಧರ್ಮದ ಜಾತ್ರೆಯಿರಲಿ ಎಲ್ಲಾ ಜಾತಿ-ಜನಾಂಗದವರು ಸೇರಿ ಜಾತ್ರೆ ನೆರವೇರಿಸುತ್ತಾರೆ. ಇವು ಐಕ್ಯತೆಯ ಭಾವನೆಯನ್ನು ಪುಷ್ಟೀಕರಿಸಿ ಬೆಳೆಸುವ ಸಾಧನಗಳಾಗಿವೆ. ಜಾತ್ರೆ - ಉತ್ಸವಗಳು ಜನಪದರಿಗೆಲ್ಲಾ ಸಮಷ್ಟಿಯ ಸಂಪತ್ತಾಗಿ, ಪುಣ್ಯ ಪ್ರಸಂಗದ ಪರ್ವ ಕಾಲವಾಗಿವೆ. ಧಾರ್ಮಿಕ ಹಿನ್ನೆಲೆಯಲ್ಲಿ ಬೆಳೆದುಬಂದ ಯಾವುದೇ ಜಾತ್ರೆ-ಉತ್ಸವಗಳು ಹೆಣ್ಣು-ಗಂಡು, ಬಡವ-ಬಲ್ಲಿದ, ಊರು-ಕೇರಿ, ಜಾತಿ, ಭೇದ-ಭಾವವಿಲ್ಲದೇ ಜನರು ನೆರೆಯುವುದರಿಂದ ಜಾತ್ರೆಗಳು ಸಾಮಾಜಿಕ ಭಾವೈಕ್ಯತೆಯ ಸಂಕೇತಗಳಾಗಿ ಪ್ರತಿಬಿಂಬಿಸುತ್ತಲಿವೆ.

ಅಡಿಟಿಪ್ಪಣಿಗಳು

೧. ನರಸಿಂಹಮೂರ್ತಿ ಎಚ್.ವಿ., ೨೦೦೨, **ನಮ್ಮ ಹಬ್ಬಗಳು**, ಪು. ೩.

೨. ನಾಯಕ ಹಾ.ಮಾ., ೨೦೦೩, **ಜಾನಪದ ಸಂಭ್ರಮ**, ಪು. ೪.

೩. ಕ್ಯಾತನಹಳ್ಳಿ ರಾಮಣ್ಣ(ಸಂ), ೧೯೭೬, **ಬೀದರ್ ಜಿಲ್ಲೆಯ ಜಾನಪದ ಕಥೆಗಳು**, ಪ್ರಸ್ತಾವನೆ, ಪು. ೪.

೪. ಲಕ್ಷ್ಮಣ್ ತೆಲಗಾವಿ(ಸಂ), **ಸ್ಥಳೀಯ ಚರಿತ್ರೆ ಪೂರ್ವೋಕ್ತ**, ಪು. ೨೭.

೫. **ಕನ್ನಡ ವಿಷಯ ವಿಶ್ವಕೋಶ**, ೧೯೭೦, ಸಂಪುಟ-೩, ಪು. ೨೫೮.

೬. ಸುಬ್ಬಣ್ಣ ರೈ, ೧೯೯೪, **ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು,** ಪು. ೨೦೧.

೭. ತಿಪ್ಪೇಸ್ವಾಮಿ ಎಸ್., ೨೦೦೪, **ರಕ್ಷಣಾ ವಾಸ್ತುಶಿಲ್ಪ - ಚಿತ್ರದುರ್ಗ ಜಿಲ್ಲೆ (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ),** ಪು. ೬೭.

೮. ಬಸವರಾಜಪ್ಪ ಜೆ.ಎನ್., ೨೦೦೩, **ದೊಡ್ಡೇರಿ ಇತಿಹಾಸ ದರ್ಶನ,** ಪು. ೪೪.

೯. ಭರಂಪುರ ಕಣುಮಪ್ಪ, ೨೦೧೧, **ಬೇಚಿರಾಕ್ ಗ್ರಾಮ ಕುಂಬಾರಗಟ್ಟೆ ಸಂಸ್ಕೃತಿ,** ಪು. ೭.

೧೦. ಅದೇ, ಪು. ೩.

೧೧. ಅದೇ, ಪು. ೧೨೯.

೧೨. ಸಿದ್ಧಲಿಂಗಪ್ಪ ಲೇ. ಜೀನಹಳ್ಳಿ, **ಮಲೆನಾಡು ಜಾನಪದ,** ಪು. ೧೫೮.

೧೩. ನಾಯಕ ಹಾ.ಮಾ., **ಜಾನಪದ ಸ್ವರೂಪ,** ಪು. ೫೫.

೧೪. ವಸಂತಕುಮಾರ ಎಂ.ಸಿ., ರಾ.ಗೌ., **ಜಾನಪದ ನಂಬಿಕೆಗಳು, ಪ್ರಸ್ತಾವನೆ,** ಪು. ೮.

೧೫. ಸಿದ್ಧಲಿಂಗಯ್ಯ, **ಗ್ರಾಮದೇವತೆಗಳು,** ಪು. ೭೩.

೧೬. ಧ್ರುವರಾಜ ನಾ. ಗದಗಕರ, ೧೯೯೯, **ದೇಗುಲ ರಥಶಿಲ್ಪ,** ಪು. ೬೦..

೧೭ ಅದೇ. ಪುಟ - ೭೦.

೧೮. ಸಿದ್ಧಲಿಂಗಪ್ಪ ಎಚ್.ಎಸ್., **ದೇವಿ ಆರಾಧನೆಗೆ ಸಂಬಂಧಿಸಿದ ಕೆಲವು ಆಚರಣೆಗಳು,** ಪು. ೪೨-೪೩.

೧೯. ಚಿಕ್ಕಣ್ಣ ಯಣ್ಣೆಕಟ್ಟೆ, ೨೦೦೩, **ತುಮಕೂರು ಜಿಲ್ಲೆಯ ಜಾತ್ರೆಗಳು,** ಪು. ೧೦೩.

೨೦. ಅದೇ. ಪು. ೧೦೫.

೨೧. ಅದೇ. ಪು. ೧೦೯.

೨೨. ಹಿರೇಮಠ ಎಸ್.ಸಿ., ೨೦೦೦, **ಕೊಪ್ಪಳ ಜಿಲ್ಲೆಯ ಜಾತ್ರೆಗಳು,** ೧೯೮೮, ಪು. ೩೦.

೨೩. ಶಿವಕುಮಾರಸ್ವಾಮಿ ಸಿ.ಎಸ್., ೧೯೮೮, **ಉತ್ತರ ಕರ್ನಾಟಕದ ಜಾತ್ರೆಗಳು,** ಪು. ೩೦.

೨೪. ನಾಗರಾಜಯ್ಯ ಹಂಪ, ೨೦೦೨, **ಕರ್ನಾಟಕದ ಜಾತ್ರೆಗಳು** ೨೦೦೨, ಪು. ೨೬೧.

೨೫. ಹಿರೇಮಠ ಎಸ್.ಎಸ್., ೧೯೮೮, **ಕರ್ನಾಟಕದ ಜಾತ್ರೆಗಳು,** ಪು. ೩೦.

೨೬. **ಯರಬಳ್ಳಿ ಮಾರಮ್ಮನ ಜಾತ್ರಾ ಆಹ್ವಾನ ಪತ್ರಿಕೆ,**

೨೭. ಕೆ. ಕೃಷ್ಣಪ್ಪ., **ವದ್ದೀಕೆರೆ ಸಿದ್ಧೇಶ್ವರನ ಕಥಾಮೃತ.**

೨೮. ಕಂದಿಕೆರೆ ರಂಗನಾಥಸ್ವಾಮಿಯ ಕಲ್ಲುಗಾಲಿ ರಥೋತ್ಸವ ಆಹ್ವಾನ ಪತ್ರಿಕೆ.

□□□

ಅಧ್ಯಾಯ : ಆರು

ಸಮಾರೋಪ

ಅಧ್ಯಾಯ : ಆರು

ಸಮಾರೋಪ

ಪ್ರಸ್ತುತ ಅಧ್ಯಯನದಲ್ಲಿ ಐಮಂಗಲ ಪರಿಸರದ ಭೌಗೋಳಿಕತೆ, ಪ್ರಾಗಿತಿಹಾಸ, ಇತಿಹಾಸ, ಈ ಪ್ರದೇಶವನ್ನಾಳಿದ ಅರಸು ಮನೆತನಗಳ ಕಾಲದಲ್ಲಿ ಬೆಳೆದುಬಂದ ದೇವಾಲಯ, ಮೂರ್ತಿಶಿಲ್ಪ, ಕೋಟೆ, ಕೆರೆ, ಬಾವಿ, ವೀರಮಾಸ್ತಿಗಲ್ಲುಗಳು - ಇವೇ ಮುಂತಾದವುಗಳನ್ನು ಅಭ್ಯಸಿಸುವುದು ಮುಖ್ಯವಾಗಿದ್ದರೂ, ಅಂದಿನ ಜನರು ಅಳವಡಿಸಿಕೊಂಡಿದ್ದ ಸಂಸ್ಕೃತಿಯನ್ನು ಅರಿಯುವುದೂ ಅಧ್ಯಯನದ ಉದ್ದೇಶವಾಗಿದೆ.

ಭೌಗೋಳಿಕವಾಗಿ ಸಮೃದ್ಧಿಯನ್ನು ಪಡೆದಿರುವ ಇಲ್ಲಿಯ ಬೆಟ್ಟ, ಗುಡ್ಡ, ಕಾಡು, ಅದಿರು, ನೀರು ಮೊದಲಾದ ನೈಸರ್ಗಿಕ ಸಂಪತ್ತು ಮಾನವನು ತೀಕ್ಷ್ಣವಾಗಿ ನಾಗರಿಕತೆಯತ್ತ ದಾಪುಗಾಲನ್ನಿಡಲು ಕಾರಣವಾಯಿತು. ಪ್ರಾಗಿತಿಹಾಸಕ್ಕೆ ಸಂಬಂಧಿಸಿದಂತೆ ಐಮಂಗಲ ಎಂದಾಕ್ಷಣ ಮರಡಿಹಳ್ಳಿ ಬಳಿಯ ಗುಡ್ಡ ನೆನಪಾಗುತ್ತದೆ. ಇಲ್ಲಿ ಸಿಗುವ ದಿಂಬಿನಾಕಾರ ಶಿಲಾ ಪ್ರವಾಹದ ರಚನೆ (ಪಿಲ್ಲೊಲಾವಾ) ಸುಮಾರು ೨೭೦ ಕೋಟಿ ವರ್ಷಗಳ ಹಿಂದಿನದೆಂದು ಭಾರತ ಮತ್ತು ಜಪಾನಿನ ಭೂಗರ್ಭಶಾಸ್ತ್ರಜ್ಞರು ಅಭಿಪ್ರಾಯಪಟ್ಟಿರುವುದು ಗಮನಾರ್ಹ. ಪ್ರಾಗಿತಿಹಾಸ ಕಾಲದಿಂದ ಬೃಹತ್ ಶಿಲಾಯುಗದವರೆಗಿನ ಅವಶೇಷಗಳು ಐಮಂಗಲ, ಮರಡಿಹಳ್ಳಿ, ಹರ್ತಿಕೋಟೆ, ಕಂದಿಕೆರೆಗಳಲ್ಲಿ ದೊರೆತಿವೆ. ಮುಖ್ಯವಾಗಿ ಬೃಹತ್ ಶಿಲಾಸಂಸ್ಕೃತಿ ಹಂತದಲ್ಲಿ ಸತ್ತವರಿಗಾಗಿ ವಿಶಿಷ್ಟ ಬಗೆಯ ಕಲ್ಲು ವೃತ್ತ ಮಾದರಿಯ ಗೋರಿಗಳ ನಿರ್ಮಾಣದಲ್ಲಿ ಬಳಸಿದ ತಂತ್ರ ಮತ್ತು ಶವಸಂಸ್ಕಾರ ಪದ್ಧತಿಗಳನ್ನು ಗಮನಿಸಿದರೆ, ಅವರಲ್ಲಿ ವಿಶಿಷ್ಟ ಬಗೆಯ ನಂಬಿಕೆಗಳು ಆಚರಣೆಯಲ್ಲಿದ್ದುದನ್ನು ಗಮನಿಸಬಹುದು.

ಇಲ್ಲಿನ ರಾಜಕೀಯ ಇತಿಹಾಸ ಮೌರ್ಯರಿಂದ ಪ್ರಾರಂಭವಾಗುತ್ತದೆ. ಮೌರ್ಯರು ಈ ಪ್ರದೇಶದಲ್ಲಿ ನೇರವಾಗಿ ಆಳ್ವಿಕೆ ನಡೆಸದಿದ್ದರೂ ಈ ಪರಿಸರದ ಸಮೀಪದಲ್ಲಿರುವ ಬ್ರಹ್ಮಗಿರಿ, ಸಿದ್ಧಾಪುರ ಮತ್ತು ಜಟಂಗಿರಾಮೇಶ್ವರದಲ್ಲಿ ದೊರಕಿರುವ ಶಾಸನಗಳಿಂದ ದೃಢವಾಗುತ್ತದೆ. ಇವರ ನಂತರ ಶಾತವಾಹನರಿಂದ ಹಿಡಿದು ಪಾಳೆಯಗಾರರ ಕಾಲದವರೆಗೆ ಅರಸುಮನೆತನಗಳು ಕ್ರಮವಾಗಿ ಆಡಳಿತ ನಿರ್ವಹಿಸಿದವು. ಅರಸರಿಗೆ ನಿಷ್ಠರಾಗಿ ಸಾಮಂತರು, ಮಹಾಮಂಡಲೇಶ್ವರರು ಆಡಳಿತ ನಡೆಸುತ್ತಿದ್ದುದು ಈ ಪ್ರದೇಶದ ಶಾಸನ ಮತ್ತು ಸ್ಮಾರಕಗಳಿಂದ ವ್ಯಕ್ತವಾಗುತ್ತದೆ.

ಇಲ್ಲಿಯ ಪ್ರತಿಯೊಂದು ಗ್ರಾಮದ ಸ್ಥಳನಾಮ ಮತ್ತು ಸ್ಥಳಪುರಾಣಗಳು ಐತಿಹಾಸಿಕವಾಗಿ ಮಹತ್ವವನ್ನು ಪಡೆದಿವೆ. ಗ್ರಾಮಗಳು ಪ್ರಾಚೀನ ಕಾಲದಲ್ಲಿ ಯಾವ ಹೆಸರುಗಳನ್ನು ಪಡೆದವು, ಏಕೆ ಪಡೆದವು, ಇಂದಿನ ಹೆಸರೇನು ಮುಂತಾದ ವಿಷಯಗಳನ್ನು ಶಾಸನಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದು, ಜೊತೆಗೆ ಸ್ಥಳಪುರಾಣದಲ್ಲಿ ಈ ಹಿಂದೆ ನಡೆದ ಘಟನೆಗಳು, ದೇವರ ಅವತಾರ ಕಥೆಗಳು, ಸಂತರ ಜೀವನ ವೃತ್ತಾಂತ, ಅರಸರ ಜೀವನ, ವಂಶಾವಳಿಗಳನ್ನು, ಐತಿಹ್ಯಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಇವೆಲ್ಲವೂ ಇತಿಹಾಸ ರಚನೆಯಲ್ಲಿ ಸಹಾಯಕವಾಗಿವೆ. ಉತ್ತಮ ಕಲೆ ಮತ್ತು ವಾಸ್ತುಶಿಲ್ಪವನ್ನು ಹೊಂದಿರುವ ಶೈವ, ವೈಷ್ಣವ ಮತ್ತು ಶಾಕ್ತ ದೇವಾಲಯಗಳು ಇಲ್ಲಿವೆ. ಈ ಪರಿಸರದಲ್ಲಿ ಆಳ್ವಿಕೆ ಮಾಡಿದ ನೊಳಂಬರು ಶೈವ ಧರ್ಮೀಯರಾದ್ದರಿಂದ ಶೈವ ಧರ್ಮವನ್ನು ಪ್ರೋತ್ಸಾಹಿಸಿದರು. ನಂತರ ಕಾಲದಲ್ಲಿ ಪಾಳೆಯಗಾರರು ವೈಷ್ಣವ ಧರ್ಮವನ್ನು ಪಾಲಿಸಿದರು. ಈ ಪರಿಸರದಲ್ಲಿ ಶೈವ ದೇವಾಲಯಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಅವುಗಳಲ್ಲಿ ಮರಡಿದೇವಿಗೆರೆಯ ಕೋಡಿ ಮಲ್ಲೇಶ್ವರ ದೇವಾಲಯ, ಮರಡಿಹಳ್ಳಿಯ ಆಂಜನೇಯ ದೇವಾಲಯ ಪ್ರಾಚೀನವಾದದ್ದು ಎಂಬುದನ್ನು ವಾಸ್ತುಶೈಲಿಯ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ. ಕೆಲವೇ ದೇವಾಲಯಗಳು ಕಲಾಶ್ರೇಷ್ಠತೆಯನ್ನು ಪಡೆದಿದ್ದು, ಬಹುತೇಕ ದೇವಾಲಯಗಳು ಕಣಶಿಲೆಯಲ್ಲಿ ರಚನೆಗೊಂಡು ತುಂಬಾ ಸರಳವಾಗಿವೆ. ಬಹುಸಂಖ್ಯೆಯ ದೇವಾಲಯಗಳು ಪೂಜೆ ಪುನಸ್ಕಾರ, ಜೀರ್ಣೋದ್ಧಾರಗಳಿಂದ ವಂಚಿತಗೊಂಡು ಅವಸಾನದ ಸ್ಥಿತಿಯಲ್ಲಿದ್ದು ಕೇವಲ ಗತವೈಭವದ ಸಂಕೇತವಾಗಿ ನಿಂತಿವೆ.

ದೇವಾಲಯಗಳಿಗೆ ಹೊಂದಿಕೊಂಡಂತೆ ಶೈವ, ವೈಷ್ಣವ, ಶಾಕ್ತ ಧರ್ಮಕ್ಕೆ ಸಂಬಂಧಿಸಿದ ಮೂರ್ತಿಶಿಲ್ಪಗಳಿವೆ. ಶೈವ ಸಂಪ್ರದಾಯಕ್ಕೆ ಸಂಬಂಧಿಸಿದ ಶಿವನ ಸಂಕೇತವಾಗಿ ವಿವಿಧ ಬಗೆಯ ಬ್ರಹ್ಮಸೂತ್ರಗಳನ್ನೊಳಗೊಂಡ ಶಿವಲಿಂಗಗಳು ಮತ್ತು ನಂದಿ, ಗಣೇಶ, ಈಶ್ವರ, ಕಲ್ಲೇಶ್ವರ ಕಾಲಭೈರವ, ವೀರಭದ್ರ ಶಿಲ್ಪಗಳು, ವೈಷ್ಣವ ಧರ್ಮದ ವಿಷ್ಣುವಿನ ಚತುರ್ವಿಂಶತಿ ಶಿಲ್ಪಗಳಲ್ಲಿ ಹರ್ತಿಕೋಟೆಯ ಆಂಜನೇಯ ಈ ಪರಿಸರದ ಬೃಹತ್ ಗಾತ್ರದ ಶಿಲ್ಪ. ಅದೇ ರೀತಿ ಚೆನ್ನಕೇಶವ, ರಂಗನಾಥ, ಗರುಡ, ಸೂರ್ಯ, ವೆಂಕಟರಮಣ ಶಿಲ್ಪಗಳು ಶಾಕ್ತ ಸಂಪ್ರದಾಯದ ಶಿಲ್ಪಗಳಲ್ಲಿ ಮಾರಮ್ಮ, ದೇವಿಗೊಲ್ಲಲಮ್ಮ, ಲಕ್ಕಮ್ಮ, ಸಪ್ತಮಾತೃಕೆ ಶಿಲ್ಪಗಳು ಕಂಡುಬಂದಿವೆ. ಮರಡಿಹಳ್ಳಿಯ ಆಂಜನೇಯ ದೇವಾಲಯದಲ್ಲಿರುವ ಮಹಿಷಾಮರ್ದಿನಿ, ಸಪ್ತಮಾತೃಕೆಯರ ಶಿಲ್ಪಗಳು ಪ್ರಾಚೀನವಾದವು ಎಂಬುದನ್ನು ಶಿಲ್ಪದ ವೈಶಿಷ್ಟ್ಯತೆಯಿಂದ ಗುರುತಿಸಲಾಗಿದೆ. ಇವುಗಳಿಂದ ಈ ಪ್ರದೇಶದ ಜನರು ತಮ್ಮದೇ ಆದ ದೈವತ್ವವನ್ನು ಸ್ವೀಕರಿಸಿ ಪೂಜಿಸುತ್ತಿದ್ದರೆಂಬುದಂತೂ ಸ್ಪಷ್ಟ.

ಲೌಕಿಕ ವಾಸ್ತುಶಿಲ್ಪದಲ್ಲಿ ಕೋಟೆ, ಕೆರೆ, ಬಾವಿ ಅವಶೇಷಗಳು ಪ್ರಮುಖವಾಗಿ ಗೋಚರಿಸಿವೆ. ಐಮಂಗಲ ಕೋಟೆಯು ಗರಡಿ ಮನೆಯಂತ್ತಿದ್ದು, ಸ್ಥಳದುರ್ಗಗಳಲ್ಲಿ ಒಂದಾಗಿದೆ. ಹರ್ತಿಕೋಟೆ ಗ್ರಾಮದಲ್ಲಿ ಪಾಳೇಗಾರ ಕಾಲದ ಕೋಟೆಯ ಅವಶೇಷಗಳು ಕಂಡುಬಂದಿವೆ. ಈ ಪ್ರದೇಶವು ರಾಜಕೀಯ ದೃಷ್ಟಿಯಿಂದ ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತು. ಇದು ಪಾಳೆಯಗಾರರು

ಮತ್ತು ಇನ್ನಿತರ ಅರಸುಮನೆತನಗಳ ಆಳ್ವಿಕೆಯ ಕೇಂದ್ರಸ್ಥಾನವಾಗಿತ್ತೆಂದು ದೃಢವಾಗುತ್ತದೆ. ಹರ್ತಿಕೋಟೆ, ವದ್ದೀಕೆರೆ, ಕಂದಿಕೆರೆ ಗ್ರಾಮಗಳಲ್ಲಿನ ಪ್ರಾಚೀನ ಕಾಲದ ಬಾವಿಗಳು ಧಾರ್ಮಿಕ, ಸಾಂಸ್ಕೃತಿಕ ಅಂಶಗಳನ್ನು ಅರುಹುತ್ತವೆ. ಅನೇಕ ಅಂಶಗಳಿಂದ ಪ್ರಾಮುಖ್ಯತೆಯನ್ನು ಪಡೆದಿದ್ದ ಈ ಬಾವಿಗಳ ನೀರನ್ನು ಉಪಯೋಗಿಸದಿದ್ದರಿಂದ ನೀರು ಜಡತ್ವವಾಗಿವೆ. ಬಾವಿ ಗೋಡೆಗಳ ಮೇಲಿರುವ ಉಬ್ಬುಶಿಲ್ಪಗಳು ಸಾಂಸ್ಕೃತಿಕ ಸಂಗತಿಗಳನ್ನು ಸೂಚಿಸುತ್ತವೆ.

ನೊಳಂಬಪಲ್ಲವ, ವಿಜಯನಗರ, ಪಾಳೆಯಗಾರರ ಕಾಲದ ಶಾಸನಗಳು ಲಭ್ಯವಾಗಿವೆ. ಇವೆಲ್ಲವು ದಾನಶಾಸನಗಳಾಗಿವೆ. ಸ್ಮಾರಕ ಶಾಸನಗಳಲ್ಲಿ ವೀರಗಲ್ಲುಗಳೇ ಮೊದಲ ಸ್ಥಾನದಲ್ಲಿ ನಿಲ್ಲುತ್ತವೆ. ಈ ಪರಿಸರದಲ್ಲಿ ೬೦ಕ್ಕೂ ಹೆಚ್ಚು ವೀರಗಲ್ಲುಗಳು ದೊರೆತಿದ್ದು, ಅವು ವಿವಿಧ ಹಂತಗಳನ್ನೊಂದಿವೆ. ತಂವದಿಯಲ್ಲಿ ಅಗಲವಾದ (ಆಯತಾಕಾರ) ವೀರ ಮಾಸ್ತಿಗಲ್ಲು ಇಲ್ಲಿನ ಕಲಾ ವೈಶಿಷ್ಟ್ಯತೆಯನ್ನು ಸಾರುತ್ತದೆ. ಕಲ್ಯಾಣ ಚಾಲುಕ್ಯರ ವೀರಗಲ್ಲುಗಳಲ್ಲಿ ಹೋರಾಟದ ಚಿತ್ರಣವನ್ನು, ಗೋವುಗಳನ್ನು ಚಿತ್ರಿಸಿದ್ದರೆ, ವಿಜಯನಗರ ವೀರಗಲ್ಲುಗಳಲ್ಲಿ ಕುದುರೆ ಮೇಲೆ ಕುಳಿತ ವೀರನ ಹಾಗೂ ಧ್ವಜ ಹಿಡಿದಿರುವ ಸೈನಿಕನ ಚಿತ್ರಣವನ್ನು ಚಿತ್ರಿಸಲಾಗಿದೆ. ಧ್ವಜಗಳು ಆ ಪ್ರದೇಶದ ಮೇಲಿನ ಅಧಿಕಾರ ಮತ್ತು ಪ್ರತಿಷ್ಠೆಯನ್ನು ಸೂಚಿಸುತ್ತವೆ. ಐಮಂಗಲ ಮತ್ತು ಹರ್ತಿಕೋಟೆಯಲ್ಲಿ ವಿಜಯನಗರ ಕಾಲದ ವೀರಗಲ್ಲುಗಳು ಗೋಚರಿಸಿದ್ದು ಅದೊಂದು ವೀರಗಲ್ಲುಗಳ ಕೇಂದ್ರಸ್ಥಾನವೆನ್ನಬಹುದು.

ನಂಬಿಕೆ ಮತ್ತು ಆಚರಣೆಗಳು ಮಾನವ ಸಂಸ್ಕೃತಿಯ ಭಾಗವಾಗಿವೆ. ಮನುಷ್ಯನ ನಡೆ-ನುಡಿ ಆಚರಣೆಗಳು ಕಾಲದಿಂದ ಕಾಲಕ್ಕೆ ಮೌಖಿಕ ಪರಂಪರೆಯಾಗಿ ಬೆಳೆದುಬಂದಿವೆ. ಹಬ್ಬ-ಆಚರಣೆಗೆ ಸಂಬಂಧಿಸಿದ ಐತಿಹ್ಯಗಳು ಈ ಪರಿಸರದಲ್ಲಿ ರಚನೆಗೊಂಡು ಜನರ ಸ್ಮೃತಿಪಟಲದಲ್ಲಿ ಉಳಿದುಕೊಂಡಿವೆ. ಪಾಪ-ಪುಣ್ಯದಲ್ಲಿನ ನಂಬಿಕೆ, ದಾನ-ದತ್ತಿಗಳ ಬೆಳವಣಿಗೆಗೆ ಕಾರಣವಾಗಿವೆ. ಈ ಪರಿಸರದಲ್ಲಿ ಮತಧರ್ಮಗಳಿಗೆ ಸಂಬಂಧಿಸಿದ ಅನೇಕ ಧಾರ್ಮಿಕ ಆಚರಣೆ, ಉತ್ಸವಗಳು ಪ್ರಾಚೀನ ಕಾಲದಿಂದಲೂ ಉಳಿದುಕೊಂಡು ಬಂದಿವೆ. ಜನಪದೀಯ ಹಿನ್ನೆಲೆಯಲ್ಲಿ ಇಲ್ಲಿನ ಐತಿಹ್ಯ, ನಂಬಿಕೆ, ಆಚರಣೆ, ಜಾತ್ರಾ-ಉತ್ಸವಗಳನ್ನು ಸಂಗ್ರಹಿಸಿ ಅಧ್ಯಯನ ಕೈಗೊಳ್ಳಲಾಯಿತು.

"ಐಮಂಗಲ ಹೋಬಳಿ ಪರಿಸರ : ಸಾಂಸ್ಕೃತಿಕ ಅಧ್ಯಯನ"ವನ್ನು ಪುನರ್‌ರಚಿಸುವಲ್ಲಿ ಪ್ರಾಗಿತಿಹಾಸ ಕಾಲದ ಅವಶೇಷ, ಸ್ಮಾರಕ, ಶಾಸನ, ಸಾಹಿತ್ಯ, ಜಾನಪದ ಮತ್ತು ಮೌಖಿಕ ಆಕರಗಳು ಪ್ರಾದೇಶಿಕವಾಗಿ ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸದ ವಿವಿಧ ಮುಖಗಳ ಅಧ್ಯಯನಕ್ಕೆ ಅಪಾರವಾದ ಕೊಡುಗೆಗಳನ್ನು ಸಲ್ಲಿಸಿರುವುದು ದೃಢವಾಗುತ್ತದೆ. ಇಷ್ಟೆಲ್ಲ ಮಹತ್ವದ ವಿಷಯಗಳನ್ನು ಹೊರಗೆಡುಹುವ ಈ ಅವಶೇಷಗಳು ಇಂದು ವಿನಾಶದ ಅಂಚಿನಲ್ಲಿವೆ. ಕೆಲವು ನೈಸರ್ಗಿಕ ವಿಕೋಪಗಳಿಗೆ ತುತ್ತಾಗಿ ಕಾಲಗರ್ಭದಲ್ಲಿ ಲೀನವಾಗುತ್ತಿವೆ. ಇನ್ನೂ ಕೆಲವು ವಿವಿಧ ಸ್ಥಳೀಯ ಮೂಢನಂಬಿಕೆಗಳಿಗೆ ಆಹುತಿಯಾಗುತ್ತಿವೆ. ಈ ನಿಟ್ಟಿನಲ್ಲಿ ಸಂಬಂಧಿಸಿದ ಇಲಾಖೆಗಳು, ಸಂಘ-ಸಂಸ್ಥೆಗಳು, ಜನರು ಇವುಗಳ ಸಂರಕ್ಷಣೆಯಡೆಗೆ ಗಮನಹರಿಸುವುದು ಅತ್ಯವಶ್ಯಕ.

□□□

ಅನುಬಂಧಗಳು

೧. ಕೋಷ್ಟಕಗಳು

೨. ಸಂಕ್ಷಿಪ್ತ ರೂಪಗಳು

೩. ಗ್ರಂಥಸೂಚಿ

೪. ತಲವಿನ್ಯಾಸ

೫. ಛಾಯಾಚಿತ್ರಗಳು

೧. ಕೋಷ್ಟಕಗಳು

ಕ್ರಮ ಸಂಖ್ಯೆ	ದೇವಾಲಯದ ಹೆಸರು	ಸ್ಥಳ	ತಲವಿನ್ಯಾಸ	ವಾಸ್ತುಶೈಲಿ	ಕಾಲ	ಪಂಥ
೧.	ಆಂಜನೇಯ	ಹರ್ತಿಕೋಟೆ	ಗರ್ಭಗೃಹ, ಅಂತರಾಳ, ಸಭಾಮಂಟಪ, ಪ್ರಕಾರ, ಉಯ್ಯಾಲೆ ಕಂಬ, ದೀಪ್ತಸಂಭ, ಶಾಸನ	ವಿಜಯನಗರೋತ್ತರ	ಪಾಳೇಯಗಾರ	ವೈಷ್ಣವ
೨.	ಆಂಜನೇಯ	ಮರಡಿಹಳ್ಳಿ	ಗರ್ಭಗೃಹ, ಸಭಾಮಂಟಪ, ದೀಪಸ್ತಂಭ, ವೀರಗಲ್ಲು, ಪ್ರಕಾರ	ದ್ರಾವಿಡ	ರಾಷ್ಟ್ರಕೂಟರು	ವೈಷ್ಣವ
೩.	ಈಶ್ವರ	ಎಂ.ಡಿ. ಕೋಟೆ	ಗರ್ಭಗೃಹ, ಅಂತರಾಳ, ಸಭಾಮಂಟಪ ಪ್ರಕಾರ	ವಿಜಯನಗರೋತ್ತರ	ಪಾಳೇಯಗಾರ	ಶೈವ
೪.	ಉರುಸಲಮ್ಮ	ಹರ್ತಿಕೋಟೆ	ಗರ್ಭಗೃಹ, ಅಂತರಾಳ, ಸಭಾಮಂಟಪ	ವಿಜಯನಗರೋತ್ತರ	ಪಾಳೇಯಗಾರ	ಶಾಕ್ತ
೫.	ಕಲ್ಲೇಶ್ವರ	ಹರ್ತಿಕೋಟೆ	ಗರ್ಭಗೃಹ	ದ್ರಾವಿಡ	ರಾಷ್ಟ್ರಕೂಟರು	ಶೈವ
೬.	ಕಲ್ಕುಂಟೇಶ್ವರಿ	ಐಮಂಗಲ	ಗರ್ಭಗೃಹ, ಸಭಾಮಂಟಪ, ದೀಪಸ್ತಂಭ, ಶಾಸನ, ವೀರಗಲ್ಲು, ಪ್ರಕಾರ	ವಿಜಯನಗರೋತ್ತರ	ಪಾಳೇಯಗಾರ	ಶೈವ

೭.	ಕಾಲಭೈರವ/ಸಿದ್ಧೇಶ್ವರ	ವದ್ದೀಕೆರೆ	ಎರಡು ಗರ್ಭಗೃಹ, ಒಂದು ಅಂತರಾಳ, ನವರಂಗ, ವಸತಿ ನಿಲಯ, ಸ್ಥಾಯಿಸಮಿತಿ ಕೊಠಡಿ, ದೀಪಸ್ತಂಭ, ಪ್ರಕಾರ ವೀರಗಲ್ಲು, ಮಜ್ಜನಬಾವಿ	ವಿಜಯನಗರೋತ್ತರ	ಪಾಳೇಯಗಾರ	ಶೈವ
೮.	ಕೋಡಿಮಲ್ಲೇಶ್ವರ	ಮರಡಿದೇವಿಗೆರೆ	ಗರ್ಭಗೃಹ, ನವರಂಗ, ದೀಪಸ್ತಂಭ, ಪ್ರಕಾರ, ವೀರಗಲ್ಲು	ದ್ರಾವಿಡ	ರಾಷ್ಟ್ರಕೂಟ	ಶೈವ
೯.	ಗಣೇಶ	ಮೇರ್ಟಿಕುರ್ಕೆ	ಗರ್ಭಗೃಹ, ಸಭಾಮಂಟಪ	ವಿಜಯನಗರೋತ್ತರ	ಪಾಳೇಯಗಾರ	ಶೈವ
೧೦.	ಬಸವಣ್ಣ	ಐಮಂಗಲ	ಗರ್ಭಗೃಹ, ಸಭಾಮಂಟಪ	ವಿಜಯನಗರೋತ್ತರ	ಪಾಳೇಯಗಾರ	ಶೈವ
೧೧.	ಭೈರವೇಶ್ವರ	ಹುಲಿತೊಟ್ಲು	ಗರ್ಭಗೃಹ, ಸಭಾಮಂಟಪ, ದೀಪಸ್ತಂಭ	ವಿಜಯನಗರೋತ್ತರ	ಪಾಳೇಯಗಾರ	ಶೈವ
೧೨.	ಮಹಾಲಿಂಗೇಶ್ವರ	ಮೇರ್ಟಿಕುರ್ಕೆ	ಗರ್ಭಗೃಹ, ಅಂತರಾಳ, ಸಭಾಮಂಟಪ, ದೀಪಸ್ತಂಭ	ವಿಜಯನಗರೋತ್ತರ	ಪಾಳೇಯಗಾರ	ಶೈವ
೧೩.	ಮಾರಮ್ಮ	ಯರಬಳ್ಳಿ	ಗರ್ಭಗೃಹ, ಸಭಾಮಂಟಪ, ದೀಪಸ್ತಂಭ, ನಾಗಶಿಲ್ಪಗಳು, ಪ್ರಕಾರ	ವಿಜಯನಗರೋತ್ತರ	ಪಾಳೇಯಗಾರ	ಶಾಕ್ತ
೧೪.	ರಂಗನಾಥ	ಯರಬಳ್ಳಿ	ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪ, ದೀಪಸ್ತಂಭ, ಗರಡುಸ್ತಂಭ	ವಿಜಯನಗರೋತ್ತರ	ಪಾಳೇಯಗಾರ	ವೈಷ್ಣವ

೧೫.	ರಂಗನಾಥ	ಮಲ್ಲಪ್ಪನಹಳ್ಳಿ	ಗರ್ಭಗೃಹ, ಅಂತರಾಳ, ಸಭಾಮಂಟಪ, ದೀಪಸ್ತಂಭ, ಆಂಜನೇಯನ ಚಿಕ್ಕ ಗುಡಿ	ವಿಜಯನಗರೋತ್ತರ	ಪಾಳೇಯಗಾರ	ವೈಷ್ಣವ
೧೬.	ರಂಗನಾಥ	ಕಂದಿಕೆರೆ	ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪ, ಗರಡುಸ್ತಂಭ, ದೀಪಸ್ತಂಭ, ವೀರಗಲ್ಲು, ಪ್ರಕಾರ, ದ್ವಾರಮಂಟಪ, ಕಲ್ಲುಬಾವಿ	ವಿಜಯನಗರೋತ್ತರ	ಪಾಳೇಯಗಾರ	ವೈಷ್ಣವ
೧೭.	ಲಕ್ಕಮ್ಮ	ಪಾಲವ್ವನಹಳ್ಳಿ	ಗರ್ಭಗೃಹ, ಅಂತರಾಳ, ಸಭಾಮಂಟಪ, ದೀಪಸ್ತಂಭ, ನಾಗರಕಲ್ಲು	ವಿಜಯನಗರೋತ್ತರ	ಪಾಳೇಯಗಾರ	ಶಾಕ್ತ
೧೮.	ವೆಂಕಟರಮಣ	ಮರಡಿಹಳ್ಳಿ	ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪ, ದೀಪಸ್ತಂಭ, ಸತ್ಯನಾರಾಯಣಗುಡಿ, ಸೂರ್ಯನಾರಾಯಣಗುಡಿ, ನಾಗರಕಲ್ಲು, ಗರಡುಶಿಲ್ಪ, ದ್ವಾರಮಂಟಪ	ವಿಜಯನಗರೋತ್ತರ	ಪಾಳೇಯಗಾರ	ವೈಷ್ಣವ
೧೯.	ವೆಂಕಟರಮಣ	ಹರ್ತಿಕೋಟೆ	ಗರ್ಭಗೃಹ, ಅಂತರಾಳ	ವಿಜಯನಗರೋತ್ತರ	ಪಾಳೇಯಗಾರ	ವೈಷ್ಣವ

೨೦.	ವೀರಭದ್ರ	ಹರ್ತಿಕೋಟೆ	ಗರ್ಭಗೃಹ, ಅಂತರಾಳ, ಪ್ರಕಾರ, ಮಹಾದ್ವಾರ	ವಿಜಯನಗರೋತ್ತರ	ಪಾಳೇಯಗಾರ	ಶೈವ
೨೧.	ವೀರಭದ್ರೇಶ್ವರ	ಮೇಟಿಕುರ್ಕೆ	ಗರ್ಭಗೃಹ, ನವರಂಗ, ಮುಖಮಂಟಪ	ವಿಜಯನಗರೋತ್ತರ	ಪಾಳೇಯಗಾರ	ಶೈವ
೨೨.	ವೀರಭದ್ರ	ತವಂದಿ	ಗರ್ಭಗೃಹ, ತೆರೆದ ಸಭಾ ಮಂಟಪ	ವಿಜಯನಗರೋತ್ತರ	ಪಾಳೇಯಗಾರ	ಶೈವ
೨೩.	ವೀರಾಂಜನೇಯ	ಹೇಮದಳ	ಗರ್ಭಗೃಹ, ತೆರೆದ ಸಭಾ ಮಂಟಪ, ದೀಪಸ್ತಂಭ	ವಿಜಯನಗರೋತ್ತರ	ಪಾಳೇಯಗಾರ	ವೈಷ್ಣವ
೨೪.	ವೀರಾಂಜನೇಯ	ಗುಯಿಲಾಳು	ಗರ್ಭಗೃಹ, ತೆರೆದ ಸಭಾ ಮಂಟಪ, ದೀಪಸ್ತಂಭ, ಶಾಸನ, ಮಹಾಸತಿಕಲ್ಲು	ವಿಜಯನಗರೋತ್ತರ	ಪಾಳೇಯಗಾರ	ವೈಷ್ಣವ
೨೫.	ವೀರಾಂಜನೇಯ	ಗೊಲ್ಲಹಳ್ಳಿ	ಗರ್ಭಗೃಹ, ತೆರೆದ ಸಭಾ ಮಂಟಪ, ದೀಪಸ್ತಂಭ	ವಿಜಯನಗರೋತ್ತರ	ಪಾಳೇಯಗಾರ	ವೈಷ್ಣವ
೨೬.	ಶುಕ್ಲಾಂಭ	ಬುರುಜಿನರೊಪ್ಪ	ಗರ್ಭಗೃಹ, ಅಂತರಾಳ, ಸಭಾಮಂಟಪ, ದೀಪಸ್ತಂಭ	ವಿಜಯನಗರೋತ್ತರ	ಪಾಳೇಯಗಾರ	ಶಾಕ್ತ

೨. ಸಂಕ್ಷಿಪ್ತ ರೂಪಗಳು

೧. ಕ.ವಿ.ವಿ. - ಕನ್ನಡ ವಿಶ್ವವಿದ್ಯಾಲಯ

೨. ವಿ.ಅ. - ವಿಜಯನಗರ ಅಧ್ಯಯನ

೩. ಪ್ರಾ.ಸಂ.ನಿ. - ಪ್ರಾಚ್ಯವಸ್ತುಸಂಗ್ರಹಾಲಯಗಳ ನಿರ್ದೇಶನಾಲಯ

೪. ಕ.ಇ.ದ. - ಕರ್ನಾಟಕ ಇತಿಹಾಸ ದರ್ಶನ

೫. ಕ.ಸಾ.ಪ. - ಕನ್ನಡ ಸಾಹಿತ್ಯ ಪರಿಷತ್

೬. ಮೈ.ವಿ.ವಿ. - ಮೈಸೂರು ವಿಶ್ವವಿದ್ಯಾನಿಲಯ

೭. ಕ.ಲ.ಅ. - ಕರ್ನಾಟಕ ಲಲಿತಕಲಾ ಅಕಾಡೆಮಿ

೮. ಕ.ವಿ.ವಿ. - ಕರ್ನಾಟಕ ವಿಶ್ವವಿದ್ಯಾಲಯ

೯. ಕ.ಅ.ಸಂ. - ಕನ್ನಡ ಅಧ್ಯಯನ ಸಂಸ್ಥೆ

೧೦. ಬೆಂ.ವಿ.ವಿ. - ಬೆಂಗಳೂರು ವಿಶ್ವವಿದ್ಯಾಲಯ

೧೧. ಮಾ.ಭಾ. - ಮಾನವಿಕ ಭಾರತಿ

೧೧. ಇ.ದ. - ಇತಿಹಾಸ ದರ್ಶನ

೧೩. ವಾ.ಸಾ.ಸಂ. - ವಾಲ್ಮೀಕಿ ಸಾಹಿತ್ಯ ಸಂಪದ.

□□□

೩. ಗ್ರಂಥಸೂಚಿ

ಕನ್ನಡ

ಅಪರ್ಣಾ ಕೂ.ಸ., ೧೯೯೯. **ದೇವಾಲಯ ವಾಸ್ತುಶಿಲ್ಪ ಪರಿಚಯ,** ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅನಂತರಂಗಾಚಾರ್ ಎನ್., ೧೯೮೪, **ಭಾರತೀಯ ದೇವಾಲಯಗಳು ಮತ್ತು ಸಂಸ್ಕೃತಿ,** ಸ್ವಚ್ಛಂದಂ ಪ್ರಕಾಶನ, ಮೈಸೂರು.

ಕಲ್ಬುರ್ಗಿ ಎಂ.ಎಂ., ೧೯೯೪, **ಕರ್ನಾಟಕದ ಕೈಫಿಯತ್ತುಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕುಲಕರ್ಣಿ ಆರ್.ಎಚ್., ೧೯೯೭, **ಬನವಾಸಿ ಕದಂಬರ ಕಾಲದ ಶಿಲ್ಪಕಲೆ-ಕದಂಬ ಅಧ್ಯಯನ,** ಮೈಸೂರು.

ಕುಲಕರ್ಣಿ ಆರ್.ಎಚ್., ೨೦೦೧, **ವಿಜಯನಗರ ಕಾಲದಲ್ಲಿ ಗಾರೆಶಿಲ್ಪ-ಒಂದು ಅವಲೋಕನ, ವಿ.ಅ.ಸಂ.-೫,** ಕೃಷ್ಣಪ್ಪ ಎಂ.ವಿ. ಚನ್ನಬಸಪ್ಪ ಎಸ್. ಪಾಟೀಲ (ಸಂ), ಪ್ರಾ.ಸ.ನಿ. ಮೈಸೂರು.

ಕೃಷ್ಣ ಎಂ.ಎಚ್., ೧೯೫೩, **ಕರ್ನಾಟಕ ಪೂರ್ವಚರಿತ್ರೆ,** ಸಾಧನ ಮುದ್ರಣಾಲಯ, ಧಾರವಾಡ.

ಕೃಷ್ಣರಾವ್ ಎಂ.ವಿ., ಕೇಶವಭಟ್ಟ ಎಂ., ೧೯೭೯, **ಕರ್ನಾಟಕ ಇತಿಹಾಸ ದರ್ಶನ,** ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು.

ಗಂಡುಗಲಿ ಟಿ.ಎನ್., ೧೯೯೫, **ನೋಡಬನ್ನಿ ಚಿತ್ರದುರ್ಗ,** ಮದಕರಿ ಪ್ರಕಾಶನ, ·ಚಿತ್ರದುರ್ಗ.

ಗಿರಿಜ ಟಿ., ೧೯೮೬, **ಚಿತ್ರದುರ್ಗ ಜಿಲ್ಲಾ ದರ್ಶಿನಿ,** ರೇಖಾ ಪ್ರಕಾಶನ, ದಾವಣಗೆರೆ

ಗೋಪಾಲ್ ಬಾ.ರಾ. ೧೯೯೫, **ಕನ್ನಡ ಶಾಸನಗಳು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಗೋಪಾಲ್ ಬಾ.ರಾ., ೧೯೯೩, **ಕಲೆ ಮತ್ತು ವಾಸ್ತು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಗೋಪಾಲ್ ಆರ್., ೨೦೦೫, **ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,** ಪ್ರಾ.ಸ.ನಿ. ಹೊಸಪೇಟೆ.

ಚನ್ನಪ್ಪ ಎಸ್. ಪಾಟೀಲ್, ೧೯೯೯, **ಕರ್ನಾಟಕದ ಕೋಟೆಗಳು**, ಸಂಪುಟ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಿದಾನಂದಮೂರ್ತಿ ಎಂ., ೧೯೬೬, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಚಿದಾನಂದಮೂರ್ತಿ ಎಂ., ೧೯೯೮, **ಹೊಸತು ಹೊಸತು**(ಸಂಪ್ರಬಂಧ ಸಂಪುಟ), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ತಿಪ್ಪೇರುದ್ರಸ್ವಾಮಿ ಎಚ್., ೧೯೭೮, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಮೈಸೂರು.

ತಿಪ್ಪೇಸ್ವಾಮಿ ಪಿ.ಆರ್., ೧೯೯೪, **ಶಿಲ್ಪಕಲಾ ಪ್ರಪಂಚ**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

ದೇಸಾಯಿ ಪಿ.ಬಿ., ೧೯೭೧, **ಕನ್ನಡ ಶಾಸನಗಳು**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ದೇವರಕೊಂಡಾರೆಡ್ಡಿ, ೧೯೯೪, **ತಲಕಾಡಿನ ಗಂಗರ ದೇವಾಲಯಗಳು - ಒಂದು ಅಧ್ಯಯನ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಪಾಡಿಗಾರ ಶ್ರೀನಿವಾಸ ಎನ್.ವಿ., ೧೯೮೭, **ಪುರಾತತ್ವ ಪರಿಚಯ**, ರಾಮಾಶ್ರಯ ಪಬ್ಲಿಕೇಷನ್ಸ್, ಧಾರವಾಡ.

ಪರಮಶಿವಮೂರ್ತಿ ಡಿ.ವಿ., ೧೯೯೯, **ಕನ್ನಡ ಶಾಸನಶಿಲ್ಪ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪಾಟೀಲ ಚನ್ನಬಸಪ್ಪ, ೧೯೯೯, **ಕರ್ನಾಟಕದ ಕೋಟೆಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪುಟ್ಟಣ್ಣ ಎಂ.ಎಸ್., ೧೯೨೪, **ಚಿತ್ರದುರ್ಗ ಪಾಳೆಯಗಾರರು**, ದಿ ಪವರ್ ಪ್ರಿಟಿಂಗ್ ಪ್ರೇಸ್, ಬೆಂಗಳೂರು.

ಪ್ರಭಾಕರ್ ಎಂ.ಎನ್., ೧೯೯೯, **ದೇವಾಲಯಗಳ ವಾಸ್ತುಚಂದ್ರಿಕೆ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹದೇವ ಸಿ., ೨೦೦೦, **ವಿಜಯನಗರದ ಗಾರೆಶಿಲ್ಪ**, ಪುರಾತತ್ವ ವಿಭಾಗದ ಪ್ರಕಟಣೆ-೩, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮುಕುಂದರೆಡ್ಡಿ ಮಾ.ನಾ., **ಹಿರಿಯೂರು ತಾಲೂಕು ದರ್ಶನ**, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ರಂಗನಾಥಸ್ವಾಮಿ ಡಿ.ಟಿ., ೨೦೦೭, **ದೇವಾಲಯ ದರ್ಶಿನಿ ಹೊಳಲ್ಕೆರೆ ತಾಲೂಕಿನ ಪ್ರಸಿದ್ಧ ದೇವಾಲಯಗಳ ಒಂದು ಸಾಂಸ್ಕೃತಿಕ ಅಧ್ಯಯನ**, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು, ಹೊಳಲ್ಕೆರೆ.

ರಾಬರ್ಟ್ ಸಿವಿಲ್, ೧೯೯೨, **ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ**, ಸದಾನಂದ ಕನವಳ್ಳಿ (ಅನು), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಾಮಚಂದ್ರರಾವ್ ಎಸ್.ಕೆ., ೧೯೭೫, **ಮೂರ್ತಿಶಿಲ್ಪ ನೆಲೆ-ಓನ್ನೆಲೆ**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ರಾಜಶೇಖರ್ ಬಿ., ೨೦೦೧, **ದುರ್ಗಶೋಧನ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಲಕ್ಷ್ಮಣ್ ತೆಲಗಾವಿ (ಸಂ), ೧೯೮೯, **ಹರತಿರಿಸಿರಿ**, ವಾ.ಸಾ.ನಂ., ಹರ್ತಿಕೋಟೆ.

ಲಕ್ಷ್ಮಣ್ ತೆಲಗಾವಿ, ೨೦೦೪, **ಮೌರ್ಯ ಮತ್ತು ಶಾತವಾಹನರ ಯುಗ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಾಸುದೇವನ್ ಸಿ.ಎಸ್., ಮಹಾದೇವ ಸಿ., ರಮೇಶನಾಯ್ಕ, **ಕರ್ನಾಟಕ ದೇವಾಲಯಗಳ ಕೋಶ - ಹಾವೇರಿ ಜಿಲ್ಲೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಾಸುದೇವನ್ ಸಿ.ಎಸ್., ರಮೇಶನಾಯ್ಕ, ಬಾಲಸುಬ್ರಮಣ್ಯ, **ಕರ್ನಾಟಕ ದೇವಾಲಯಗಳ ಕೋಶ - ಗದಗ ಜಿಲ್ಲೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಾಸುದೇವ ಬಡಿಗೇರ, **ಕರ್ನಾಟಕ ದೇವಾಲಯಗಳ ಕೋಶ - ಬಿಜಾಪುರ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಾಸುದೇವ ಬಡಿಗೇರ, ಸೋಮಶೇಖರ್ ಎಸ್.ವೈ., ಸುರೇಶ ಕೆ.ಎಂ., **ಕರ್ನಾಟಕ ದೇವಾಲಯಗಳ ಕೋಶ - ಬಳ್ಳಾರಿ ಜಿಲ್ಲೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಿವರಾಮಕಾರಂತ ಕೆ., ೧೯೭೫, **ಭಾರತೀಯ ಶಿಲ್ಪ**, ಬೆಂಗಳೂರು.

ಶಿವತಾರಕ್ ಕೆ.ಬಿ., ೨೦೦೧, **ಕರ್ನಾಟಕದ ಪುರಾತತ್ವ ನೆಲೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶ್ರೀ ಸತ್ಯನ್ ಬಿ.ಎನ್., ೧೯೬೭, **ಮೈಸೂರು ಗೆಜೆಟಿಯರ್**, ಚಿತ್ರದುರ್ಗ ಜಿಲ್ಲೆ.

ಶೇಷಶಾಸ್ತ್ರಿ ಆರ್., ೧೯೮೨, **ಕರ್ನಾಟಕದ ವೀರಗಲ್ಲುಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಸುಂದರ ಅ., ೧೯೯೮ (ಸಂ), **ಕರ್ನಾಟಕ ಚರಿತ್ರೆ, ಸಂಪುಟ ೧**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸೋಮಶೇಖರ್ ಎಸ್.ವೈ., **ಹಂಪೆಯ ಬಜಾರುಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸೋಮಶೇಖರ್ ಎಸ್.ವೈ.,(ಸಂ), **ಜಗಲೂರು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸೋಮಶೇಖರ್ ಎಸ್.ವೈ., (ಸಂ), **ಬ್ರಹ್ಮಗಿರಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸೋಮಶೇಖರ್ ಎಸ್.ವೈ., **ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧ ನೀತಿ**, ಸಂಚಿಕೆ ಪ್ರಕಾಶನ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಲೇಖನಗಳು

ಅರ್ಪಣ ಕೂ.ಸ., ೧೯೯೦, **ದೇವಾಲಯದ ಕಂಬಗಳು ಒಂದು ಅಧ್ಯಯನ**, ಇತಿಹಾಸ ದರ್ಶನ, ಸಂಪುಟ ೪, ಸೂರ್ಯನಾಥ ಕಾಮತ್, ಲಕ್ಷ್ಮಣ್ ತೆಲಗಾವಿ (ಸಂ), ಬೆಂಗಳೂರು.

ಕೃಷ್ಣಮೂರ್ತಿ ಎಂ.ಎಸ್., ೧೯೮೭, **ನೊಳಂಬರ ಕಾಲದ ಪ್ರಾದೇಶಿಕ ವಿಭಾಗಗಳು**, ಹರತಿಸಿರಿ.

ಜ್ಞಾನಾನಂದ ಜಿ., ೨೦೦೬, **ಶಿಲ್ಪದರ್ಶ, ಸಂಪುಟ-೩**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಭಾಕರ್ ಎಂ.ಎನ್., ೧೯೮೯, **ವಾಸ್ತುಶಿಲ್ಪ-ಕೆಲವು ಟಿಪ್ಪಣಿಗಳು**, ಹರತಿಸಿರಿ.

ಲಕ್ಷ್ಮಣ್ ತೆಲಗಾವಿ, ೧೯೮೮, **ಎಪ್ಪತ್ತೇಳು ಪಾಳೆಯಗಾರರು**, ಇತಿಹಾಸ ದರ್ಶನ, ಸಂಪುಟ ೩.

ಲಕ್ಷ್ಮಣ್ ತೆಲಗಾವಿ, ೨೦೦೨, **ವೇದಾವತಿ ನದಿ ದಂಡೆ ಹಾಗೂ ಚಂದ್ರವಳ್ಳಿ ನಿವೇಶನಗಳಲ್ಲಿ ದೊರೆತ ಶಾತವಾಹನರ ನಾಣ್ಯಗಳು**, ಇತಿಹಾಸ ದರ್ಶನ ಸಂಪುಟ-೧೭.

ರಾಜಶೇಖರಪ್ಪ ಬಿ., ೨೦೦೬, **ಚಿತ್ರದುರ್ಗದ ಅಪ್ರಕಟಿತ ತಾಮ್ರಶಾಸನ**, ಇತಿಹಾಸ ದರ್ಶನ, ಸಂಪುಟ-೨೧, ಬೆಂಗಳೂರು.

ಮಹಾಪ್ರಬಂಧಗಳು

ತಿಪ್ಪೇಸ್ವಾಮಿ ಎಚ್., ೧೯೯೪, **ದಾವಣಗೆರೆ ಜಿಲ್ಲೆಯ ದೇವಾಲಯಗಳು - ಒಂದು ಅಧ್ಯಯನ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ತಿಪ್ಪೇಸ್ವಾಮಿ ಎಸ್., ೨೦೦೪, **ರಕ್ಷಣಾ ವಾಸ್ತುಶಿಲ್ಪ - ಚಿತ್ರದುರ್ಗ ಜಿಲ್ಲೆ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹೇಶ, ೨೦೧೦, **ಧರ್ಮಪುರ ಪರಿಸರದ ಸಾಂಸ್ಕೃತಿಕ ಅಧ್ಯಯನ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವೇದಮೂರ್ತಿ ಪಿ. ಪಾಲಯ್ಯ, ೨೦೦೯, **ಚಳ್ಳಕೆರೆ ತಾಲೂಕು ಪರಿಸರದ ಸಾಂಸ್ಕೃತಿಕ ಅಧ್ಯಯನ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಜಿ. ಶಂಕ್ರಪ್ಪ ಎಂ. ಬಡಿಗೇರ, ೨೦೦೯, **ಶಿರಹಟ್ಟಿ ಪರಿಸರದ ಇತಿಹಾಸ ಮತ್ತು ಪುರಾತತ್ವ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಕುಂತಲ ಎನ್., ೨೦೧೦, **ಚಿತ್ರದುರ್ಗ ಪಾಳೆಯಗಾರರ ಕಾಲದ ಕಲೆ ಮತ್ತು ವಾಸ್ತುಶಿಲ್ಪ-ಒಂದು ಅಧ್ಯಯನ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

English

Dhaky M.A., 1996, **Encyclopida of Indian Temple Architectures**, South India Upeer Dravida Desa Vol-1, Part-2, American institute of Indian studies, New Delhi.

Fergusson Jes., 1866, **Architecture in Dharwar and Mysore.**

Krishna M.H., 1931, **Excavation at Chandravalli Archaeological Survey of Mysore,** Mysore.

Krishna M.H., 1940, MAR., Part-4, **Excavation Chitradurga District**, The Brahmagiri Site.


Percy Brown., 1942, **Indian Acrchitecture,** D.B. Tara Porevalasons and Co.Pvt. Bombay.

Somashaker S.Y., 7-2-2003, **Two Maharathi coins of turuvanur and chippinakere,** Chitradurga Dist.. National Seminar on South Indian Numismatichs, Mythic Society, Pandicheri.


❑❑❑

೪. ತಲವಿನ್ಯಾಸಗಳು


ಕಾಲಭೈರವ/ಸಿದ್ಧೇಶ್ವರ ದೇವಾಲಯ ವದ್ದೀಕೆರೆ




ಆಂಜನೇಯ ದೇವಾಲಯ, ಹರ್ತಿಕೋಟೆ



ರಂಗನಾಥ ದೇವಾಲಯ, ಕಂದಿಕೆರೆ



ರಂಗನಾಥ ದೇವಾಲಯ. ಯರಬಳ್ಳಿ



೫. ಛಾಯಾಚಿತ್ರಗಳು

ದೇವಾಲಯಗಳು



ಸಿದ್ಧೇಶ್ವರ / ಕಾಲಭೈರವೇಶ್ವರ ದೇವಾಲಯ, ವದ್ದೀಕೆರೆ



ಬಸವಣ್ಣ ದೇವಾಲಯ, ಐಮಂಗಲ



ಕೋಡಿಮಲ್ಲೇಶ್ವರ ದೇವಾಲಯ, ಮರಡಿದೇವಿಗೆರೆ



ವೆಂಕಟರಮಣ ದೇವಾಲಯ, ಹರ್ತಿಕೋಟೆ.




ವೀರಭದ್ರೇಶ್ವರ ದೇವಾಲಯ, ಹರ್ತಿಕೋಟೆ.



ಆಂಜನೇಯ ದೇವಾಲಯ, ಹರ್ತಿಕೋಟೆ.

ಮೂರ್ತಿಶಿಲ್ಪಗಳು



ಕಾಲಭೈರವ, ವದ್ಧೀಕೆರೆ




ವೆಂಕಟರಮಣ, ಮರಡಿಹಳ್ಳಿ



ವೆಂಕಟರಮಣ, ಹರ್ತಿಕೋಟೆ



ಆಂಜನೇಯ, ಹರ್ತಿಕೊಟೆ



ಆಂಜನೇಯ, ನೊಣಬಿಪಟ್ಟಣ



ವೀರಭದ್ರ, ತವಂದಿ



ಶಿವಲಿಂಗ, ಮರಡಿದೇವಿಗೆರೆ



ಬಸವಣ್ಣ, ಐಮಂಗಲ

ಕಂಬಗಳ ಶೈಲಿ



ಆಂಜನೇಯ ದೇವಾಲಯದ ಕಂಬ, ಮರಡಿಹಳ್ಳಿ



ಕೋಡಿಮಲ್ಲೇಶ್ವರ ದೇವಾಲಯದ ಕಂಬ,
ಮರಡಿದೇವಿಗೆರೆ



ಬಸವಣ್ಣ ದೇವಾಲಯದ ಕಂಬ, ಐಮಂಗಲ

ಕೋಟೆ ಮತ್ತು ಬಾವಿಗಳು



ಐಮಂಗಲ ಕೋಟೆ, ಐಮಂಗಲ




ಕಲ್ಲುಬಾವಿ, ಹರ್ತಿಕೋಟೆ




ಕಲ್ಲುಬಾವಿ, ಕಂದಿಕೆರೆ

ವೀರಗಲ್ಲುಗಳು



ವೀರ ಮಹಾಸತಿಗಲ್ಲು, ತವಂದಿ




ವೀರ ಮಹಾಸತಿಗಲ್ಲು, ಮೇಟಿಕುರ್ಕೆ



ವೀರ ಮಹಾಸತಿಗಲ್ಲು, ಮೇಟಿಕುರ್ಕೆ



ವೀರ ಮಹಾಸತಿಗಲ್ಲು,ಹರ್ತಿಕೋಟೆ



ವೀರ ಮಹಾಸತಿಗಲ್ಲು, ವದ್ಧೀಕೆರೆ



ವೀರಗಲ್ಲು, ಐಮಂಗಲ



ವೀರಗಲ್ಲು, ವದ್ಧೀಕೆರೆ

ರಥಗಳು



ಉಯ್ಯಾಲೆ ಮತ್ತು ದೀಪಸ್ತಂಭ, ಹರ್ತಿಕೋಟೆ



ಕಲ್ಲುಗಾಲಿ ರಥ, ಮರಡಿದೇವಿಗೆರೆ



ಕಲ್ಲುಗಾಲಿ ರಥ, ಕಂದಿಕೆರೆ



ಕಲ್ಲುಗಾಲಿ, ತವಂದಿ